
ಶ್ರೀ ಪ್ರಸನ್ನವೆಂಕಟದಾಸರ ಭಾಗವತ


ಸಂಪಾದಕರು

ಟಿ. ಕೆ. ಇಂದುಬಾಯಿ



ಕನ್ನಡ ಅಧ್ಯಯನ ಸಂಸ್ಥೆ : ಮೈಸೂರು ವಿಶ್ವವಿದ್ಯಾನಿಲಯ


ಕನ್ನಡ ಅಧ್ಯಯನ ಸಂಸ್ಥೆ



Rarest Archiver

ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಣೆ–೪೮೯
ಹರಿದಾಸ ಸಾಹಿತ್ಯಮಾಲೆ–೧೬

ಪ್ರಧಾನ ಸಂಪಾದಕ
ಡಾ. ಎಚ್. ತಿಪ್ಪೇರುದ್ರಸ್ವಾಮಿ

ಶ್ರೀ ಪ್ರಸನ್ನವೆಂಕಟದಾಸರ ಭಾಗವತ

(ದಶಮಸ್ಕಂಧ ಪೂರ್ವಾರ್ಧ)

Rarest Archiver

Rarest Archiver

ಶ್ರೀ ಪ್ರಸನ್ನವೆಂಕಟದಾಸರ ಭಾಗವತ

(ದಶಮಸ್ಕಂಧ ಪೂರ್ವಾರ್ಧ)

ಸಂಪಾದಕರು

ಟಿ. ಕೆ. ಇಂದುಬಾಯಿ

ಕನ್ನಡ ಅಧ್ಯಯನ ಸಂಸ್ಥೆ

ಮೈಸೂರು ವಿಶ್ವವಿದ್ಯಾನಿಲಯ

೧೯೮೭

Rarest Archiver

SHRI PRASANNAVENKATADASARA BHAGAVATA (compositions of Shri Prasanna Venkatadasa); Edited by T. K. Indubai, Published by the Institute of Kannada Studies, University of Mysore, Manasagangotri, Mysore-570 006. First Edition 1987. pp. lxviii + 172.

All Rights Reserved

ಮಾರಾಟಗಾರರು : ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–570 012

ಮುದ್ರಕರು : ಮಿತ್ರ ಪ್ರಿಂಟರ್ಸ್, ಇಂಡಸ್ಟ್ರಿಯಲ್ ಸಬರ್ಬ್, ವಿದ್ಯಾರಣ್ಯಪುರಂ, ಮೈಸೂರು–8

Rarest Archiver

ಮುನ್ನುಡಿ

ಕನ್ನಡ ಸಾಹಿತ್ಯದ ಸಾವಿರದೈನೂರು ವರ್ಷಗಳ ಸುದೀರ್ಘ ಇತಿಹಾಸದಲ್ಲಿ ಹರಿದಾಸ ಸಾಹಿತ್ಯ ಒಂದು ಪ್ರಮುಖ ಘಟ್ಟ. ಹೆಚ್ಚು ಕಡಿಮೆ ಐದು ಶತಮಾನಗಳ ವ್ಯಾಪ್ತಿಯ ಈ ಭಕ್ತಿ ಸಾಹಿತ್ಯ ಪ್ರಕಾರವನ್ನು ಸುಮಾರು ಇನ್ನೂರು ಜನ ಹರಿದಾಸರು ತಮ್ಮ ಬಗೆಬಗೆಯ ರಚನೆಗಳಿಂದ ಮುಖ್ಯವಾಗಿ ಕೀರ್ತನೆಗಳಿಂದ ಸಮೃದ್ಧಗೊಳಿಸಿದ್ದಾರೆ. ಈ ಕೀರ್ತನೆಗಳು ಇಂದು ಜನಪ್ರಿಯವಾಗಿ ಪ್ರಚಾರದಲ್ಲಿವೆ. ಕೆಲವು ಮುಖ್ಯ ದಾಸರ ಹೆಸರುಗಳು ಮನೆಮಾತಾಗಿವೆ. ಸಾಹಿತ್ಯಿಕ ಶ್ರೀಮಂತಿಕೆಯಿಂದ ಮಾತ್ರವಲ್ಲದೆ ದ್ವೈತ ಸಿದ್ಧಾಂತವನ್ನು ಅಧ್ಯಯನ ಮಾಡುವ ದೃಷ್ಟಿಯಿಂದಲೂ ಹರಿದಾಸಸಾಹಿತ್ಯ ಮಹತ್ವದ್ದಾಗಿದೆ. ಕರ್ನಾಟಕ ಸಂಗೀತಕ್ಕೆ ಹರಿದಾಸರ ಕೀರ್ತನೆಗಳ ಕೊಡುಗೆಯಂತೂ ಅಸಾಧಾರಣವಾದದ್ದು.

ನಮ್ಮ ಪ್ರಾಚೀನ ಸಾಹಿತ್ಯದ ಇತರ ಕೃತಿಗಳೊಂದಿಗೆ ದಾಸ ಸಾಹಿತ್ಯವನ್ನು ಹೋಲಿಸಿದಾಗ ಎದ್ದು ಕಾಣುವ ಒಂದು ಮುಖ್ಯಅಂಶವೆಂದರೆ ಈ ಸಾಹಿತ್ಯದ ವಾಕ್ ಪರಂಪರೆ. ಗ್ರಂಥಸ್ಥವಾಗಿ ಉಳಿದುಬಂದಿರುವುದಕ್ಕಿಂತಲೂ ಜನರ ಬಾಯಲ್ಲಿ ನಿಂತಿರುವುದೇ ಹೆಚ್ಚು. ಭಕ್ತರ ಹೃದಯದ ಮೊರೆಗಳಾದ ಈ ಕೀರ್ತನೆಗಳು ತಲೆಮಾರಿನಿಂದ ತಲೆಮಾರಿಗೆ ಹಬ್ಬಿಬಂದಿವೆ. ನೆನಪಿನಲ್ಲಿ ನಿಂತ ಈ ರಚನೆಗಳ ಗ್ರಂಥರೂಪದ ಕಡೆ ಯಾರೂ ಅಷ್ಟಾಗಿ ಗಮನ ವಹಿಸಲಿಲ್ಲ. ಈ ಕಾರಣದಿಂದ ಕೀರ್ತನೆಗಳ ಅಧಿಕೃತ ಪಠ್ಯ ಆವೃತ್ತಿಗಳು ನಮಗೆ ದೊರೆಯುವುದಿಲ್ಲ. ನಮ್ಮ ಸಾಹಿತ್ಯ ಚರಿತ್ರೆಯ ಒಂದು ದೊಡ್ಡ ಕೊರತೆ ಇದು. ಕೆಲವು ಲೇಖಕರು ಪ್ರಕಾಶಕರು ಹರಿದಾಸ ಸಾಹಿತ್ಯ ಪ್ರಕಟಣೆಯನ್ನು ಕೈಗೊಂಡಿರುವುದೇನೋ ನಿಜ. ಆದರೆ ಶಾಸ್ತ್ರೀಯ ದೃಷ್ಟಿಯಿಂದ ಸಮಗ್ರ ದಾಸಸಾಹಿತ್ಯವನ್ನು ಸಂಪಾದಿಸುವ ಕೆಲಸಕ್ಕೆ ಯಾರೂ ಈವರೆಗೆ ಕೈಹಾಕಿಲ್ಲ. ಇದನ್ನು ಗಮನಿಸಿ ಹರಿದಾಸ ಸಾಹಿತ್ಯದ ಸಂಗ್ರಹ, ಸಂಪಾದನೆ, ಪ್ರಕಟಣೆಗಳನ್ನು ವಿಮರ್ಶಾತ್ಮಕವಾಗಿ ಕೈಗೊಳ್ಳುವ ಯೋಜನೆಯೊಂದನ್ನು ೧೯೬೦ರಷ್ಟು ಹಿಂದೆಯೇ ಕನ್ನಡ ಅಧ್ಯಯನ ಸಂಸ್ಥೆ ಸಿದ್ಧಪಡಿಸಿ, ನೆರವು ಕೇಳಿ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗಕ್ಕೆ ಒಪ್ಪಿಸಿತು. ಆ ಯೋಜನೆಯ ಮುಖ್ಯ ಅಂಶಗಳು ಇವು :

(೧) ಹಸ್ತಪ್ರತಿಗಳ ಸಂಗ್ರಹ–ಕ್ಷೇತ್ರಕಾರ್ಯ : ಕರ್ನಾಟಕದ ವಿವಿಧ ಭಾಗಗಳಲ್ಲಿ ಅಗತ್ಯಬಿದ್ದರೆ ಹೊರಗೂ ಸಂಚರಿಸಿ ಹಸ್ತಪ್ರತಿಗಳನ್ನು ಸಂಗ್ರಹಿಸುವುದು; ಕೀರ್ತನೆಗಳನ್ನು ಧ್ವನಿಗ್ರಹಣಮಾಡಿ ಸಂಗ್ರಹಿಸುವುದು; ಹಾಡುಗಾರಿಕೆಯ ವಿವಿಧ ಸಂಪ್ರದಾಯಗಳನ್ನು ಗುರುತಿಸಿ ಅವನ್ನು ಉಳಿಸಿಕೊಳ್ಳಲು ಕ್ರಮಗಳನ್ನು ಕೈಗೊಳ್ಳುವುದು.

Rarest Archiver

(೨) ಸಂಪಾದನೆ: ಹಸ್ತಪ್ರತಿಗಳಲ್ಲಿ ವಾಕ್ ಸಂಪ್ರದಾಯದಲ್ಲಿ ದೊರೆಯುವ ಸಾಹಿತ್ಯವನ್ನು ಆಧರಿಸಿ ಶಾಸ್ತ್ರೀಯ ಗ್ರಂಥ ಸಂಪಾದನ ಕ್ರಮಂಗಳಿಗನುಸಾರವಾಗಿ ಅಧಿಕೃತ ಪಠ್ಯಗಳನ್ನು ಸಿದ್ಧಪಡಿಸುವುದು.

(೩) ಪ್ರಕಟಣೆ: ಹೀಗೆ ಸಿದ್ಧಗೊಳಿಸುವ ಸಾಹಿತ್ಯವನ್ನು, ವಿಷಯ ಗಾತ್ರಗಳಿಗೆ ಅನುಗುಣವಾಗಿ ಬೇರೆ ಬೇರೆ ಸಂಪುಟಗಳಲ್ಲಿ ಪ್ರಕಟಿಸುವುದು; ಪ್ರತಿಯೊಂದು ಸಂಪುಟಕ್ಕೂ ಅಗತ್ಯವಾದ ಕವಿ ಕಾವ್ಯ ಸಂಬಂಧವಾದ ಪೀಠಿಕೆಯನ್ನೂ ಅಭ್ಯಾಸಿಗಳಿಗೆ ನೆರವಾಗುವ ಸೂಚಿಗಳನ್ನೂ ಕೊಟ್ಟು ಪ್ರಕಟಣೆಗಳು ಸಾಮಾನ್ಯರಿಗೂ ವಿದ್ವಾಂಸರಿಗೂ ಉಪಯೋಗವಾಗುವಂತೆ ನೋಡಿಕೊಳ್ಳುವುದು.

(೪) ಹರಿದಾಸ ಸಾಹಿತ್ಯದ ಬೇರೆ ಬೇರೆ ಮುಖಗಳನ್ನೂ ಇತರ ಭಕ್ತಿಪಂಥಗಳೊಡನೆ ಅದರ ಸಂಬಂಧವನ್ನೂ, ಕನ್ನಡ ಸಾಹಿತ್ಯಕ್ಕೆ ಹರಿದಾಸರ ಕೊಡುಗೆಗಳನ್ನೂ ಚರ್ಚಿಸುವ ಪ್ರಕಟಣೆಗಳನ್ನು ಹೊರತರುವುದು.

ಸುಮಾರು ಹದಿನೈದು ವರ್ಷಗಳ ಅವಧಿಯಲ್ಲಿ ಮೂರುಲಕ್ಷ ರೂಪಾಯಿಗಳ ವೆಚ್ಚದಲ್ಲಿ ಪೂರ್ಣಗೊಳ್ಳುವ ಈ ಯೋಜನೆಯನ್ನು ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗ ಭಾಗಶಃ ಒಪ್ಪಿ ನಾಲ್ಕನೇ ಯೋಜನೆಯ ಅವಧಿಯಲ್ಲಿ ಸ್ವಲ್ಪ ಹಣವನ್ನು ಮಾತ್ರ ನೀಡಿ, ಮೂವರು ಸಂಶೋಧನ ಸಹಾಯಕರನ್ನೂ ಇಬ್ಬರು ಪ್ರತಿಕಾರರನ್ನೂ ನೇಮಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಿತು. ಇದೇ ನೆರವನ್ನು ಐದನೆಯ ಯೋಜನೆಯಲ್ಲೂ ಮುಂದುವರಿಸಿ ಕೇವಲ ಎರಡು ವರ್ಷಗಳವರೆಗೆ ನೆರವನ್ನು ಮುಂದುವರಿಸಿತ್ತು. ನಮ್ಮ ವಿಶ್ವವಿದ್ಯಾನಿಲಯದ ಅಧಿಕಾರವರ್ಗದವರ ನೆರವಿನಿಂದ ಯೋಜನೆ ಈಗಲೂ ಮುಂದುವರಿದಿದೆ. ಯೋಜನೆ ೧೯೬೯ರಲ್ಲಿಯೇ ಅಸ್ತಿತ್ವಕ್ಕೆ ಬಂದರೂ, ಗ್ರಂಥಗಳ ಪ್ರಕಟಣೆಯಲ್ಲಿ ತೀವ್ರ ವಿಳಂಬವಾಯಿತು. ಅಗತ್ಯವಾದ ಸಾಮಗ್ರಿಯ ಸಂಪಾದನೆಯಲ್ಲಿಯೇ ಆರಂಭದ ಕೆಲವು ವರ್ಷಗಳು ಕಳೆದವು. ಮೂಲ ಯೋಜನೆಯಂತೆ ಹೆಚ್ಚು ಕೆಲಸಗಾರರನ್ನು ನೇಮಿಸಿಕೊಳ್ಳುವುದು ಸಾಧ್ಯವಾಗಲಿಲ್ಲ. ಈ ಪರಿಸ್ಥಿತಿಯೇ ವಿಳಂಬಕ್ಕೆ ಕಾರಣ.

ಯೋಜನೆಯ ಆರಂಭದಿಂದಲೂ ಇಬ್ಬರು ಸಂಶೋಧನ ಸಹಾಯಕರು, ಒಬ್ಬರು ಪ್ರತಿಕಾರರು ಕೆಲಸ ಮಾಡುತ್ತಾ ಬಂದಿದ್ದಾರೆ. ಇಷ್ಟರವರೆಗೆ ಕೀರ್ತನೆಗಳ ಸುಮಾರು ೨೮,೦೦೦ ಸೂಚಕಪಟ್ಟಿಕೆಗಳನ್ನು ಸಿದ್ಧಪಡಿಸಿ ಅವುಗಳನ್ನು ಅಕಾರಾದಿಯಾಗಿ ಜೋಡಿಸಿಡಲಾಗಿದೆ. ಕನ್ನಡನಾಡಿನ ಬೇರೆ ಬೇರೆ ಭಾಗಗಳಲ್ಲಿ ಸಂಚರಿಸಿ ಸುಮಾರು ೩೦೮ ಅಮೂಲ್ಯ ಹಸ್ತಪ್ರತಿಗಳನ್ನು ಸಂಗ್ರಹಿಸಲಾಗಿದೆ. ವಿವಿಧ ಭಾಗಗಳಲ್ಲಿ ಜನರು ಕೀರ್ತನೆಗಳನ್ನು ಹಾಡುವ ಸಂಪ್ರದಾಯವನ್ನು ಈಗಲೂ ಹೇಗೆ ಉಳಿಸಿಕೊಂಡು ಬಂದಿದ್ದಾರೆಂಬುದನ್ನು ಅಧ್ಯಯನ ಮಾಡಲು ನೂರಾರು ಕೀರ್ತನೆಗಳನ್ನು ಧ್ವನಿ ಮುದ್ರಿಸಿಕೊಳ್ಳಲಾಗಿದೆ. ಈ ಚಟುವಟಿಕೆಗಳ ಫಲವಾಗಿ ಈಗ ಕನ್ನಡ ಅಧ್ಯಯನ ಸಂಸ್ಥೆ ಹರಿದಾಸ ಸಾಹಿತ್ಯದ ಅದ್ವಿತೀಯ ಭಂಡಾರವಾಗಿದೆ.

Rarest Archiver

ಹರಿದಾಸ ಸಾಹಿತ್ಯದ ಶಾಸ್ತ್ರೀಯ ಆವೃತ್ತಿಯ ಯೋಜನೆಗೆ ಅನುಸಾರವಾಗಿ ಹರಿದಾಸರಲ್ಲಿ ಮೊದಲಿಗರಾದ ಶ್ರೀಪಾದರಾಜರ ಕೀರ್ತನೆಗಳ ಸಂಪುಟ ೧೯೭೩ರಲ್ಲಿಯೂ ಶ್ರೀ ಮಹಿಪತಿರಾಯರ ಕೀರ್ತನೆಗಳ ಸಂಪುಟ ೧೯೭೬ರಲ್ಲಿಯೂ, ಶ್ರೀ ಗೋಪಾಲದಾಸರ ಕೀರ್ತನೆಗಳ ಸಂಪುಟ ೧೯೭೭ರಲ್ಲಿಯೂ ಪ್ರಕಟವಾದವು. ಶ್ರೀಪಾದರಾಜರ ಕೃತಿಗಳ ಬಿಡುಗಡೆಯ ಸಂದರ್ಭದಲ್ಲಿ ನಡೆದ ಹರಿದಾಸ ಸಾಹಿತ್ಯಕ್ಕೆ ಸಂಬಂಧಿಸಿದ ವಿಚಾರಗೋಷ್ಠಿಯಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳನ್ನು ಸಂಕಲಿಸಿ 'ಹರಿದಾಸ ಸಾಹಿತ್ಯ ಸಮೀಕ್ಷೆ' ಎಂಬ ಹೆಸರಿನಿಂದ ೧೯೮೦ರಲ್ಲಿ ಪ್ರಕಟಿಸಲಾಯಿತು. ಶ್ರೀ ವಾದಿರಾಜರ ಕೀರ್ತನೆಗಳ ಸಂಪುಟವೂ ೧೯೮೦ರಲ್ಲಿ ಪ್ರಕಟವಾಯಿತು. ಹರಪನಹಳ್ಳಿ ಭೀಮವ್ವನ ಹಾಡುಗಳ ಸಂಗ್ರಹ ೧೯೮೪ರಲ್ಲಿ ಪ್ರಕಟವಾಯಿತು. ಈಗ ಪ್ರಸ್ತುತ ಮಾಲೆಯಲ್ಲಿ ಒಟ್ಟು ೧೫ ಪುಸ್ತಕಗಳು ಒಟ್ಟಿಗೇ ಪ್ರಕಟವಾಗುತ್ತಿವೆ. ಅವುಗಳಲ್ಲಿ :

೧. ಶ್ರೀ ಜಗನ್ನಾಥದಾಸರ ಕೃತಿಗಳು
೨. ಶ್ರೀ ವಾದಿರಾಜರ ದೀರ್ಘಕೃತಿಗಗು
೩. ಶ್ರೀ ಪ್ರಸನ್ನವೆಂಕಟದಾಸರ ಕೃತಿಗಳು
೪. ಹೆಳವನಕಟ್ಟೆ ಗಿರಿಯಮ್ಮನ ಹಾಡುಗಳು
೫. ಶ್ರೀ ರಾಮದಾಸರ ಕೃತಿಗಳು
೬. ಶ್ರೀ ಪ್ರಸನ್ನವೆಂಕಟದಾಸರ ಭಾಗವತ

—ಈ ಆರು ಪುಸ್ತಕಗಳೂ ಮೊದಲ ಬಾರಿಗೆ ಪ್ರಕಟವಾಗುತ್ತಿವೆ.

ನಾವು ಒಟ್ಟು ಯೋಜನೆಗೇ ಇಟ್ಟುಕೊಂಡ ಕ್ರಮದಂತೆ "ಶ್ರೀ ಜಗನ್ನಾಥದಾಸರ ಕೃತಿಗಳು", "ಶ್ರೀ ಪ್ರಸನ್ನವೆಂಕಟದಾಸರ ಕೃತಿಗಳು", "ಶ್ರೀ ವಾದಿರಾಜರ ದೀರ್ಘ ಕೃತಿಗಳು" ಹಾಗೂ "ಹೆಳವನಕಟ್ಟೆ ಗಿರಿಯಮ್ಮನ ಹಾಡುಗಳು"—ಈ ಸಂಪುಟಗಳು ಎರಡೆರಡು ಆವೃತ್ತಿಗಳಲ್ಲಿ ಪ್ರಕಟವಾಗುತ್ತಿವೆ. ಒಂದು ಪಂಡಿತ ಆವೃತ್ತಿ; ಇನ್ನೊಂದು ಜನಪ್ರಿಯ ಆವೃತ್ತಿ. ಜನಪ್ರಿಯ ಆವೃತ್ತಿಯಲ್ಲಿ ಮೊದಲನೆಯದರ ಪಾಂಡಿತ್ಯಪರಿಕರಗಳು ಇರುವುದಿಲ್ಲ. ಸಂಕ್ಷಿಪ್ತ ಪ್ರಸ್ತಾವನೆ ಹಾಗೂ ಕೀರ್ತನೆಗಳ ಪಠ್ಯಭಾಗ ಮಾತ್ರ ಇರುತ್ತದೆ. ಕಡಿಮೆ ಬೆಲೆಯಲ್ಲಿ ಈ ಸಾಹಿತ್ಯದ ಶುದ್ಧ ಆವೃತ್ತಿ ಹೆಚ್ಚು ಜನರ ಕೈಸೇರಬೇಕೆಂಬುದು ಈ ಯೋಜನೆಯ ಒಂದು ಮುಖ್ಯ ಉದ್ದೇಶ. ಆದರೆ ಮಹಿಪತಿರಾಯರ ಕೃತಿಗಳು, ಹರಪನಹಳ್ಳಿ ಭೀಮವ್ವನ ಹಾಡುಗಳ ಸಂಪುಟಗಳಂತೆಯೇ ಶ್ರೀ ರಾಮದಾಸರ ಕೃತಿಗಳು ಹಾಗೂ ಶ್ರೀ ಪ್ರಸನ್ನವೆಂಕಟದಾಸರ ಭಾಗವತಗಳ ಪ್ರಕಟಣೆಯಲ್ಲೂ ಎರಡು ಆವೃತ್ತಿಗಳ ಅಗತ್ಯ ಕಾಣಿಸದಿದ್ದುದರಿಂದ ಅವುಗಳ ಒಂದೊಂದೇ ಆವೃತ್ತಿಯನ್ನು ಪ್ರಕಟಿಸಲಾಗಿದೆ. ಡಾ. ಜಿ ವರದರಾಜರಾಯರು, ಕನ್ನಡ ಅಧ್ಯಯನ ಸಂಸ್ಥೆಯಲ್ಲಿ, ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ವತಿಯಿಂದ ಸಂಶೋಧಕರಾಗಿದ್ದು ಆ ಅವಧಿಯಲ್ಲಿ ಸಿದ್ಧಪಡಿಸಿದ ಸಂಶೋಧನ ಪ್ರಬಂಧ ಈಗ 'ಹರಿದಾಸಸಾಹಿತ್ಯಸಾರ' ಎಂಬ ಪುಸ್ತಕದ ರೂಪದಲ್ಲಿ ಪ್ರಕಟವಾಗುತ್ತಿದೆ.

Rarest Archiver

ಇವುಗಳೊಂದಿಗೆ 'ಶ್ರೀಪಾದರಾಜರ ಕೃತಿಗಳು' (ಸಂ. ಡಾ. ಜಿ. ವರದರಾಜ ರಾವ್) ಎರಡು ಆವೃತ್ತಿಗಳಲ್ಲಿಯೂ, 'ಶ್ರೀ ಗೋಪಾಲದಾಸರ ಕೃತಿಗಳು' (ಸಂ. ಡಾ. ಟಿ. ಎಸ್. ನಾಗರತ್ನ) ಜನಪ್ರಿಯ ಆವೃತ್ತಿಯೂ ಮರುಮುದ್ರಣವಾಗುತ್ತಿರುವುದು ಸಂತಸದ ಸಂಗತಿ. ಅಂತೆಯೇ ೧೯೮೦ರಲ್ಲಿ ಪ್ರಕಟವಾಗಿದ್ದ 'ಹರಿದಾಸ ಸಾಹಿತ್ಯ ಸಮೀಕ್ಷೆ'- ಪ್ರಬಂಧಗಳ ಸಂಕಲನವೂ ಪುನರ್ಮುದ್ರಣವಾಗುತ್ತಿರುವುದು ಹರಿದಾಸರ 'ಪವಾಡ'ಗಳಿಗೆ ಸಾಕ್ಷಿ. ಈ ಎಲ್ಲ ಹೊತ್ತಿಗೆಗಳೂ ಹರಿದಾಸ ಸಾಹಿತ್ಯದ ಕೆಲವೇ ಮಂದಿ ಹಿರಿಯ ವಿದ್ವಾಂಸರಲ್ಲಿ ಒಬ್ಬರಾದ ಡಾ. ಜಿ. ವರದರಾಜರಾಯರ ಸಲಹೆ ಸೂಚನೆಗಳ ಮೇರೆಗೆ ಡಾ. ಟಿ. ಎಸ್. ನಾಗರತ್ನರವರ ನೇತೃತ್ವದಲ್ಲಿ ಪ್ರಕಟವಾಗುತ್ತಿವೆ.

ಪ್ರಸ್ತುತ ಪ್ರಕಟಣೆಗಳಲ್ಲಿ 'ಶ್ರೀ ಪ್ರಸನ್ನವೆಂಕಟದಾಸರ ಭಾಗವತ' ವನ್ನು ಹರಿದಾಸ ಸಾಹಿತ್ಯ ಸಂಶೋಧನೆಯ ಯೋಜನೆಯಲ್ಲಿ ಸಂಶೋಧನ ಸಹಾಯಕರಾಗಿರುವ ಶ್ರೀಮತಿ ಟಿ. ಕೆ. ಇಂದುಬಾಯಿಯವರು ಸಂಪಾದಿಸಿ ಶ್ರೀ ಪ್ರಸನ್ನವೆಂಕಟದಾಸರ ಜೀವನ ಕೃತಿಗಳನ್ನು ಕುರಿತ ಪ್ರಸ್ತಾವನೆಯನ್ನು ಬರೆದಿದ್ದಾರೆ. ಈ ಕೃತಿಯನ್ನು ಏಕೈಕ ಪ್ರತಿ (ಮಂ. ೫೨)ಯಿಂದ ಸಂಪಾದಿಸಲಾಗಿದೆ.

ಯೋಜನೆ ಅಸ್ತಿತ್ವಕ್ಕೆ ಬಂದಂದಿನಿಂದ ಕನ್ನಡ ನಾಡಿನ ಉದ್ದಗಲಗಳಲ್ಲಿ ಅನೇಕ ಜನ ನಮಗೆ ಪರಿಚಯವಿರುವವರು ಇಲ್ಲದವರು ನಾನಾ ಬಗೆಯಾದ ನೆರವು ನೀಡಿದ್ದಾರೆ. ಅವರೆಲ್ಲರನ್ನೂ ಪ್ರತ್ಯೇಕವಾಗಿ ಹೆಸರಿಸುವುದು ಅಸಾಧ್ಯ. ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗದವರು ಯೋಜನೆಯನ್ನು ಒಪ್ಪಿ ಧನ ಸಹಾಯ ಮಾಡಿದ್ದಾರೆ. ಅಂತೆಯೇ ಮೈಸೂರು ವಿಶ್ವವಿದ್ಯಾನಿಲಯವೂ ಈ ಯೋಜನೆಯ ಬಗೆಗೆ ಆಸಕ್ತಿ ತೋರಿ ನೆರವು ನೀಡಿದೆ. ಎಲ್ಲಕ್ಕಿಂತ ಹೆಚ್ಚಾಗಿ ಹರಿದಾಸ ಸಾಹಿತ್ಯ ಮಾಲೆಯ ಪುಸ್ತಕಗಳ ಪ್ರಕಟಣೆಗಾಗಿ ಕರ್ನಾಟಕದ ಘನಸರ್ಕಾರ ೧೯೮೬-೮೭ನೆಯ ಸಾಲಿಗೆ ಮೂರು ಲಕ್ಷ ರೂಪಾಯಿಗಳನ್ನು ಮಂಜೂರುಮಾಡಿದೆ. ಶ್ರೀ ಪ್ರಧಾನ್ ಗುರುದತ್ತ ಪ್ರಕಟಣೆಯ ಮೇಲ್ವಿಚಾರಣೆ ನೋಡಿಕೊಂಡಿದ್ದಾರೆ. ಶ್ರೀಮತಿ ನಗುವನಹಳ್ಳಿ ಪಿ. ರತ್ನ ಕರಡಚ್ಚುಗಳನ್ನು ತಿದ್ದುವುದರಲ್ಲಿ ನೆರವಾಗಿದ್ದಾರೆ. ಅತ್ಯಂತ ಕಡಿಮೆ ಸಮಯದಲ್ಲಿ ಗುರುತರವಾದ ಹೊಣೆ ವಹಿಸಿ ಮುದ್ರಣ ಕಾರ್ಯವನ್ನು ನಿರ್ವಹಿಸಿರುವ 'ಮಿತ್ರ ಪ್ರಿಂಟರ್ಸ್'ನ ಮಾಲೀಕರಿಗೂ ಸಿಬ್ಬಂದಿವರ್ಗದವರಿಗೂ ನಮ್ಮ ಅನಂತ ವಂದನೆಗಳು.

ಹರಿದಾಸ ಸಾಹಿತ್ಯದ ಶಾಸ್ತ್ರೀಯ ಆವೃತ್ತಿಯ ಯೋಜನೆಯನ್ನು ಇನ್ನೂ ಉತ್ತಮಪಡಿಸಲು ಹೆಚ್ಚು ಹೆಚ್ಚು ಉಪಯುಕ್ತಗೊಳಿಸಲು ಬರುವ ಎಲ್ಲ ಸಲಹೆ ಸೂಚನೆಗಳನ್ನು ಕೃತಜ್ಞತೆಯಿಂದ ಸ್ವಾಗತಿಸಲಾಗುವುದು.

ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ
ಏಪ್ರಿಲ್ ೨೫, ೧೯೮೭

ಎಚ್. ತಿಪ್ಪೇರುದ್ರಸ್ವಾಮಿ
ಪ್ರಧಾನ ಸಂಪಾದಕ

Rarest Archiver

ಪರಿವಿಡಿ

Rarest Archiver

ಮುಖ್ಯ ಸಂಕೇತಗಳ ವಿವರ

ಸಂಕೇತಗಳು	ಮೂಲ
ಅ.	ಅಧ್ಯಾಯ
ಅ.ಪ.	ಅನುಪಲ್ಲವಿ
ಕೀ.	ಕೀರ್ತನೆ
ನು.	ನುಡಿ
ಪ.	ಪಲ್ಲವಿ
ಪ್ರ. ಭಾ.	ಪ್ರಸನ್ನವೆಂಕಟದಾಸರ ಭಾಗವತ
ಪು.	ಪುಟ
ಪುನಾಚೂ.	ಪುರಾಣನಾಮಚೂಡಾಮಣಿ
ಪುಭಾಕೋ.	ಪುರಾಣಭಾರತಕೋಶ
ಭಾ.	ಭಾಗವತ
ಮೂ.ಭಾ.	ಮೂಲ ಭಾಗವತ
ಶ್ರೀಜ.	ಶ್ರೀ ಜಗನ್ನಾಥದಾಸರು, ಟಿ. ಕೆ. ವೇಣುಗೋಪಾಲದಾಸರು.
ಸಂ.	ಸಂಪಾದಕರು
ಸ್ಕಂ.	ಸ್ಕಂಧ

Rarest Archiver

ಶ್ರೀ ಪ್ರಸನ್ನವೆಂಕಟ ದಾಸರಭಾಗವತ

(ದಶಮಸ್ಕಂಧ ಪೂರ್ವಾರ್ಧ)

Rarest Archiver

Rarest Archiver

ಪೀಠಿಕೆ

ಶ್ರೀ ಪ್ರಸನ್ನವೆಂಕಟದಾಸರ ಜೀವನ ವಿಚಾರ

ಪ್ರಸನ್ನವೆಂಕಟದಾಸರು ಪ್ರಸಿದ್ಧ ಹರಿದಾಸರಲ್ಲೊಬ್ಬರು. ಇವರು ವಿಜಯದಾಸರ ಸಮಕಾಲೀನರು. ಇವರ ಜನನಕಾಲ ಖಚಿತವಾಗಿ ತಿಳಿಯದಿದ್ದರೂ, ದೊರೆತ ಕೆಲವು ಆಧಾರಗಳಿಂದ ಇವರ ಜೀವಿತಕಾಲ ಕ್ರಿ.ಶ.ಸಂ. ೧೬೮೦–೧೭೫೨ ಎಂದು ಭಾವಿಸಲಾಗಿದೆ. ಕಾಖಂಡಕಿ ನರಸಪ್ಪಯ್ಯನವರು ಇವರ ತಂದೆ. ತಾಯಿ ಲಕ್ಷ್ಮೀಬಾಯಿ. ವೆಂಕಟೇಶ ಎನ್ನು ವುದು ಇವರ ಜನ್ಮನಾಮ. ಇವರಿಗೆ ಒಬ್ಬ ಅಣ್ಣ ಇದ್ದರೆಂದು ತಿಳಿದುಬರುತ್ತದೆ. ಚಿಕ್ಕಂದಿನಲ್ಲೇ ಹೆತ್ತವರನ್ನು ಕಳೆದುಕೊಂಡ ಇವರು ಅಣ್ಣನ ಆಶ್ರಯದಲ್ಲಿದ್ದರು. ಅಣ್ಣ ನಿಗೆ ವಿವಾಹವಾಗಿತ್ತು. ಅತ್ತಿಗೆಗೆ ಇವರ ಬಗ್ಗೆ ಅಂಥ ಪ್ರೀತ್ಯಾದರಗಳೇನೂ ಇರಲಿಲ್ಲ. ಹಿರಿಯರ ಉಪೇಕ್ಷೆಗೊಳಗಾದ ಇವರಿಗೆ ಬಾಲ್ಯದಲ್ಲಿ ವಿದ್ಯಾಭ್ಯಾಸವೂ ಸರಿಯಾಗಿ ನಡೆಯ ಲಿಲ್ಲ. ಪುರಾಣವಾಚನ ಮಾಡುತ್ತಿದ್ದ ಇವರ ಅಣ್ಣ ಸುತ್ತಿನ ಹಳ್ಳಿಗಳಲ್ಲೆಲ್ಲ ಜನಪ್ರಿಯ ವ್ಯಕ್ತಿಯಾಗಿದ್ದರು. ಆದರೆ ಇವರ ದಿನಚರಿ ದನಗಳನ್ನು ಮೇಯಿಸುವುದರಲ್ಲಿ, ಅತ್ತಿಗೆಗೆ ಮನೆಗೆಲಸಗಳನ್ನು ಮಾಡಿಕೊಡುವುದರಲ್ಲಿ ಸಾಗುತ್ತಿತ್ತು.

ಹೀಗೆಯೇ ಇವರ ಬದುಕು ಸಾಗುತ್ತಿದ್ದಾಗ ಒಂದು ದಿನ ಅತ್ತಿಗೆಯ ನಿಷ್ಠುರ ಮಾತುಗಳಿಗೆ ನೊಂದು ಮನೆಯನ್ನು ಬಿಟ್ಟು ತಿರುಪತಿಗೆ ಹೋಗುತ್ತಾರೆ. ಅಲ್ಲಿ ಹರಿದಾಸರ ಪ್ರೇರಣೆ ಹಾಗೂ ವೆಂಕಟೇಶನ ಅನುಗ್ರಹದಿಂದ ತಾವೂ ಹರಿದಾಸರಾಗಿ ಮಾರ್ಪಡುತ್ತಾರೆ. ಕೆಲವು ಕಾಲ ತಿರುಪತಿಯಲ್ಲೇ ಇದ್ದ ಇವರು ನಂತರದಲ್ಲಿ ಗುರುಗಳ ಶೋಧನೆಗೆ ತೊಡಗು ತ್ತಾರೆ. ಮುದ್ಗಲ ಜನಾರ್ದನಾಚಾರ್ಯ ಎಂಬುವರ ಶಿಷ್ಯರಾಗಿ ಸಂಸ್ಕೃತ, ಭಾರತ, ಭಾಗ ವತ, ಪುರಾಣ, ದ್ವೈತಸಿದ್ಧಾಂತಗಳಲ್ಲಿ ಪಾಂಡಿತ್ಯವನ್ನು ಗಳಿಸಿ ಬಾಗಲಕೋಟೆಗೆ ಮರಳಿ ಬರುತ್ತಾರೆ. ಹೀಗೆ ಊರಿಗೆ ಮರಳಿದ ನಂತರ ಹರಿಭಕ್ತಿಪ್ರಚಾರವನ್ನು ಕೈಗೊಂಡು, ಅನೇಕ ಕೃತಿಗಳನ್ನು ರಚಿಸಿ ಪ್ರಸನ್ನವೆಂಕಟದಾಸರೆಂದು ಪ್ರಸಿದ್ಧರಾಗುತ್ತಾರೆ. ಇವರಿಗೆ ವಿವಾಹವಾಗಿ ವೆಂಕಟಕೃಷ್ಣಾಚಾರ್ಯ ಎಂಬ ಮಗನಿದ್ದುದಾಗಿ ತಿಳಿದುಬರುತ್ತದಾದರೂ ವಿವಾಹ ಆದದ್ದು ಯಾವಾಗ, ಹೆಂಡತಿಯ ಹೆಸರೇನು ಎನ್ನುವುದು ತಿಳಿಯುವುದಿಲ್ಲ. ಬಾದಾ ಮಿಯಲ್ಲಿರುವ 'ಶ್ರೀ ಪ್ರಸನ್ನವೆಂಕಟರ ಕಟ್ಟೆ' ಯನ್ನು ಇವರ ಮರಿಮಕ್ಕಳಾದ ಅಣ್ಣಯ್ಯಾ ಚಾರ್ಯರು ಕಟ್ಟಿಸಿದರೆಂದು ತಿಳಿದುಬರುತ್ತದೆ. ಪ್ರತಿ ಭಾದ್ರಪದ ಶುದ್ಧ ದ್ವಾದಶಿ ಯಂದು ಇವರ ಪುಣ್ಯತಿಥಿಯನ್ನು ಆಚರಿಸಲಾಗುತ್ತದೆ.

ಕೃತಿಗಳ ಸಮೀಕ್ಷೆ

ಹರಿಭಕ್ತರೂ ಉಭಯಭಾಷಾ ಪಂಡಿತರೂ ಆಗಿದ್ದ ಪ್ರಸನ್ನವೆಂಕಟರು 'ಪ್ರಸನ್ವೆಂಕಟ' ಎಂಬ ಅಂಕಿತದಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಇದುವರೆಗೆ ಅವರ

Rarest Archiver

೪೫೦ ಕೃತಿಗಳು ಸಿಕ್ಕಿವೆ. ಅವುಗಳಲ್ಲಿ ೨೬೮ ಕೃತಿಗಳನ್ನು ನಿಸ್ಸಂದಿಗ್ಧವಾಗಿ ಇವರದೆಂದು ಭಾವಿಸಬಹುದಾಗಿದೆ. ೧೩೫ ಕೃತಿಗಳು ಏಕೈಕ ಆಕರದಲ್ಲಿ ಸಿಕ್ಕಿವೆ. ಅಂಕಿತ ಸಂದಿಗ್ಧತೆಯಲ್ಲಿ ೪೭ ಕೃತಿಗಳಿವೆ. ಇವುಗಳಲ್ಲಿ ಏಳು ಉಗಾಭೋಗಗಳೂ, ಹತ್ತು ಸುಳಾದಿಗಳೂ, ಐದು ದೀರ್ಘಕೃತಿಗಳೂ ಇವೆ. ಐದು ದೀರ್ಘಕೃತಿಗಳ ಹೆಸರುಗಳು ಹೀಗಿವೆ.–(೧) ನಾರದ ಕೊರವಂಜಿ (೨) ನಾರಾಯಣ ಪಂಜರ (೩) ಪ್ರಸನ್ನವೆಂಕಟರ ಭಾಗವತ (೪) ಶ್ರೀಕೃಷ್ಣ ಪಾರಿಜಾತ (೫) ಸಮಸ್ತ ನಾಮಮಣಿಗಣ ಷಟ್ಚರಣ ಪದ್ಯಮಾಲಾ. ಇವುಗಳಲ್ಲದೆ ಇನ್ನೂ ಅನೇಕ ಗ್ರಂಥಗಳನ್ನು ಇವರು ಬರೆದಿರುವರೆಂಬುದಕ್ಕೆ ಸಾಕ್ಷ್ಯ ಸಿಕ್ಕುತ್ತದಾದರೂ ಆ ಕೃತಿಗಳು ಸಿಕ್ಕಿಲ್ಲ. (ಹೆಚ್ಚಿನ ವಿವರಗಳಿಗೆ ನೋಡಿ : ಪೀಠಿಕೆ, ಶ್ರೀ ಪ್ರಸನ್ನವೆಂಕಟದಾಸರ ಕೃತಿಗಳು, ಸಂ. ಟಿ. ಕೆ. ಇಂದುಬಾಯಿ)

ಶ್ರೀ 'ಪ್ರಸನ್ನವೆಂಕಟರ ಭಾಗವತ' ವೆಂದು ಪ್ರಸಿದ್ಧವಾಗಿರುವ ಈ ಕೃತಿ, ಸಂಸ್ಕೃತದ ಭಾಗವತ ದಶಮಸ್ಕಂಧದ ಪೂರ್ವಾರ್ಧವನ್ನು ಆಧರಿಸಿ ರಚಿತವಾಗಿರುವ ೬೭ ಬಿಡಿ ಕೀರ್ತನೆಗಳ ಗುಚ್ಛವಾಗಿದೆ. ಸಂಸ್ಕೃತದಲ್ಲಿರುವ ಮೂಲ ಭಾಗವತದ ದಶಮಸ್ಕಂಧ ಪೂರ್ವಾರ್ಧದಲ್ಲಿ ೪೯ ಅಧ್ಯಾಯಗಳಿವೆ. ಅದರಲ್ಲಿ ಕೃಷ್ಣನ ಜನನದ ಕಾರಣದಿಂದ ಮೊದಲಾಗಿ ಕೃಷ್ಣನ ಜನನ, ಗೋಕುಲದಲ್ಲಿ ಅವನು ಬೆಳೆದದ್ದು, ಕೃಷ್ಣನನ್ನು ಕೊಲ್ಲಲು ಕಂಸ ಮಾಡುವ ವ್ಯರ್ಥ ಪ್ರಯತ್ನಗಳು, ಕೃಷ್ಣನಿಂದ ಕಂಸವಧೆ, ಕೊನೆಗೆ ಕೃಷ್ಣನ ಮಾತಿನಂತೆ ಅಕ್ರೂರ ಹಸ್ತಿನಾವತಿಗೆ ಹೋಗಿ ಪಾಂಡವರ ಸ್ಥಿತಿಗತಿಯನ್ನು ವಿಚಾರಿಸಿಕೊಂಡು ಬರುವವರೆಗಿನ ವಿಸ್ತಾರವಾದ ಕಥೆ ಬರುತ್ತದೆ. ಈ ಕೃಷ್ಣಕಥೆಯನ್ನು ಶುಕಮುನಿ ಪರೀಕ್ಷಿತನ ಕೇಳಿಕೆಯ ಮೇರೆಗೆ ಹೇಳುತ್ತಾನೆ.ಇದೇ ಕಥೆಯನ್ನು ಪ್ರಸನ್ನವೆಂಕಟದಾಸರು ತಮ್ಮ ಹರಿಭಕ್ತಿಗೆ ವಾಹಕವನ್ನಾಗಿಸಿ ೬೭ ಬಿಡಿ ಕೀರ್ತನೆಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಇವು ಬಿಡಿ ಕೀರ್ತನೆಗಳ ರೂಪದಲ್ಲಿದ್ದರೂ ಒಟ್ಟಾಗಿ ಸಂಸ್ಕೃತ ಭಾಗವತವನ್ನು ಆಧರಿಸಿ ಬಂದಿರುವುದರಿಂದ ಇವುಗಳನ್ನು ದಾಸರ ಹೆಸರಿನೊಂದಿಗೆ "ದಾಸವರ್ಯ ಶ್ರೀ ಪ್ರಸನ್ನವೆಂಕಟರ ಭಾಗವತ" ಎಂದು ಕರೆದು ಈ ಮೊದಲೇ ಪ್ರಕಟಿಸಲಾಗಿದೆ. ಪ್ರಸ್ತುತ ಪ್ರಸನ್ನವೆಂಕಟರ ಭಾಗವತಕ್ಕೂ ಮೂಲ ಭಾಗವತಕ್ಕೂ ಇರುವ ಸಾಮ್ಯ ವೈಷಮ್ಯಗಳನ್ನು ಪರಿಶೀಲಿಸುವ ಮೂಲಕ ಪ್ರಸನ್ನವೆಂಕಟರ ಭಾಗವತದ ಈ ಕೀರ್ತನೆಗಳ ವೈಶಿಷ್ಟ್ಯವನ್ನು ಗುರುತಿಸಬಹುದಾಗಿದೆ.

ಅಧ್ಯಾಯ ೧, ಶ್ಲೋಕ ೧-೧೬ರಲ್ಲಿ ಪರೀಕ್ಷಿತರಾಜನು ಶುಕಮುನಿಯನ್ನು ಕುರಿತು, 'ಮುನಿಶ್ರೇಷ್ಠನೆ, ಸೂರ್ಯಚಂದ್ರರ ವಂಶವಿಸ್ತಾರವನ್ನು ತಿಳಿಸಿರುವೆ. ಪರಮ ಧಾರ್ಮಿಕನಾದ ಯದುರಾಜನ ಚರಿತ್ರೆಯನ್ನು ತಿಳಿಸಿರುವೆ. ಭಗವಂತನು ಆ ಯದುವಂಶದಲ್ಲಿ ಅವತರಿಸಿ ನಡೆಸಿದ ಲೋಕಾದ್ಭುತ ಕಾರ್ಯಗಳನ್ನು ಸವಿಸ್ತಾರವಾಗಿ ಹೇಳಬೇಕು' ಎಂದು ಕೇಳಿದಾಗ ಶುಕಮುನಿ ಕೃಷ್ಣನ ಚರಿತ್ರೆಯನ್ನು ಹೇಳಲು ಪ್ರಾರಂಭಿಸುತ್ತಾನೆ. ಮೂಲದ ಈ ಭಾಗ ಪ್ರಸನ್ನವೆಂಕಟರ ಭಾಗವತದಲ್ಲಿ ೨ ನೆಯ ಕೀರ್ತನೆಯಲ್ಲಿ ತುಂಬ ಸಂಕ್ಷಿಪ್ತವಾಗಿ ಬರುತ್ತದೆ. ಮೂಲದಲ್ಲಿ ಪರೀಕ್ಷಿತ ಮಹಾರಾಜನ ಮಾತುಗಳಲ್ಲಿ ಬರುವ ಹರಿಮಹಿಮೆಯ ವರ್ಣನೆ ಇಲ್ಲಿ ದಾಸರಿಂದಲೇ ನೇರವಾಗಿ ಬರುತ್ತದೆ. ಮೊದಲ ಕೀರ್ತ

Rarest Archiver

ನೆಯೂ ಪೂರ್ಣವಾಗಿ ಹರಿಸ್ತುತಿಯಾಗಿದೆ.ಭಾಷೆ ಸಂಸ್ಕೃತಮಯವೂ ಪ್ರೌಢವೂ ಆಗಿದೆ. "ವೇದಗರ್ಭನಂತ ಶ್ರೀಪಾದಾಬ್ಜಯುಗ್ಮ ಜಯ, ಗೋಸಮೂಹ ದ್ವಿಜದೇವದ್ವೇಷಿ ಕುಲಹರಣ ಜಯ"-ಇತ್ಯಾದಿ ಸಾಲುಗಳು ದಾಸರ ಸಂಸ್ಕೃತಭಾಷಾಪಾಂಡಿತ್ಯಕ್ಕೆ ಕನ್ನಡಿ ಹಿಡಿಯುತ್ತವೆ. ಹರಿಸ್ತುತಿ ಬರುವಲ್ಲೆಲ್ಲ ಈ ಅಂಶ ಸಾಮಾನ್ಯವಾಗಿ ಕಾಣಿಸುತ್ತದೆ.

ಹರಿಯನ್ನು ಕುರಿತ ಭಾವ ಒಟ್ಟಿನಲ್ಲಿ ಮೂಲಕ್ಕೆ ಭಿನ್ನವಲ್ಲದಿದ್ದರೂ ವಿವರಗಳಲ್ಲಿ ವ್ಯತ್ಯಾಸವಿದೆ. ಕೀ.೧ ಮತ್ತು ೨ ರ ಸ್ತುತಿಯ ಮಾತುಗಳಿಗೂ ಮೂಲ ಭಾಗವತದ ಪರೀಕ್ಷಿತನ ಮಾತುಗಳಿಗೂ ಇರುವ ವ್ಯತ್ಯಾಸದಲ್ಲಿ ಈ ಅಂತರವನ್ನು ಕಾಣಬಹುದಾಗಿದೆ. ಕೀ. ೨ರ ಪಲ್ಲವಿಯಾಗಿ ಬರುವ,

ಶ್ರೋತವ್ಯವು ಇದೆ ಮಂತ್ರವ್ಯವು ಇದೆ ಧಾತವ್ಯವು ನಮಗೆ
ಪೂತವು ಹರಿಗುಣಗಾಥೆಯು ಮುಕುತಿಯ ಪಾಥೇಯವು ನಮಗೆ

ಎಂಬ ಎರಡು ಸಾಲುಗಳಲ್ಲಿ ಈ ಹರಿಕಥೆಯ ಬಗ್ಗೆ ದಾಸರಿಗಿರುವ ಅಪಾರವಾದ ಗೌರವಾದರಗಳು ವ್ಯಕ್ತವಾಗಿದ್ದು ಅದು ಮುಂದಿನ ಕೀರ್ತನೆಗಳಲ್ಲೂ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತದೆ. ವ್ಯಾಸಕುಮಾರ ಪರೀಕ್ಷಿತನಿಗೆ ಹೇಳಿದ ಈ ಮುರಾರಿಯ ಚರಿತೆ ಎಷ್ಟು ಮಹಿಮಾನ್ವಿತವಾದದ್ದು ಎನ್ನುವುದನ್ನು ಕೀ. ೨ ರ ನು. ೧ ಮತ್ತು ೨ ರಲ್ಲಿ ಬಣ್ಣಿಸಿ, ನು. ೩ ರಲ್ಲಿ ಗುರುಗಳಿಗೆರಗಿ,

ಎಣಿಸದಲೆನ್ನಯ ನುಡಿತಪ್ಪುಗಳನು ಮನುಜೋತ್ತಮ ಮುಖ್ಯರು
ಕನಡುಕ್ತಿಗಳಿವು ಎನ್ನದೆ ಕೇಳಿರಿ ಘನರು ದಯಾಪರರು

ಎನ್ನುತ್ತಾರೆ.ನು. ೪ ರಲ್ಲಿ ಮತ್ತೆ ಹರಿಗುಣ ಕೀರ್ತನೆಯಿದೆ. ನು. ೫ ರಲ್ಲಿ ಈ ಕೃಷ್ಣಚರಿತೆಯನ್ನು ಹೇಳಿ ಕೇಳಿದವರಿಗೆ ಸಿಕ್ಕುವ ಫಲವನ್ನು ಹೇಳಲಾಗಿದೆ.

ಅ. ೧, ಶ್ಲೋಕ ೧೭-೨೦ ರಲ್ಲಿ ರಾಜರಾಗಿ ಹುಟ್ಟಿ ಮದಮತ್ತರಾಗಿ ಮೆರೆಯುತ್ತಿದ್ದ ರಾಕ್ಷಸರ ಭಾರ ಹೊರಲಾರದೆ ಭೂದೇವಿಯು ಗೋರೂಪದಿಂದ ಹೋಗಿ ಬ್ರಹ್ಮನಲ್ಲಿ ಮೊರೆಯಿಟ್ಟಾಗ, ಆತ ಅವಳನ್ನೂ ದೇವತೆಗಳನ್ನೂ ಕರೆದುಕೊಂಡು ಕ್ಷೀರ ಸಾಗರದ ತೀರಕ್ಕೆ ಹೋಗಿ ಅಲ್ಲಿ ಪುರುಷಸೂಕ್ತದಿಂದ ವಿಷ್ಣುವನ್ನು ಪ್ರಾರ್ಥಿಸುತ್ತಾನೆ. ಈ ಭಾಗ ಪ್ರ. ಭಾ. ದಲ್ಲಿ ಕೀ. ೩, ನು. ೫ ರಲ್ಲಿ-ದೇವಾಸುರರ ಯುದ್ಧದಲ್ಲಿ ಅಪಜಯ ಹೊಂದಿದ ಅಸುರರು ಧರೆಗೆ ಬಂದು ರಾಜಕುಲದಲ್ಲಿ ಹುಟ್ಟಿ ದೇವಾಂಶರಾದ ರಾಜರನ್ನು ಪೀಡಿಸಲು ಭೂಭಾರ ಹೆಚ್ಚಾಗಲು ಭೂಮಿ ನೊಂದು ರೋದಿಸಲು ದೇವತೆಗಳು ಬಳಲಿ ಪ್ರಾರ್ಥಿಸಲು, ವಿಷ್ಣುವಿನ ಹತ್ತಿರಕ್ಕೆ ಬ್ರಹ್ಮ, ಶಿವ ಇಂದ್ರರು ಹೋಗಿ ಸ್ತುತಿಸಿದರು ಎಂದು ಬಂದಿದೆ. ಕೀ. ೩ ರ ಮೊದಲ ನಾಲ್ಕು ನುಡಿಗಳಲ್ಲಿ ಬರುವ ಭೂದೇವಿ ಮಾಡುವ ಹರಿಸ್ತುತಿ, ಹರಿಯ ಸೃಷ್ಟಿ ಕಾರ್ಯದ ವರ್ಣನೆ, ದಶಾವತಾರದ ವರ್ಣನೆ ಮೂಲದಲ್ಲಿಲ್ಲ. ಕೀ. ೪ರ, ನು. ೧, ೨ ರಲ್ಲಿ ಬರುವ ಬೊಮ್ಮಭವೇಂದ್ರರು ಮಾಡುವ ಹರಿಸ್ತುತಿಯೂ ಮೂಲದಲ್ಲಿಲ್ಲ.

Rarest Archiver

ಅ. ೧, ಶ್ಲೋಕ ೨೧ ರಲ್ಲಿ, ಬ್ರಹ್ಮನು ಧ್ಯಾನಯೋಗದಿಂದ ಅಶರೀರವಾಣಿಯನ್ನು ಕೇಳಿಸಿಕೊಂಡು ದೇವತೆಗಳಿಗೆ ಹೇಳಿದನು ಎಂದಿದ್ದರೆ; ಕೀ. ೪, ನು. ೩ ರ ಮೊದಲ ೨ ಸಾಲುಗಳಲ್ಲಿ 'ಶಿಷ್ಟರೆಲ್ಲರು ಹೀಗೆ ಸಾಷ್ಟಾಂಗದಿಂ ನಮಿಸೆ, ಹೃಷ್ಟಮುಖನಾಗಿ ಶ್ರೀವಿಷ್ಣು ನುಡಿದನೆಲೆ' ಎಂದು ಬದಲಾಯಿಸಲಾಗಿದೆ. ಶ್ಲೋಕ ೨೨, ೨೩ ರಲ್ಲಿ ಬ್ರಹ್ಮನು ದೇವತೆಗಳಿಗೆ, 'ನೀವೆಲ್ಲ ನಿಮ್ಮ ದೈವಾಂಶದೊಂದಿಗೆ ಯಾದವ ಕುಲದಲ್ಲಿ ಜನಿಸಿರಿ. ಆ ಭಗವಂತನು ವಸುದೇವನ ಮನೆಯಲ್ಲಿ ಜನಿಸುತ್ತಾನೆ' ಎನ್ನುತ್ತಾನೆ. ಆದರೆ ಪ್ರ.ಭಾ.ದಲ್ಲಿ ಕೀ. ೪, ನಂ. ೩ ರಲ್ಲಿ ವಿಷ್ಣುವೇ ದೇವತೆಗಳಿಗೆ, 'ನಾನು ಕೃಷ್ಣಾಭಿದಾನದಲಿ ವೃಷ್ಣಿಕುಲದ ವಸುದೇವನ ಗೃಹಿಣಿಯು ಗರ್ಭದಿಂದುದಿಸುತ್ತೇನೆ. ದುಷ್ಟದೈತ್ಯರ ಕುಲವನ್ನು ನಷ್ಟ ಮಾಡುತ್ತೇನೆ. ನಿಮ್ಮ ಇಷ್ಟ ನೆರವೇರಿ ಭೂಮಿಯೂ ಸಂತೋಷಿಸುತ್ತಾಳೆ. ಕಷ್ಟಬಿಡಿ ಸುಖಿಸಿ'. ಎನ್ನುತ್ತಾನೆ. ಈ ಭಾಗಗಳು ಮೂಲದಿಂದ ಭಿನ್ನವಾಗಿದ್ದರೂ ಕಥಾನಿರೂಪಣೆಯಲ್ಲಿ ಸಾತತ್ಯವನ್ನು ಉಳಿಸಿಕೊಂಡಿರುವುದನ್ನು ಗಮನಿಸಬಹುದಾಗಿದೆ.

ಅ. ೧, ಶ್ಲೋಕ ೨೩-೨೮ ರಲ್ಲಿ ಬರುವ ವಿವರಗಳು ಈ ಕೀರ್ತನೆಯಲ್ಲಿಲ್ಲ. ಶ್ಲೋಕ ೨೯, ೩೦ ರಲ್ಲಿ-ದೇವಕಿಯನ್ನು ಮದುವೆಯಾದ ವಸುದೇವ ಅವಳೊಡನೆ ರಥದಲ್ಲಿ ತನ್ನ ಮನೆಗೆ ಪ್ರಯಾಣ ಹೊರಟಾಗ ಉಗ್ರಸೇನನ ಮಗನಾದ ಕಂಸ, ತಂಗಿ ದೇವಕಿಯ ಬಗೆಗಿನ ಮಮತೆಯಿಂದ ತಾನೇ ರಥ ನಡೆಸತೊಡಗುತ್ತಾನೆ. ಶ್ಲೋಕ ೩೧, ೩೨ ರಲ್ಲಿ ದೇವಕನು ಮಗಳಿಗೆ ಕೊಟ್ಟ ಬಳುವಳಿಯ-ಆನೆ, ಕುದುರೆ, ರಥ, ದಾಸದಾಸಿಯರ ಸುಂದರವಾದ ವರ್ಣನೆಯಿದೆ. ಶ್ಲೋಕ ೩೩ರಲ್ಲಿ ಮಂಗಳ ವಾದ್ಯಗಳ ವರ್ಣನೆಯಿದೆ. ಈ ಯಾವ ವಿವರಗಳೂ ಪ್ರ.ಭಾ.ದಲ್ಲಿಲ್ಲ.

ಅ. ೧, ಶ್ಲೋಕ ೩೪-೫೫ರಲ್ಲಿ, ದಾರಿಯಲ್ಲಿ ರಥ ಸಾಗುತ್ತಿರುವಾಗ ಅಶರೀರ ವಾಣಿಯೊಂದು ಕಡಿವಾಣಗಳನ್ನು ಹಿಡಿದಿದ್ದ ಕಂಸನಿಗೆ ಯಾವಳನ್ನು ನೀನು ಈಗ ಕರೆದುಕೊಂಡು ಹೋಗುತ್ತಿರುವೆಯೋ ಇವಳ ಎಂಟನೆಯ ಗರ್ಭವು ನಿನ್ನನ್ನು ಕೊಲ್ಲುವುದು ಎಂದು ಹೇಳಲು, ಆ ಕೂಡಲೇ ಕಂಸ ದೇವಕಿಯನ್ನು ಕೊಲ್ಲ ಹೋದಾಗ ವಸುದೇವನು ಬಗೆಬಗೆಯಾಗಿ ತಿಳಿಹೇಳಿ ಆತನನ್ನು ಸಮಾಧಾನಪಡಿಸಲೆತ್ನಿಸುತ್ತಾನೆ. ಕಂಸ ಅದಕ್ಕೆ ಒಪ್ಪದಿದ್ದಾಗ ವಸುದೇವ 'ನಿನಗೆ ಈಕೆಯಿಂದ ಭಯವಿಲ್ಲವಲ್ಲ ಈಕೆಗೆ ಹುಟ್ಟಿದ ಮಕ್ಕಳೆಲ್ಲರನ್ನು ಒಪ್ಪಿಸಿ ಬಿಡುತ್ತೇನೆ' ಎಂದು ಹೇಳಿ ದೇವಕಿಯ ಕೊಲೆಯನ್ನು ತಪ್ಪಿಸುತ್ತಾನೆ. ೨೨ ಶ್ಲೋಕಗಳಲ್ಲಿ ದೀರ್ಘವಾಗಿ ಬರುವ ಈ ಭಾಗವನ್ನು ಪ್ರಸನ್ನವೆಂಕಟರು ತುಂಬ ಸಂಗ್ರಹವಾಗಿ ಕೀ. ೪, ನಂ. ೪ ರ ಕೊನೆಯ ನಾಲ್ಕು ಸಾಲುಗಳಲ್ಲಿ ತಂದಿದ್ದಾರೆ. ಇಲ್ಲೆಲ್ಲ ದಾಸರು ಮೂಲದ ವಿವರಗಳನ್ನು ಕೈಬಿಟ್ಟು ತೀರ ಮುಖ್ಯವೆನಿಸಿದ ಕಥಾಂಶಗಳನ್ನು ಮಾತ್ರ ಹೇಳುತ್ತ ಸಾಗುವ ಕ್ರಮವನ್ನು ಗಮನಿಸಬಹುದಾಗಿದೆ.

ಅ. ೧, ಶ್ಲೋಕ ೫೬-೬೧ ರಲ್ಲಿ ವಸುದೇವ ಕಂಸನಿಗೆ ಮಾತು ಕೊಟ್ಟಿದ್ದಂತೆ, ಹುಟ್ಟಿದ ಮೊದಲ ಮಗುವನ್ನು ತಂದು ಒಪ್ಪಿಸಿದಾಗ ಕಂಸ ತನಗೆ ಈ ಮಗುವಿನಿಂದ ಭಯವಿಲ್ಲವೆಂದು ಹಿಂದಕ್ಕೆ ಕಳುಹಿಸುತ್ತಾನೆ. ಶ್ಲೋಕ ೬೨-೬೯ರಲ್ಲಿ, ಆಮೇಲೆ ಕಂಸನ

Rarest Archiver

ಲ್ಲಿಗೆ ಬಂದ ನಾರದ, ಗೋಕುಲದ ಗೊಲ್ಲರು, ಯಾದವರು ಎಲ್ಲರೂ ದೇವಾಂಶ ಸಂಭೂತ ರೆಂದೂ ಕಂಸನನ್ನು ಹಿಂಬಾಲಿಸುವವರೆಲ್ಲ ಅಸುರರೆಂದೂ ರಾಕ್ಷಸರ ಕೊಲೆಗಾಗಿ ದೇವತೆ ಗಳು ಮಾಡುತ್ತಿರುವ ಸಂಚನ್ನೂ ತಿಳಿಸಿ ಹೋಗುತ್ತಾನೆ. ನಾರದ ಹೋದನಂತರ ಕಂಸನು ದೇವಕಿ ವಸುದೇವರನ್ನು ಸೆರೆಯಲ್ಲಿಟ್ಟು ಅವರಿಗೆ ಹುಟ್ಟಿದ ಪ್ರತಿ ಮಗುವೂ ವಿಷ್ಣುವೇ ಎಂಬ ಸಂಶಯದಿಂದ ಕೊಂದು ಹಾಕುತ್ತಿದ್ದನು. ಈ ವಿಚಾರಗಳು ಕೀ. ೪, ನಂ. ೫ ರ ಪೂರ್ವಾರ್ಧದಲ್ಲಿ ತುಂಬ ಸಂಕ್ಷಿಪ್ತವಾಗಿ ಬಂದಿವೆ.

ಅ. ೧, ಶ್ಲೋಕ ೭೦, ೭೧ ರಲ್ಲಿ ಹಿಂದೆ ಹರಿಯಿಂದ ಹತನಾದ ಕಾಲನೇಮಿಯೇ ತಾನೆಂದು ತಿಳಿದು ಯಾದವರ ದ್ವೇಷಿಯಾಗಿದ್ದ, ಮಹಾಬಲಶಾಲಿಯಾದ ಕಂಸನು ಯದು, ಭೋಜ, ಅಂಧಕ ದೇಶಗಳಿಗೆ ಒಡೆಯನಾದ ತನ್ನ ತಂದೆ ಉಗ್ರಸೇನನ ಸೊಲ್ಲ ಡಗಿಸಿ ತಾನೇ ಆಳುತ್ತಿದ್ದ ವಿಚಾರವಿದೆ. ಇದರ ಕೆಲವಂಶಗಳು ಮಾತ್ರ ಕೀ. ೪, ನಂ. ೫ರ ಪೂರ್ವಾರ್ಧದಲ್ಲಿ ಬಂದಿವೆ.

ಅಧ್ಯಾಯ ೨, ಶ್ಲೋಕ ೧-೪ : ಕಂಸನು ಪ್ರಲಂಬ,ಬಕ, ಚಾಣೂರ, ಬಾಣ, ನರಕಾಸುರ ಇವರೆಲ್ಲರ ಜೊತೆಗೂಡಿ ಯಾದವರನ್ನು ಪೀಡಿಸುತ್ತಿದ್ದನು. ಇದರಿಂದಾಗಿ ಅವರೆಲ್ಲ ಕುರು, ಪಾಂಚಾಲ,ಕೇಕಯ ಮೊದಲಾದ ದೇಶಗಳಿಗೆ ಹೋಗಿ ವಾಸಿಸುತ್ತಿದ್ದರು; ಮಥುರೆಯಲ್ಲೆ ಉಳಿದ ಅಕ್ರೂರಾದಿಗಳು ಆತನನ್ನು ಅನುಸರಿಸಿ ಸೇವೆ ಸಲ್ಲಿಸುತ್ತಿದ್ದರು.– ಈ ವಿವರಗಳು ಪ್ರ.ಭಾ.ದಲ್ಲಿಲ್ಲ.

ಅ. ೨, ಶ್ಲೋಕ ೫-೧೬ : ದೇವಕಿಯ ಆರು ಮಕ್ಕಳೂ ಕೊಲ್ಲಲ್ಪಟ್ಟನಂತರ ಆಕೆ ಏಳನೆಯ ಬಾರಿ ಗರ್ಭಿಣಿಯಾಗುತ್ತಾಳೆ. ತನ್ನ ಭಕ್ತರಾದ ಯಾದವರು ಕಂಸನಿಂದ ಪೀಡಿತರಾದದ್ದನ್ನು ತಿಳಿದ ಭಗವಂತನು ತನ್ನ ವೈಷ್ಣವೀ ಯೋಗಮಾಯೆಗೆ 'ನೀನು ದೇವಕಿಯಲ್ಲಿ ಬೆಳೆಯುತ್ತಿರುವ ಶೇಷಾಂಶದ ಮಗುವನ್ನು ತಂದು ರೋಹಿಣಿಯ ಗರ್ಭದ ಲ್ಲಿಡು. ನಂತರ ನಾನು ದೇವಕಿಯ ಮಗನಾಗಿ ಹುಟ್ಟುತ್ತೇನೆ. ನೀನೂ ಯಶೋದೆಯ ಪುತ್ರಿಯಾಗಿ ಜನಿಸು. ಸರ್ವೇಷ್ಟಾರ್ಥಗಳ ವರಗಳಿಗೆ ಅಧಿನಾಯಕಿಯಾದ ನಿನ್ನನ್ನು ಮಾನ ವರೆಲ್ಲ ದುರ್ಗೆ, ಭದ್ರಕಾಳಿ, ಚಂಡಿಕಾ, ಮಾಯಾ ಇತ್ಯಾದಿ ಹೆಸರುಗಳಿಂದ ಪೂಜಿಸುವರು. ರೋಹಿಣಿಯಲ್ಲಿ ಜನಿಸುವ ಮಗುವಿಗೆ ಸಂಕರ್ಷಣ, ಬಲ, ರಾಮ ಎಂದು ಹೆಸರುಗಳಾಗು ತ್ತವೆ, ಎಂದು ಹೇಳಿದನು. ಮಾಯೆ ಭಗವಂತನ ಆ ಎಲ್ಲ ಆಜ್ಞೆಯನ್ನೂ ಹಾಗೆಯೇ ನಡೆ ಸಿದಳು. ಮಾಯೆಯು ದೇವಕಿಯ ಗರ್ಭವನ್ನು ರೋಹಿಣಿಯ ಗರ್ಭದಲ್ಲಿರಿಸಲು ಜನರೆಲ್ಲ ದೇವಕಿಗೆ ಗರ್ಭಸ್ರಾವವಾಯಿತೆಂದು ಮರುಗುತ್ತಾರೆ.

ಪ್ರ.ಭಾ.ದಲ್ಲಿ ಹರಿಯಾಜ್ಞೆಯ ಈ ಎಲ್ಲ ವಿವರಗಳು ಹೀಗೆಯೇ ಬಾರದಿದ್ದರೂ ಕೀ. ೪, ನಂ. ೫ ರ ಉತ್ತರಾರ್ಧ ಮತ್ತು ನಂ. ೬ ರ ಮೊದಲ ಎರಡು ಸಾಲುಗಳಲ್ಲಿ ದುರ್ಗೆ ಹರಿಯಾಜ್ಞೆಯನ್ನು ವಹಿಸಿ ಮಾಡಿದ ಇದೇ ಕೃತ್ಯಗಳನ್ನು ತುಂಬ ಸಂಕ್ಷಿಪ್ತವಾಗಿ ಹೇಳಲಾಗಿದೆ.

Rarest Archiver

ಅ. ೨, ಶ್ಲೋಕ ೧೭–೨೦ರಲ್ಲಿ ಭಗವಂತ ತನ್ನ ಎಲ್ಲ ದಿವ್ಯಾಂಶಗಳೊಂದಿಗೆ ವಸುದೇವನ ಹೃದಯವನ್ನು ಪ್ರವೇಶಿಸಿ ನೆಲೆಗೊಂಡಾಗ ವಸುದೇವ ತೇಜಸ್ವಿಯಾಗಿ ಸೂರ್ಯನಂತೆ ಬೆಳಗುತ್ತಾನೆ.ಆ ಅಂಶವನ್ನು ಗರ್ಭದಲ್ಲಿ ಧರಿಸಿದ ದೇವಕಿ ಕಾಂತಿಯುತಳಾ ದರೂ ಸೆರೆಯಲ್ಲಿದ್ದುದರಿಂದ ಅಡಗಿಸಿಟ್ಟ ದೀಪದ ಕುಡಿಯಂತೆ, ತಿಳಿಗೇಡಿಯಲ್ಲಿ ಬಂದು ಸೇರಿದ ಸದ್ವಿದ್ಯೆಯಂತೆ ಪೂರ್ಣರೂಪದಲ್ಲಿ ಪ್ರಕಾಶಿಸಲಿಲ್ಲವೆಂಬ ವರ್ಣನೆಯಿದೆ. ವಸು ದೇವ ದೇವಕಿಯರ ಈ ಬಗೆಯ ವರ್ಣನೆ ಪ್ರ.ಭಾ.ದಲ್ಲಿ ಬರುವುದಿಲ್ಲ.

ಅ. ೨, ಶ್ಲೋಕ ೨೧-೨೪ ರಲ್ಲಿ ಶುಚಿಸ್ಮಿತೆಯಾಗಿ ಕಾಂತಿಯುತಳಾಗಿ ಓಡಾಡು ತ್ತಿದ್ದ ದೇವಕಿಯನ್ನು ಕಂಡು ಕಂಸನು, 'ನನ್ನ ಪ್ರಾಣಕ್ಕೆ ಕುತ್ತು ತರುವ ಹರಿಯೇ ಈಕೆಯ ಗರ್ಭದಲ್ಲಿ ಸೇರಿರಬೇಕು. ಏನು ಮಾಡಲಿ, ಸ್ತ್ರೀ ಹತ್ಯೆ ಮಹಾಪಾಪ' ಎಂದು ಚಿಂತಿಸಿ, ಆ ಮಗು ಹುಟ್ಟುವುದನ್ನೇ ಕಾಯುತ್ತಿದ್ದನು. ಆತ ಕುಳಿತಾಗ, ಮಲಗಿದಾಗ, ನಿಂತಾಗ, ಓಡಾಡುವಾಗ, ಊಟ ಮಾಡುವಾಗ ಎಲ್ಲ ಹೊತ್ತಿನಲ್ಲೂ ಹರಿಯ ಚಿಂತೆಯೇ ಕಾಡತೊಡಗುತ್ತದೆ. ಕಂಸನ ಆಗಿನ ಮನಸ್ಥಿತಿಯನ್ನು ತುಂಬ ಶಕ್ತವಾಗಿ ವಿವರಿಸುವ, ಕಂಸನ ಪಾತ್ರಪೋಷಣೆಗೆ ತುಂಬ ಉಪಯುಕ್ತವಾದ ಈ ಭಾಗವನ್ನೂ ದಾಸರು ಕೈಬಿಟ್ಟಿ ದ್ದಾರೆ.

ಅ. ೨, ಶ್ಲೋಕ ೨೬ ರಲ್ಲಿ ಹರಿಯು ದೇವಕಿಯ ಗರ್ಭವನ್ನು ಸೇರಿದ್ದನ್ನು ತಿಳಿದ ಬ್ರಹ್ಮ, ಶಿವ, ಮೊದಲಾದ ದೇವತೆಗಳು, ನಾರದಾದಿ ಮುನಿಗಳೆಲ್ಲರೂ ಅಲ್ಲಿಗೆ ಬಂದು ಭಕ್ತಾಭೀಷ್ಟಪ್ರದನಾದ ಭಗವಂತನನ್ನು ಸ್ತುತಿಸುತ್ತಾರೆ. ಶ್ಲೋಕ ೨೬-೪೧ ರವರೆಗೆ ಈ ಸ್ತುತಿ ದೀರ್ಘವಾಗಿ ಬರುತ್ತದೆ. ೪೨ ನೆಯ ಶ್ಲೋಕದಲ್ಲಿ ದೇವಕಿಯನ್ನು ಕುರಿತು, 'ತಾಯೆ, ಸಾಕ್ಷಾತ್ ಭಗವಂತನೇ ನಮ್ಮೆಲ್ಲರ ಒಳಿತಿಗಾಗಿ ತನ್ನ ಅಂಶದಿಂದ ನಿನ್ನ ಗರ್ಭಕ್ಕೆ ಬಂದು ಸೇರಿರುವನು. ಆತನೇ ಯಾದವರೆಲ್ಲರನ್ನೂ ಕಾಪಾಡುತ್ತಾನೆ. ನೀವು ಕಂಸನಿಂದ ಭಯಪಡಬೇಕಾಗಿಲ್ಲ, ಎಂದು ಹೇಳಿ ದೇವಲೋಕಕ್ಕೆ ಹಿಂದಿರುಗುತ್ತಾರೆ. ಪ್ರ. ಭಾ. ದಲ್ಲಿ,

ಪುರುಷೋತ್ತಮ ದೇವಕಿಯ ಪರಮಜಠರದಿ ನಿಜೈಶ್ವರಿಯದಲಿ ಕ್ರೀಡಿಸುತಿರೆ
ಸುರರ ಸಮೂಹಕೆ ಅಮಿತ ಹರುಷವಾಯಿತು ಖಳನಿ
ಕರಕೆ ಉತ್ಪಾತ ಸಂದರುಶನವು ಫಲಪುಷ್ಪ
ಭರಿತ ತರುಲತೆಯವನಿ ಚಿರಭದ್ರಮಯವಾಗೆ ಕರೆದವಾವು ಕೊಡವಾಲ್ಗಳ

(ಕೀ. ೪, ನು. ೬)

ಎಂದು ಹರಿ ದೇವಕಿಯ ಗರ್ಭದಲ್ಲಿ ಸೇರಿದ್ದರಿಂದಾದ ಕೆಲವು ಪರಿಣಾಮಗಳನ್ನು ಹೇಳಿ, ಮೂಲದಲ್ಲಿರುವ ದೇವತೆಗಳು ಮಾಡುವ ಹರಿಸ್ತುತಿಯ ವಿವರಗಳೆಲ್ಲವನ್ನೂ ಕೈ ಬಿಡಲಾ ಗಿದೆ. ಇಲ್ಲೆಲ್ಲ ದಾಸರು ಮೂಲದ ಕಥಾಂಶಗಳನ್ನೇ ಬಹಳಮಟ್ಟಿಗೆ ಅನುಸರಿಸಿಯೂ ಕೆಲ ವೆಡೆ ಭಿನ್ನವಾಗುವುದನ್ನು ಗಮನಿಸಬಹುದಾಗಿದೆ.

Rarest Archiver

ಅಧ್ಯಾಯ ೩, ಶ್ಲೋಕ ೧-೭ ರಲ್ಲಿ ಕೃಷ್ಣ ಜನಿಸುವ ಸಮಯ ಬಂದಾಗ ಪ್ರಕೃತಿ ಅದಕ್ಕಾಗಿ ಸಿದ್ಧವಾದ ಬಗೆ, ಸಜ್ಜನರ ಮನಸ್ಸು ಪ್ರಸನ್ನವಾದದ್ದು,ಕಿನ್ನರರು ಗಂಧರ್ವರು ಹಾಡಿದ್ದು. ಸಿದ್ಧರು ಚಾರಣರು ಸ್ತುತಿಸಿದ್ದು, ಅಪ್ಸರೆಯರು ನರ್ತಿಸಿದ್ದು, ದೇವತೆಗಳು ಹೂಮಳೆಗರೆದದ್ದು,ಮೇಘಗಳು ಕಡಲನ್ನು ಅನುಕರಿಸಿ ಗುಡುಗಿದ್ದನ್ನು ವರ್ಣಿಸಲಾಗಿದೆ. ಈ ಭಾಗದ ಕೆಲವು ವಿವರಗಳು ಕೃಷ್ಣಜನನಾನಂತರ ಕೀ. ೫೮, ನಂ. ೧, ೨ ರಲ್ಲಿ ಸರಳ ವಾಗಿ, ಸಂಕ್ಷಿಪ್ತವಾಗಿ ಬರುತ್ತವೆ. ಕೀ. ೪, ನು. ೭, ೮ ರಲ್ಲಿ 'ಮಾವ ಕಂಸನ ಕೊಲುವ ಭಾವದಲಿ' ಕೃಷ್ಣನು ನೃಸಿಂಹನಂತೆ ದೇವಕಿಯ ಜಠರದಲ್ಲಿ ಆವಿರ್ಭಾವನಾದನು. ಶ್ರಾವ ಣದ ಬಹುಳಾಷ್ಟಮಿ ಚಂದ್ರೋದಯದಲ್ಲಿ ರೋಹಿಣಿ ಕೂಡಿದ ವೇಳೆಯಲ್ಲಿ ಬೊಮ್ಮಾದಿ ದೇವತೆಗಳು ಅಂಬರದಲ್ಲಿ ಸ್ತೋತ್ರಮಾಡಲು ಶ್ರೀವತ್ಸ ಮಣಿಕಿರೀಟ ಕೌಸ್ತುಭ ಕುಂಡಲ ವಲಯಧಾರಿಯಾಗಿ, ಗದಾವನಜ ಚಕ್ರಧರನಾಗಿ, ಚತುರ್ಭುಜನಾಗಿ, ಪೀತಾಂಬರ ಧರಿ ಸಿದ ನೀಲಮೇಘ ಶಾಮಲನಾಗಿ ಹುಟ್ಟಿದನೆಂದು ವರ್ಣಿಸಿದ ಭಾಗ, ಮೂಲದ ಅ. ೩, ಶ್ಲೋಕ ೮-೧೦ ರಲ್ಲಿ ಬರುತ್ತದೆ.

ಅ. ೩, ಶ್ಲೋಕ ೧೧ ರಲ್ಲಿ ವಸುದೇವನು ಕೃಷ್ಣಾವತಾರ ನಿಮಿತ್ತವಾಗಿ ನಡೆಸ ಬೇಕಾದ ಉತ್ಸವದ ಸಡಗರದೊಡನೆ ಹತ್ತುಸಾವಿರ ಗೋವುಗಳನ್ನು ಬ್ರಾಹ್ಮಣರಿಗೆ ದಾನ ಮಾಡುತ್ತಾನೆ. ಶ್ಲೋಕ ೧೨-೨೨ ರಲ್ಲಿ ಆ ಮಗುವನ್ನು ವಸುದೇವನು ಪರಮ ಪುರು ಷನೆಂದು ತಿಳಿದು ದೀರ್ಘವಾಗಿ ಸ್ತುತಿಸುತ್ತಾನೆ. ಅನಂತರ ಶ್ಲೋಕ ೨೩-೩೧ ರವರೆಗೆ ದೇವಕಿ ಕೃಷ್ಣನನ್ನು ಸ್ತುತಿಸುವುದನ್ನು ವರ್ಣಿಸಲಾಗಿದೆ. ಈ ಇಬ್ಬರ ಸ್ತುತಿಗಳನ್ನು ದಾಸರು ಕೀ. ೪, ನಂ. ೯ ರ ಮೊದಲ ಎರಡು ಸಾಲುಗಳಲ್ಲಿ-

> ಸಾಸಿರ ಮುಂಗುರುಳ ಮುಖ ವಾಸುದೇವನ ಕಂಡು
> ಸ್ತ್ರೀಸಹಾನಕ ದುಂದುಭಿ ಸ್ತುತಿಸೆ

ಎಂದು ಸಂಕ್ಷಿಪ್ತವಾಗಿ ಹೇಳಿ ಮುಗಿಸುತ್ತಾರೆ. ಇದೇ ನುಡಿಯ ಉತ್ತರಾರ್ಧದಲ್ಲಿ 'ಗೋಸಾಸಿರದ ಶತಗಳನು ಭೂಸುರರಿಗಿತ್ತನು ಸಂತೋಷದಲಿ ವಸುದೇವ' ಎನ್ನುತ್ತಾರೆ. ಮೂಲಭಾಗವತದಲ್ಲಿ ಪ್ರತಿಯೊಂದು ಘಟನೆಯೂ ವಿವರವಾಗಿ ವರ್ಣಿತವಾಗಿದ್ದರೆ ದಾಸರು ತಮಗೆ ಅಗತ್ಯವೆನಿಸಿದಷ್ಟನ್ನು ಮಾತ್ರ ತಮ್ಮ ಕೀರ್ತನೆಗಳಲ್ಲಿ ತರುತ್ತಾರೆ. ಇಂಥ ಲ್ಲೆಲ್ಲ ಕಾಣುವ ಈ ಸಂಗ್ರಹಗುಣ ಮೆಚ್ಚುವಂಥದು. ಅಲ್ಲದೆ ಮೂಲದಲ್ಲಿ ಕೃಷ್ಣ ಹುಟ್ಟುವ ಮೊದಲೇ ಬರುವ ದೇವತೆಗಳ ಸ್ತುತಿ, ಗಾನ, ನರ್ತನ ಇತ್ಯಾದಿಗಳು ಪ್ರ.ಭಾ.ದಲ್ಲಿ ಕೃಷ್ಣ ಜನಿಸಿದ ನಂತರ ಬಂದಿರುವುದು ಹೆಚ್ಚು ಔಚಿತ್ಯ ಪೂರ್ಣವಾಗಿ ಕಾಣಿಸುತ್ತದೆ. ಆದರೆ ಕೀ. ೫ ರ ಪಲ್ಲವಿಯಾಗಿ ಬಂದಿರುವ,

> ಶ್ರೀವಲ್ಲಭನುದಿಸಿದಾ ಕ್ಷಣದಿ ದುರ್ಗಾ
> ದೇವಿ ಹುಟ್ಟಿದಳು ಗೋಕುಲದಿ

Rarest Archiver

ಎಂಬ ಸಾಲುಗಳು ಅಷ್ಟು ಸಮಂಜಸವಾಗಿಲ್ಲ ಎಂಬ ಶ್ರೀ ಎ.ಟಿ.ಪಾಟೀಲರ ಅಭಿಪ್ರಾಯ[1] ಒಪ್ಪಬಹುದಾದ್ದು ಎನ್ನಿಸುತ್ತದೆ.

ಅ. ೩, ಶ್ಲೋಕ ೩೨-೪೭ ರಲ್ಲಿ ಕೃಷ್ಣನು ವಸುದೇವ ದೇವಕಿಯರಿಗೆ ಅವರ ಪೂರ್ವವೃತ್ತಾಂತವನ್ನೆಲ್ಲ ವಿಸ್ತಾರವಾಗಿ ಹೇಳುತ್ತಾನೆ. ಅನಂತರ ವಸುದೇವನಿಗೆ, 'ನೀನು ಕಂಸನಿಗೆ ಹೆದರುವುದಾದರೆ ನನ್ನನ್ನು ಗೋಕುಲಕ್ಕೆ ಕರೆದುಕೊಂಡುಹೋಗಿ ಬಿಟ್ಟು ಯಶೋದೆಯ ಮಾಯಾಶಕ್ತಿಸ್ವರೂಪಿಣಿಯಾದ ಹೆಣ್ಣು ಮಗುವನ್ನು ಬೇಗ ಇಲ್ಲಿಗೆ ತೆಗೆದುಕೊಂಡು ಬಾ. ಈ ಸಮಯದಲ್ಲಿ ಎಲ್ಲ ಬಾಗಿಲುಗಳೂ ತಾನಾಗಿಯೇ ತೆರೆದುಕೊಳ್ಳುವುದು. ದಾಟಲಸಾಧ್ಯವಾದ ಯಮುನಾನದಿಯೂ ದಾರಿಯನ್ನು ಬಿಟ್ಟು ಕೊಡುವುದು' ಎಂದು ಹೇಳಿ, ಕೂಡಲೇ ತನ್ನ ಯೋಗಮಾಯಾಶಕ್ತಿಯಿಂದ ಸಾಧಾರಣ ಶಿಶುವಂತೆ ಆಗುತ್ತಾನೆ. ಕೃಷ್ಣ ಮಾತನಾಡುವ ಈ ಭಾಗವನ್ನು ದಾಸರು ಪೂರ್ಣವಾಗಿ ಕೈಬಿಟ್ಟಿದ್ದಾರೆ. ಶ್ಲೋಕ ೪೮ ರ-ಕೃಷ್ಣ ಜನಿಸಿದ ಹೊತ್ತಿಗೇ ಯಶೋದೆಗೆ ದುರ್ಗೆ ಮಗುವಾಗಿ ಹುಟ್ಟಿದ—ವಿಷಯವನ್ನು ಕೀ. ೫ ರ ಪಲ್ಲವಿಯಲ್ಲೇ ಸೂಚಿಸಲಾಗಿದೆ.

ಅ. ೩. ಶ್ಲೋಕ ೪೮-೫೪ ರಲ್ಲಿ ವಸುದೇವ ಕೃಷ್ಣನನ್ನು ಎತ್ತಿಕೊಂಡು ಗೋಕುಲಕ್ಕೆ ಬಂದು ನಿದ್ರಾವಶಳಾಗಿದ್ದ ಯಶೋದೆಯ ಪಕ್ಕದಲ್ಲಿಟ್ಟು, ಯಶೋದೆಯ ಪುತ್ರಿಯಾದ ಮಾಯೆಯನ್ನು ಎತ್ತಿಕೊಂಡು ಬಂದು, ಮಲಗಿದ್ದ ದೇವಕಿಯ ಪಕ್ಕಕ್ಕೆ ಮಲಗಿಸಿ, ತಾನು ಹಿಂದಿನಂತೆಯೇ ಬಂಧಿತನಾಗಿ ಇರುವ ವಿಚಾರ ಬರುತ್ತದೆ. ಈ ಭಾಗ ಕೀ. ೫ ರ ನಂ. ೩-೬ರಲ್ಲಿ ಬರುತ್ತದೆ. ಮುಖ್ಯಾಂಶಗಳಲ್ಲಿ ಸಾಮ್ಯ ಇದೆಯಾದರೂ ವಿವರಗಳಲ್ಲಿ ವ್ಯತ್ಯಾಸಗಳಿವೆ. ಮೂಲದಲ್ಲಿ ಕಾವಲಿದ್ದವರು ಪ್ರಜ್ಞಾಹೀನರಾದರು ಎಂದಿದ್ದರೆ ಇಲ್ಲಿ 'ಕಾವಲಿದ್ದವರಿಗೆ ಕಾವಳ ಕವಿಯಿತು' ಎಂಬ ಆಲಂಕಾರಿಕ ಅಭಿವ್ಯಕ್ತಿ ಇದೆ. ಮೂಲದಲ್ಲಿನ ಬಾಗಿಲು, ಅಗುಳಿ, ಸರಪಳಿ,ತಾಪಾಳುಗಳ ವಿವರವೆಲ್ಲವನ್ನು ಇಲ್ಲಿ ಕೈಬಿಟ್ಟು 'ತಾವಾಗಿ ಪುರ ದ್ವಾರವು ತೆರೆದವು' ಎಂದು ಸರಳವಾಗಿ ಹೇಳಲಾಗಿದೆ. ಇಂಥಲ್ಲಿಯ ಸಂಗ್ರಹ ಗುಣವನ್ನು ಕೀರ್ತನೆಯಲ್ಲಿ ಮೆಚ್ಚಬಹುದಾದರೂ, ಮೂಲದಲ್ಲಿಯ ಯಮುನಾ ನದಿಯ ತುಂಬು ಪ್ರವಾಹದ ಸುಂದರ ವರ್ಣನೆಯನ್ನೂ ಕೈಬಿಟ್ಟದ್ದು ಉಚಿತವೆನ್ನಿಸುವುದಿಲ್ಲ.ಮೂಲದಲ್ಲಿ, ಗೋಕುಲದಲ್ಲಿಯೂ ಎಲ್ಲರೂ ನಿದ್ರಾವಶರಾಗಿದ್ದು ವಸುದೇವನು ಮಗುವನ್ನು ಬದಲಿಸಿ ತಂದ ವಿಚಾರ ಅವರಾರಿಗೂ ತಿಳಿಯುವುದಿಲ್ಲ.ಹಾಗೆಯೇ ವಸುದೇವ ಸೆರೆಮನೆಗೆ ಹಿಂದಿರುಗಿ ಯಾರಿಗೂ ತಿಳಿಯದಂತೆ ಮೊದಲಿನಂತೆಯೇ ಇರುತ್ತಾನೆ-ಎಂಬಂಥ ಸಣ್ಣ ಸಣ್ಣ ವಿವರಗಳ ಬಗ್ಗೆಯೂ ಎಚ್ಚರವಹಿಸಿದ್ದು ಕಾಣಿಸುತ್ತದೆ. ಆದರೆ ದಾಸರು ತಮ್ಮ ಕೀರ್ತನೆಗಳಲ್ಲಿ ಆ ಎಲ್ಲ ವಿವರಗಳನ್ನು ಕೊಡಲು ಹೋಗದೆ ಮುಖ್ಯಾಂಶಗಳನ್ನು ಮಾತ್ರ ಹೇಳುತ್ತ ಹೋಗುತ್ತಾರೆ. ಮೂಲದಲ್ಲಿ ದೇವಕಿಗೂ ತನಗೆ ಹುಟ್ಟಿದ ಮಗು ಹೆಣ್ಣೊ ಗಂಡೊ ತಿಳಿದಿರಲಿಲ್ಲ ಎಂದು ಹೇಳಿದೆ. (ಶ್ಲೋಕ ೫೪) ಆದರೆ ಇಲ್ಲಿ ಮಗುವನ್ನು ತಂದು 'ಶಶಿಮುಖಿ ದೇವಕಿ

---

1 ಶ್ರೀ ಪ್ರಸನ್ನವೆಂಕಟದಾಸರು ಮತ್ತು ಅವರ ಕೃತಿಗಳು, ಪು. ೭೬

Rarest Archiver

ದೇವಿಗೆ ಕೊಟ್ಟನು' ಎಂದು ಹೇಳಿ, ಆಕೆಗೆ ಈ ವಿಷಯ ತಿಳಿದಿತ್ತೆಂಬುದನ್ನು ಸೂಚಿಸಲಾಗಿದೆ.

ಅಧ್ಯಾಯ ೪, ಶ್ಲೋಕ ೧, ೨ : "ಶ್ರೀಶಂಕನು ಹೇಳಿದನು-ಒಳ ಹೊರಗಣ ಪಟ್ಟಣದ ಬಾಗಿಲುಗಳೆಲ್ಲವೂ ಹಿಂದಿನಂತೆಯೇ ಮುಚ್ಚಿಕೊಂಡವು. ನಂತರ ಮಗುವಿನ ಧ್ವನಿಯನ್ನು ಕೇಳಿ ಸೆರೆಮನೆಯ ಕಾವಲುಗಾರರು ಎಚ್ಚರಗೊಂಡರು. ಅವರಾದರೋ ಬೇಗನೇ ಹತ್ತಿರ ಓಡಿಬಂದು ಕಂಸನು ಉದ್ವೇಗ ಪಡುತ್ತ ಯಾವುದನ್ನು ನಿರೀಕ್ಷಣೆ ಮಾಡುತ್ತಿರುವನೊ ಆ ದೇವಕಿಯ ಶಿಶು ಜನಿಸಿದ ವೃತ್ತಾಂತವನ್ನು ಆ ಕಂಸನಿಗೆ ಹೇಳಿದರು."– ಹೀಗೆ ಮೂಲದಲ್ಲಿ ಪ್ರತಿಯೊಂದು ವಿವರವೂ ಸಹಜವಾಗಿ, ಘಟನೆ ಕಣ್ಣಿಗೆ ಕಟ್ಟುವಂತೆ ಬಂದಿರುವುದನ್ನು ಗಮನಿಸಬಹುದು. ಆದರೆ ಈ ಮೊದಲೇ ಹೇಳಿದಂತೆ, ಮುಖ್ಯಾಂಶಗಳ ಕಡೆಗೆ ಮಾತ್ರ ದೃಷ್ಟಿಯಿಟ್ಟ ದಾಸರು, 'ಪ್ರಸುತ ಸುದ್ದಿಯ ಕೇಳಿದ ಕಂಸ' ಎಂದಷ್ಟೇ ಹೇಳಿ ಮುನ್ನಡೆಯುತ್ತಾರೆ.

ಅ. ೪, ಶ್ಲೋಕ ೩ : 'ಆತನೂ ಸಹ ಹಾಸಿಗೆಯಿಂದ ಬೇಗನೇ ಎದ್ದು ಇವನೇ ನನಗೆ ಮೃತ್ಯು ಎಂದು ಗಾಬರಿಗೊಂಡವನಾಗಿ ಅಲ್ಲಲ್ಲೆ ಎಡವುತ್ತ ತಲೆಗೂದಲಿನ ಗಂಟು ಬಿಚ್ಚಿದ್ದನ್ನೂ ಗಮನಿಸದೇ ಕೆದರಿದ ತಲೆಯೊಂದಿಗೆ ಬೇಗನೆ ಹೆರಿಗೆಯ ಮನೆಗೆ ಹೋದನು.'-ಈ ಭಾಗ ಕೀ. ೫, ನು. ೭ ರ ಮೊದಲ ಎರಡು ಸಾಲುಗಳಲ್ಲಿ,

ಬಿಟ್ಟ ಘುಂಡೆಯಿಲೆದ್ದು ಬಲು ಲವಲವಿಕೆಯ
ಕಟ್ಟುಗ್ರಕೋಪದಿ ನಿಶಿಥದಲಿ

ಎಂಬಲ್ಲಿ ಶಕ್ತವಾಗಿಯೆ ಬಂದಿದೆ. ಶ್ಲೋಕ ೪-೭ರ ಭಾಗ ಕೀ. ೫, ನಂ. ೭ರ ಮೂರನೆಯ ಸಾಲಿನಿಂದ ನಂ. ೮ರಲ್ಲಿ ಬರುತ್ತದೆ. ಮೂಲದಲ್ಲಿನ, ದೇವಕಿ ಕಂಸನನ್ನು ಈ ಮಗುವನ್ನೂ ಕೊಲ್ಲಬೇಡ ಎಂದು ಬೇಡಿಕೊಳ್ಳುವ ಮಾತುಗಳ ಸಂಗ್ರಹಾರ್ಥವನ್ನು ಮಾತ್ರ ದಾಸರು ನಂ. ೮ರಲ್ಲಿ ಕೊಟ್ಟಿದ್ದಾರೆ.

ಅ. ೪, ಶ್ಲೋಕ ೮-೧೩ ರಲ್ಲಿ ಸ್ವಾರ್ಥಕ್ಕಾಗಿ ಕರುಣೆಯಿಲ್ಲದ ಆ ಪಾಪಿ ಕಂಸ ಆ ಮಗುವಿನ ಕಾಲುಗಳನ್ನು ಹಿಡಿದು ಕಲ್ಲು ಬಂಡೆಯ ಮೇಲೆ ಅಪ್ಪಳಿಸಿದನು. ಆಗ ಆ ಮಗು ಅವನ ಕೈಯಿಂದ ತಪ್ಪಿಸಿಕೊಂಡು ಆಕಾಶಕ್ಕೆ ಹಾರಿ ಅಷ್ಟಭುಜಗಳಲ್ಲಿ ಆಯುಧಗಳಿಂದ ಕೂಡಿ ಅಲಂಕೃತ ದುರ್ಗೆಯಾಗಿ ಕಾಣಿಸಿಕೊಂಡು ಕಂಸನಿಗೆ,'ನನ್ನನ್ನು ಕೊಂದರೇನು ಉಪಯೋಗ ? ನಿನ್ನ ಮೃತ್ಯುವಿಗೆ ಕಾರಣನಾಗುವವನು ಈಗಾಗಲೇ ಬೇರೆಡೆ ಹುಟ್ಟಿಯಾಗಿದೆ, ದೀನರನ್ನು ವೃಥಾ ಹಿಂಸಿಸಬೇಡ' ಎನ್ನುತ್ತಾಳೆ. ಹೀಗೆ ಭಗವತಿಯಾದ ಆ ಮಾಯೆ ಆತನಿಗೆ ತಿಳಿಸಿ ಭೂಲೋಕದಲ್ಲಿ ಹಲವು ಹೆಸರಿನ ದೇವಾಲಯಗಳಲ್ಲಿ ಹಲವು ದಿವ್ಯನಾಮಗಳಿಂದ ಪ್ರಸಿದ್ಧಳಾದಳು ಎಂಬ ವಿವರಗಳಿವೆ. ಈ ಭಾಗದ ಮುಖ್ಯಾಂಶಗಳು ಕೀ. ೫ ರ ನು. ೯ ಹಾಗೂ ಕೀ. ೬ರ ಪಲ್ಲವಿಯಿಂದ ನು. ೨ರ ೨ನೆಯ ಸಾಲಿನವರೆಗೆ ಬಂದಿವೆ; ಇಲ್ಲಿ ಮೂಲದ ದುರ್ಗೆಯ ರೂಪದ ವಿವರಗಳನ್ನು ಕೈಬಿಟ್ಟು, 'ಅಂತರಿಕ್ಷಾದ್ಭುತ

Rarest Archiver

ನೋಡಿದ ಬಹುಕಾಂತಿ ಮೈಯುಳ್ಳ ಕಂದು ಬಾಡಿದ' ಎಂದಷ್ಟೇ ಹೇಳಲಾಗಿದೆ. ಹಾಗೆಯೇ ಶ್ಲೋಕ ೧೧, ೧೩ರಲ್ಲಿ ಬರುವ ಮಾಯೆಯ ಕೀರ್ತನೆ, ಪೂಜೆ, ಪ್ರಸಿದ್ಧಿಗಳ ವಿವರಗಳನ್ನು ಬಿಡಲಾಗಿದೆ. ಮುಖ್ಯ ಕಥೆಗೆ ಅಗತ್ಯವಲ್ಲದ ಇವುಗಳನ್ನು ಬಿಟ್ಟಿದ್ದರಲ್ಲಿ ಔಚಿತ್ಯವೂ ಇದೆ.

ಅ. ೪, ಶ್ಲೋಕ ೧೪–೨೩ರಲ್ಲಿ ದುರ್ಗೆಯ ಮಾತುಗಳನ್ನು ಕೇಳಿ ಆಶ್ಚರ್ಯ ಭರಿತನಾದ ಕಂಸ ಕೂಡಲೇ ವಸುದೇವ ದೇವಕಿಯರನ್ನು ಬಿಡುಗಡೆಮಾಡಿ, ಅವರ ಮಕ್ಕಳನ್ನು ಕೊಂದು ಅವರನ್ನು ನೋಯಿಸಿದ್ದಕ್ಕೆ ಪಶ್ಚಾತ್ತಾಪಪಟ್ಟು ಕ್ಷಮೆ ಕೇಳುತ್ತಾನೆ. ದಾಸರು ಈ ಭಾಗದ ಕಂಸನ ದೀರ್ಘವಾದ ತಾತ್ವಿಕವಾದ ಮಾತುಗಳನ್ನು ಕೈಬಿಟ್ಟು ಅದರ ಮುಖ್ಯಭಾವವನ್ನು ನಾಲ್ಕು ಸಾಲುಗಳಲ್ಲಿ ಸಂಗ್ರಹಿಸಿದ್ದಾರೆ :

ವ್ಯರ್ಥ ನಿಮ್ಮಿಬ್ಬರ ನೋಯಿಸಿದೆ ಶಿಶು
ಹತ್ಯಕ್ಕೆ ಕಾರಣನೆನಿಸಿದೆ
ಪ್ರಾರ್ಥನೆ ಮಾಡುವೆ ಕ್ಷಮಿಸೆಂದು ಸ
ಮರ್ಥ ಸುಶೀಲರು ನೀವೆಂದು

(ಕೀ. ೬, ನು. ೩)

ಹೀಗೆಯೇ ಶ್ಲೋಕ ೨೪ರ ವಿಚಾರ ನು. ೨ರ ಕೊನೆಯ ೨ ಸಾಲುಗಳಲ್ಲಿ ಸಂಗ್ರಹಗೊಂಡು ಬಂದಿದೆಯಾದರೂ ಮೂಲದಲ್ಲಿ ಅಭಿವ್ಯಕ್ತಗೊಂಡಿರುವ ಕಂಸನ ಕಪಟಬುದ್ಧಿಯ ಸೂಚನೆ ಇಲ್ಲಿಲ್ಲ.

ಶ್ಲೋಕ ೨೫ ರಲ್ಲಿ ಬರುವ-ಪಶ್ಚಾತ್ತಾಪ ಪಟ್ಟ ಅಣ್ಣನ ವಿಷಯದಲ್ಲಿ ಸ್ನೈರಣೆಯನ್ನು ತೋರಿಸಿ ದೇವಕಿ ತನ್ನ ರೋಷವನ್ನು ಬಿಟ್ಟ—ಸಂಗತಿಯನ್ನು ದಾಸರು ಬಿಟ್ಟಿದ್ದಾರೆ. ಶ್ಲೋಕ ೨೬, ೨೭ ರಲ್ಲಿ ಬರುವ ವಸುದೇವನ ಮಾತುಗಳನ್ನು ಸೂತ್ರಪ್ರಾಯವಾಗಿ ಕೀ. ೬, ನಂ. ೪ ರಲ್ಲಿ ತಂದಿದ್ದಾರೆ. ಮೂಲದಲ್ಲಿ ವಿಧಿ, ದೈವ ಎಂದಿರುವುದನ್ನು ಇಲ್ಲಿ 'ಹರಿ' ಎಂದು ಸ್ಪಷ್ಟವಾಗಿ ಹೇಳುತ್ತಾರೆ.

ಶ್ಲೋಕ ೨೮ರಲ್ಲಿ 'ಹೀಗೆ ಪ್ರಸನ್ನರಾದ ದೇವಕೀವಸುದೇವರಿಂದ ಶುಭ್ರವಾಗಿ ಮಾತನಾಡಿಸಲ್ಪಟ್ಟು ಅವರ ಅನುಮತಿಯನ್ನು ಪಡೆದ ಕಂಸನು ತನ್ನ ಮನೆಗೆ ಬಂದು ಸೇರಿದನು' ಎಂದಿರುವುದನ್ನು,

ಕೋಪವ ಜರಿದು ಮನೆಗೆ ಬಂದು ಪಶ್ಚಾ
ತ್ತಾಪದಿ ಕಳೆದ ಯಾಮವನೊಂದು

(ಕೀ. ೬, ನು. ೫)

ಎಂದು ಹೇಳಲಾಗಿದೆ. ಶ್ಲೋಕ ೨೯ ರ, ಆ ರಾತ್ರಿಯು ಕಳೆದು ಬೆಳಗಾಗಲು ಕಂಸನು ಮಂತ್ರಿಗಳನ್ನು ಕರೆದು ಆ ಹೆಣ್ಣು ಮಗುವಿನ ರೂಪದ ಯೋಗಮಾಯೆ ಹೇಳಿದ್ದೆಲ್ಲವನ್ನೂ ಅವರಿಗೆ ಹೇಳಿದನು—ಎಂಬ ಸರಳವಾದ ಹೇಳಿಕೆಗೆ ದಾಸರು, ಕಂಸನ ಕಾರ್ಯಗಳ ವಿಮರ್ಶಕರಾಗಿ,

Rarest Archiver

ತಾ ಪುನರಪಿ ಪಾಪಕ್ಕೆಳೆಸಿದ ದುಷ್ಟ

ಪಾಪಾತ್ಮ ಮಂತ್ರಿಗಳ್ಕರೆಸಿದ

(ಕೀ. ೬, ನು. ೫)

ಕನ್ಯಳ ಮಾತು ಮಂತ್ರಿಗಳಿಗೆ ಕಂಸ

ಚೆನ್ನಾಗಿ ಹೇಳೆ ಪಾಪಿಗಳಿಗೆ

(ಕೀ. ೬, ನು. ೭)

ಎಂದು ಹೇಳುತ್ತಾರೆ. ಇಲ್ಲಿ ಮೂಲದ ನಿರೂಪಣಾ ವಿಧಾನಕ್ಕೆ ತೋರುವ ನಿಷ್ಠೆಗಿಂತ ಹೆಚ್ಚಾಗಿ ಭಾಗವತವನ್ನು ಚೆನ್ನಾಗಿ ಓದಿ ಬಲ್ಲ ದಾಸರು ಒಬ್ಬ ಹರಿಭಕ್ತನ ದೃಷ್ಟಿಯಿಂದ, ಹರಿಭಕ್ತ–ಹರಿದ್ವೇಷಿ, ಪುಣ್ಯ–ಪಾಪ ಈ ದೃಷ್ಟಿಯಿಂದ ಮಾತ್ರ ಆ ಕೃಷ್ಣಚರಿತೆಯನ್ನು ಕಂಡು ಕೀರ್ತನೆಗಳ ರೂಪದಲ್ಲಿ ಹೇಳುತ್ತಿರುವ ರೀತಿ ಕಾಣಿಸುತ್ತದೆ.

ಅ. ೪, ಶ್ಲೋಕ ೩೦-೪೭ ರಲ್ಲಿ ಕಂಸನ ಮಾತುಗಳನ್ನು ಕೇಳಿದ ಆ ಮಂತ್ರಿಗಳು ಕಂಸನಲ್ಲಿ, ಅವನ ರಾಜ್ಯದ ಎಳೆಯ ಮಕ್ಕಳನ್ನು, ಸಾಧು ಸಂತರನ್ನು ಕೊಲ್ಲಬೇಕೆಂದು ಹೇಳುತ್ತಾರೆ. ಇದಕ್ಕೆ ಕಂಸನೂ ಅವರಿಗೆ ಅಪ್ಪಣೆ ಕೊಡುತ್ತಾನೆ. ಪ್ರ.ಭಾ.ದಲ್ಲಿ ಕಂಸ ಹಾಗೂ ಮಂತ್ರಿಗಳ ಸಮಾಲೋಚನೆಯ ವಿವರಗಳನ್ನು ಕೈಬಿಟ್ಟು ಕೀ. ೬, ನಂ. ೭ ರ ಕೊನೆಯ ಎರಡು ಸಾಲುಗಳಲ್ಲಿ,

ಚಿನ್ನರ ಹಿಂಸೆಗೆ ನಡೆದರು ದೈತ್ಯ

ಮನ್ಯರು ಹಿಂಸಾಕ್ರೀಡಾಪರರು

ಎಂದು ದೈತ್ಯರು ಮಕ್ಕಳ ಹಿಂಸೆಗೆ ಹೊರಟದ್ದನ್ನು ಮಾತ್ರ ಹೇಳಿದೆ. ಅಧ್ಯಾಯ ೫, ಶ್ಲೋಕ ೧-ರಲ್ಲಿ ಹುಟ್ಟಿದ ಮೇಲೆ ನಂದಗೋಪ ಮಗುವಿನ ಜಾತಕರ್ಮವನ್ನು ಮಾಡುತ್ತಾನೆ. ಪಿತೃ ದೇವತೆಗಳ ಪೂಜೆ ಮಾಡಿ ರತ್ನ, ಸುವರ್ಣ, ವಸ್ತ್ರ ಹಾಗೂ ಎಳ್ಳಿನ ದಾನಗಳನ್ನು ಮಾಡುತ್ತಾನೆ. ಇವುಗಳಲ್ಲಿ ಎಳ್ಳಿನ ದಾನದ ವಿಷಯ ಮಾತ್ರ ಪ್ರ.ಭಾ.ದಲ್ಲಿ ಬಂದಿಲ್ಲ. ಶ್ಲೋಕ ೪-೧೮ ರಲ್ಲಿ ಬರುವ ಕೃಷ್ಣ ಹುಟ್ಟಿದ ನಂತರದ ಗೋಕುಲದ ಸಂಭ್ರಮಗಳ ವರ್ಣನೆ ಪ್ರ.ಭಾ.ದಲ್ಲಿಯೂ ಕೀ. ೬, ನಂ. ೮—೧೪ ರಲ್ಲಿ ಸಂಗ್ರಹವಾಗಿ ಬಂದಿದೆ. ಹೀಗೆ ಸಂಗ್ರಹಿಸುವಾಗ ದಾಸರು ತಾತ್ವಿಕವಾದ ವಿವರಣೆಗಳನ್ನೂ, ಅನವಶ್ಯಕವೆನ್ನಿಸಿದ ವರ್ಣನೆಗಳನ್ನೂ ಕೈ ಬಿಟ್ಟಿದ್ದಾರೆ. ಹೀಗಾಗಿ ಮೂಲ ಭಾಗವತ ಕೃಷ್ಣಕಥೆ ಮತ್ತು ಧರ್ಮ ಎರಡನ್ನೂ ಸಮಪ್ರಮಾಣದಲ್ಲಿಯೇ ಬೆರೆಸಿಕೊಂಡು ನಡೆದರೆ, ಪ್ರ. ಭಾ, ದಲ್ಲಿ ತಾತ್ವಿಕವಾದ ಜಿಜ್ಞಾಸೆಗಳನ್ನು ಕಡಿಮೆ ಮಾಡಿ ಹರಿಕಥೆಗೇ ಹೆಚ್ಚಿನ ಒತ್ತನ್ನು ಕೊಡಲಾಗಿದೆ.

ಅ. ೫, ಶ್ಲೋಕ ೧೯-೩೦ : ನಂದನು ಕಂಸನಿಗೆ ಪ್ರತಿವರ್ಷ ಕೊಡುವಂತೆ ಈ ವರ್ಷದ ಕಪ್ಪವನ್ನು ತಂದು ಕೊಡುತ್ತಾನೆ. ಹೀಗೆ ಮಥುರೆಗೆ ಬಂದ ನಂದನನ್ನು ವಸುದೇವ ಬಂದು ಕಾಣುತ್ತಾನೆ. ಅವರಿಬ್ಬರಲ್ಲಿ ಕುಶಲಪ್ರಶ್ನೆಗಳಾಗಿ, ಪುರುಷಾರ್ಥಗಳ ಬಗ್ಗೆ

Rarest Archiver

ತಾತ್ವಿಕವಾದ ಚರ್ಚೆಯೂ ನಡೆಯುತ್ತದೆ. ಪ್ರ. ಭಾ. ದಲ್ಲಿ ಕೀ. ೬, ನಂ. ೧೫ ರಲ್ಲಿ ಕಂಸನಿಗೆ ಕಪ್ಪ ತಂದುಕೊಟ್ಟ ನಂದನು ವಸುದೇವನನ್ನು ಕಂಡನು ಎಂದಷ್ಟೇ ಬರುತ್ತದೆ. ಅವರೊಳಗಿನ ದೀರ್ಘ ಮಾತುಕತೆಯ ವಿವರಗಳನ್ನು ಕೈಬಿಡಲಾಗಿದೆ. ಶ್ಲೋಕ ೩೧ ರಲ್ಲಿ ವಸುದೇವ ನಂದನಿಗೆ ಗೋಕುಲದಲ್ಲಿ ಉತ್ಪಾತಗಳಾಗುವ ಸೂಚನೆಗಳು ಕಾಣುತ್ತಿರುವುದಾಗಿ ಹೇಳಿದ ವಿಷಯ ಕೀ. ೬, ನಂ. ೧೬ ರಲ್ಲಿದೆ. ಶ್ಲೋಕ ೩೨ ರಲ್ಲಿ ನಂದ ಮೊದಲಾದ ಗೊಲ್ಲರೆಲ್ಲ ವಸುದೇವನ ಅನುಮತಿ ಪಡೆದು ಎತ್ತಿನಗಾಡಿಗಳಲ್ಲಿ ಗೋಕುಲಕ್ಕೆ ಹೊರಟ ಸಂಗತಿಯನ್ನು ಹೇಳಿದೆ. ಇದನ್ನು ಪ್ರ. ಭಾ. ದಲ್ಲಿ ಕೀ. ೬, ನಂ. ೧೬ ರ ಕೊನೆಯ ಸಾಲಿನಲ್ಲಿ 'ಯಮುನ ತಂಗಿಯ ತೀರಕೆ ಬಂದ' ಎಂಬಲ್ಲಿ ಸೂಚ್ಯವಾಗಿ ಹೇಳಲಾಗಿದೆ.

ಅಧ್ಯಾಯ ೬, ಶ್ಲೋಕ ೧ ರಲ್ಲಿ ನಂದಗೋಪನು ವಸುದೇವನ ಮಾತು ಎಂದಿಗೂ ಸುಳ್ಳಾಗದು ಎಂದು ಆಲೋಚಿಸುತ್ತ ಯಾವ ಅನಿಷ್ಟಗಳು ಸಂಭವಿಸುವುವೋ ಎಂದು ಭಯಪಡುತ್ತ ಶ್ರೀಹರಿಗೆ ಶರಣಾಗುತ್ತಾನೆ. ಈ ವಿಚಾರ ಪ್ರ. ಭಾ. ದಲ್ಲಿ ಬಂದಿಲ್ಲ. ಮೂ. ಭಾ. ದ ಪಾತ್ರಗಳ ಇಂಥ ಆಂತರಂಗಿಕ ಚಿತ್ರಗಳನ್ನು ದಾಸರು ಬಿಟ್ಟಿದ್ದು ಕಥೆಯ ಸಹಜ ನಡಿಗೆಯ ದೃಷ್ಟಿಯಿಂದ ಹಾಗೂ ಪಾತ್ರ ಪೋಷಣೆಯ ದೃಷ್ಟಿಯಿಂದ ಉಚಿತ ಎನ್ನಿಸುವುದಿಲ್ಲ.

ಇಲ್ಲಿಂದ ಮುಂದಕ್ಕೆ ಕೃಷ್ಣನ ಬಾಲಲೀಲೆಗಳು ಆರಂಭವಾಗುತ್ತವೆ. ಅ. ೬, ಶ್ಲೋಕ ೨-೧೭ ರಲ್ಲಿ ಕಂಸನಿಂದ ಕಳುಹಿಸಲ್ಪಟ್ಟ ಪೂತನೆಯು ಸುಂದರ ಸ್ತ್ರೀಯಾಗಿ ಬಂದು ಕೃಷ್ಣನಿಗೆ ಸ್ತನ್ಯಪಾನ ಮಾಡಿಸಲು ಹೋದಾಗ ಕೃಷ್ಣ ಸ್ತನ್ಯಪಾನ ಮಾಡುತ್ತಲೇ ಅವಳ ಪ್ರಾಣವನ್ನೂ ಹೀರುವ ಸಂಗತಿ ವಿವರವಾಗಿ ಸಹಜ ಸುಂದರವಾಗಿ ಬಂದಿದೆ. ಇದನ್ನೂ ದಾಸರು ಕೀ.೬, ನಂ. ೧೭-೧೯ ರ ಮೂರೇ ಮೂರು ಸಣ್ಣ ನುಡಿಗಳಲ್ಲಿ ತುಂಬ ಸಂಕ್ಷಿಪ್ತವಾಗಿ ಹೇಳಿ ಮುಗಿಸಿದ್ದಾರೆ. ಶ್ಲೋಕ ೧೮ ರ ವಿವರ ಕೀ.೭,ನಂ.೨ ರಲ್ಲಿ ಬಂದಿದೆ.ಎರಡೂ ಭಾಗವತಗಳ ಈ ಭಾಗವನ್ನು ಹೋಲಿಸಿದಾಗ ಪ್ರ.ಭಾ.ದಲ್ಲಿ ಮುಖ್ಯ ಕಥಾಂಶಕ್ಕೆ ಹೆಚ್ಚಿನ ನಷ್ಟವಾಗಿಲ್ಲ ಎಂದರೂ ಕೆಲವು ವಿವರಗಳನ್ನು ಹೊರತುಪಡಿಸಿದರೆ (ಶ್ಲೋಕ ೩ ರಂಥವು) ಕಾವ್ಯಾಂಶ ಮೂಲದಲ್ಲಿಯೇ ಚೆನ್ನಾಗಿ ಬಂದಿದೆ ಎನ್ನಿಸುತ್ತದೆ.

ಅ. ೬, ಶ್ಲೋಕ ೧೯-೩೦ ರಲ್ಲಿ ಕೃಷ್ಣನಿಗೆ ಮಾಡಿದ ರಕ್ಷೆಯ ವಿವರಗಳಿವೆ. ಇದನ್ನು ತುಂಬ ಸಂಕ್ಷಿಪ್ತವಾಗಿ ಕೀ. ೭, ನಂ. ೩, ೪ ರಲ್ಲಿ ಹೇಳಲಾಗಿದೆ. ಶ್ಲೋಕ ೩೧, ೩೨ ರ ವಿವರಗಳು ಹೆಚ್ಚು ವ್ಯತ್ಯಾಸವಿಲ್ಲದೆ ಕೀ. ೬, ನು. ೧೯, ೨೦ ರಲ್ಲಿ ಬಂದಿವೆ. ಕೀ. ೭ ರ ಪಲ್ಲವಿ ಹಾಗೂ ನು. ೧ ರ ಮಾತುಗಳು ಪೂತನೆಯ ಪ್ರಕರಣವನ್ನು ಕುರಿತ ದಾಸರ ವಿಮರ್ಶೆಯಂತಿವೆ. ಶ್ಲೋಕ ೩೩–೪೦ರಲ್ಲಿ ಪೂತನೆಯ ಶವದಹನ ಮತ್ತು ಅವಳಿಗೆ ಸದ್ಗತಿ ದೊರೆಯುವ ಕಾರಣವನ್ನು ಹೇಳಿದೆ. ಇದನ್ನೂ ಪ್ರ. ಭಾ. ದಲ್ಲಿ ಸಂಕ್ಷಿಪ್ತವಾಗಿ ಕೀ. ೭, ನಂ. ೫ ರಲ್ಲಿ ಹೇಳಲಾಗಿದೆ. ಮೂಲ ಭಾಗವತದ ಶ್ಲೋಕ ೪೧–೪೪ ರಲ್ಲಿಯ ವಿವರಗಳು ಪ್ರ. ಭಾ. ದಲ್ಲಿ ಬಂದಿಲ್ಲ. ಉಳಿದ ಮೂರು ಶ್ಲೋಕಗಳನ್ನು ಬಿಟ್ಟರೂ ನಂದನ ಪುತ್ರವಾತ್ಸಲ್ಯದ ಸುಂದರ ಚಿತ್ರವನ್ನು ಕೊಡುವ ಶ್ಲೋಕ ೪೩ ರ ವರ್ಣನೆಯನ್ನಾದರೂ

Rarest Archiver

ದಾಸರು ಉಳಿಸಿಕೊಳ್ಳಬೇಕಿತ್ತು ಎನ್ನಿಸುತ್ತದೆ. ದಾಸರು ಯಾವುದೇ ಭಾಗವನ್ನೂ ವಿಸ್ತರಿಸದೆ ಎಲ್ಲವನ್ನೂ ಆದಷ್ಟು ಸಂಗ್ರಹವಾಗಿ ಹೇಳಲೆತ್ನಿಸಿರುವುದು ಇಲ್ಲಿಯವರೆಗೂ ಕಾಣಿಸುವ ಸಂಗತಿ. ಹೀಗೆ ಸಂಗ್ರಹಿಸುವಾಗ ಅನಗತ್ಯ ವಿವರಗಳನ್ನು ಕೈಬಿಟ್ಟಿರುವುದು ಸರಿಯೆನಿಸಿದರೂ; ಸಂದರ್ಭ,ಪಾತ್ರಗಳ ಬೆಳವಣಿಗೆಯ ದೃಷ್ಟಿಯಿಂದ ಅಗತ್ಯವಾದ ವಿವರಗಳನ್ನೂ ಕೈಬಿಟ್ಟಿರುವುದು ಈ ಕೀರ್ತನೆಗಳಲ್ಲಿ ಕಾಣಿಸುವ ಒಂದು ಮುಖ್ಯ ಕೊರತೆ ಎನ್ನಿಸುತ್ತದೆ.

ದಾಸರು ಮೂಲದ ವಿವರಗಳನ್ನು ತಮ್ಮ ಕೀರ್ತನೆಗಳಲ್ಲಿ ಸಂಗ್ರಹಿಸಿರುವಂತೆಯೇ ಅಗತ್ಯಕಂಡಲ್ಲಿ ಮೂಲಕಥಾನಕದಲ್ಲಿ ವಿಸ್ತರಣೆ ಮಾಡಿರುವುದನ್ನು ಕೆಲವಡೆ ಗಮನಿಸಬಹುದಾಗಿದೆ. ಕೀ. ೮ ಇದಕ್ಕೊಂದು ಒಳ್ಳೆಯ ನಿದರ್ಶನ. ಈ ಕೀರ್ತನೆ ದಾಸರ ಸ್ವಂತ ಸೃಷ್ಟಿಯಾಗಿದೆ. ಮೂಲದಲ್ಲಿಲ್ಲ. ಮಗು ಹುಟ್ಟಿದ ೧೨ನೆಯ ದಿನ ಮುತ್ತೈದೆಯರೆಲ್ಲ ಸೇರಿ ಮಗುವನ್ನು ಸಿಂಗರಿಸಿ ತೊಟ್ಟಿಲಿಗೆ ಹಾಕಿ ಜೋಗುಳ ಹಾಡಿ ನಾಮಕರಣ ಮಾಡುತ್ತಾರೆ. ಈ ಜೋಗುಳದ ಹಾಡಿನಲ್ಲಿ (ಕೀ. ೮, ನು. ೫–೭)ಹರಿಯ ದಶಾವತಾರದ ವರ್ಣನೆಯಿದೆ. ಒಟ್ಟಿನಲ್ಲಿ ಈ ಕೀರ್ತನೆ ಈ ಸಂದರ್ಭಕ್ಕೆ ಉಚಿತವಾದ ಸೇರ್ಪಡೆ ಎನ್ನಬಹುದು.

ಅಧ್ಯಾಯ ೭, ಶ್ಲೋಕ ೧–೩ ಪರೀಕ್ಷಿತ ರಾಜನು ಶುಕಮುನಿಗಳಿಗೆ ಕೃಷ್ಣನ ಬಾಲಲೀಲೆಗಳನ್ನು ಹೇಳಬೇಕೆಂದು ಪ್ರಾರ್ಥಿಸುವ ಈ ಭಾಗ ಪ್ರ.ಭಾ.ದಲ್ಲಿಲ್ಲ. ಶ್ಲೋಕ ೪ರ ವಿಷಯ ಕೀ. ೯, ನು. ೧ರಲ್ಲಿ ಅಲ್ಪ ವ್ಯತ್ಯಾಸದೊಂದಿಗೆ ಬಂದಿದೆ. ಮೂಲದ 'ಮಗುವು ಬೋರಲಾಗಿ ಮಗುಚಿಕೊಂಡಾಗ' ಎನ್ನುವುದು, 'ರಂಗಗೆ ನಾಲ್ಕನೆಯ ತಿಂಗಳೊಳು' ಎಂದು ಬದಲಾಗಿದೆ. ಶ್ಲೋಕ ೫–೧೭ರಲ್ಲಿ ಶಕಟಾಸುರ ವಧೆಯ ವರ್ಣನೆ ಬಂದಿದೆ. ಇದು ಪ್ರ.ಭಾ.ದಲ್ಲಿ ಕೀ. ೯, ನು. ೨–೭ರಲ್ಲಿ ಸಂಗ್ರಹವಾಗಿ ಬಂದಿದೆ.ಆಪತ್ತಿಗೊಳಗಾಗಿದ್ದ ಕೃಷ್ಣನ ಬಗ್ಗೆ ವ್ಯಾಕುಲಗೊಂಡ ನಂದ ಯಶೋದೆಗೆ ಕೋಪದಿಂದ ಮಾತನಾಡುವುದು, ಆಕೆ ಪಶ್ಚಾತ್ತಾಪಡುವುದು–ಇಂಥ ಸಂದರ್ಭದಲ್ಲಿ ಕಾಣುವ ದಂಪತಿಗಳ ಸಾಮಾನ್ಯ ಚಿತ್ರವೊಂದನ್ನು ಇಲ್ಲಿ ದಾಸರು ಸೃಷ್ಟಿಸಿಕೊಂಡಿದ್ದಾರೆ–'ಹುಂಕರಿಸಿ ಗರ್ಜಿಸಿದ ಗೋಪಗೋಪಿಗೆ....... ನಾನಿನ್ನೆಚ್ಚೆತ್ತೆನೆಂದ್ಯಶೋದೆ' ಎಂಬ ನಾಲ್ಕು ಸಾಲುಗಳಲ್ಲಿ. (ಕೀ. ೯, ನು. ೫,೬) ಈ ಭಾಗ ಮೂಲದಲ್ಲಿಲ್ಲ. ಹಾಗೆಯೇ ಕೀ. ೧೦ರ ಬಲರಾಮನನ್ನು ಕುರಿತ ವಿವರಗಳೂ ಮೂಲದ ಈ ಸಂದರ್ಭದಲ್ಲಿಲ್ಲ.

ಅ. ೭, ಶ್ಲೋಕ ೧೮–೩೩ರಲ್ಲಿ ಬರುವ ತೃಣಾವರ್ತನ ವಧೆಯನ್ನು ಪ್ರ.ಭಾ.ದಲ್ಲಿ ಕೀ.೧೧, ನಂ.೪–೧೧ರಲ್ಲಿ ಸಂಗ್ರಹಿಸಿ ಹೇಳಲಾಗಿದೆ. ಮೂಲದಲ್ಲಿಯ, ತೃಣಾವರ್ತ ಮಗುವನ್ನು ಒಯ್ದಾಗ ಮಗನನ್ನು ಕಾಣದೆ ಯಶೋದೆ 'ಕರುವು ಸತ್ತ ಗೋವಿನಂತೆ ಶೋಕಿಸಿದಳು' (ಅ. ೭, ಶ್ಲೋಕ ೨೪) ಎಂಬ ವರ್ಣನೆ, ಪ್ರ.ಭಾ.ದಲ್ಲಿ'ವನವಿಲ್ಲದ ಮೀನದಂತಾವು ವತ್ಸವನು ಕಾಣದಂತೆ' (ನು.೭) ಎಂದು ಬದಲಾಗಿದೆ. ಮೂಲದ ಉಪಮೆಗಿಂತ ಈ ಉಪಮೆಗಳು ಸಂದರ್ಭಕ್ಕೆ ಹೆಚ್ಚು ಹೊಂದುತ್ತವೆ. ಮೂ.ಭಾ.ದಲ್ಲಿ ಸತ್ತು ಬಿದ್ದ ತೃಣಾವರ್ತ, 'ಮಹೇಶ್ವರನ ಬಾಣಾಘಾತದಿಂದ ನೆಲಕ್ಕೆ ಉರುಳಿದ ತ್ರಿಪುರವೊ

Rarest Archiver

ಎಂಬಂತೆ' (ಶ್ಲೋಕ.೨೯) ಗೋಪಿಯರಿಗೆ ಕಂಡರೆ, ಪ್ರ.ಭಾ.ದಲ್ಲಿ ಅಚಲದಂತೆ ಬಿದ್ದನು ಎಂದಷ್ಟೇ ಹೇಳಿದೆ. ಶ್ಲೋಕ ೩೪–೩೭ರಲ್ಲಿ ಕೃಷ್ಣ ಯಶೋದೆಗೆ ಬಾಯಲ್ಲಿ ಜಗತ್ತನ್ನು ತೋರಿಸಿದ ವಿಚಾರವಿದೆ. ಇದನ್ನು ದಾಸರು ಕೀ.೧೧, ನಂ. ೧–೩ರಲ್ಲಿ ಹೆಚ್ಚಿನ ಬದಲಾವಣೆ ಇಲ್ಲದೆ ತಂದಿದ್ದಾರೆ.

ಅಧ್ಯಾಯ ೮, ಶ್ಲೋಕ ೧–೨೦: ಯಾದವರ ಪುರೋಹಿತರಾದ ಗರ್ಗರು ವಸುದೇವನಿಂದ ಪ್ರೇರಿತರಾಗಿ ಗೋಕುಲಕ್ಕೆ ಬರುತ್ತಾರೆ. ನಂದ ಇಬ್ಬರು ಮಕ್ಕಳಿಗೆ ನಾಮಕರಣಾದಿ ಸಂಸ್ಕಾರಗಳನ್ನು ಮಾಡಬೇಕೆಂದು ಕೇಳಿಕೊಂಡಾಗ, ಗರ್ಗರು ತಾನು ಇವರಿಗೆ ನಾಮಕರಣ ಮಾಡಿ, ಆದು ಕಂಸನಿಗೆ ತಿಳಿದರೆ ಅನರ್ಥವಾಗುತ್ತದೆಂದು ವಿವರಿಸುತ್ತಾರೆ. ಆಗ ನಂದ ಗುಟ್ಟಾಗಿ ಆ ಕಾರ್ಯ ನಡೆಸಿಕೊಡುವಂತೆ ಕೇಳಿಕೊಂಡಾಗ ಹಾಗೆಯೇ ಮಾಡಿ, ವಾಸುದೇವನು ನಾರಾಯಣ ಸಮಾನನು ಅವನನ್ನು ಎಚ್ಚರದಿಂದ ನೋಡಿಕೊಳ್ಳಬೇಕೆಂದು ಹೇಳಿ ತಮ್ಮ ಮನೆಗೆ ಹೋಗುತ್ತಾರೆ. ವಸುದೇವ ಹಾಗೂ ಗರ್ಗರ ನಡುವಿನ ಸಂಭಾಷಣೆ (ಶ್ಲೋಕ ೨–೧೦)ಯ ಭಾಗ ಪ್ರ.ಭಾ.ದ ಕೀ. ೧೨, ನಂ. ೪–೭ರಲ್ಲಿ ತುಂಬ ಸಂಗ್ರಹವಾಗಿ ಬಂದಿದೆ. ಅಲ್ಲದೆ ಮೂಲದಲ್ಲಿಯ ಗರ್ಗರು ಗುಟ್ಟಾಗಿ ನಾಮಕರಣ ಮಾಡಿದರು ಎಂಬ ವಿಷಯವನ್ನು ಬಿಟ್ಟು,

> ಧೀರ ಮುನೀಂದ್ರ, ಗರ್ಗನುಭಯರಿಗೆ ಕ್ಷ
> ತ್ರೀರ ಸಂಸ್ಕಾರ ಮಾಡಿದನಾಗೆ ೪

ಎಂದಷ್ಟೇ ಹೇಳಲಾಗಿದೆ. ಕೀ. ೮ರಲ್ಲಿ ಈ ಹಿಂದೆಯೇ ನಾಮಕರಣವಾದುದನ್ನು ಹೇಳಿರುವುದು ಇದಕ್ಕೆ ಕಾರಣ ಇರಬಹುದು.

ಅ. ೮, ಶ್ಲೋಕ ೨೧–೨೭ರಲ್ಲಿಯ ಬಾಲಕೃಷ್ಣನ ಚಿತ್ರ ಪ್ರ.ಭಾ.ದ ಕೀ. ೧೩, ನಂ. ೧–೧೫ರಲ್ಲಿ ಹೆಚ್ಚು ವ್ಯತ್ಯಾಸವಿಲ್ಲದೆ ಬಂದಿದೆ. ಕೀ. ೧೪ ಮೂರು ನುಡಿಗಳ ಒಂದು ಜೋಗುಳದ ಹಾಡಾಗಿದ್ದು ಹೊಸತಾಗಿ ಸೇರಿಸಿದ್ದಾಗಿದೆ. ಹೀಗೆಯೇ ಕೀ. ೧೫, ನು.೧–೯ ರಲ್ಲಿ ಬಾಲಕೃಷ್ಣನ ಮೋಹಕರೂಪ ಹಾಗೂ ಅಲಂಕಾರದ ವರ್ಣನೆಯಿದ್ದು, ಇಂಥ ಮಗನನ್ನು ನೋಡಿ ಹಿಗ್ಗುವ ಯಶೋದೆಯ ಚಿತ್ರವಿದೆ. ಈ ಭಾಗವೂ ಮೂ.ಭಾ. ದಲ್ಲಿಲ್ಲ.

ಅ. ೮, ಶ್ಲೋಕ ೨೮–೩೨ರ, ಗೋಪಿಯರು ಯಶೋದೆಗೆ ಕೃಷ್ಣನ ಚೇಷ್ಟೆಗಳ ಬಗ್ಗೆ ದೂರುಹೇಳುವ ಭಾಗ ಕೀ.೧೬ ಮತ್ತು ೧೭ರಲ್ಲಿ ಇನ್ನಷ್ಟು ವಿಸ್ತೃತವಾಗಿದೆ. ಕೆಲವು ವಿವರಗಳು ಹೊಸತಾಗಿ ಸೇರಿವೆ, ಕೆಲವು ಮಾರ್ಪಾಟಾಗಿವೆ. ಉದಾ.ಗೆ, ಮೂಲದಲ್ಲಿ ಗೋಪಿಯರು ಕೃಷ್ಣ, 'ಮನೆಯಂಗಳದಲ್ಲೇ ಮಲ ಮೂತ್ರಗಳನ್ನು ಮಾಡಿ ಬಿಡುತ್ತಾನೆ' ಎಂದರೆ, ಇಲ್ಲಿ–'ಇಷ್ಟೆಯ ದೇವರನಿಟ್ಟಿಹ ಜಗುಲಿಲಿ ವಿಷ್ಟಿಸಿ ಓಡಿದ ಅಟ್ಟಹಾಸದಲಿ' ಎಂದು ಸ್ಥಳವನ್ನು ಬದಲಿಸುವುದರ ಜೊತೆಗೆ 'ವಿಷ್ಟಾಮೋದ ವಿಶಿಷ್ಟ ಕಸ್ತುರಿಗಿಂ ಪುಷ್ಟಾಯಿತು ಇನ್ನೆಷ್ಟುಸುರುವೆವೆ' ಎಂದೂ ಸೇರಿಸುತ್ತಾರೆ. ಕೀ. ೧೭ರ, ನಂ. ೭–೨೭ ಕೃಷ್ಣನ ಬಾಲಲೀಲೆಯ ವರ್ಣನೆಯಲ್ಲಿ ದಾಸರ ಕಲ್ಪನೆ ಗರಿಗೆದರುವ ಪರಿಗೆ ಉತ್ತಮ

Rarest Archiver

ನಿದರ್ಶನವಾಗಿದೆ. ಈ ಭಾಗ ಮೂಲದಲ್ಲಿಲ್ಲ. ದಾಸರಿಗೆ ಪ್ರಿಯವಾದ ಬಾಲಕೃಷ್ಣನ ವರ್ಣನೆ ಇಲ್ಲಿ ತುಂಬ ಮೋಹಕವಾಗಿ ಬಂದಿದೆ. ಕೆಲವೆಡೆ ಈತ ನಿಜಕ್ಕೂ ಸಣ್ಣ ಬಾಲಕನೆ ? ಎಂದು ಅಚ್ಚರಿ ಹುಟ್ಟಿಸುವಂಥ ಚೇಷ್ಟೆಗಳ ವರ್ಣನೆಯೂ ಬಂದಿದೆ. ಉದಾ॥ ನಂ. ೧೬, ೧೭, ೨೨, ೨೪ ಇತ್ಯಾದಿ.

ದಾಸರು ಕೊಡುವ ಬಾಲಕೃಷ್ಣನ ಕೆಲವು ಮೋಹಕ ಚಿತ್ರಗಳು ಹೀಗಿವೆ :

ಹುಟ್ಟಿಯ ದೇವರ ಗಟ್ಟಿಹಂಗಡದಲಿ
ಕಟ್ಟಿಳಿದೊಯ್ದನು ಬಟ್ಟ ಬಯಲಿನಲಿ ೬

ಮೀಸಲು ಮುರಿಯದಿರೊ ಸರ್ವೋತ್ತಮ
ಮೋಸಪ್ಪ ದೈವಾಕಾಶದ ಬೊಮ್ಮನು
ಘಾಸಿಯಾಗುವಿಯೆನೆ ಆಕಾಶದವಗೆ ನನ್ನ
ಮೀಸಲು ಬುಲ್ಲಿಯು ಲೇಸೆಂದೆನುವ ೧೫

ಶಿಶುಗಳ ಶಿಖವನು ಪಶುಗಳ ಬಾಲಕೆ
ಹೊಸೆದು ಗಂಟನು ಮಿಸುಳಿಸಿ ಕಟ್ಟುವ ೧೯

ಅ.೮, ಶ್ಲೋಕ ೩೩–೪೬ರ ವರೆಗಿನ ಕೃಷ್ಣ ಯಶೋದೆಗೆ ಬಾಯಲ್ಲಿ ಬ್ರಹ್ಮಾಂಡ ವನ್ನು ತೋರಿದ ದೀರ್ಘ ವಿವರ ಹಾಗೂ ಯಶೋದೆಯ ಚಿಂತನೆಯನ್ನು ಕೀ. ೧೮, ನಂ ೧–೯ರಲ್ಲಿ ಪ್ರತ್ಯೇಕವಾಗಿ ಹೇಳಿದ್ದಾರೆ. ಆದರೆ

ತಮ್ಮಂತಸ್ಥ ಬಾಹ್ಯಾಂತಸ್ಥ ತೋರಿ
ತಮ್ಮಮ್ಮನು ಬೆದರುವಳೆಂದೆನುತ
ತಾ ಮತ್ತೆ ಬೈಚಿಟ್ಟನು........ .... ೪

ಎಂದಷ್ಟೇ ಹೇಳಿ ಮೂಲದಲ್ಲಿ ಬರುವ ಬ್ರಹ್ಮಾಂಡದ ವಿವರಗಳನ್ನು ಕೈಬಿಟ್ಟಿದ್ದಾರೆ. ಶ್ಲೋಕ ೪೭–೫೨ರವರೆಗಿನ ನಂದ ಯಶೋದೆಯರ ಪೂರ್ವವೃತ್ತಾಂತ ಪ್ರ. ಭಾ. ದಲ್ಲಿಲ್ಲ. ಈ ಭಾಗಗಳನ್ನು ಗಮನಿಸಿದರೆ ದಾಸರು ಕೃಷ್ಣನ ಬಾಲಲೀಲೆಗಳ ವರ್ಣನೆಯಲ್ಲಿ ಅವನ ಮಹಿಮೆಗಳನ್ನು ಸ್ತುತಿಸುವುದರಲ್ಲಿ ಹೆಚ್ಚು ಆಸಕ್ತರಾಗಿದ್ದು ಉಳಿದ ವಿವರಗಳನ್ನು ಕೈ ಬಿಡುತ್ತಾರೆ ಇಲ್ಲವೆ ಸೂಚ್ಯವಾಗಿ ಹೇಳುತ್ತಾರೆ ಎನ್ನುವುದು ಸ್ಪಷ್ಟವಾಗುತ್ತದೆ.ಬಾಲ ಕೃಷ್ಣನ ವರ್ಣನೆ, ಬಾಲಲೀಲೆಗಳನ್ನು ಮಾತ್ರ ಎಲ್ಲಿಯೂ ಸಂಗ್ರಹಿಸದೆ ಇನ್ನಷ್ಟು ವಿಸ್ತರಿ ಸುವುದನ್ನು ಕೀ. ೧೪–೧೭ರಲ್ಲಿ ಈ ಮೊದಲೇ ಗಮನಿಸಲಾಗಿದೆ.

ಅಧ್ಯಾಯ ೯, ಶ್ಲೋಕ ೧–೯ರಲ್ಲಿ ಬರುವ ಯಶೋದೆ ಮೊಸರು ಕಡೆಯುವ ಚಿತ್ರ ಕೀ. ೧೯ರಲ್ಲಿ ೧–೭ ನುಡಿಗಳಲ್ಲಿ ಹೆಚ್ಚಿನ ವಿವರಗಳೊಡನೆ ಪ್ರತ್ಯೇಕವಾದ ಹಾಡಾಗಿ ಬಂದಿದೆ. ಅ. ೯, ಶ್ಲೋಕ ೪–೧೦ರಲ್ಲಿ ಬರುವ ಭಾಗ ಕೀ. ೨೦ರಲ್ಲಿ 'ರಂಗ ಗೋಕುಲ ದೊಳಗಾಡಿದ' ಎಂಬ ಪ್ರಾರಂಭದೊಡನೆ ೫ ಚಿಕ್ಕ ಚಿಕ್ಕ ನುಡಿಗಳಲ್ಲಿ ಸಂಗ್ರಹಗೊಂಡು

Rarest Archiver

ಬಂದಿದೆ. ಶ್ಲೋಕ ೮ ರಲ್ಲಿಯ ಕೃಷ್ಣನು ಕೋತಿಗೆ ಬೆಣ್ಣೆ ತಿನ್ನಿಸುವ ಚಿತ್ರವನ್ನೂ ಪ್ರ. ಭಾ. ದಲ್ಲಿ ಉಳಿಸಿಕೊಂಡಿದ್ದರೆ ತುಂಟ ಕೃಷ್ಣನ ಚಿತ್ರಕ್ಕೆ ಮತ್ತಷ್ಟು ಕಳೆ ಏರುತ್ತಿತ್ತು ಎನ್ನಿಸುತ್ತದೆ. ಯಶೋದೆ ಕೃಷ್ಣನನ್ನು ಹಿಡಿದು ಒರಳಿಗೆ ಕಟ್ಟುವುದು, ನಳಕೂಬರರ ಶಾಪದ ಕಾರಣ, ಕೃಷ್ಣನಿಂದ ಅವರ ಶಾಪ ವಿಮೋಚನೆ–ಇವು ಅ. ೯ ರ ಶ್ಲೋಕ ೧೧ ರಿಂದ ಅ. ೧೧, ಶ್ಲೋಕ ೬ ರವರೆಗೆ ವಿಸ್ತಾರವಾಗಿ ಬಂದಿವೆ. ಈ ಭಾಗ ಪ್ರ. ಭಾ. ದಲ್ಲಿ ಕೀ. ೨೧ರ ೭ ನುಡಿಗಳಲ್ಲಿ ತುಂಬ ಸಂಕ್ಷಿಪ್ತವಾಗಿ ಬಂದಿದೆ. ಹೀಗಿದ್ದೂ ಕೆಲವೆಡೆ ಮೂಲವನ್ನು ಬಹುಮಟ್ಟಿಗೆ ಅನುಸರಿಸಿರುವುದು ಕಾಣಿಸುತ್ತದೆ. ಉದಾ. ಗೆ, ಅ. ೧೦, ಶ್ಲೋಕ ೩೮ ಮತ್ತು ಕೀ. ೨೧ರ ನು. ೫, ೬ರಲ್ಲಿರುವ ಸಾಮ್ಯವನ್ನು ಗಮನಿಸಬಹುದು.

ಅ. ೧೧, ಶ್ಲೋಕ ೭-೧೧ ರಲ್ಲಿ ಬರುವ ಬಾಲಕೃಷ್ಣನ ವರ್ತನೆಯ ಕೆಲವು ವಿವರಗಳು ಪ್ರ. ಭಾ. ದಲ್ಲಿ ಬಂದಿಲ್ಲ. ಶ್ಲೋಕ ೧೨–೨೧ರಲ್ಲಿ ಕೃಷ್ಣನ ಜನ್ಮ ನಕ್ಷತ್ರದಂದು ಯಶೋದೆ ಹೊರಗೆ ಆಡುತ್ತಿದ್ದ ಬಲರಾಮ ಕೃಷ್ಣರನ್ನು ಊಟಕ್ಕೆ ಕರೆಯುವ ಭಾಗ ಕೀ. ೨೨ರ ೫ ನುಡಿಗಳಲ್ಲಿ ಸಂಗ್ರಹವಾಗಿ ಬಂದಿದೆ. ಇಲ್ಲಿ ಅಂದು ಕೃಷ್ಣನ ಜನ್ಮನಕ್ಷತ್ರ ಎಂಬ ವಿಷಯವನ್ನು ಹೇಳದೆ, ಆ ಕಾರಣದಿಂದ ಮಾಡುವ ಕಾರ್ಯಗಳಷ್ಟನ್ನೇ ಹೇಳಲಾಗಿದೆ. ಈ ಕೀರ್ತನೆಯ ಅನುಪಲ್ಲವಿಯ ಮಾತುಗಳು ಮೂಲದಲ್ಲಿಲ್ಲ. ಮೂಲದ ಈ ಭಾಗಕ್ಕೂ ಈ ಕೀರ್ತನೆಗೂ ವಿವರಗಳಲ್ಲಿ ಇಂಥ ಕೆಲವು ವ್ಯತ್ಯಾಸಗಳಿದ್ದರೂ ಈ ಕೀರ್ತನೆ ಪ್ರತ್ಯೇಕವಾಗಿ ನೋಡಿದಾಗ ಸುಂದರವಾಗಿಯೇ ಬಂದಿದೆ ಎನ್ನಿಸುತ್ತದೆ.

ಅ. ೧೧, ಶ್ಲೋಕ ೨೧-೪೦ : ಗೋಕುಲದಲ್ಲಿ ಅನೇಕ ವಿಧವಾದ ಅನಿಷ್ಟಗಳು ಸಂಭವಿಸಿದ್ದರಿಂದ ಗೋಪರೆಲ್ಲ ಒಟ್ಟಾಗಿ ಸೇರಿ ಬೃಂದಾವನಕ್ಕೆ ಹೋಗಲು ನಿರ್ಧರಿಸುತ್ತಾರೆ. ಬೃಂದಾವನಕ್ಕೆ ಹೋಗುವ ಸೂಚನೆಯನ್ನು ಕೊಟ್ಟು ಮಾತನಾಡುವವನು ಉಪನಂದನೆಂಬ ವೃದ್ಧಗೋಪ. ನಿರ್ಧರಿಸಿದಂತೆಯೇ ಅವರೆಲ್ಲ ಗೋವುಗಳೊಡನೆ ಬೃಂದಾವನಕ್ಕೆ ಹೋಗಿ ನದೀತೀರದಲ್ಲಿ ನೆಲಸುತ್ತಾರೆ. ಅಲ್ಲಿ ರಾಮಕೃಷ್ಣರು ದನಗಳನ್ನು ಕಾಯುತ್ತ ಕೊಳಲೂದುತ್ತ, ವಿವಿಧ ಆಟಗಳಿಂದ ಎಲ್ಲರನ್ನೂ ರಂಜಿಸುತ್ತಾರೆ.-ಈ ಭಾಗದ ಕೆಲವು ವಿಷಯಗಳು ಕೀ. ೨೩ರಲ್ಲಿ ಸಂಗ್ರಹವಾಗಿ ಬರುತ್ತದೆಯಾದರೂ, ಗೋಪಾಲಕರೆಲ್ಲ ಒಟ್ಟಾಗಿ ಸೇರಿ ಚರ್ಚಿಸಿ ಬೃಂದಾವನಕ್ಕೆ ಹೋಗಲು ನಿಶ್ಚಯಿಸುವುದು, ಉಪನಂದನ ಮಾತುಗಳು-ಇವೆಲ್ಲ ಪ್ರ. ಭಾ. ದ ಈ ಕೀರ್ತನೆಯಲ್ಲಿ ಬಂದಿಲ್ಲ. ಹಾಗೆಯೆ ಕೀ. ೨೩, ನು. ೧ರ ಉತ್ತರಾರ್ಧದ ವಿಷಯ ಮೂಲದಲ್ಲಿಲ್ಲ.

ಅ. ೧೧, ಶ್ಲೋಕ ೪೧-೪೪ ರಲ್ಲಿ ವತ್ಸಾಸುರವಧೆಯ ವಿಷಯವಿದೆ. ಇದು ಕೀ. ೨೪ ರ ನು. ೨ರ ಮೊದಲನೆಯ ಸಾಲಿನಲ್ಲಿ ತೀರ ಸಂಗ್ರಹವಾಗಿ ಬಂದಿದೆ. ಮೂಲದಲ್ಲಿ ಕೃಷ್ಣ ವತ್ಸಾಸುರನನ್ನು ಕೊಂದ ಚಿತ್ರ ತುಂಬ ಸಹಜ ಸುಂದರವಾಗಿ ಬಂದಿದೆ. ಕೃಷ್ಣ ವತ್ಸರೂಪಧಾರಿಯಾದ ಆ ದೈತ್ಯನನ್ನು ಅರಿಯದಂತೆ ಬಳಿ ಸಾರಿ ಅದರ ಹಿಂದಿನ ಕಾಲುಗಳನ್ನು ಹಿಡಿದು ಗರಗರನೆ ವೇಗವಾಗಿ ತಿರುಗಿಸಿದಾಗ, ಅಷ್ಟರಲ್ಲೇ ಸಾವನ್ನಪ್ಪಿದ ಅವ

Rarest Archiver

ನನ್ನು ಒಂದು ಬೇಲದ ಮರದ ತುದಿಗೆ ಎಸೆದಾಗ, ಬೃಹದಾಕಾರದ ಮೈಯುಳ್ಳ ಆತ ಅನೇಕ ಬೇಲದ ಹಣ್ಣುಗಳನ್ನು ಕೆಳಗೆ ಬೀಳಿಸುತ್ತ ಅವುಗಳೊಡನೆ ತಾನೂ ಬೀಳುತ್ತಾನೆ. ಪ್ರ.ಭಾ.ದಲ್ಲಿ ಇದನ್ನು ''ವೃಕ್ಷದ ತುದಿಗೊಗೆದವನ ಮಡುಹೆ'' (ಕೀ. ೨೪, ನು. ೨) ಎಂದಷ್ಟೇ ಹೇಳಿ ಮುಗಿಸಲಾಗಿದೆ. ದೇವತೆಗಳು ಹೂಮಳೆಗರೆದು ಹೊಗಳುವ ವಿವರಗಳನ್ನು ಕೈ ಬಿಟ್ಟರೂ, ಹೆಚ್ಚು ವಿಸ್ತಾರವಿಲ್ಲದ ಮೂಲದ ಇಂಥ ಅಗತ್ಯದ ವಿವರಗಳನ್ನಾದರೂ ಇಲ್ಲಿ ಉಳಿಸಿಕೊಳ್ಳಬೇಕಿತ್ತು ಎನ್ನಿಸುತ್ತದೆ.

ಅ. ೧೧, ಶ್ಲೋಕ ೪೫ರಲ್ಲಿಯ ರಾಮಕೃಷ್ಣರು ತಂಗಳುಬುತ್ತಿಯೊಡನೆ ದನ ಕಾಯುತ್ತಿದ್ದ ವಿಚಾರವನ್ನು, ಕೀ. ೨೩, ನು. ೯ರ ಮೂರನೆಯ ಸಾಲಿನಲ್ಲಿ 'ಆಕಳ ಕಾಯ್ವರ ಕೂಡಿದ ಕೀರ್ತಿ' ಎಂದಷ್ಟೇ ಸೂಚಿಸಿ ಕೈ ಬಿಟ್ಟಿದ್ದಾರೆ. ಶ್ಲೋಕ ೪೬-೫೮ರಲ್ಲಿ ಕೃಷ್ಣನನ್ನು ಕೊಲ್ಲ ಬಂದ ಬಕಾಸುರನನ್ನು ಕೃಷ್ಣ ಕೊಲ್ಲುವುದು, ಬದುಕಿ ಬಂದ ಕೃಷ್ಣನನ್ನು ಕಂಡು ಎಲ್ಲರಿಗೂ ಆನಂದವಾಗುವುದು, ಗರ್ಗಾಚಾರ್ಯರು ಹೇಳಿದ್ದೆಲ್ಲವೂ ನಿಜವಾಗುತ್ತಿದೆ ಎಂದು ನಂದ ಚಿಂತಿಸುವುದು-ಈ ವಿವರಗಳಿವೆ. ಈ ಭಾಗವನ್ನು ಪ್ರ.ಭಾ.ದ ಕೀ. ೨೪, ನು. ೨-೬ರಲ್ಲಿ ಹೇಳಲಾಗಿದೆಯಾದರೂ ವಿವರಗಳಲ್ಲಿ ಕೆಲವು ವ್ಯತ್ಯಾಸಗಳಾಗಿವೆ. ಮೂಲದಲ್ಲಿ ಕೃಷ್ಣನನ್ನು ಬಕ ಮೊದಲಿಗೆ ನುಂಗಿದರೂ ಆತ ಬೆಂಕಿಯಂತೆ ದವಡೆಗಳನ್ನು ಸುಟ್ಟದ್ದರಿಂದ ಆ ಕ್ಷಣವೇ ಉಗುಳಿ ಬಿಡುತ್ತಾನೆ. ಅದನ್ನು-

ಹರಿಕರಪಲ್ಲವ ಅವನ ವದನದಲಿ
ತುರುಕಲು ಉರಿದು ಕಾರಿದನು.... (ಕೀ. ೨೪, ನು. ೩)

ಎಂದು ಬದಲಿಸಲಾಗಿದೆ. ಮತ್ತೆ ಬಕ ಕೋಪದಿಂದ ಕೃಷ್ಣನನ್ನು ಕುಕ್ಕಲು ಹೋದಾಗ, ಕೃಷ್ಣ ಅವನ ಕೊಕ್ಕುಗಳನ್ನು ಹಿಡಿದು ವಿನೋದದಿಂದ ಜೊಂಡು ಹುಲ್ಲನ್ನು ಸೀಳುವಂತೆ ಸೀಳಿ ಹಾಕುತ್ತಾನೆ. ಇಲ್ಲಿ ಸಂದರ್ಭೋಚಿತವಾಗಿದ್ದ ಜೊಂಡು ಹುಲ್ಲನ್ನು ಸೀಳುವಿಕೆಯ ಉಪಮೆಯನ್ನು ಬಿಡಲಾಗಿದೆ. ಈ ಎರಡು ಸಂದರ್ಭಗಳಲ್ಲಿಯ ಮೂಲದ ವಿವರಗಳನ್ನು ಬಹುಮಟ್ಟಿಗೆ ತಂದಿದ್ದರೂ ವತ್ಸಾಸುರನ ವಧೆಯಲ್ಲಾಗಲೀ, ಬಕಾಸುರನ ವಧೆಯ ಸಂದರ್ಭದಲ್ಲಾಗಲೀ ಅಗತ್ಯ ಸನ್ನಿವೇಶದ ನಿರ್ಮಾಣ ಮೂಲದಲ್ಲಿದ್ದಂತೆ ಇಲ್ಲಿ ಆಗಿಲ್ಲ. ಇಲ್ಲೆಲ್ಲ ದಾಸರು ಇದ್ದಕ್ಕಿದ್ದಂತೆ 'ಕುತ್ಸಿತ ಮತಿ ಕಂಸನ ಭಟನೊಬ್ಬನು ವತ್ಸಾಕೃತಿಯಲಿ ಬಂದ' ಎಂದೋ, 'ಬಕಪಕ್ಷಿಯ ತೆರ ಖಳನೋರ್ವ....ಭಕ್ಷಿಸಲಿಕ್ಕವ ಬಂದ' ಎಂದೋ ಪ್ರಾರಂಭಿಸಿ ಬಿಡುತ್ತಾರೆ. ಆ ಹೊತ್ತು ರಾಮಕೃಷ್ಣರು, ಗೋಪರು ಎಲ್ಲಿದ್ದರು, ಏನು ಮಾಡುತ್ತಿದ್ದರು- ಈ ಯಾವ ವಿವರವನ್ನೂ ಕೊಡುವುದಿಲ್ಲ. ಇದರಿಂದ ಮುಖ್ಯ ಕಥಾಂಶಗಳ ವರದಿ ಮಾತ್ರ ಆಗುತ್ತಿರುವಂತೆ ಕಂಡು, ಅದು ಘಟನಾತ್ಮಕವಾಗಿ ಮನಸ್ಸಿಗೆ ತಟ್ಟುವುದಿಲ್ಲ. ಇಂಥ ಕೊರತೆ ಇನ್ನೂ ಅನೇಕ ಸಂದರ್ಭಗಳಲ್ಲಿ ಕಾಣಿಸುತ್ತದೆ.

ಶ್ಲೋಕ ೫೯ರಲ್ಲಿ ರಾಮಕೃಷ್ಣರು ವಿವಿಧ ಆಟಗಳಲ್ಲಿ ಬಾಲ್ಯಾವಸ್ಥೆಯನ್ನು ಕಳೆದದ್ದನ್ನು ಸಂಗ್ರಹವಾಗಿ ಹೇಳಿದ್ದರೆ, ಪ್ರ.ಭಾ.ದಲ್ಲಿ ಕೀ. ೨೪,ನು. ೭ರಲ್ಲಿ-

Rarest Archiver

ಗೋಪರು ಗೋಪಿಯರಾವ್ಗಳು ತರುಲತೆ
ದೇವಾಂಶರು ಪ್ರಜರೆಲ್ಲ
ಶ್ರೀವರ ಪ್ರಸನ್ವೆಂಕಟ ಕೃಷ್ಣರೇಯನ
ಭಾವುಕರ್ ಮಾನವರಲ್ಲ

ಎಂದು ಬಂದಿದೆ.

ಅ. ೧೨, ಶ್ಲೋಕ ೧-೧೨ರಲ್ಲಿ ವನಭೋಜನಕ್ಕಾಗಿ ಕೃಷ್ಣ ಜೊತೆಗಾರರೊಡನೆ ವನಕ್ಕೆ ಹೋದದ್ದು, ಅಲ್ಲಿ ಅವರ ವಿವಿಧ ವಿನೋದಗಳ ವರ್ಣನೆ ಬಂದಿದೆ. ಇದಕ್ಕೂ ಕೀ. ೨೫, ನು. ೧–೭ರ ವರ್ಣನೆಗಳಿಗೂ ಸಾಮ್ಯವಿದೆಯಾದರೂ, ನು. ೭ರಲ್ಲಿ ಬರುವ 'ಲೋಲಾಕ್ಷಿಯರೊಳು ನೋಟ ಬೇಟ' ಮೂಲದಲ್ಲಿ ಇನ್ನೂ ಆರಂಭವಾಗಿಲ್ಲ. ಅಲ್ಲದೆ ಪ್ರ.ಭಾ.ದಲ್ಲಿ ಮೂಲದ ವನಭೋಜನದ ಪ್ರಸ್ತಾಪ ಇಲ್ಲ. ಅ. ೧೨, ಶ್ಲೋಕ ೧೩–೩೮ರಲ್ಲಿ ಬಕಾಸುರನ ತಮ್ಮ ಅಘಾಸುರನ ವಧೆಯು ವಿಸ್ತಾರವಾದ ವರ್ಣನೆಯಿದೆ. ಅ. ೧೨, ಶ್ಲೋಕ ೩೯ರಿಂದ ಅ. ೧೪ ಶ್ಲೋಕ ೬೧ರಲ್ಲಿ, ಅಘಾಸುರ ವಧೆಯಾದದ್ದು ಕೃಷ್ಣನ ಐದನೆಯ ವಯಸ್ಸಿನಲ್ಲಿ. ಆದರೆ ಅದು ಇತರರಿಗೆ ಒಂದು ವರ್ಷದ ನಂತರ ತಿಳಿಯುತ್ತದೆ. ಈ ಮಧ್ಯೆ ಬ್ರಹ್ಮ ಕೃಷ್ಣನನ್ನು ಪರೀಕ್ಷಿಸಿ, ಸೋತು, ಕೊನೆಗೆ ಕೃಷ್ಣನನ್ನು ಸ್ತುತಿಸಿ ಸತ್ಯ ಲೋಕಕ್ಕೆ ಹೋಗುತ್ತಾನೆ. ಕೃಷ್ಣಮಹಿಮೆಯನ್ನು ತೋರುವ ಅಘಾಸುರ ವಧೆ ಮತ್ತು ಬ್ರಹ್ಮ ಕೃಷ್ಣನನ್ನು ಪರೀಕ್ಷಿಸಿ ಸೋಲುವ ಪ್ರಸಂಗ-ಇವೆರಡೂ ಪ್ರ.ಭಾ. ದಲ್ಲಿಲ್ಲ.

ಅ. ೧೫, ಶ್ಲೋಕ ೧-೮ರಲ್ಲಿ ಕೃಷ್ಣ ಬೃಂದಾವನದಲ್ಲಿ ಓಡಾಡುತ್ತ, ಅಲ್ಲಿಯ ಸೌಂದರ್ಯವನ್ನು ಆಸ್ವಾದಿಸುತ್ತ ಬಲರಾಮನ ಸ್ತುತಿ ಮಾಡುತ್ತಾನೆ. ಈ ಭಾಗ ಕೀ. ೨೫ರ ನು. ೮–೧೩ರಲ್ಲಿ ಬಂದಿದೆಯಾದರೂ ವಿವರಗಳಲ್ಲಿ ಅಲ್ಲಲ್ಲಿ ವ್ಯತ್ಯಾಸಗಳಿವೆ. 'ಫಲವತಿ ಪುಷ್ಪಿಣಿಯರು ತುಂಬಿದ ಉಡಿಯಲಿ ಹಿರಿಯರಿಗೆ ವಂದಿಪ ತೆರದಿ' (ನಂ. ೧೧) ಎಂಬ ಉಪಮೆ ಮೂಲದಲ್ಲಿಲ್ಲ. ಇಲ್ಲಿ ಸಂದರ್ಭೋಚಿತವಾಗಿ ಬಂದಿದೆ. ಹೀಗೆಯೇ ಕೀ. ೨೫ರ ನು. ೧೪-೧೬ ದಾಸರ ಸ್ವತಂತ್ರಸೃಷ್ಟಿಯಾಗಿದೆ. ಮೂಲದಲ್ಲಿ ಇನ್ನೂ 'ಹರಿನೋಟಸ್ಮರಶರಪೀಡಿತ' ಗೋಪಿಯರ ಚಿತ್ರ ಬಾರದಿದ್ದರೂ ದಾಸರು ತಮ್ಮ ಈ ಕೀರ್ತನೆಯಲ್ಲಿ ಸೇರಿಸಿದ್ದಾರೆ. ಅವರದೇ ಆದ ವರ್ಣನಾ ವೈಖರಿಗೆ ನಂ. ೧೫ನ್ನು ಗಮನಿಸಬಹುದಾಗಿದೆ–

ಕುಡಿತೆಗಣ್ ಮಡದಿಯರ ಮುಡಿ ನುಡಿ ಪಲ್ ಮೊಲೆ
ನಡು ನಡೆಗ್ಸರಿಣ ಮಯೂರ ಕೀರ
ದಾಳಿಮೇಭ ಹರಿಯಂಚೆಯಡವಿಗಿಡ
ಮಡುವಿಡಿದವು ನಾಚಿಕೆ ಹಿಡಿದು

ಅ. ೧೫, ಶ್ಲೋಕ ೯–೧೯ರಲ್ಲಿ ಕೃಷ್ಣ ಬಲರಾಮ ಹಾಗೂ ಗೋಪಬಾಲಕರ ಬೃಂದಾವನ ವಿಹಾರ, ಅವರ ಆಟಗಳು, ಅಲ್ಲಿಯ ಮರಗಳ ಕೆಳಗೆ ಬಲರಾಮ, ಕೃಷ್ಣರು

Rarest Archiver

ಮಲಗುತ್ತಿದ್ದುದು, ಕೃಷ್ಣ ಅಣ್ಣನಿಗೆ ಕಾಲೊತ್ತುತ್ತಿದ್ದುದು, ಕೃಷ್ಣನಿಗೆ ಇತರ ಬಾಲಕರು ಆತನ ಪಾದ ಒತ್ತುತ್ತ ಬೀಸಣಿಗೆಯಿಂದ ಬೀಸುತ್ತಿದ್ದುದು ಇತ್ಯಾದಿಗಳ ವರ್ಣನೆಯಿದೆ. ಈ ಭಾಗ ಕೀ. ೨೬, ನಂ. ೧–೧೫ ರಲ್ಲಿ ಕೆಲವು ವ್ಯತ್ಯಾಸಗಳೊಂದಿಗೆ ಬಂದಿದೆ. ನಂ. ೨, ೧೧, ೧೪, ೧೫ ರಲ್ಲಿಯ ಕೃಷ್ಣಸ್ತುತಿಯು ಮಾತುಗಳು ಮೂಲದ ಭಾವದ ವಿಸ್ತರಣೆಗಳಾಗಿವೆ. ನಂ. ೯ರ 'ಪಾದ ಮಹಿಮೆ'ಯ ಸ್ತುತಿ ದಾಸರ ಸ್ವಂತ ಸೃಷ್ಟಿಯಾಗಿದೆ.

ಅ. ೧೫, ಶ್ಲೋಕ ೨೦–೪೬ : ಒಂದು ಸಲ ಬಲರಾಮ ಕೃಷ್ಣರ ಗೆಳೆಯರಾದ ಶ್ರೀದಾಮ ಮೊದಲಾದವರು ರಾಮಕೃಷ್ಣರಿಗೆ, 'ತಾಳೆವನದಲ್ಲಿರುವ ಧೇನುಕಾಸುರನಿಂದಾಗಿ ತಾಳೆಹಣ್ಣುಗಳು ಯಾರಿಗೂ ಸಿಕ್ಕುತ್ತಿಲ್ಲ. ನಮಗೆ ದೊರಕಿಸಿಕೊಡು' ಎಂದು ಕೇಳುತ್ತಾರೆ. ಅದರಂತೆ ಅವರೆಲ್ಲ ತಾಳೆವನಕ್ಕೆ ಹೋಗುತ್ತಾರೆ. ಬಲರಾಮ ಧೇನುಕಾಸುರನನ್ನು ಕೊಲ್ಲುತ್ತಾನೆ. ಉಳಿದ ಆತನ ಬಂಧುಗಳನ್ನು ಅವರಿಬ್ಬರೂ ಸೇರಿ ಸಂಹರಿಸುತ್ತಾರೆ. ತಾಳೆಹಣ್ಣುಗಳು ಎಲ್ಲರಿಗೂ ಸಿಕ್ಕುತ್ತವೆ. ದೇವತೆಗಳು ಹೂಮಳೆಗರೆಯುತ್ತಾರೆ. ಹಿಂದಿರುಗಿದ ಅವರನ್ನು ಹೆತ್ತವರು ಉಪಚರಿಸುತ್ತಾರೆ.-ಈ ಭಾಗ ಹೆಚ್ಚಿನ ವ್ಯತ್ಯಾಸಗಳಿಲ್ಲದೆ ಕೀ. ೨೭, ನಂ. ೧-೧೬ ರಲ್ಲಿ ಬಂದಿದೆ. ನು. ೧೭, ಕೀರ್ತನೆಯ ಕೊನೆಯ ನುಡಿಯಾಗಿದ್ದು, ಇಲ್ಲಿಯ ಕೃಷ್ಣಸ್ತುತಿ ದಾಸರ ಸ್ವಂತ ಸೃಷ್ಟಿಯಾಗಿದೆ. ಇದು ಬಹುಪಾಲು ಮುಂದಿನ ಕೀ. ಗಳ ಅಂತ್ಯದಲ್ಲಿ ಸಾಮಾನ್ಯವಾಗಿ ಕಾಣುವ ಅಂಶವಾಗಿದೆ.

ಅ. ೧೫, ಶ್ಲೋಕ ೪೭-೫೨ : ಒಂದು ಸಾರಿ ಬಲನನ್ನು ಬಿಟ್ಟು ಕೃಷ್ಣನು ಗೋಪಾಲಕರನ್ನು ಕೂಡಿಕೊಂಡು ಯಮುನಾನದಿಗೆ ಹೋದಾಗ ಅಲ್ಲಿಯ ವಿಷಮಯವಾಗಿದ್ದ ನೀರನ್ನು ಕುಡಿದ ಗೋವು, ಗೋವಳರೆಲ್ಲ ಸತ್ತು ಬೀಳುತ್ತಾರೆ. ಆಗ ಕೃಷ್ಣ ತನ್ನ ಕರುಣಾ ಕಟಾಕ್ಷದಿಂದ ಅವರೆಲ್ಲರನ್ನು ಬದುಕಿಸುತ್ತಾನೆ.—ಈ ಭಾಗ ಕೀ. ೨೮, ನಂ. ೩-೫ ರಲ್ಲಿ ಬಂದಿದೆ. ನು. ೧, ೨ರಲ್ಲಿ ಬಂದಿರುವ, ವಿಷಮಯವಾದ ನೀರಿನಿಂದ ಯಮುನೆಯ ತೀರದ ಮೇಲಿನ ಎಲ್ಲ ಗಿಡ ಬಳ್ಳಿಗಳು ನಾಶವಾದರೂ ಕದಂಬ ವೃಕ್ಷವು ನಾಶಹೊಂದಲಿಲ್ಲ. ಗರುಡನು ಒಮ್ಮೆ ಅಮೃತಕಲಶವನ್ನು ಒಯ್ಯುವಾಗ ಅದರ ಮೇಲೆ ಇಟ್ಟಿದ್ದರಿಂದ ಅದು ಉಳಿಯಿತು ಎಂಬ ವಿಚಾರ ಮೂಲದಲ್ಲಿಲ್ಲ. ನು. ೬, ೭ ರಲ್ಲಿಯ ಗೋವಳರ ಪ್ರಾರ್ಥನೆಯ ವಿಚಾರವೂ ಮೂಲದಲ್ಲಿಲ್ಲ. ದಾಸರು ಮೂಲದಲ್ಲಿಲ್ಲದಿದ್ದರೂ ಆಸ್ಪದವಿರುವಲ್ಲೆಲ್ಲ ಕೃಷ್ಣಸ್ತುತಿಯನ್ನು ಸೇರಿಸುವ ಪರಿಗೆ ಈ ಸಂದರ್ಭ ನಿದರ್ಶನವಾಗಿದೆ.

ಅ. ೧೬, ಶ್ಲೋಕ ೧-೬೮ರಲ್ಲಿ ಕಾಳಿಯ ಮರ್ದನದ ವರ್ಣನೆ ಬಂದಿದೆ. ಶ್ಲೋಕ ೧-೫ರ ವಿವರಗಳು ಪ್ರ. ಭಾ. ದಲ್ಲಿಲ್ಲ. ಶ್ಲೋಕ ೬-೧೬ರ ವಿವರಗಳು ಕೀ. ೨೮, ನು. ೮-೧೬ ರಲ್ಲಿ ಹೆಚ್ಚಿನ ವ್ಯತ್ಯಾಸಗಳಿಲ್ಲದೆ ಬಂದಿವೆ. ಶ್ಲೋಕ ೧೬ ರಲ್ಲಿ ಗೋಪ ಗೋಪಿಯರೆಲ್ಲ ಅಪಶಕುನಗಳಿಂದ ಕಾತರರಾಗಿ ಕೃಷ್ಣನನ್ನು ನೋಡ ಹೊರಟರೆ, ತನ್ನ ತಮ್ಮನ ಮಹಿಮೆಯ ಅರಿವಿದ್ದ ಬಲರಾಮ ಅವರನ್ನು ನೋಡಿ ನಕ್ಕು ಸುಮ್ಮನಾಗುತ್ತಾನೆ. ಈ ಸಂಗತಿ ಪ್ರ. ಭಾ. ದಲ್ಲಿ ಕೀ. ೨೮, ನಂ. ೧೬, ೧೭ ರಲ್ಲಿ 'ಹೃತ್ತಾಪದಿ ಬಳಲಿದರು ಬಲನುಕ್ತಿಯ ಕೇಳದಲವರು ಬಂದರು ಹರಿಯಿದ್ದೆಡೆ' ಎಂದು ಬದಲಾಗಿದೆ. ಶ್ಲೋಕ ೧೭,

Rarest Archiver

೧೮ರ ವಿವರಗಳನ್ನು ದಾಸರು ಕೈಬಿಟ್ಟಿದ್ದಾರೆ. ಶ್ಲೋಕ ೧೯–೨೧ರ ವಿವರಗಳನ್ನು ಸಂಗ್ರಹವಾಗಿ 'ಕಂದ ಕೃಷ್ಣನ ನೋಡಿದರು ಮನನೊಂದು ಶೋಕಾರ್ಣವದಿಹರು' (ನಂ. ೧೭) ಎಂದಷ್ಟೇ ಹೇಳಲಾಗಿದೆ. ಶ್ಲೋಕ ೨೨, ೨೩ ರ ವಿವರಗಳು ಪ್ರ. ಭಾ. ದಲ್ಲಿಲ್ಲ. ಶ್ಲೋಕ ೨೪-೩೪ರ ಸಂಗತಿ, ವಿವರಗಳನ್ನು ಕೈಬಿಟ್ಟು ಸಂಕ್ಷಿಪ್ತವಾಗಿ ಕೀ. ೨೮, ನಂ. ೧೮ರಿಂದ 28ರ ಮೊದಲ 2 ಸಾಲುಗಳಲ್ಲಿ ಬಂದಿದೆ. ಕಾಳಿಯ ಹಾಗೂ ಕೃಷ್ಣನ ಹೋರಾಟದ ವರ್ಣನೆಯನ್ನು ಬಿಟ್ಟಿದ್ದು ಉಚಿತವೆನ್ನಿಸುವುದಿಲ್ಲವಾದರೂ ಕಾಳಿಯನ ಹೆಂಡತಿಯರು ಮಾಡಿದ ಹರಿಸ್ತುತಿಯನ್ನು ಸಂಗ್ರಹಿಸಿದ್ದರಲ್ಲಿ ಔಚಿತ್ಯವಿದೆಯೆನ್ನಿಸುತ್ತದೆ. ಶ್ಲೋಕ ೫೫–೬೮ರಲ್ಲಿ ಬರುವ ಕೃಷ್ಣ ಕಾಳಿಯರ ಸಂಭಾಷಣೆಯ ವಿವರಗಳನ್ನು ಕೈಬಿಟ್ಟು ಮುಖ್ಯ ಕಥಾಂಶವನ್ನು ಮಾತ್ರ ಕೀ.೨೮, ನು. ೨೮ರ ಉತ್ತರಾರ್ಧದಿಂದ ನಂ. ೩೨ರಲ್ಲಿ ಹೇಳಲಾಗಿದೆ.

ಅ. ೧೭, ಶ್ಲೋಕ ೧-೧೨ರಲ್ಲಿ ಕಾಳಿಯ ಸರ್ಪದ ವೃತ್ತಾಂತ ಹಾಗೂ ಸೌಭರಿ ಮುನಿ ಗರುಡನಿಗಿತ್ತ ಶಾಪದ ವಿಚಾರವನ್ನು ಹೇಳಿದೆ. ಅದು ಪ್ರ.ಭಾ. ದಲ್ಲಿ ಬಂದಿಲ್ಲ. ಕಥೆಯ ದೃಷ್ಟಿಯಿಂದ ಸಂಗ್ರಹವಾಗಿಯಾದರೂ ಈ ವಿಚಾರಗಳನ್ನು ಹೇಳಬೇಕಿತ್ತೆನ್ನಿಸುತ್ತದೆ. ಶ್ಲೋಕ ೧೩–೧೬ರಲ್ಲಿ ಬರುವ-ಹಿಂದಿರುಗಿ ಬಂದ ಕೃಷ್ಣನನ್ನು ನೋಡಿದ ಗೋಪ ಗೋಪಿಯರು, ಗೋವು, ಗಿಡಮರಗಳ ಸಂತೋಷವನ್ನು ಕೀ.೨೮, ನಂ. ೩೩ರಲ್ಲಿ ಸೂಚ್ಯವಾಗಿ ಹೇಳಿದೆ. ಶ್ಲೋಕ ೧೭, ೧೮ರಲ್ಲಿಯ ನಂದಗೋಪನು ಬ್ರಾಹ್ಮಣರಿಗೆ ದಾನ ಕೊಟ್ಟ ವಿಚಾರ ಪ್ರ.ಭಾ. ದಲ್ಲಿಲ್ಲ. ಶ್ಲೋಕ ೧೯ರಲ್ಲಿ ಬಂದಿರುವ ಯಶೋದೆಯ ಪುತ್ರವಾತ್ಸಲ್ಯದ ಚಿತ್ರ ನಂ. ೩೪ರ ಮೊದಲ ಸಾಲಿನಲ್ಲಿ ಬಂದಿದೆ. ಇಲ್ಲೆಲ್ಲ ದಾಸರು ಮೂಲದಲ್ಲಿಯ ವಿವರಣೆಗಳನ್ನು ಬಿಟ್ಟು ಮುಖ್ಯಾಂಶಗಳನ್ನು ಮಾತ್ರ ಹೇಳುತ್ತ ಹೋಗುವುದನ್ನು ಗಮನಿಸಬಹುದು.

ಶ್ಲೋಕ ೨೦, ೨೧ರಲ್ಲಿ ಅಷ್ಟರಲ್ಲೇ ಸೂರ್ಯಾಸ್ತವಾದುದರಿಂದ ಹಾಗೂ ಅವರೆಲ್ಲ ಬಳಲಿದ್ದರಿಂದ ಆ ದಡದಲ್ಲೇ ಆ ರಾತ್ರಿ ಉಳಿಯುವ ಸಂಗತಿ ಬಂದಿದೆ. ಅವರು ಯಮುನೆಯ ದಡದಲ್ಲಿ ಉಳಿದ ಸಂಗತಿ ನಂ. ೩೩, ೩೪ರಲ್ಲಿ ಬಂದಿದೆಯಾದರೂ, ಸೂರ್ಯಾಸ್ತ, ಬಳಲಿಕೆಯ ವಿಚಾರಗಳನ್ನು ಕೈಬಿಟ್ಟು,

ಹರಿಯಾಶ್ಚರ್ಯ ಕರ್ಮಗಳ ಉಚ್ಚರಿಸುತ ಗೋವರ ಮೇಳ
ಹರುಷದಲಾ ರಾತ್ರೆಯಲಿ ಸುಸ್ಥಿರರಾದರು ಯಮುನೆಯಲಿ ೩೩

ಎಂದು ಹೇಳಿದೆ. ಶ್ಲೋಕ ೨೨–೨೭ರಲ್ಲಿ, ಅರ್ಧರಾತ್ರಿಯಲ್ಲಿ ಆ ವನದಲ್ಲಿ ಹಬ್ಬಿದ ಕಾಡ್ಗಿಚ್ಚಿನಿಂದಾಗಿ ಅಪಾಯಕ್ಕೆ ಸಿಲುಕಿದ ಗೋಪಾಲಕರು, ಅದರಿಂದ ತಮ್ಮನ್ನು ರಕ್ಷಿಸುವಂತೆ ಕೃಷ್ಣನನ್ನು ಪ್ರಾರ್ಥಿಸಿದಾಗ, ಕೃಷ್ಣ ಯೋಗಶಕ್ತಿಯಿಂದ ಆ ಕಿಚ್ಚನ್ನು ನುಂಗಿ ಅವರನ್ನು ರಕ್ಷಿಸುತ್ತಾನೆ. ಈ ವಿಷಯ ನು. ೩೫ರಲ್ಲಿ 'ಆ ನಿಶಿ ದಾವಾಗ್ನಿಯನು ನುಂಗ್ಯಾನಿಖಿಳರ ಸಲಹಿದನು' ಎಂದು ಒಂದೇ ಸಾಲಿನಲ್ಲಿ ಬಂದಿದೆ. ಅನಂತರ ಅ. ೧೮, ನಂ. ೧ರಲ್ಲಿ, ಕೃಷ್ಣ ಬಂಧು ಬಾಂಧವರೊಂದಿಗೆ ಹೊಗಳಿಸಿಕೊಳ್ಳುತ್ತ ಗೋಕುಲವನ್ನು ಪ್ರವೇಶಿ

Rarest Archiver

ಸುತ್ತಾನೆ. ಇದನ್ನು ಕೀ. ೨೮, ನಂ. ೩೫ರ ೨ನೆಯ ಸಾಲಿನಲ್ಲಿ 'ಸ್ಥಾನಕೆ ಸಂಖದಿ ಐದಿದರು ಧಯಾನಿಧಿ ದಯಾಪೂರಣರು' ಎಂದು ಸಂಗ್ರಹಿಸಲಾಗಿದೆ. ನಂ. ೩೬, ೩೭ ಈ ಕೀ. ಯ ಕೊನೆಯ ನುಡಿಗಳಾಗಿದ್ದು ಇವುಗಳಲ್ಲಿಯೂ ಕೃಷ್ಣಸ್ತುತಿ ಬಂದಿದೆ.

ಅಧ್ಯಾಯ ೧೮, ಶ್ಲೋಕ ೨–೧೬ರಲ್ಲಿ ಬೇಸಿಗೆ ಬಂದರೂ ವಸಂತಕಾಲದಂತೆ ಸಂಖಕರವಾಗಿದ್ದ ಬೃಂದಾವನದ ವರ್ಣನೆ, ಬಲರಾಮ ಕೃಷ್ಣರ ವಿವಿಧ ಆಟಗಳ ಸಹಜ ಸುಂದರ ವರ್ಣನೆಗಳಿವೆ. ಇದು ಕೀ. ೨೯, ನು. ೧ ಮತ್ತು ಕೀ. ೩೦, ನು. ೧–೧೪ರಲ್ಲಿ ಅಲ್ಪ ವ್ಯತ್ಯಾಸಗಳೊಡನೆ ಬಂದಿದೆ. ಕೀ, ೨೯, ನು. ೨–೬ರಲ್ಲಿ ವೃಕ್ಷರೂಪಿ ದೈತ್ಯನ ಸಂಹಾರ ಮತ್ತು 'ಸಿಟ್ಟಿನೇಳು ಗೂಳಿಗಳನು' ಸದೆದ ವಿಚಾರವಿದೆ. ವೃಕ್ಷರೂಪಿ ದೈತ್ಯನ ವಿಚಾರ ಮೂಲದಲ್ಲಿಲ್ಲ. ಮೂಲ ಭಾಗವತ ದಶಮಸ್ಕಂಧ ಉತ್ತರಾರ್ಧ (ಅ. ೫೮) ದಲ್ಲಿ ಕೃಷ್ಣ ಏಳು ಗೂಳಿಗಳನ್ನು ನಿಗ್ರಹಿಸಿ ನಗ್ನಜಿತ್ತೆಂಬ ರಾಜನ ಮಗಳು ಸತ್ಯೆಯನ್ನು ವಿವಾಹವಾಗುವ ಸಂದರ್ಭ ಬರುತ್ತದೆ. ಅದನ್ನು ಇಲ್ಲಿ ಸೂಚಿಸುತ್ತಿರಬಹುದು. ನಂ. ೬, ೭ರ ಮಾತುಗಳು ಹೆಚ್ಚಿನ ಕೀ.ಗಳಲ್ಲಿ ಬರುವಂತೆ ದಾಸರಿಂದಲೇ ನೇರವಾಗಿ ಬಂದಂಥವು.

ಅ. ೧೮, ಶ್ಲೋಕ ೧೭-೩೨ರಲ್ಲಿ ಬಲರಾಮನಿಂದ ಪ್ರಲಂಬಾಸುರ ವಧೆಯಾದ ವಿಚಾರ ಬಂದಿದೆ. ಈ ಭಾಗ ಹೆಚ್ಚಿನ ವ್ಯತ್ಯಾಸಗಳಿಲ್ಲದೆ ಕೀ. ೩೦, ನು. ೧೫-೨೭ರಲ್ಲಿ ಬಂದಿದೆ. ಶ್ಲೋಕ ೩೧ರಲ್ಲಿ ಅಸುರನನ್ನು ಕೊಂದು ಬಂದ ಬಲರಾಮನನ್ನು ಕಂಡು ಗೋಪಾಲರೆಲ್ಲ ಸಂತೋಷಗೊಂಡರೆಂದು ಹೇಳಿದೆ. ಪ್ರ.ಭಾ.ದಲ್ಲಿ ದಾಸರು ಇದನ್ನು ನು. ೨೪ರಲ್ಲಿ ಹೇಳಿ, ಇದರ ಜೊತೆಗೆ ನು. ೨೬ರಲ್ಲಿ ನಂದ ಯಶೋದೆ ರೋಹಿಣಿಯರು ಆ ಮಕ್ಕಳನ್ನು ಪ್ರೇಮದಿಂದ ಅಪ್ಪಿದರು ಎನ್ನುವುದನ್ನೂ ಸೇರಿಸಿದ್ದಾರೆ. ಸಂದರ್ಭಕ್ಕನುಗುಣವಾಗಿ ಬರುವ ಇಂಥ ಸಣ್ಣ ಪುಟ್ಟ ವ್ಯತ್ಯಾಸಗಳನ್ನು ಬಿಟ್ಟರೆ ಪ್ರಲಂಬಾಸುರ ವಧೆಯ ಭಾಗ ಪ್ರ. ಭಾ. ದಲ್ಲಿ ಸಮರ್ಪಕವಾಗಿಯೇ ಬಂದಿದೆ ಎನ್ನಬಹುದು.

ಅ. ೧೯, ಶ್ಲೋಕ ೧ ರಿಂದ ಅ. ೨೦, ಶ್ಲೋಕ ೨ರಲ್ಲಿ ಪ್ರಲಂಬಾಸುರ ವಧೆಯ ನಂತರ ಗೊಲ್ಲರೆಲ್ಲ ಆಟಗಳಲ್ಲಿ ಆಸಕ್ತರಾಗಿದ್ದಾಗ ಹಸುಗಳು ಬೇಸಿಗೆಯ ಝಳದಿಂದ ಬಾಯಾರಿ ನೀರನ್ನು ಹುಡುಕುತ್ತ ಹುಲ್ಲಿನ ಕಾಡನ್ನು ಪ್ರವೇಶಿಸುತ್ತವೆ. ಆ ಸಂದರ್ಭದಲ್ಲಿ ಕಾಡ್ಗಿಚ್ಚು ಹಬ್ಬಿ ಸುತ್ತಲೂ ದಹಿಸುತ್ತ ಬರುತ್ತದೆ. ಗೊಲ್ಲರೆಲ್ಲ ಗೋವುಗಳನ್ನು ಹುಡುಕುತ್ತ ಹೊರಟು ಅಪಾಯಕ್ಕೆ ಸಿಕ್ಕಿ ಕೃಷ್ಣನನ್ನು ರಕ್ಷಿಸೆಂದು ಪ್ರಾರ್ಥಿಸಿದಾಗ,ಕೃಷ್ಣ ಅವರಿಗೆ ಕಣ್ಣುಮುಚ್ಚಲು ಹೇಳಿ ಯೋಗ ಶಕ್ತಿಯಿಂದ ಆ ಬೆಂಕಿಯನ್ನು ನುಂಗಿ ಅವರನ್ನೆಲ್ಲ ರಕ್ಷಿಸುತ್ತಾನೆ. ಎಲ್ಲರೂ ಕೃಷ್ಣನನ್ನು ಸಾಕ್ಷಾತ್ ದೇವತೆಯೆಂದೇ ಭಾವಿಸಿ ಹೊಗಳುತ್ತಾರೆ. ಗೋಕುಲಕ್ಕೆ ಹಿಂದಿರುಗಿದ ಕೃಷ್ಣನನ್ನು ನೋಡಿ ಗೋಪಿಯರು ಸಂತೋಷಪಡುತ್ತಾರೆ.

–ಈ ಭಾಗ ಪ್ರ.ಭಾ.ದಲ್ಲಿಲ್ಲ. ಕೀ. ೨೮, ನಂ. ೩೫ರಲ್ಲಿ ಮಧ್ಯರಾತ್ರಿಯಲ್ಲಿ ಕಾಡ್ಗಿಚ್ಚಿನಿಂದ ಎಲ್ಲರನ್ನು ರಕ್ಷಿಸಿದ ಘಟನೆ ಬಂದಿದ್ದು, ಅದನ್ನೇ ಕೆಲವಂಟ್ಟಿಗೆ ಹೋಲುವ

Rarest Archiver

ಈ ಘಟನೆಯನ್ನು ದಾಸರು ಬಿಟ್ಟಿರಬೇಕು. ಅಥವಾ ಇದರ ಬದಲಿಗೆ ಮೂಲದಲ್ಲಿಲ್ಲದ ಕೀ. ೨೯ರ ವಿಷವೃಕ್ಷರೂಪಿ ದೈತ್ಯನ ಘಟನೆಯನ್ನು ಸೃಷ್ಟಿಸಿರಬೇಕು.

ಅ. ೨೦, ಶ್ಲೋಕ ೩–೨೪ರಲ್ಲಿ ಬೃಂದಾವನದಲ್ಲಿಯ ಮಳೆಗಾಲದ ಸುಂದರವಾದ ವರ್ಣನೆಯಿದೆ. ಈ ಭಾಗ ಕೀ. ೩೧, ನಂ. ೧–೩ರಲ್ಲಿ ಸಂಗ್ರಹವಾಗಿ ಬಂದಿದೆ. ಕೀರ್ತನೆಗಳ ದೃಷ್ಟಿಯಿಂದ ಇದು ಉಚಿತವೂ ಹೌದು. ಶ್ಲೋಕ ೨೫-೩೧ರಲ್ಲಿ ವರ್ಷಾಋತುವಿನಲ್ಲಿ ಕೃಷ್ಣನ ಬೃಂದಾವನ ವಿಹಾರದ ವರ್ಣನೆಯಿದೆ. ಇದು ಕೀ. ೩೧, ನಂ. ೪–೧೦ರಲ್ಲಿ ಬಂದಿದೆ. ಮೂ.ಭಾ.ದಲ್ಲಿ ಶ್ಲೋಕ ೨೬ರಲ್ಲಿ ಕೃಷ್ಣ ಗೋವುಗಳನ್ನು ಹೆಸರು ಹಿಡಿದು ಕೂಗಿದನು ಎಂದು ಮಾತ್ರ ಹೇಳಿದ್ದರೆ, ಕೀ. ೩೧, ನು. ೫-೭ರಲ್ಲಿ ಅವುಗಳ ಹೆಸರುಗಳ ದೊಡ್ಡ ಪಟ್ಟಿಯೇ ಬಂದಿದೆ. ನಂ. ೮ರಲ್ಲಿ ಬರುವ, ಹಸುಗಳು ಬಂದು ಕೃಷ್ಣನ ಹೆಗಲಲ್ಲಿ ಹೆಗಲಿಟ್ಟು ನೆಕ್ಕುವುದು; ಕೃಷ್ಣನ ಕೈ ಅವುಗಳೆಲ್ಲವನ್ನೂ ನೇವರಿಸುವುದು, ಅವರ ನಡುವಿನ ಆತ್ಮೀಯತೆಯ ಈ ಸುಂದರ ಚಿತ್ರವೂ ದಾಸರ ಸ್ವತಂತ್ರ ಸೃಷ್ಟಿಯಾಗಿದೆ.

ಶ್ಲೋಕ ೩೨-೪೮ರಲ್ಲಿ ಶರತ್ಕಾಲದ ವರ್ಣನೆಯಿದೆ. ಕೀ. ೩೧, ನು. ೧೧ರಲ್ಲಿ ಇದು ಸಂಕ್ಷಿಪ್ತವಾಗಿ ಬಂದಿದ್ದು, ಉಳಿದ ಭಾಗ (ನು. ೧೨-೧೬) ಗೋಪಿಯರ ಕೃಷ್ಣ ಪ್ರೇಮಕ್ಕೆ ಮೀಸಲಾಗಿದೆ. ಮೂಲದಲ್ಲಿಯ ಉಳಿದ ಜನಜೀವನದ ಚಿತ್ರಣ ಹಾಗೂ ಪ್ರಕೃತಿಯ ಚಿತ್ರಣ ಇಲ್ಲಿ ಲುಪ್ತವಾಗಿದೆ. ಕೃಷ್ಣ ಕೇಂದ್ರವಾಗದ ಬದುಕಿನ ವಿವರಗಳ ಬಗೆಗಿನ ದಾಸರ ಈ ದಿವ್ಯ ನಿರ್ಲಕ್ಷ್ಯ ಮೂಲ ಭಾಗವತ ಕೊಡುವ ಅಲ್ಲಿಯ ಒಟ್ಟಿನ ಬದುಕಿನ ಚಿತ್ರಕ್ಕೆ ಧಕ್ಕೆಯುಂಟು ಮಾಡುತ್ತದೆ ಎನ್ನಿಸುತ್ತದೆ.

ಅ. ೨೧, ಶ್ಲೋಕ ೧–೨೦ರಲ್ಲಿ ಕೃಷ್ಣ ಆ ಶರತ್ಕಾಲದ ಸುಂದರ ಬೃಂದಾವನವನ್ನು ಪ್ರವೇಶಿಸಿ ಕೊಳಲನ್ನು ನುಡಿಸಲಾರಂಭಿಸಿದಾಗ ಅದನ್ನು ಆಲಿಸಿದ ಪ್ರಕೃತಿ, ಗೋವುಗಳು, ಸ್ತ್ರೀಯರು, ದೇವತೆಗಳು ಮೊದಲಾದವರ ಪರವಶತೆಯ ವರ್ಣನೆಯಿದೆ. ಈ ಭಾಗ ಸಂಗ್ರಹಗೊಂಡು ಕೀ. ೩೨, ನಂ. ೧-೯ರಲ್ಲಿ ಬಂದಿದೆ.

ಅ. ೨೨, ಶ್ಲೋಕ ೧–೩೨ರಲ್ಲಿ, ಗೋಪಿಯರ ಕಾತ್ಯಾಯಿನಿ ವ್ರತ, ಕೃಷ್ಣನಿಂದ ಅವರ ವಸ್ತ್ರಾಪಹರಣ, ಕೊನೆಯಲ್ಲಿ ಅವರ ಇಚ್ಛೆಯನ್ನು ಆ ರಾತ್ರಿ ನೆರವೇರಿಸುವುದಾಗಿ ಕೃಷ್ಣ ಅವರಿಗೆ ಭರವಸೆ ನೀಡುವುದು, ಅವರು ಗೋಕುಲಕ್ಕೆ ಹಿಂದಿರುಗುವುದರ ವರ್ಣನೆಯಿದೆ. ಈ ಭಾಗ ಕೀ. ೩೩, ನು. ೧–೨೧ರಲ್ಲಿ ಕೆಲವು ವ್ಯತ್ಯಾಸಗಳೊಡನೆ ಬಂದಿದೆ. ಮೂಲದಲ್ಲಿ ಕೃಷ್ಣ ಆ ರಾತ್ರಿ ಅವರ ಇಚ್ಛೆಯನ್ನು ನೇರವೇರಿಸುವುದಾಗಿ ಹೇಳಿದರೆ, ಪ್ರ.ಭಾ.ದಲ್ಲಿ ಆ ಕೂಡಲೇ ನೇರವೇರಿಸಿದಂತೆ ನು. ೧೯, ೨೦ರಲ್ಲಿ ಬಂದಿದೆ. ಅಲ್ಲದೆ ಮೂ.ಭಾ.ದಲ್ಲಿ ವಸ್ತ್ರಾಪಹರಣದ ಸಂದರ್ಭದಲ್ಲಿ ಕೃಷ್ಣನೊಡನೆ ಆತನ ಗೆಳೆಯರೂ ಇರುತ್ತಾರೆ. ಇಲ್ಲಿ ಕೃಷ್ಣ ಮಾತ್ರ ಇರುತ್ತಾನೆ. ಮೂ.ಭಾ.ದ ಶ್ಲೋಕ ೩೩–೪೧ರಲ್ಲಿ ಬರುವ, ಗೋಪಾಲಕರಿಗೆ ಕೃಷ್ಣನು ಮಾಡುವ ಉಪದೇಶ ಇತ್ಯಾದಿ ವಿಚಾರಗಳು ಇಲ್ಲಿ ಕೀ. ೩೪, ನು. ೧–೧೦ರಲ್ಲಿ ಇನ್ನಷ್ಟು ವಿಸ್ತಾರಗೊಂಡಿವೆ. ನು. ೬–೧೦ರ

Rarest Archiver

ಕೃಷ್ಣನ ಉಪದೇಶದ ಭಾಗ ಈ ಸಂದರ್ಭಕ್ಕೆ ಹೊಂದಿಕೊಂಡು ಬರುತ್ತದಾದಗೂ ಮೂ. ಭಾ.ದಲ್ಲಿಲ್ಲ. ಕೃಷ್ಣನ ಉಪದೇಶದಲ್ಲಿ ದಾಸರು ತಮ್ಮ ಅಭಿಪ್ರಾಯವನ್ನೂ ಸೇರಿಸಿರುವಂತೆ ತೋರುತ್ತದೆ. ಶ್ಲೋಕ ೪೨ರ ವಿವರ ನು. ೧೧ರಲ್ಲಿ ಬಂದಿದೆ.

ಅ. ೨೩, ಶ್ಲೋಕ ೧–೩೨ರಲ್ಲಿ, ಹಸಿದಿದ್ದ ಗೋಪಾಲಕರಿಗೆ ಕೃಷ್ಣ ಸಮೀಪದಲ್ಲೇ ಯಾಗ ಮಾಡುತ್ತಿದ್ದ ಬ್ರಾಹ್ಮಣರಲ್ಲಿ ಅನ್ನವನ್ನು ಬೇಡಲು ಹೇಳಿದಾಗ, ಅವರು ಹಾಗೆಯೇ ಹೋಗಿ ಬ್ರಾಹ್ಮಣರನ್ನು ಕೇಳುತ್ತಾರೆ. ಬ್ರಾಹ್ಮಣರು ಏನನ್ನೂ ಹೇಳದೆ ಸುಮ್ಮನಿದ್ದಾಗ, ಹಿಂತಿರುಗಿ ಬಂದು ಕೃಷ್ಣನಿಗೆ ನಡೆದದ್ದನ್ನು ಹೇಳುತ್ತಾರೆ. ಕೃಷ್ಣ ಮತ್ತೆ ಆ ಬ್ರಾಹ್ಮಣರ ಪತ್ನಿಯರಲ್ಲಿಗೆ ಹೋಗಿ ಕೇಳಿ ಎಂದಾಗ ಗೋಪಾಲಕರು ಹಾಗೆಯೇ ಹೋಗಿ ಕೇಳುತ್ತಾರೆ. ಆಗ ಆ ಬ್ರಾಹ್ಮಣಪತ್ನಿಯರು ನಾಲ್ಕು ವಿಧವಾದ ಅಡಿಗೆಯನ್ನು ತಟ್ಟೆಗಳಲ್ಲಿ ಇಟ್ಟುಕೊಂಡು, ಗಂಡ ಮಕ್ಕಳು ಬಂಧುಗಳು ಎಲ್ಲರೂ ಹೋಗಬೇಡಿರೆಂದು ತಡೆದರೂ ಕೇಳದೆ ಕೃಷ್ಣನಲ್ಲಿಗೆ ಬಂದು ಅವನ್ನೆಲ್ಲ ಕೊಟ್ಟು ಕೃಷ್ಣನ ಕೃಪೆಗೆ ಪಾತ್ರರಾಗುತ್ತಾರೆ. ಸ್ತ್ರೀಯರು ಹಿಂದಿರುಗಿದ ಮೇಲೆ ಬ್ರಾಹ್ಮಣರು ತಮ್ಮ ಅಜ್ಞಾನಕ್ಕೆ ಪಶ್ಚಾತ್ತಾಪ ಪಡುತ್ತಾರೆ.

–ಈ ಭಾಗ ಕೀ. ೩೫, ನು. ೧–೧೧ರಲ್ಲಿ ತುಂಬ ಸಂಗ್ರಹವಾಗಿ ಬಂದಿದೆ. ಮೂಲದ ಸಂಭಾಷಣೆಗಳ ಭಾಗಗಳನ್ನೆಲ್ಲ ಕೈಬಿಟ್ಟು ಮುಖ್ಯ ಕಥಾಂಶವನ್ನು ಮಾತ್ರ ಇಲ್ಲಿ ತರಲಾಗಿದೆ. ಕೆಲವು ವಿವರಗಳಲ್ಲಿಯೂ ವ್ಯತ್ಯಾಸಗಳಿವೆ. ಮೂಲದಲ್ಲಿ, ಶ್ಲೋಕ ೧೨ರಲ್ಲಿ ಗೋಪಾಲಕರು ಬ್ರಾಹ್ಮಣರನ್ನು ಅನ್ನ ಬೇಡಿದಾಗ ಅವರು ಮಾತನ್ನೇ ಆಡದೆ ಸುಮ್ಮನಿದ್ದರೆ, ಪ್ರ.ಭಾ.ದಲ್ಲಿ, "ಸ್ವರ್ಗಕಾಮಾಕರ್ಮರವರು ಮತ್ತರಾಗಿ ಬಾಲಕರ್ಗೆ ಗರ್ಜಿಸಿದರು ವಿನಯವ ನೀಗಿ, ಕಾಲವಲ್ಲವೆಂದು ನಾಸ್ತಿಕರು ನುಡಿಯಲು" (ನಂ. ೩, ೪) ಎಂದಾಗಿದೆ. ಶ್ಲೋಕ ೧೯ರಲ್ಲಿ, ನಾಲ್ಕು ವಿಧವಾದ ಅನ್ನವನ್ನು ತಟ್ಟೆಗಳಲ್ಲಿ ತೆಗೆದುಕೊಂಡು ಸಮುದ್ರದೆಡೆ ಧಾವಿಸುವ ನದಿಗಳಂತೆ ಬ್ರಾಹ್ಮಣಪತ್ನಿಯರು ಕೃಷ್ಣನ ಬಳಿಗೆ ಧಾವಿಸಿದರು ಎಂದು ವರ್ಣಿಸಿದರೆ, ಪ್ರ.ಭಾ.ದಲ್ಲಿ–

ಮೃಷ್ಟೋದನ ಭಕ್ಷ್ಯ ಪಾಯಸಾಜ್ಯಕ್ಷೀರವು ಯ
ಥೇಷ್ಟ ಶಾಕ ಪಪ್ಪಡ ಪಳಿದ್ಯ ದಧಿ ವ್ಯಂಜನವು ೫
ತಂಡತಂಡದ್ದರಿವಾಣಗಳ ಚಷಕದೊಳಗೆ ತುಂಬಿ
ಕೊಂಡು ಬಂದರಿಂದುವದನೇರ್ಹರಿಯಿದ್ದೆಡೆಗೆ ೬

ಎಂದು ವ್ಯತ್ಯಾಸಹೊಂದಿದೆ. ಶ್ಲೋಕ ೨೧–೨೩ರಲ್ಲಿ ಬರುವ, ಬ್ರಾಹ್ಮಣಪತ್ನಿಯರು ಕಂಡ ಕೃಷ್ಣನ ವರ್ಣನೆ ಪ್ರ. ಭಾ.ದಲ್ಲಿ ಬಂದಿಲ್ಲ.

ಶ್ಲೋಕ ೫೨ರಲ್ಲಿ, ಆ ಬ್ರಾಹ್ಮಣರು ತಮ್ಮ ಕೃತ್ಯಕ್ಕೆ ಪಶ್ಚಾತ್ತಾಪಪಟ್ಟು ಕೃಷ್ಣ ಬಲರಾಮರನ್ನು ನೋಡುವ ಆಸೆ ಇದ್ದರೂ ಕಂಸನಿಗೆ ಹೆದರಿ ಎಲ್ಲಿಯೂ ಹೋಗದೆ ನಿಂತುಬಿಟ್ಟರು–ಎಂಬ ಮಾತುಗಳಿದ್ದರೆ, ಕೀ. ೩೫, ನು. ೧೧ರಲ್ಲಿ–

Rarest Archiver

ಬ್ರಾಹ್ಮಣರು ಪಶ್ಚಾತ್ತಾಪರಾಗಿ ನುಡಿದರು ಪೂರ್ಣ
ಬ್ರಹ್ಮ ಪ್ರಸನ್ವೆಂಕಟಕೃಷ್ಣನ ಒಲಿಸಿಕೊಂಡರು

ಎಂದು ಬಂದಿದೆ. ಇಂಥ ಅನೇಕ ವ್ಯತ್ಯಾಸಗಳನ್ನು ಇಲ್ಲಿ ಗುರುತಿಸಬಹುದಾಗಿದೆ. ಈ ಭಾಗವನ್ನು ವರದಿಯ ರೂಪದಲ್ಲಿ ಹೇಳುವುದಕ್ಕಿಂತ, ಮೂಲದಲ್ಲಿ ನಿರೂಪಿತವಾಗಿರು ವಂತೆ ಘಟನಾತ್ಮಕವಾಗಿಯೇ ಮನವರಿಕೆಯಾಗುವಂತೆ ತಂದಿದ್ದರೆ ಹೆಚ್ಚು ಪರಿಣಾಮಕಾರಿ ಯಾಗಿರುತ್ತಿತ್ತು ಎನ್ನಿಸುತ್ತದೆ.

ಅ. ೨೪, ಶ್ಲೋಕ ೧–೩೮. ಈ ಭಾಗದಲ್ಲಿ ಕೃಷ್ಣನು ಇಂದ್ರಪೂಜೆಗೆ ಸಿದ್ಧರಾಗು ತ್ತಿದ್ದ ಗೋಕುಲದವರನ್ನು ತಡೆದು ಗೋವರ್ಧನಗಿರಿಯನ್ನು ಪೂಜಿಸುವಂತೆ ಹೇಳಿದಾಗ ಅವರು ಅವನ ಮಾತಿನಂತೆಯೇ ನಡೆಯುತ್ತಾರೆ. ೩೮ ಶ್ಲೋಕಗಳಲ್ಲಿ ಬರುವ ಈ ಭಾಗ ಸಂಕ್ಷಿಪ್ತವಾಗಿ ಕೀ. ೩೬, ನು. ೨ ಮತ್ತು ನು. ೩ರ ಮೊದಲ ಎರಡು ಸಾಲುಗಳಲ್ಲಿ ಬರುತ್ತದೆ. ನು.೧ರ ಕೃಷ್ಣಸ್ತುತಿ ಮೂಲದಲ್ಲಿಲ್ಲ.

ಅ. ೨೫, ಶ್ಲೋಕ ೧–೭. ಇಂದ್ರ ತನ್ನ ಪೂಜೆ ನಿಂತುಹೋದ ವಿಷಯವನ್ನು ತಿಳಿದು ಕುಪಿತನಾಗಿ ಪ್ರಳಯಧಾರೆಯ ಸಾಂವರ್ತಕವೆಂಬ ಮೋಡಗಳ ಗುಂಪನ್ನು ಮಳೆ ಸುರಿಸುವಂತೆ ಪ್ರೇರಿಸುತ್ತಾನೆ. ಈ ಭಾಗ ಕೀ. ೩೬, ನು. ೩ರಲ್ಲಿ ಸಂಗ್ರಹವಾಗಿ ಬಂದಿದೆ. ಆ ಪ್ರಳಯಧಾರೆ ಹಾಗೂ ಅದಕ್ಕೆ ಒಳಗಾದ ಗೋಕುಲದ ವರ್ಣನೆ ಶ್ಲೋಕ ೮–೧೮ರಲ್ಲಿ ಬಂದಿದೆ. ಆ ಸಮಯದಲ್ಲಿ ಗೋಪ ಗೋಪಿಯರು, ಗೋವುಗಳೆಲ್ಲ ಕೃಷ್ಣನನ್ನು ರಕ್ಷಿಸ ಬೇಕೆಂದು ಪ್ರಾರ್ಥಿಸಿದ್ದು ಹಾಗೂ ಕೃಷ್ಣ ಅವರನ್ನು ರಕ್ಷಿಸಲು ನಿರ್ಧರಿಸಿದ ಭಾಗ ಪ್ರ.ಭಾ.ದಲ್ಲಿಲ್ಲ. ಇಲ್ಲಿ ದಾಸರು,

ಆಕ್ರಂದಿಸಿದ ಪ್ರಾಣಿಗಳನ್ನೆಲ್ಲ ನೋಡಿ ಸಿರಿನಲ್ಲ ಪರಾಕ್ರಮಶೀಲ
ನಕ್ಕು ಸತ್ಕರಪಲ್ಲವದಿಂದ ಗಿರಿಯೆತ್ತಿದ

ಎಂದಷ್ಟೇ ಹೇಳಿ ಮುಂದೆ ನಡೆದಿದ್ದಾರೆ. 'ಚಿಕ್ಕಮಕ್ಕಳುಚ್ಛಿಲೀಂದ್ರ ನಕ್ಕತ್ತಾಡು ವಂತೆ' ಎನ್ನುವುದು ಮೂಲವನ್ನನುಸರಿಸಿ ಬಂದ ಸುಂದರ ಉಪಮೆ. ಒಟ್ಟಿನಲ್ಲಿ ಇಲ್ಲಿಯೂ ಮೂಲದ ಸಂಭಾಷಣೆಯ ಭಾಗಗಳನ್ನು ತೆಗೆದುಹಾಕಿ ಮುಖ್ಯ ಕಥಾಂಶವನ್ನು ಮಾತ್ರ ಹೇಳುತ್ತ ಸಾಗುವ ಕ್ರಮ ಕಾಣಿಸುತ್ತದೆ. ಶ್ಲೋಕ ೧೯–೨೮ರಲ್ಲಿ, ಗಿರಿಯ ಕೆಳಗೆ ಒಂದು ವಾರ ಬಿರುಗಾಳಿ ಮಳೆಗಳಿಂದ ಅವರಿಗೆ ರಕ್ಷಣೆಯಿತ್ತ ಕೃಷ್ಣನ ಅದ್ಭುತವಾದ ಯೋಗಮಹಿಮೆಗೆ ಇಂದ್ರ ಸೋತು ಮಳೆ ನಿಲ್ಲಿಸುತ್ತಾನೆ. ಆಗ ಕೃಷ್ಣ ಅವರೆಲ್ಲರನ್ನು ಗೋಕುಲಕ್ಕೆ ಹೋಗುವಂತೆ ಹೇಳಿ ಅನಾಯಾಸವಾಗಿ ಪರ್ವತವನ್ನು ಕೆಳಗಿಳಿಸುತ್ತಾನೆ. ಈ ಭಾಗ ನು. ೪ ಮತ್ತು ನು. ೫ರ ಮೊದಲ ೨ ಸಾಲುಗಳಲ್ಲಿ ಬಂದಿದೆ. ಇಲ್ಲಿಯ 'ನಿತ್ಯ ಭೋಜ್ಯಾನ್ನಪಾನ ಚಾರುಶಯ್ಯಾಸನ'ದ ಪ್ರಸ್ತಾಪ ಮೂ. ಭಾ.ದಲ್ಲಿಲ್ಲ.

ಶ್ಲೋಕ ೨೯–೩೩ರಲ್ಲಿ ಗೋಕುಲವಾಸಿಗಳೆಲ್ಲರೂ ಶ್ರೀ ಕೃಷ್ಣನನ್ನು ಪ್ರೇಮದಿಂದ ಆಲಂಗಿಸಿ ಆಶೀರ್ವದಿಸುವುದು, ದೇವತೆಗಳ ಸ್ತುತಿ, ಪುಷ್ಪವೃಷ್ಟಿ, ದೇವದುಂದುಭಿಯ ಮೊಳಗುವಿಕೆ, ಗಂಧರ್ವರ ಗಾನ, ಗೋಪರೆಲ್ಲ ಗೋಕುಲಕ್ಕೆ ಹಿಂದಿರುಗಿದ್ದನ್ನು ಹೇಳಲಾ

Rarest Archiver

ಗಿದೆ. ಈ ಭಾಗ ಪ್ರ. ಭಾ.ದಲ್ಲಿಲ್ಲ.

ಅಧ್ಯಾಯ ೨೬, ಶ್ಲೋಕ ೧–೨೫. ಕೃಷ್ಣನು ಕಂಸ ಕಳಿಸಿದ ಅನೇಕ ರಾಕ್ಷಸರನ್ನು ಕೊಂದದ್ದು, ಗೋವರ್ಧನ ಗಿರಿಯನ್ನೆತ್ತಿ ಹಿಡಿದದ್ದು–ಇವೆಲ್ಲವನ್ನು ಕಂಡು ಆಶ್ಚರ್ಯ ಚಕಿತರಾದ ಗೋಪಾಲಕರು ನಂದನನ್ನು ಕೃಷ್ಣನ ಬಗ್ಗೆ ವಿಚಾರಿಸಿದಾಗ ನಂದನು ಗರ್ಗಾ ಚಾರ್ಯರು ತನಗೆ ಆತ ನಾರಾಯಣನ ಅಂಶವೆಂದು ಹೇಳಿದ್ದನ್ನು ತಿಳಿಸುತ್ತಾನೆ. ಈ ಭಾಗವೂ ಪ್ರ.ಭಾ.ದಲ್ಲಿಲ್ಲ.

ಅಧ್ಯಾಯ ೨೭–ಶ್ಲೋಕ ೧–೧೭ : ಗರ್ವ ಇಳಿದ ಇಂದ್ರ ಕಾಮಧೇನುವಿನೊಡನೆ ಬಂದು ಏಕಾಂತದಲ್ಲಿ ಕೃಷ್ಣನನ್ನು ಕಂಡು ನಮಸ್ಕರಿಸಿ ಸ್ತುತಿಸಿ, ತನ್ನನ್ನು ಕ್ಷಮಿಸೆಂದು ಪ್ರಾರ್ಥಿಸುತ್ತಾನೆ. ಆಗ ಕೃಷ್ಣ ಆತನಿಗೆ ಆತ ಇರಬೇಕಾದ ರೀತಿಯನ್ನು ತಿಳಿಸಿ ಎಚ್ಚರಿಸು ತ್ತಾನೆ. ಈ ಭಾಗ ಪ್ರ. ಭಾ. ದಲ್ಲಿ ಕೀ. ೩೬, ನು. ೫ರ ೩ನೆಯ ಸಾಲಿನಿಂದ ನು. ೮ರ ವರೆಗೆ ಸಂಗ್ರಹಗೊಂಡು ಬಂದಿದೆ. ಹಾಗೆಯೇ ಕಾಮಧೇನು ಕೃಷ್ಣನನ್ನು ಸ್ತುತಿಸುವ ಶ್ಲೋಕ ೧೮–೨೧ರ ಭಾಗವನ್ನು 'ಸ್ತುತಿ ಮಾಡ್ದಳು' (ನು. ೯) ಎಂದಷ್ಟೇ ಹೇಳಿ ಮುಗಿಸಲಾಗಿದೆ.

ಶ್ಲೋಕ ೨೨, ೨೩ : ಕಾಮಧೇನು ತನ್ನ ಕ್ಷೀರಧಾರೆಯಿಂದ ಹಾಗೂ ಇಂದ್ರ ತನ್ನ ಮಾತೆ ಅದಿತಿಯ ಪ್ರೇರಣೆಯಂತೆ, ದೇವರ್ಷಿಗಳೊಂದಿಗೆ ಐರಾವತದ ಸೊಂಡಿಲಿನಿಂದ ಸಂರಿಸಿದ ದೇವಗಂಗೆಯ ತೀರ್ಥದಿಂದ ಕೃಷ್ಣನಿಗೆ ಪಟ್ಟಾಭಿಷೇಕ ಮಾಡಿ, 'ಗೋವಿಂದ' ಎಂದು ನಾಮಕರಣ ಮಾಡುತ್ತಾರೆ. ಪ್ರ. ಭಾ. ದಲ್ಲಿ ಇಂದ್ರ ಅಭಿಷೇಕ ಮಾಡಿದ ವಿಚಾರವನ್ನು ಕೈಬಿಟ್ಟು,ಸುರಭಿ ಮಾತ್ರ ಹರಿಗಭಿಷೇಕ ಮಾಡಿದ ವಿಚಾರವನ್ನು ಕೀ. ೩೬, ನು. ೯ರ ಮೊದಲ ೨ ಸಾಲಿನಲ್ಲಿ ಹೇಳಲಾಗಿದೆ. ನಂತರ ಆಕೆ ಕೃಷ್ಣನನ್ನು ಸ್ತುತಿಸಿ, ನಮಿಸಿ, ಸುರಪತಿಯೊಡನೆ ಸುರಲೋಕಕ್ಕೆ ಹೋದ ವಿಚಾರವನ್ನು ಸಂಕ್ಷಿಪ್ತ ವಾಗಿ ಹೇಳಿ ಕೀರ್ತನೆ ಮುಗಿದಿದೆ. ಶ್ಲೋಕ ೨೪–೨೭ರಲ್ಲಿ ಬರುವ ದೇವ ದೇವತೆಗಳ ಸಂತೋಷ, ಗಾನ, ನರ್ತನ ಇತ್ಯಾದಿ ವಿಚಾರಗಳೂ ಪ್ರ.ಭಾ.ದಲ್ಲಿಲ್ಲ. ಒಟ್ಟಿನಲ್ಲಿ ಗೋವಿಂದಾಭಿಷೇಕದ ಈ ಭಾಗ ಮೂಲದೊಂದಿಗೆ ಹೋಲಿಸಿದಾಗ ತೀರ ಅಸ್ಪಷ್ಟವಾಗಿ ಕಾಣಿಸುತ್ತದೆ.

ಅಧ್ಯಾಯ ೨೮, ಶ್ಲೋಕ ೧–೧೭. ಈ ಭಾಗದಲ್ಲಿ ಬರುವ–ವರುಣನ ದೂತರು ನಂದಗೋಪನನ್ನು ವರುಣಲೋಕಕ್ಕೆ ಒಯ್ದುದ್ದು, ಕೃಷ್ಣ ಅಲ್ಲಿಗೆ ಹೋಗಿ ಆತನನ್ನು ಕರೆ ತಂದದ್ದು, ಗೋಪಾಲಕರೆಲ್ಲರಿಗೆ ಬ್ರಹ್ಮಲೋಕ ದರ್ಶನ ಮಾಡಿಸಿದ್ದು ಇತ್ಯಾದಿಗಳು ಹೆಚ್ಚು ವ್ಯತ್ಯಾಸವಿಲ್ಲದೆ ಕೀ. ೩೭ರ ನು. ೪–೧೫ರಲ್ಲಿ ಬಂದಿವೆ. ನು. ೧–೩ರ ಗೋಪಾಲ ಕರ ಹರಿಭಕ್ತಿಯ ವಿವರಗಳು ಮೂಲದಲ್ಲಿಲ್ಲವಾದರೂ ಇಲ್ಲಿ ಸಂದರ್ಭೋಚಿತವಾಗಿಯೇ ಬಂದಿರುವುದನ್ನು ಗಮನಿಸಬಹುದಾಗಿದೆ.

ಅಧ್ಯಾಯ ೨೯, ಶ್ಲೋಕ ೧–೪೮. ಈ ಭಾಗದಲ್ಲಿ ಕೃಷ್ಣನ ವೇಣುನಾದಕ್ಕೆ ಮೋಹಿತರಾಗಿ ಬಂದ ಗೋಪಿಯರೊಡನೆ ಕೃಷ್ಣ ರಾಸಕ್ರೀಡೆಯಾಡುತ್ತಾನೆ. ಈ

Rarest Archiver

ಸಂದರ್ಭ ಕೀ. ೩೮ರ ನಂ. ೧–೨೧ರಲ್ಲಿ ಬಂದಿದೆ. ಶ್ಲೋಕ ೧ರಲ್ಲಿ ಬರುವ ಕೃಷ್ಣ ಪ್ರಕೃತಿದೇವಿಯೊಂದಿಗೆ ಬೆರೆತು ರಮಿಸಲು ಮಾಡಿದ ಸಂಕಲ್ಪ ಪ್ರ.ಭಾ.ದಲ್ಲಿಲ್ಲ. ಶ್ಲೋಕ ೨ರ ಉಪಮೆಯಲ್ಲಿ 'ಬಹಳ ಕಾಲದ ನಂತರ ಸಂಧಿಸುವ ಪ್ರಿಯನೊಬ್ಬನು' ಎನ್ನುವ ಮಾತಿದ್ದು ; ಅದು ಕೀ. ೩೮, ನಂ. ೧ರಲ್ಲಿ 'ಪ್ರಿಯನು' ಎಂದು ಬದಲಾಗಿದೆ. ಇಂಥ ವ್ಯತ್ಯಾಸಗಳೊಡನೆ ಶ್ಲೋಕ ೨ರಲ್ಲಿಯ ಚಂದ್ರೋದಯದ ವರ್ಣನೆ ಕೀ. ೩೮, ನಂ. ೧, ೨ರಲ್ಲಿ ಬಂದಿದೆ. ಶ್ಲೋಕ ೩ರ ವಿಷಯ ನಂ. ೩ರಲ್ಲಿದೆ. ಶ್ಲೋಕ೪–೮ರಲ್ಲಿ ವೇಣುನಾದವನ್ನು ಕೇಳಿ ಪರವಶರಾಗಿ ಗೋಪಿಯರೆಲ್ಲ ಮಾಡುತ್ತಿದ್ದ ಕೆಲಸಗಳನ್ನು ಬಿಟ್ಟು ಕೃಷ್ಣನಲ್ಲಿಗೆ ಬಂದ ಚಿತ್ರವಿದೆ. ಈ ಭಾಗ ಸಣ್ಣ ಸಣ್ಣ ವ್ಯತ್ಯಾಸಗಳೊಡನೆ ಮೂಲಕ್ಕೆ ವ್ಯತಿರಿಕ್ತವಾಗದೆ ಕೆಲವೆಡೆ ವಿಸ್ತರಿಸಿ, ಕೆಲವಂಶಗಳಲ್ಲಿ ಸಂಗ್ರಹಗೊಂಡು ನಂ.೪–೬ರಲ್ಲಿ ಬಂದಿದೆ. ಉದಾ. ಗೆ, ಶ್ಲೋಕ ೪ರ, ಗೋಪಿಯರು ಅವರಲ್ಲೇ ಪರಸ್ಪರ ಒಬ್ಬರ ಚಲನೆ ಮತ್ತೊಬ್ಬರಿಗೆ ತಿಳಿಯದಂತೆ ಹೊರಟು ಬರುವ ಚಿತ್ರ ಪ್ರ.ಭಾ.ದಲ್ಲಿಲ್ಲ. ಹಾಗೆಯೇ 'ತೋಕರೆಂದಳತೀ ಮೌನವೆತ್ತಿಕೊಂಡು ರಾಕಾಚಂದ್ರಾಸ್ಯೆಯರು' ನಡೆಯುವ ಚಿತ್ರ (ನಂ. ೪) ಮೂಲದಲ್ಲಿಲ್ಲ. ಮೂಲದಲ್ಲಿಯ 'ಸ್ಥಾನಪಲ್ಲಟದಿಂದ ತೊಟ್ಟ ಒಡವೆಗಳುಳ್ಳವರಾಗಿ' (ಶ್ಲೋಕ ೬) ಎಂಬ ಮಾತನ್ನು ನಂ. ೬ರಲ್ಲಿ ಹೀಗೆ ವಿವರಿಸಲಾಗಿದೆ :

> ಕರವಲಯವ ಕಾಲಿಗಿಟ್ಟುಕೊಂಡು ಚರಣಭೂಷಣ ಕೈಗೆ ಸಿಕ್ಕಿಸಿ
> ಕರಣಕುಂಡಲ ನಾಸದಲಿಟ್ಟು ಬರಿಯ ಮುಗುತಿ ಕಿವಿಗಿಟ್ಟು
> ಕೊರಳ ಮಾಲೆಯನೆ ಕಟಿಗೆ ಸುತ್ತಿ ಕೊರಳಿಗೆ ಕಾಂಚೀದಾಮವ ಹಾಕಿ

ಹೀಗೆಯೇ ಶ್ಲೋಕ ೮ರಲ್ಲಿಯ 'ಆ ಗೋಪಿಯರು ಗಂಡಂದಿರಿಂದಲೂ, ತಂದೆ ತಾಯಿಗಳಿಂದಲೂ ಸೋದರರಿಂದಲೂ ಬಂಧು ಬಾಂಧವರಿಂದಲೂ ಸಹ ಹೋಗಬಾರದೆಂದು ತಡೆಯಲ್ಪಟ್ಟರೂ' ಎಂಬ ಮಾತು ಇಲ್ಲಿ 'ನೆರೆ ನಿವಾರಿಸುವರನು ನೂಕಿ' (ನಂ. ೬) ಎಂದು ಹೆಚ್ಚು ಪರಿಣಾಮಕಾರಿಯಾಗಿ ಹ್ರಸ್ವಗೊಂಡಿದೆ. ಇಂಥ ವ್ಯತ್ಯಾಸಗಳನ್ನು ಉದ್ದಕ್ಕೂ ಗುರುತಿಸಬಹುದಾದರೂ ಮೂಲದ ಒಟ್ಟಿನ ಭಾವಕ್ಕೆ ಇಲ್ಲಿಯ ಬದಲಾವಣೆಗಳಿಂದ ಧಕ್ಕೆ ಒದಗಿದೆ ಎನ್ನಿಸುವುದಿಲ್ಲ.

ಶ್ಲೋಕ ೯–೧೭ರ ವಿವರಗಳು ಪ್ರ.ಭಾ.ದಲ್ಲಿಲ್ಲ. ಶ್ಲೋಕ ೧೮–೩೦ರ ಭಾಗ ಅಲ್ಪ ವ್ಯತ್ಯಾಸಗಳೊಡನೆ ನಂ. ೮–೧೨ರಲ್ಲಿ ಬಂದಿದೆ. ಶ್ಲೋಕ ೩೧–೪೧ರಲ್ಲಿ ಗೋಪಿಯರು ಕೃಷ್ಣನಲ್ಲಿ ತಮ್ಮ ಕೈಬಿಡದಿರುವಂತೆ ಬೇಡಿಕೊಳ್ಳುವ ಚಿತ್ರವಿದ್ದು, ಅದು ಪ್ರ.ಭಾ.ದಲ್ಲಿ ನಂ. ೧೩–೧೭ರಲ್ಲಿ ಕೆಲವು ವ್ಯತ್ಯಾಸಗಳೊಡನೆ ಬಂದಿದೆ. ಉದಾ.ಗೆ, ಶ್ಲೋಕ ೩೪ರಲ್ಲಿ 'ಯಾವ ಮನಸ್ಸು ಸಂಸಾರದಲ್ಲಿಯೇ ಆಸಕ್ತವಾಗಿ ನೆಲೆಸಿದ್ದಿತೊ ಅದನ್ನು ನೀನು ಅನಾಯಾಸವಾಗಿ ನಿನ್ನೆಡೆಗೆ ಸೆಳೆದುಕೊಂಡು ಬಿಟ್ಟೆ. ಯಾವಾಗಲೂ ಮನೆಗೆಲಸಗಳಲ್ಲಿ ತೊಡಗಿದ್ದ ಕೈಗಳನ್ನು ನಿನ್ನ ಕಡೆಗೆ ಸೆಳೆದುಕೊಂಡೆ. ಈ ಕಾಲುಗಳೂ ನಿನ್ನ ಪಾದಮೂಲದಿಂದ ಒಂದು ಹೆಜ್ಜೆಯೂ ಸಹ ಕದಲಲಾರವು. ಗೋಕುಲಕ್ಕೆ ಹೇಗೆ ಹೋಗಲು ಸಾಧ್ಯ ಅಥವಾ ಮತ್ತೇನು ಮಾಡಲು ಸಾಧ್ಯ' ಎಂದಿದ್ದರೆ; ಕೀ. ೩೮, ನಂ. ೧೫ರಲ್ಲಿ

Rarest Archiver

'ನಿಮ್ಮ ಶ್ರೀ ಪಾದಾಬ್ಜ ಬಿಟ್ಟೇಳಲೊಲ್ಲವು ನಮ್ಮ ಕಾಲ್ಗಳಂ' ಎಂದು ಮಾತ್ರ ಹೇಳಿ ಮುಂದೆ ಸಾಗಿದ್ದಾರೆ. ಶ್ಲೋಕ ೩೯ರ ಮಾತುಗಳು ಇಲ್ಲಿ ಬಂದಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಮೂಲದಲ್ಲಿ ವಿವರವಾದ ವರ್ಣನೆಗಳಿರುವುದನ್ನು ಮೂಲದ ಭಾವಕ್ಕೆ ಧಕ್ಕೆಯೊದಗದಂತೆ ಸಾರಾಂಶರೂಪವಾಗಿ ಸಂಗ್ರಹಿಸಿ ಕೊಡಲಾಗಿದೆ. ಕಾಮಾರ್ತರಾದ ಗೋಪಿಯರ ಚಿತ್ರ ಇಲ್ಲಿ ಸಮರ್ಥವಾಗಿಯೇ ಬಂದಿದೆ ಎನ್ನಬಹುದು.

ಶ್ಲೋಕ ೪೨–೪೮ರಲ್ಲಿ ಗೋಪಿಯರ ಪ್ರಾರ್ಥನೆಗೆ ಒಲಿದ ಕೃಷ್ಣ ಅವರೊಡನೆ ರಾಸಕ್ರೀಡೆಯಾಡುತ್ತಾನೆ. ಈ ಭಾಗ ಪ್ರ.ಭಾ.ದಲ್ಲಿ ನು. ೧೮–೨೧ರಲ್ಲಿ ಬಂದಿದೆ. ಮೂಲದಲ್ಲಿಯ, ಗೋಪಿಯರ ಮಧ್ಯೆ ಕೃಷ್ಣ 'ನಕ್ಷತ್ರಗಳ ಮಧ್ಯದ ಚಂದ್ರನಂತೆ ಕಾಣುತ್ತಿದ್ದ' (ಶ್ಲೋಕ ೪೩) ಎಂಬ ಉಪಮೆ ಪ್ರ.ಭಾ.ದಲ್ಲಿ ಬಂದಿಲ್ಲ. 'ಕೃಷ್ಣನ ಸ್ನೇಹಸಂಗ ಪಡೆದ ಆ ಗೋಪಿಯರು ಪ್ರತಿಯೊಬ್ಬರೂ ತಾವು ಭೂಲೋಕದಲ್ಲೇ ಅತ್ಯಂತ ಶ್ರೇಷ್ಠ ಸ್ತ್ರೀಯರೆಂದು ಭಾವಿಸಿದರು' (ಶ್ಲೋಕ ೪೭) ಎಂದಿರುವುದು, ಪ್ರ. ಭಾ.ದಲ್ಲಿ 'ಪೂರ್ಣಕಾಮ ಮನ್ನಿಸಿದರೆ ಮತ್ತರಾದರು........ಶ್ರೀ ಮಾಧವ ತಮ್ಮ ವಶ್ಯನೆಂದರಿತು ವಾಮದೃಶೆಯರು ತಿಳಿದರಾಕ್ಷಣ' (ನು. ೨೦) ಎಂದಾಗಿದೆ. ಹೀಗೆ ತಿಳಿದ ಅವರ ಸೊಕ್ಕಡಗಿಸಲು ಕೃಷ್ಣ ಕೂಡಲೆ ಕಣ್ಮರೆಯಾಗುತ್ತಾನೆ. ಈ ಅಂಶ ಎರಡರಲ್ಲೂ ಸಮನಾಗಿ ಬಂದಿದೆ. ಕೀ.ಯ ಅಂತ್ಯದ ನು. ೨೧ರ ಕೃಷ್ಣಸ್ತುತಿ ದಾಸರ ಸೇರ್ಪಡೆಯಾಗಿದೆ.

ಅಧ್ಯಾಯ ೩೦, ಶ್ಲೋಕ ೧–೧೩. ಕೃಷ್ಣ ಇದ್ದಕ್ಕಿದ್ದಂತೆ ಮಾಯವಾದುದನ್ನು ಕಂಡು ಗೋಪಿಯರು ಪರಿತಪಿಸಿ, ಆತನನ್ನು ಹುಡುಕುತ್ತ ಪ್ರಲಾಪಿಸುತ್ತ, ಗಿಡಬಳ್ಳಿಗಳನ್ನು ಕೇಳುತ್ತ ಸಾಗುತ್ತಾರೆ. ಈ ಭಾಗವೂ ವಿವರಗಳಲ್ಲಿ ಅಲ್ಲಲ್ಲಿ ವ್ಯತ್ಯಾಸಗೊಂಡರೂ ಆದರೆ ಒಟ್ಟಿನ ಚಿತ್ರಕ್ಕೆ ಬಾಧೆಯಿಲ್ಲದೆ ಕೀ. ೫ರಲ್ಲಿ ಬಂದಿದೆ.

ಶ್ಲೋಕ ೧ರಲ್ಲಿ 'ಸಲಗನನ್ನು ಕಾಣದ ಹೆಣ್ಣಾನೆಗಳಂತೆ' ಗೋಪಿಯರು ಪರಿತಪಿಸಿದರೆ, ಪ್ರ. ಭಾ.ದಲ್ಲಿ ಕೀ. ೫ರ ಪಲ್ಲವಿಯಲ್ಲಿ, ಗೋಪಿಯರಿಗೆ 'ವ್ಯಾಕುಲ ಚಿತ್ತವು ಶೋಕ ಸಮುದ್ರವು ಮುಂದೋರೆ' ಎಂದಾಗಿದೆ. ಶ್ಲೋಕ ೨, ೩ರಲ್ಲಿ ಕೃಷ್ಣಪರವಶವಾದ ಮನಸ್ಸುಳ್ಳ ಆ ಯುವತಿಯರು ತಾವೇ ಕೃಷ್ಣನಂತೆ ಭಾವಿಸಿ ಅವನಂತೆಯೇ ಲೀಲೆಗಳನ್ನು ಮಾಡತೊಡಗುತ್ತಾರೆ. ಈ ಭಾಗ ಪ್ರ. ಭಾ. ದಲ್ಲಿ ಬಂದಿಲ್ಲ. ಉಳಿದಂತೆ ಮರಗಿಡ ಬಳ್ಳಿ ಪಕ್ಷಿಗಳಿಗೆ 'ಕೃಷ್ಣನನ್ನು ಕಂಡಿರಾ' ಎಂದು ಕೇಳುತ್ತ ತಿರುಗುವ ಭಾಗ ಎರಡರಲ್ಲೂ ಬಹುಮಟ್ಟಿಗೆ ಸಮವಾಗಿಯೇ (ಶ್ಲೋಕ ೪–೯ ಮತ್ತು ನು. ೧–೬) ಬಂದಿದೆ. ಶ್ಲೋಕ ೧೦ರ ವಿವರಗಳನ್ನು ಕೈಬಿಟ್ಟು 'ಹರಿಪಾದಸ್ಪರ್ಶ ಪುಣ್ಯಧಾತ್ರೆ' (ನು. ೭) ಎಂದಷ್ಟೇ ಉಚಿತ ಬದಲಾವಣೆಯನ್ನು ಮಾಡಿಕೊಳ್ಳಲಾಗಿದೆ. ಶ್ಲೋಕ ೧೧–೨೩ರಲ್ಲಿನ ಗೋಪಿಯರ ಭ್ರಮಾಧೀನ ಮಾತು, ವರ್ತನೆಗಳ ವಿವರಗಳನ್ನು ದಾಸರು ಕೈಬಿಟ್ಟಿದ್ದಾರೆ. ಎಂಥ ಉನ್ಮತ್ತ ಸ್ಥಿತಿಯಲ್ಲೂ ಗೋಪಿಯರು ತಮ್ಮನ್ನು ಕೃಷ್ಣನೆಂದು ಭಾವಿಸಿ ವರ್ತಿಸುವುದು ದಾಸರಿಗೆ ಅನುಚಿತವಾಗಿ ಕಂಡಿರಬೇಕು.

ಶ್ಲೋಕ ೨೪–೪೩. ಕೃಷ್ಣನ ಹೆಜ್ಜೆಗುರುತುಗಳೊಡನೆ ಹೆಣ್ಣೊಬ್ಬಳ ಹೆಜ್ಜೆ

Rarest Archiver

ಗುರಂತಂಗಳನ್ನು ಗುರುತಿಸಿ, ನಡೆದಿರಬಹಂದಾದ ಸಂಗತಿಗಳನ್ನು ಊಹಿಸಿ ಮಾತನಾಡುತ್ತ ಸಾಗುವ ಗೋಪಿಯರ ಮಾತುಗಳಲ್ಲಿ ಒಳ್ಳೆಯ ಪರಿಶೀಲನಾ ಚಾತುರ್ಯವಿದೆ. ಕೃಷ್ಣನ ಜೊತೆಗಿದ್ದ ಆ ಗೋಪಿಗೂ ಗರ್ವ ಬಂದಾಗ ಕೃಷ್ಣ ಅವಳನ್ನು ಬಿಟ್ಟು ಮಾಯವಾಗು ತ್ತಾನೆ. ಆಕೆ ಉಳಿದ ಗೋಪಿಯರೊಡನೆ, ತನಗೆ ಕೃಷ್ಣನಿಂದಾದ ಮಾನಾಪಮಾನಗಳನ್ನು ಹೇಳಿಕೊಂಡಾಗ ಇವರು ಆಶ್ಚರ್ಯದಿಂದ ಅದನ್ನೆಲ್ಲ ಕೇಳುತ್ತಾರೆ. ಈ ಭಾಗ ಹೆಚ್ಚು ವ್ಯತ್ಯಾಸವಿಲ್ಲದೆ ಕೀ. ೩೯, ನು. ೮–೨೦ರಲ್ಲಿ ಬಂದಿದೆ.

ಶ್ಲೋಕ ೪೪–೪೬. ಆ ಗೋಪಿಯರು ರಾತ್ರಿಯಾದ ನಂತರ ಮನೆಗೆ ಹೋಗಂ ತ್ತಾರಾದರೂ ಕೃಷ್ಣನನ್ನೇ ನೆನೆಸುತ್ತ ಮನೆಮಠಗಳನ್ನು ಮರೆಯುತ್ತಾರೆ. ಮತ್ತೆ ಯಮುನಾತೀರಕ್ಕೆ ಬಂದು ಒಟ್ಟಾಗಿ ಕೃಷ್ಣನನ್ನೇ, ಧ್ಯಾನಿಸುತ್ತ ಬಯಸುತ್ತ ಹಾಡ ಲಾರಂಭಿಸುತ್ತಾರೆ. ಈ ಭಾಗ ನು. ೨೧–೨೩ರಲ್ಲಿ ಅವರು ಮನೆಗೆ ಹೋಗದೆ ರಾತ್ರಿಯಲ್ಲೂ ಹುಡುಕುತ್ತ ತಿರುಗುತ್ತ ಕಾಳಿಂದಿ ತೀರದ ಮರಳಿನಲ್ಲಿ ಕುಳಿತು ಆಲಾಪಿಸುತ್ತ 'ಪರಸನ್ನ ವೆಂಕಟನ ಪರಸನ್ನೀಕರಿಸಿದರ್ ಪರಸನ್ನಮುಖಿಯರ್ ಸತತ' ಎಂದಾಗಿದೆ.

ಅಧ್ಯಾಯ ೩೧, ಶ್ಲೋಕ ೧–೧೯ (ಗೋಪೀಗೀತ). ಕೃಷ್ಣನಿಗಾಗಿ ಹಂಬಲಿಸಿ ಗೋಪಿಯರು ಹಾಡಿದ ಈ ಭಾಗ ಪ್ರ.ಭಾ.ದಲ್ಲಿ ಕೀ. ೪೦, ನು. ೧–೧೯ರಲ್ಲಿ ಒಂದೆ ರಡು ಸಣ್ಣ ವ್ಯತ್ಯಾಸಗಳೊಡನೆ (ನು. ೧೨, ೧೫, ೧೬), ಬಹಳ ಮಟ್ಟಿಗೆ ಮೂಲವನ್ನೇ ಅನುಸರಿಸಿ ಬಂದಿದೆ.

ಅಧ್ಯಾಯ ೩೨ರ ಶ್ಲೋಕ ೧, ೨ ಇರುವಂತೆಯೇ ಕೀ. ೪೦, ನು. ೨೦, ೨೧ರಲ್ಲಿ ಉದ್ಧರಿಸಲ್ಪಟ್ಟಿವೆ. ಇವುಗಳನ್ನೇ ಆಧರಿಸಿರುವಂತೆ ಕೀ. ೪೨ರ ನು. ೧, ೨ ಕೆಲವು ವ್ಯತ್ಯಾಸ ಗಳೊಡನೆ ಬಂದಿವೆ. ಕೀ. ೪೧ರಲ್ಲಿ ಮತ್ತೆ ಪ್ರತ್ಯಕ್ಷನಾದ ಕೃಷ್ಣನ ಮೋಹಕರೂಪ, ವೇಷ ಭೂಷಣಗಳ ವರ್ಣನೆ ಮೂರು ನುಡಿಗಳಲ್ಲಿದೆ. ಇದು ಪ್ರ. ಭಾ.ದಲ್ಲಿಯ ಹೆಚ್ಚಿನ ಅಂಶ ವಾಗಿದ್ದು ಸಂದರ್ಭೋಚಿತವಾಗಿಯೇ ಬಂದಿದೆ ಎನ್ನಬಹುದು. ಶ್ಲೋಕ ೩ರ ಭಾವ ವನ್ನು ಕೀ. ೪೩ರ ಮೂರು ನುಡಿಗಳಲ್ಲಿ ವಿಸ್ತರಿಸಲಾಗಿದೆ. 'ಆವಿರ್ಭವಿಸಿ ಬಂದ ಪ್ರಿಯತಮನಾದ ಆ ಕೃಷ್ಣನನ್ನು ನೋಡಿ ಅಲ್ಲಿದ್ದ ಗೋಪಾಂಗನೆಯರೆಲ್ಲರೂ ಪ್ರೇಮ ದಿಂದ ಅರಳಿದ ಕಣ್ಣುಳ್ಳವರಾಗಿ ಪ್ರಾಣಗಳು ಮರಳಿಬಂದು ಚೇತರಿಸಿಕೊಂಡ ಶರೀರ ಗಳಂತೆ ಒಟ್ಟಿಗೇ ಮೇಲಕ್ಕೆ ಎದ್ದರು' (ಶ್ಲೋಕ ೩) ಎಂದಿರುವುದು, ಕೀ. ೪೩ರಲ್ಲಿ ಪಲ್ಲವಿ ಹಾಗೂ ೩ ನುಡಿಗಳಾಗಿ ರೂಪ ತಳೆದಿದೆ. ನು. ೨ ಪೂರ್ಣವಾಗಿ ದಾಸರ ಔಚಿತ್ಯಪೂರ್ಣ ಹೊಸಸೃಷ್ಟಿ. ಮೂಲದ ಚಿತ್ರಕ್ಕೆ ಮತ್ತಷ್ಟು ಕಳೆಗೂಡಿಸಿದೆ.

ಶ್ಲೋಕ ೪–೮ರಲ್ಲಿ ಕೃಷ್ಣನನ್ನು ಕಂಡ ಗೋಪಿಯರು ಆನಂದ ಪರವಶರಾಗಿ ವರ್ತಿಸಿದ್ದರ ಚಿತ್ರಣವಿದೆ. ಈ ಭಾಗ ಕೀ. ೪೪, ನು. ೧–೩ರಲ್ಲಿ ಬಂದಿದೆ. ಶ್ಲೋಕ ೯, ನು. ೪ರಲ್ಲಿ ಇನ್ನೂ ಹೆಚ್ಚು ಭಾವಪೂರ್ಣವಾಗಿ ಬಂದಿದೆ. ಶ್ಲೋಕ ೧೦ರಲ್ಲಿ ಸಂತೋಷ ದಿಂದ ನಲಿದಾಡುತ್ತಿರುವ ಗೋಪಿಯರಿಂದ ಪರಿವೃತನಾದ ಕೃಷ್ಣನ ವರ್ಣನೆ ಇದೆ. ಇದು ಪ್ರ.ಭಾ.ದಲ್ಲಿಲ್ಲ. ಇದರ ಬದಲಿಗೆ ನು. ೫ರಲ್ಲಿ ಮತ್ತೆ ಗೋಪಿಯರ ಸಂತೋಷವನ್ನೇ

Rarest Archiver

ಹೇಳಲಾಗಿದೆ. ಶ್ಲೋಕ ೧೧-೨೨ರ ಭಾಗವನ್ನು ಅನುಸರಿಸಿ ನಂ. ೬-೧೫ರ ಭಾಗ ಕೆಲವು ವ್ಯತ್ಯಾಸಗಳೊಡನೆ ಬಂದಿದೆ.

ಅಧ್ಯಾಯ ೩೩, ಶ್ಲೋಕ ೧-೩. ಕೃಷ್ಣನ ಮಾತುಗಳಿಂದ ತಮ್ಮ ವಿರಹ ವ್ಯಥೆ ಕಳೆದುಕೊಂಡ ಗೋಪಿಯರು ಕೃಷ್ಣನೊಡನೆ ರಾಸಕ್ರೀಡೆಗೆ ತೊಡಗುತ್ತಾರೆ. ಈ ಭಾಗ ಕೀ. ೪೪, ನಂ. ೧೬, ೧೭ರಲ್ಲಿ ವರ್ಣಿತವಾಗಿದೆ. ಶ್ಲೋಕ ೪, ೫ರ ದೇವತೆಗಳ ಪ್ರಸ್ತಾಪ ಪ್ರ. ಭಾ.ದಲ್ಲಿಲ್ಲ. ಶ್ಲೋಕ ೬, ೭ರ ರಾಸನೃತ್ಯವನ್ನು ನಂ. ೧೮, ೧೯ರಲ್ಲಿ ವರ್ಣಿಸಿದ ನಂತರ, ಆ ಗೋಪಿಯರ ಭಾಗ್ಯದ ಬಗ್ಗೆ ದಾಸರು ತಮ್ಮ ಅಭಿಪ್ರಾಯವನ್ನು ನಂ. ೨೦, ೨೧ರಲ್ಲಿ ಹೇಳಿದ್ದಾರೆ. ಶ್ಲೋಕ ೮ರ ವಿವರ ಕೀ. ೪೫, ನಂ. ೧ರಲ್ಲಿ ಸ್ರಗ್ಧರಾವೃತ್ತದಲ್ಲಿದೆ. ಮೂಲದ 'ಲಕಂಚಪಟ್ಟೈ:' ಇಲ್ಲಿಲ್ಲ. 'ಕಬರರಶನಾಗ್ರಂಥಯ:' ಇಲ್ಲಿ ಕೇವಲ 'ಸೋರ್ಮುಡಿ ಬಿಟ್ಟುಲೇಯಲ್' ಎಂದಾಗಿದೆ. 'ಕುಂಡಲೈರ್ಗಂಡಲೋಲೈ:' ಎನ್ನುವುದು, 'ದೇದೀಪ್ಯ ಪ್ರೊಜ್ವಲಾಲೆ ಕದಪಿಲಿ ಹೊಳೆಯಲ್' ಎಂದು ಮತ್ತಷ್ಟು ಹೊಳಪಿನಿಂದ ಕೂಡಿಬಂದಿದೆ. ಮೂಲವನ್ನು ಬಹುಮಟ್ಟಿಗೆ ಅನುಸರಿಸಿರುವಲ್ಲಿಯೂ ಇಂಥ ವ್ಯತ್ಯಾಸಗಳಾಗಿರುವುದನ್ನು ಇಡೀ ಕೃತಿಯಲ್ಲೇ ಗಮನಿಸಬಹುದಾಗಿದೆ.

ಶ್ಲೋಕ ೯-೧೮ರ ವಿವರ ಕೀ. ೪೫, ನು. ೨ರಿಂದ ಕೀ. ೪೬, ನು. ೩ರಲ್ಲಿ ಅಲ್ಲಲ್ಲಿ ವ್ಯತ್ಯಾಸಗೊಂಡು ಬಂದಿದೆ. ಶ್ಲೋಕ ೧೯ರಲ್ಲಿ ಕೃಷ್ಣನ ದಿವ್ಯಲೀಲೆಗಳನ್ನು ನೋಡಿ ದೇವತಾಸ್ತ್ರೀಯರು ಮೋಹಗೊಂಡರು, ಚಂದ್ರನೂ ಆಶ್ಚರ್ಯಭರಿತನಾದನು ಎಂದಿರು ವುದು; ಕೀ. ೪೬, ನು. ೧೫, ೧೬ರಲ್ಲಿ ಬದಲಾಗಿರುವ ಪರಿಯನ್ನು ಗಮನಿಸಬಹುದು. ಕೀ. ೪೬, ನಂ. ೪-೧೪ ಆ ಸಂದರ್ಭಕ್ಕನುಗುಣವಾಗಿ ಬಂದಿರುವ ಹೆಚ್ಚಿನ ವರ್ಣನೆಗಳಾ ಗಿವೆ. ಶ್ಲೋಕ ೨೦-೨೨ರ ವಿವರಗಳು ಕೀ. ೪೬ರ ನಂ. ೧೭-೨೩ರಲ್ಲಿ ಬಂದಿವೆ. ಇಲ್ಲಿ ಮೂಲದ ಭಾವವನ್ನು ದಾಸರು ಹೇಗೆ ಬದಲಿಸುತ್ತಾರೆ, ಅದಕ್ಕೆ ತಮ್ಮದೇ ಆದ ಹೊಳ ಪನ್ನು ಹೇಗೆ ಕೊಡುತ್ತಾರೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ನೋಡ ಬಹುದು.

ಕಬ್ಬುಬಿಲ್ಲನ ಕೊಬ್ಬು ಮುರಿದಿಹ ಹಬ್ಬುನುಂಡಸಿಯರು
ಹುಬ್ಬೋರೆಗಣ್ಣಲಿ ಉಬ್ಬುಬ್ಬಿ ನೋಡಿದರಬ್ಧೀಶನಂಗನೇರು ೨೦

ಈ ನುಡಿಯ ಮೊದಲ ಸಾಲು ಮೂಲದಲ್ಲಿಲ್ಲ. ಜೊತೆಗೆ ಮೂಲದ 'ಅಮೃತವರ್ಷದಂತಿ ರುವ ಮಂದಹಾಸದಿಂದ ಕೂಡಿದ ನೋಟ' ಇಲ್ಲಿ ೨ನೆಯ ಸಾಲಾಗಿ ಬದಲಾಗಿದೆ. ಹೀಗೆಯೇ ಶ್ಲೋಕ ೨೩-೨೬ರ ಕೃಷ್ಣಗೋಪಿಯರ ಜಲಕ್ರೀಡೆ, ಹಾಗೂ ಯಮುನಾತೀರವಿಹಾರ ಗಳು ಕೆಲವು ವ್ಯತ್ಯಾಸಗಳೊಂದಿಗೆ ನಂ. ೨೪-೩೦ರಲ್ಲಿ ಬಂದಿವೆ. ಶ್ಲೋಕ ೨೭-೪೦ರ ಪರೀಕ್ಷಿತ ಹಾಗೂ ಶುಕಮುನಿಗಳ ನಡುವಿನ ಕೃಷ್ಣನ ನಡತೆಯ ಬಗೆಗಿನ ಚರ್ಚೆಯ ಬದಲಿಗೆ ಕೀ. ೪೬, ನು. ೩೧-೪೧ರಲ್ಲಿ ಕೃಷ್ಣನ ಶ್ರೇಷ್ಠತ್ವದ ಸ್ತುತಿ ಮಾತ್ರ ಬಂದಿದೆ. ಉಳಿದಂತೆ ಕೃಷ್ಣನ ಮಾಯೆಯಿಂದ ಗೋಪರು ತಮ್ಮ ಪತ್ನಿಯರು ತಮ್ಮ ಜೊತೆಗೇ ಇದ್ದಂತೆ ಭಾವಿಸುವುದು (ಶ್ಲೋಕ ೩೮), ಬೆಳಗಿನ ಜಾವದಲ್ಲಿ ಗೋಪಿಯರು ತಂತಮ್ಮ

Rarest Archiver

ಮನೆಗಳಿಗೆ ಹೋಗುವುದು (ಶ್ಲೋಕ ೩೯)–ಈ ವಿಚಾರಗಳು ನು. ೩೮ರ ೨ ಸಾಲುಗಳಲ್ಲಿ ಸಂಗ್ರಹವಾಗಿ ಬಂದಿವೆ.

ಅಧ್ಯಾಯ ೩೪ರಲ್ಲಿ, ಕೃಷ್ಣನು ನಂದನನ್ನು ಹೆಬ್ಬಾವಿನಿಂದ ರಕ್ಷಿಸಿದ್ದು, ಶಾಪ ಮುಕ್ತವಾದ ಹೆಬ್ಬಾವು ವಿದ್ಯಾಧರನಾದದ್ದು, ಶಂಖಚೂಡನ ವಧೆ–ಈ ವಿಚಾರಗಳಿವೆ.

ಅ. ೩೪, ಶ್ಲೋಕ ೧–೩ರ ವಿವರ ಕೀ. ೪೭, ನು. ೧ರಲ್ಲಿ ಸಂಗ್ರಹವಾಗಿ ಬಂದಿದೆ. ಮೂಲದ ದಾನದ ವಿವರಗಳು ಪ್ರ. ಭಾ.ದಲ್ಲಿಲ್ಲ. ಮೂಲದಲ್ಲಿ ನಂದ ಮೊದಲಾದವರು ಅಂಬಿಕೆ, ರುದ್ರದೇವರು ಇಬ್ಬರನ್ನೂ ಪೂಜಿಸಿದರೆ ಇಲ್ಲಿ ಅಂಬಿಕೆಯನ್ನು ಮಾತ್ರ ಪೂಜಿಸುತ್ತಾರೆ. ಶ್ಲೋಕ ೪ರ ವಿವರವನ್ನು ಪ್ರ.ಭಾ.ದಲ್ಲಿ ಬಿಡಲಾಗಿದೆ. ಶ್ಲೋಕ ೫–೯ರ ವಿವರಗಳು ನು. ೨ ಮತ್ತು ನು. ೩ರ ಮೊದಲ ಸಾಲಿನಲ್ಲಿ ಸಂಗ್ರಹಗೊಂಡಿವೆ. ಮೂಲ ದಲ್ಲಿ ನಂದನೇ ಕೃಷ್ಣನನ್ನು ರಕ್ಷಿಸೆಂದು ಕೂಗಿದರೆ ಇಲ್ಲಿ ಗೋಪಾಲಕರು ಕೂಗುತ್ತಾರೆ. ಶ್ಲೋಕ ೧೦–೧೯ರಲ್ಲಿ ಕೃಷ್ಣ ವಿದ್ಯಾಧರನನ್ನು ಅವನಿಗೆ ಹಾವಿನ ಜನ್ಮ ಬಂದುದರ ಕಾರಣ ಕೇಳಿದಾಗ, ವಿದ್ಯಾಧರನು ತನ್ನ ಕಥೆಯನ್ನು ಹೇಳಿ ಕೃಷ್ಣನ ಅನುಮತಿಯನ್ನು ಪಡೆದು, ನಮಸ್ಕರಿಸಿ ತನ್ನ ಲೋಕಕ್ಕೆ ಹೋಗುತ್ತಾನೆ. ಈ ಭಾಗ ನು. ೩ರ ಉತ್ತರಾರ್ಧ ದಿಂದ ನು. ೫ರ ಪೂರ್ವಾರ್ಧದಲ್ಲಿ ಸಂಗ್ರಹಗೊಂಡಿದೆ. ಮೂಲದಲ್ಲಿ ಬರುವ ಮುನಿಯ ಶಾಪದ ವೃತ್ತಾಂತವನ್ನು ಹೇಳದೆ 'ಹಿಂದೆ ವಿದ್ಯಾಧರ ತಾನು ಮುನಿಯ ಶಾಪದಿಂದ ಹೀಗಾಗಿರಲು' ಎಂದು ಮಾತ್ರ ಹೇಳಿದೆ. ಹಾಗೆಯೇ ಕೃಷ್ಣನ ಮಾತುಗಳನ್ನೂ ಕೈಬಿಡಲಾಗಿದೆ. ವಿದ್ಯಾಧರ ಕೃಷ್ಣನಿಗೆ ಹೇಳುವ ಮಾತುಗಳು (ಶ್ಲೋಕ ೧೪–೧೮) ಇಲ್ಲಿ ಕೀ. ೪೭ರ ನು. ೪ ಮತ್ತು ನು. ೫ರ ಮೊದಲ ಎರಡು ಸಾಲುಗಳಲ್ಲಿ ಸುಂದರವಾದ ಪ್ರಾರ್ಥನೆಯಾಗಿ ಬದಲಾಗಿದೆ.

ಅ. ೩೪, ಶ್ಲೋಕ ೧೯–೨೪ರ ವಿವರ ಕೀ. ೪೭ ನು. ೫ರಿಂದ ಕೀ. ೪೮, ನು. ೩ರಲ್ಲಿ ಸಂಗ್ರಹಗೊಂಡಿದೆ. ಶ್ಲೋಕ ೨೫–೩೨ರ ಶಂಖಚೂಡನ ವೃತ್ತಾಂತ ಕೀ. ೪೮, ನು. ೪, ೫ರಲ್ಲಿ ಸಂಗ್ರಹಿತವಾಗಿದೆ. ಮೂಲದಲ್ಲಿ ಕೃಷ್ಣನು ಶಂಖಚೂಡನನ್ನು ಬೆನ್ನಟ್ಟಿದಾಗ ಬಲರಾಮನು ಗೋಪಿಯರ ರಕ್ಷಣೆಗೆ ನಿಲ್ಲುತ್ತಾನೆ. ಆ ವಿಚಾರ ಪ್ರ.ಭಾ.ದಲ್ಲಿ ಬಂದಿಲ್ಲ. ನು. ೬–೮ರ, ಗೋಪಿಯರು ಮಾಡುವ ಕೃಷ್ಣಸ್ತುತಿ ಮೂಲದಲ್ಲಿಲ್ಲ. ನು. ೯ರಲ್ಲಿ ಅನೇಕ ಕಡೆಗಳಲ್ಲಿ ಪುನರುಕ್ತಗೊಳ್ಳುವ ಫಲಶ್ರುತಿಯ ಮಾತುಗಳಿವೆ.

ಅಧ್ಯಾಯ ೩೫ರಲ್ಲಿ ಕೃಷ್ಣ ಗೋವುಗಳನ್ನು ಮೇಯಿಸಲು ಬೃಂದಾವನದ ಕಡೆ ಹೋದಾಗ ಅವನ ಧ್ಯಾನದಲ್ಲೇ ಇರುತ್ತಿದ್ದ ಗೋಪಿಯರು ಕೃಷ್ಣನ ವೇಣುಗೀತೆಯನ್ನು ಕುರಿತು ಹಾಡುತ್ತಿದ್ದರು. ಇದರಲ್ಲಿ ಕೃಷ್ಣನ ಕೊಳಲಗಾನ ಕೇಳಿ ಗೋಪಿಯರು, ದೇವತೆ ಗಳು, ಪ್ರಕೃತಿ ಎಲ್ಲರೂ ಮರುಳಾಗಿ ನಿಂತದ್ದರ ವಿವರ ಬರುತ್ತದೆ. ಇದು ಮೂಲದಲ್ಲಿ ೨೬ ಶ್ಲೋಕಗಳಲ್ಲಿದ್ದು ಪ್ರ.ಭಾ.ದಲ್ಲಿ ಕೀ. ೪೯, ನು. ೧–೩೩ರಲ್ಲಿ ಬಂದಿದೆ. ಕೆಲವು ವಿವರಗಳು ಸಂಗ್ರಹಗೊಂಡಿವೆ, ಕೆಲವು ವಿಸ್ತಾರವಾಗಿವೆ. ಕೆಲವು ಅಲ್ಲಲ್ಲಿ ಬದಲಾಗಿವೆ. ಶ್ಲೋಕ ೪, ೫ರ ವಿವರ ನು. ೪–೬ರಲ್ಲಿ ವಿಸ್ತರಿಸಿ, ಮೂಲದ ಸೊಗಸನ್ನು ಹೆಚ್ಚಿಸಿದೆ.

Rarest Archiver

ಉದಾ.ಗೆ, ನು. ೬, ೭ನ್ನು ನೋಡಬಹುದು. ಶ್ಲೋಕ ೧೦ರ ಉತ್ತರಾರ್ಧದಿಂದ ೧೧ರಲ್ಲಿ ಬರುವ ವಿವರ ಪ್ರ.ಭಾ.ದಲ್ಲಿಲ್ಲ. ಶ್ಲೋಕ ವಿವರ ೧೨ರ ನು. ೧೮, ೧೯ರಲ್ಲಿ ಬದಲಾಗಿರುವ ರೀತಿಯನ್ನೂ, ಶ್ಲೋಕ ೨೪, ೨೫ರ ವಿವರ ನು. ೩೧, ೩೨ರಲ್ಲಿ ಬದಲಾಗಿರುವ ರೀತಿಯನ್ನೂ ಗಮನಿಸಬಹುದು. ನು. ೨೨ರ ಮಾತುಗಳು ನೇರವಾಗಿ ದಾಸರ ಹೃದಯದಿಂದ ಬಂದ ಮಾತುಗಳಾಗಿವೆ. ಹಾಗೆಯೇ ನು. ೩೪, ೩೫ರ ಕೃಷ್ಣಸ್ತುತಿಯೂ ಮೂಲದಲ್ಲಿಲ್ಲ.

ಅಧ್ಯಾಯ ೩೬, ಶ್ಲೋಕ ೧-೧೫ ರಲ್ಲಿ ಅರಿಷ್ಟಾಸುರ ವಧೆಯ ವರ್ಣನೆ ಇದೆ. ಇದು ಪ್ರ.ಭಾ.ದಲ್ಲಿ ಕೀ. ೫೦, ನು. ೧-೮ರಲ್ಲಿ ಬಂದಿದೆ. ಶ್ಲೋಕ ೧೩ರಲ್ಲಿ ಕೃಷ್ಣನು ಆತನ ಕೊಂಬುಗಳನ್ನು ಹಿಡಿದು ಆನೆಯು ಎದುರಾನೆಯನ್ನು ತಳ್ಳುವಂತೆ ಹದಿನೆಂಟು ಹೆಜ್ಜೆಗಳಷ್ಟು ದೂರ ಹಿಂದಕ್ಕೆ ತಳ್ಳಿದನು ಎಂದಿದ್ದರೆ, ನು. ೬ ರಲ್ಲಿ ಈ ಭಾಗ 'ಸಖರ ನುಳಿದಚ್ಯುತನು ಬರುತಿಹ ಕಕುದಿಯನು ಕೆಡಹಿದನು ಧರೆಯಲಿ' ಎಂದು ಬಂದಿದೆ. ಇಂಥ ಕೆಲವು ವರ್ಣನಾ ವ್ಯತ್ಯಾಸಗಳನ್ನು ಬಿಟ್ಟರೆ ಒಟ್ಟಿನ ಕಥಾಂಶದಲ್ಲಿ ಹೆಚ್ಚಿನ ವ್ಯತ್ಯಾಸಗಳಿಲ್ಲ ಎಂದೇ ಹೇಳಬಹುದು.

ಅ.೩೬, ಶ್ಲೋಕ ೧೬–೩೦. ಅರಿಷ್ಟಾಸುರ ವಧೆಯ ನಂತರ ತ್ರಿಕಾಲಜ್ಞಾನಿಯಾದ ನಾರದ ಕಂಸನಲ್ಲಿಗೆ ಬಂದು, ಕೃಷ್ಣ ಬಲರಾಮರು ವಸುದೇವನ ಮಕ್ಕಳೆಂದೂ, ಅವರನ್ನು ವಸುದೇವ ತನ್ನ ಮಿತ್ರನಾದ ನಂದನಲ್ಲಿ ಇರಿಸಿರುವುದಾಗಿಯೂ ಹೇಳುತ್ತಾನೆ. ಅದನ್ನು ಕೇಳಿ ಕಂಸನು ಕೂಡಲೇ ವಸುದೇವನನ್ನು ಕೊಲ್ಲಲೆಂದು ಖಡ್ಗವನ್ನು ಕೈಗೆತ್ತಿಕೊಂಡಾಗ ನಾರದ ಅವನನ್ನು ತಡೆಯುತ್ತಾನೆ. ಈ ಭಾಗ ಪ್ರ.ಭಾ.ದಲ್ಲಿ ಕೀ. ೫೧, ನು. ೧–೩ರಲ್ಲಿ ಬಂದಿದೆ. ನು. ೩ರಲ್ಲಿ 'ಆನಕದುಂದುಭಿ ಸ್ತ್ರೀಸಹ ಕೊಂದೆನೆನುತ' ಎನ್ನುವಲ್ಲಿ ದೇವಕಿಯನ್ನೂ ಸೇರಿಸಲಾಗಿದೆ. ನು.೪ರ ನಾಲ್ಕನೆಯ ಸಾಲಿನಲ್ಲಿ 'ಹಾರಿದ ಗಗನಕೆ' ಎಂದಷ್ಟೇ ಇದೆ. ಇದು 'ಹಾರಿದ ಗಗನಕೆ ಮುನಿ' ಎಂದಾದರೆ ಅರ್ಥ ಸರಿ ಹೋಗುತ್ತದೆ.

ಶ್ಲೋಕ ೨೧ರಲ್ಲಿ ಕಂಸ ಕೇಶಿಯೆಂಬ ದೈತ್ಯನನ್ನು ಕರೆದು 'ನೀನು ರಾಮಕೃಷ್ಣರಿಬ್ಬರನ್ನು ಸಂಹರಿಸಿ ಬರಬೇಕು' ಎನ್ನುತ್ತಾನೆ. ಈ ಭಾಗ ಪ್ರ.ಭಾ.ದಲ್ಲಿ,

> ....ಮಾರಕ ಕೇಶಿಗೆ ಧಾರುಣಿಪತಿ ನೇಮಿಸಿದ ೪
> ಎಲೆ ಕೇಶಿಯೆ ಗೋವಳರ ಪಳ್ಳಿಗೆ ಹೋಗು ಅಲಸದೆ ಕೃಷ್ಣ ಬಲರನು
> ಕೊಲು ಗಹನರವರ್ ಬೆಳೆದರು ನಂದನ ನಿಲಯದಿ ಮತ್ತವರನ್ನು............ ೫

ಎಂದಾಗಿದೆ. ಹೀಗೆ ವಿವರಗಳಲ್ಲಿ ಅಲ್ಲಲ್ಲಿ ಇಂಥ ಸಣ್ಣ ವ್ಯತ್ಯಾಸಗಳು ಕಾಣಿಸಿದರೂ ಒಟ್ಟಿನಲ್ಲಿ ಮೂಲವನ್ನೇ ಅನುಸರಿಸಿರುವುದನ್ನು ಗಮನಿಸಬಹುದು. ಇಲ್ಲಿ ಕನ್ನಡ ಸಂಸ್ಕೃತಗಳ ಭಾಷಾಸ್ವರೂಪದಲ್ಲಿಯ ವ್ಯತ್ಯಾಸವನ್ನೂ, ಭಾಷಾಂತರದಲ್ಲಿಯ–ಮೂಲದಲ್ಲಿ ಶ್ಲೋಕಗಳಲ್ಲಿರುವುದನ್ನು ಇಲ್ಲಿ ವಿವಿಧ ಮಟ್ಟುಗಳ ಕೀರ್ತನೆಗಳಾಗಿ ಅಳವಡಿಸುವುದರಲ್ಲಿರುವ–ಕ್ಲಿಷ್ಟತೆಯನ್ನೂ ನಾವು ಮರೆಯುವಂತಿಲ್ಲ. ಶ್ಲೋಕ ೨೨-೨೭ರಲ್ಲಿ ಆಮೇಲೆ ಕಂಸನು ಚಾಣೂರ ಮುಷ್ಟಿಕಾದಿಗಳನ್ನು ಕರೆದು ಕೃಷ್ಣನನ್ನು ಕೊಲ್ಲುವ ಬಗೆಯನ್ನು ತಿಳಿಸುತ್ತಾನೆ. ಈ ಭಾಗ ನಂ. ೫-೮ರಲ್ಲಿ ಬಂದಿದೆ.

Rarest Archiver

ಶ್ಲೋಕ ೨೮–೬೧. ರಾಮಕೃಷ್ಣರನ್ನು ಕೊಲ್ಲುವುದು ಪಾಪಕಾರ್ಯವಲ್ಲವೆ ಎಂದು ಮಾವಟಿಗ ಕೇಳಿದಾಗ, ಕಂಸ ತನ್ನ ಹುಟ್ಟಿನ ಕಥೆಯನ್ನು ಹೇಳಿ, ಆ ದೃಷ್ಟಿಯಿಂದ ಸಂಬಂಧಿಗಳಲ್ಲದ ರಾಮಕೃಷ್ಣರನ್ನು ಕೊಂದರೆ ಪಾಪವಿಲ್ಲ ಎಂದು ತಿಳಿಸುತ್ತಾನೆ. ಈ ಭಾಗ ಕೀ. ೫೧, ನಂ. ೯–೧೮ರಲ್ಲಿ ಬಂದಿದೆ. ಈ ಭಾಗದಲ್ಲಿ ಶ್ಲೋಕ ೩೧–೩೭ರಲ್ಲಿ ಬರುವ, ಗಂಧರ್ವನೊಬ್ಬ ಕಂಸನ ತಾಯಿಯನ್ನು ಕೂಡಿದ ಸಂದರ್ಭದ ವಿವರವಾದ ವರ್ಣನೆ ಪ್ರ.ಭಾ.ದಲ್ಲಿ ಬರುವುದಿಲ್ಲ. ಇಲ್ಲಿ ಮುಖ್ಯ ಕಥಾಂಶವನ್ನು ಮಾತ್ರ ಸಂಗ್ರಹಿಸಲಾಗಿದೆ. ಉಳಿದ ಭಾಗವೂ ಹೀಗೆಯೇ ಒಟ್ಟಿನಲ್ಲಿ ಮೂಲವನ್ನು ಅನುಸರಿಸಿದೆ ಎಂದು ಹೇಳಬಹುದು.

ಶ್ಲೋಕ ೬೨–೭೪. ಕಂಸನು ಅಕ್ರೂರನಿಗೆ ಬೃಂದಾವನಕ್ಕೆ ಹೋಗಿ ಕೃಷ್ಣನನ್ನು ಕರೆತರುವಂತೆ ಹೇಳುತ್ತಾನೆ. ಇದು ನು. ೧೯ರಿಂದ ನು. ೨೪ರ ಪೂರ್ವಾರ್ಧದಲ್ಲಿ ಬಂದಿದೆ. ಶ್ಲೋಕ ೭೫ರ ವಿವರದ ಬದಲಿಗೆ ನು. ೨೪ರ ಉತ್ತರಾರ್ಧ ಮತ್ತು ನು. ೨೫ರ ವಿವರಗಳು ಬಂದಿವೆ. ಇಲ್ಲಿಯ ಅಕ್ರೂರನ ಚಿಂತನೆ ('ದುರುಳರು........ಗುರುಹಿರಿಯರ ತಪ') ಮೂಲದಲ್ಲಿಲ್ಲ.

ಅಧ್ಯಾಯ ೩೭, ಶ್ಲೋಕ ೧–೯ರಲ್ಲಿ ಬರುವ ಕೇಶಿರಾಕ್ಷಸನ ವಧೆ ಹೆಚ್ಚಿನ ವ್ಯತ್ಯಾಸಗಳಿಲ್ಲದೆ ಕೀ. ೫೨, ನಂ. ೧ರಿಂದ ನು. ೮ರ ಮೂರುಸಾಲುಗಳಲ್ಲಿ ಬಂದಿದೆ. ಒಂದೆರಡು ಸಣ್ಣವ್ಯತ್ಯಾಸಗಳು : ಮೂಲದಲ್ಲಿ ಕೇಶಿಯ ಬಾಯಲ್ಲಿ ಕೃಷ್ಣ ತನ್ನ ಎಡತೋಳನ್ನು ಹೊಗಿಸಿದರೆ ಇಲ್ಲಿ ಬರಿಯ 'ತೋಳೊಂದನು' ಎಂದು ಬರುತ್ತದೆ. ಹಾಗೆಯೇ ಮೂಲದ 'ಲಂಡಂ ವಿಸೃಜನ್' ಎನ್ನುವ ವಿವರ ಪ್ರ.ಭಾ.ದಲ್ಲಿ ಬಂದಿಲ್ಲ. ಶ್ಲೋಕ ೧೦–೨೫ರಲ್ಲಿ ಕೇಶಿಸಂಹಾರದ ನಂತರ ನಾರದ ಮಹರ್ಷಿ ಬಂದು ಕೃಷ್ಣನನ್ನು ಸ್ತುತಿಸಿ ಹೋಗುತ್ತಾನೆ. ಶ್ಲೋಕ ೧೦ರ ವಿಷಯ ಕೀ. ೫೨, ನು. ೮ರ ನಾಲ್ಕನೆಯ ಸಾಲಿನಲ್ಲಿ ಬಂದಿದೆ. ನಂ. ೯ರ ವಿವರ ಮೂಲದಲ್ಲಿಲ್ಲ. ನು. ೧೦, ಹೆಚ್ಚಿನ ಕೀ. ಗಳ ಅಂತ್ಯದಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಕೃಷ್ಣಸ್ತುತಿಯಾಗಿದೆ.

ಅ. ೩೭, ಶ್ಲೋಕ ೧೧–೨೫ರ ಸ್ತುತಿಯ ವಿವರಗಳು ಕೀ. ೫೩ರ ನು. ೧-೮ರಲ್ಲಿ ಕೆಲವು ವ್ಯತ್ಯಾಸಗಳೊಂದಿಗೆ ಬಂದಿವೆ. ಉದಾ. ಶ್ಲೋಕ ೧೧–೧೩ರ ವಿವರ ಕೀ. ೫೩, ನು. ೧ರಲ್ಲಿ ಬಂದಿರುವ ರೀತಿಯನ್ನು ಗಮನಿಸಬಹುದು. ಹಾಗೆಯೇ ಶ್ಲೋಕೆ ೨೬ರ ವಿವರ ನು. ೯ರಲ್ಲಿ ವರ್ಣಿತವಾಗಿರುವ ಪರಿಯನ್ನೂ ನೋಡಬಹುದು.

ಶ್ಲೋಕ ೨೭–೩೪ರಲ್ಲಿ ವ್ಯೋಮಾಸುರನ ವಧೆಯ ಭಾಗ ವರ್ಣಿತವಾಗಿದೆ. ಇದು ಪ್ರ. ಭಾ.ದ ಕೀ. ೫೪, ನಂ. ೧–೬ರಲ್ಲಿ ವರ್ಣಿತವಾಗಿದೆ. ವ್ಯೋಮಾಸುರನ ಗಾಸಿಯನ್ನು ಗೋವಳರು ಕೃಷ್ಣನಿಂದ ದಾಟಿದರೆನ್ನುವುದನ್ನು ಪಲ್ಲವಿಯಲ್ಲಿ ಸೂಚಿಸಿ ಆ ಭಾಗದ ಮುಖ್ಯ ಘಟನೆಯ ಸೂಚನೆಯನ್ನು ಮೊದಲಿಗೇ ಕೊಟ್ಟಿದ್ದಾರೆ. ಶ್ಲೋಕ ೨೯ರಲ್ಲಿ ಬರುವ 'ಮಯಪುತ್ರೋ ಮಹಾಮಾಯೋ' ಎಂಬ ವಿವರಗಳು ಇಲ್ಲಿ (ನು. ೨) ಬಂದಿಲ್ಲ. ಹಾಗೆಯೇ ಇಲ್ಲಿಯ 'ತೋಳನ ತೆರನವ ಮಾಡಲು' ಎಂಬ ವರ್ಣನೆ ಮೂಲ

Rarest Archiver

ದಲ್ಲಿಲ್ಲ. ಆದರೆ ಈ ಬದಲಾವಣೆ ಇಲ್ಲಿಯ ಸಂದರ್ಭಕ್ಕೂ ಮುಂದೆ ಬರುವ ಸಿಂಹ ತೋಳಗಳ ಉಪಮೆಗೂ ಹೊಂದುವಂತೆ ಬಂದಿದೆ.

ಶ್ಲೋಕ ೩೧ರಲ್ಲಿ 'ಆ ವ್ಯೋಮಾಸುರನ ಆ ಕೆಲಸವನ್ನು ಸಜ್ಜನರಿಗೆ ಆಶ್ರಯದಾತನಾದ ಶ್ರೀಕೃಷ್ಣನು ಕಂಡುಕೊಂಡು ಸಿಂಹವು ತೋಳವನ್ನು ಹಿಡಿಯುವಂತೆ ತನ್ನ ಪರಾಕ್ರಮದಿಂದ ಹಿಡಿದುಬಿಟ್ಟನು' ಎಂದು ಬಂದಿದೆ. ಈ ಭಾಗ ನಂ. ೩ರಲ್ಲಿ,

ಬಿಲದೊಳು ಸಿಕ್ಕಿದ ಗೋವಳರೆಲ್ಲರು ಬಲುಭಯವೈದಿದರು
ನಳಿನನಯನ ಗೋವಿಂದಾಯೆನ್ನುತ ಸಲೆ ದುಃಖ ಹೊಂದಿದರು
ಎಳೆಯರ ಆರ್ತಸ್ವರವನು ಕೇಳಿದ ಖಳನ ಸ್ಥಿತಿಯನರಿದ
ತಿಳಿಯದಂತೆ ಸರ್ವಜ್ಞ ಶಿಖಾಮಣಿ ಬಳಿಯಲಿ ನಿಂತಿದ್ದ

ಎಂದು ವಿಸ್ತರಿಸಿ, ಮೂಲದಲ್ಲಿಲ್ಲದ ಗೋವಳರ ದುಃಖವನ್ನು ವರ್ಣಿಸಲಾಗಿದೆ. ಶ್ಲೋಕ ೩೧ರ ವಿಷಯವೇ ನಂ. ೪ರಲ್ಲೂ ಮುಂದುವರೆದು, ಇಲ್ಲಿ ತೋಳ–ಸಿಂಹನ ಉಪಮೆಯನ್ನು ವಿಸ್ತರಿಸಿ ಕೊಡಲಾಗಿದೆ. ನಂ. ೫ ಮತ್ತು ನಂ.೬ರ ೨ ಸಾಲುಗಳು ಮೂಲವನ್ನು ಸಂಗ್ರಹಿಸಿ ಬಂದಿವೆ. ಉಳಿದ ನಂ. ೬ರ ಕೊನೆಯ ಎರಡು ಸಾಲು ಹಾಗೂ ನಂ. ೭ರ ಕೃಷ್ಣಸ್ತುತಿ ದಾಸರ ಸ್ವಂತಿಕೆಯದಾಗಿವೆ.

ಅ. ೩೮, ಶ್ಲೋಕ ೧–೪೫ರಲ್ಲಿ ಅಕ್ರೂರನು ಮಧುರೆಗೆ ಬಂದು ಕೃಷ್ಣನನ್ನು ನೋಡಿದುದರ ವಿವರವಾದ ವರ್ಣನೆಯಿದೆ. ಇದನ್ನು ಅನುಸರಿಸಿ ಕೀ. ೫೫ ಬಂದಿದೆಯಾದರೂ ವಿವರಗಳಲ್ಲಿ ವ್ಯತ್ಯಾಸಗಳಿರುವುದು ಆರಂಭದಲ್ಲೇ ಕಾಣಿಸುತ್ತದೆ. ಈ ಕೀರ್ತನೆಯ ಪಲ್ಲವಿ ದಾಸರ ದೃಢವಾದ ನಂಬಿಕೆಯೊಂದನ್ನು ಹೇಳುತ್ತದೆ. ಶ್ಲೋಕ ೧ರ ವಿಷಯ ಕೀ. ೫೫ರ ನಂ. ೧, ೨ರಲ್ಲಿ ವ್ಯತ್ಯಾಸಗೊಂಡು ಬಂದಿದೆ. ಮೂ. ಭಾ.ದಲ್ಲಿ, 'ಮಹಾಮತಿಯಾದ ಅಕ್ರೂರನು ಸಹ ಆ ರಾತ್ರಿಯನ್ನೆಲ್ಲ ಮಧುರಾನಗರಿಯಲ್ಲೇ ಕಳೆದು ಬೆಳಗ್ಗೆ ರಥವೇರಿ ನಂದಗೋಕುಲಕ್ಕೆ ಹೊರಟನು' ಎಂದಿದ್ದರೆ, ಇಲ್ಲಿ—

ವ್ರಜಕೆ ತೆರಳಿದ ಕಂಸನ ಮತದಿ ಒಂದು ರಜನಿಯೊಳಿದ್ದಕ್ರೂರಗೃಹ ಹೊಂದಿ
ಸುಜನೇಶ್ವರ ಶ್ರೀಕೃಷ್ಣಪಾದ ಸುನಿಜಧ್ಯಾನದಿ ಸ್ಮರಣೆಯಲಿದ್ದ ೧
ರವಿಗರ್ಘ್ಯದ ಕರ್ಮವ ಮಾಡಿ ಶುಭ ಹವಿರ್ಗಾಹುತಿ ವಿಧಿಯಲಿ ನೀಡಿ
ಜವದಿ ರಥಕೆ ಹಯಗಳ ಹೂಡಿ ಮಾಧವ ದರುಶನಕೆ ಶಕುನ ನೋಡಿ ೨

ಎಂದು ವಿಸ್ತರಿಸಲಾಗಿದೆ. ನಂ. ೨ರ ವಿವರಗಳು ದಾಸರು ಸೇರಿಸಿರುವಂಥವಾದರೂ ಸನ್ನಿವೇಶಕ್ಕೆ ಪೂರಕವಾಗಿಯೇ ಇರುವುದನ್ನು ಗಮನಿಸಬಹುದು. ಇಂಥ ಅನೇಕ ವ್ಯತ್ಯಾಸಗಳನ್ನು ಗುರುತಿಸಬಹುದಾದರೂ ಇವು ಕಥೆಗೆ, ಮೂಲಭಾವಕ್ಕೆ ತೊಡಕಾಗಿ ಬರುವುದಿಲ್ಲ ಎನ್ನುವುದು ಗಮನಾರ್ಹ. ವರ್ಣನೆ ವಿಸ್ತೃತವಾಗಿ ಬಂದರೂ ಮೂಲಭಾವಕ್ಕೆ ಪೋಷಕವಾಗಿಯೇ ಬಂದಿರುವುದನ್ನು ಮೇಲಿನ ಉದಾಹರಣೆಯಲ್ಲೇ ಗಮನಿಸಬಹುದು.

ಈ ಅಧ್ಯಾಯದ ೪೨ ಶ್ಲೋಕಗಳ ಸಾರಾಂಶ ಕೀ.೫೫ರ ನಂ. ೧–೫೫ರಲ್ಲಿ ಬಂದಿದೆ. ಈ ಭಾಗವನ್ನು ಇಡಿಯಾಗಿ ಮೂಲದೊಡನೆ ಹೋಲಿಸಿದಾಗ ಕೆಲವೆಡೆ ವರ್ಣನೆ

Rarest Archiver

ವಿಸ್ತಾರಗೊಂಡರೆ, ಕೆಲವೆಡೆ ಸಂಗ್ರಹಗೊಂಡಿದೆ. ಈ ಅಧ್ಯಾಯದ ಶ್ಲೋ. ೪೩-೪೫ರಲ್ಲಿ ಬರುವ ನಂದಗೋಪ ಅಕ್ರೂರನಿಗೆ ಮಾಡುವ ಉಪಚಾರ, ಸಂಭಾಷಣೆ ಪ್ರ.ಭಾ.ದಲ್ಲಿಲ್ಲ. ಹಾಗೆಯೇ ಇಲ್ಲಿಯ ಅನೇಕ ಕೀರ್ತನೆಗಳ ಅಂತ್ಯದಲ್ಲಿ ಬರುವ ಕೃಷ್ಣಸ್ತುತಿ ಮೂಲದಲ್ಲಿ ರುವುದಿಲ್ಲ.

ಅಧ್ಯಾಯ ೩೯ ರಲ್ಲಿ ಮಥುರೆಗೆ ಬಲರಾಮ ಕೃಷ್ಣರ ಪ್ರಯಾಣ, ಗೋಪಿಯರ ವಿಲಾಪ, ಅಕ್ರೂರನಿಗೆ ಯಮುನಾನದಿಯಲ್ಲಿ ಕೃಷ್ಣದರ್ಶನ- ಈ ಮುಖ್ಯಾಂಶಗಳು ಬಂದಿವೆ. ಶ್ಲೋಕ ೧-೧೦ರಲ್ಲಿ ಬರುವ ವಿಚಾರಗಳು ಕೀ. ೫೬, ನಂ. ೧-೩ರಲ್ಲಿ ಸಂಗ್ರಹ ಗೊಂಡಿವೆ. ವಿವರಗಳಲ್ಲಿ ಇವುಗಳಲ್ಲಿಯೂ ಅಲ್ಲಲ್ಲಿ ವ್ಯತ್ಯಾಸಗಳಿವೆ. ಉದಾ.ಗೆ ಶ್ಲೋಕ ೧೦ ರಲ್ಲಿ, 'ಶೂರನಾದ ಶತ್ರುಗಳನ್ನು ಸಂಹರಿಸಲು ಸಮರ್ಥರಾದ ಶ್ರೀಕೃಷ್ಣ ಬಲರಾಮ ರಿಬ್ಬರೂ ಅಕ್ರೂರನ ಮಾತನ್ನೆಲ್ಲ ಕೇಳಿ, ಗಟ್ಟಿಯಾಗಿ ನಕ್ಕು ತಂದೆಯಾದ ಗೋಪನಿಗೆ ಕಂಸನು ಹೇಳಿಕಳಿಸಿದ ಸಂಗತಿಯನ್ನೆಲ್ಲ ತಿಳಿಸಿದರು' ಎಂದಿದ್ದರೆ, ಪ್ರ.ಭಾ.ದಲ್ಲಿ, 'ರಾಜಾಜ್ಞೆ ಹೇಳಿದನು ನಂದನಿಗೆ ಅಕ್ರೂರ' ಎಂದಷ್ಟೇ ಬಂದಿದೆ.

ಶ್ಲೋಕ ೧೧-೩೫ರಲ್ಲಿ ಬರುವ ವಿಚಾರಗಳು ಕೀ. ೫೬, ನಂ. ೪-೩೦ರಲ್ಲಿ ಬರು ತ್ತವೆ. ಕೃಷ್ಣನನ್ನು ತಮ್ಮಿಂದ ಅಗಲಿಸಿ ಕರೆದೊಯ್ಯುತ್ತಿರುವ ಅಕ್ರೂರನನ್ನು ಕುರಿತ ಗೋಪಿಯರ ಮಾತುಗಳಲ್ಲಿ ನಂ. ೨೦ರ ವಿವರ ಮೂಲದಲ್ಲಿಲ್ಲ. ಆದರೆ ಇವು ಸಂದರ್ಭಕ್ಕೆ ಹೊಂದುವಂತೆಯೇ ಬಂದಿವೆ ಎನ್ನುವುದನ್ನು ಗಮನಿಸಬಹುದು. ಶ್ಲೋಕ ೩೬, ೩೭ರ ವಿವರ ನಂ. ೩೧-೩೪ರಲ್ಲಿ ವಿಸ್ತರಿಸಿದೆ. ಶ್ಲೋಕ ೩೭ರಲ್ಲಿ, ಪ್ರಿಯನಾದ ಪರಮಾತ್ಮನ ದಿವ್ಯ ಚರಿತ್ರೆಯನ್ನೇ ಯಾವಾಗಲೂ ಗಾನ ಮಾಡುತ್ತ ಅದರಿಂದ ಶೋಕವನ್ನು ಕಳೆದು ಕೊಂಡು ಹಗಲನ್ನು ಕಳೆದರು ಎಂದಿದ್ದರೆ, ಕೀ. ೫೭ರಲ್ಲಿ ಆ ಭಾಗ ವಿಸ್ತರಿಸಿ ನಂ. ೩೨-೩೪ರಲ್ಲಿ ಬಂದಿದೆ. ಶ್ಲೋಕ ೩೮-೫೭ರ ಭಾಗ ನಂ. ೩೫-೪೬ರಲ್ಲಿ ಬಂದಿದೆ. ನಂ. ೪೭-೪೯ರ ವಿವರಗಳು ಪ್ರ.ಭಾ.ದಲ್ಲಿಯ ಹೆಚ್ಚಿನ ಭಾಗಗಳಾಗಿವೆ. ಇವೂ ಕೂಡ ಸಂದರ್ಭಕ್ಕೆ ಹೊರತಾಗಿಲ್ಲ. ಆ ಘಟನೆಗೆ ದಾಸರು ಮಾಡಿದ ವಿಮರ್ಶೆಯಂತಿವೆ.

ಅ. ೪೦, ಶ್ಲೋಕ ೧-೨೯ರಲ್ಲಿ ಅಕ್ರೂರನು ತಾನು ದರ್ಶಿಸಿದ ಕೃಷ್ಣಪರಮಾತ್ಮ ನನ್ನು ಸ್ತುತಿಸಿದ್ದರ ವಿವರಗಳಿವೆ. ಇಲ್ಲಿಯೂ ವಿವರಗಳಲ್ಲಿ ವ್ಯತ್ಯಾಸಗಳಿವೆ. ಮೂ. ಭಾ. ದಲ್ಲಿ ಕೃಷ್ಣಸ್ತುತಿಯಿಂದಲೇ ಈ ಅಧ್ಯಾಯ ಪ್ರಾರಂಭವಾದರೆ ಇಲ್ಲಿ ಆ ಸ್ತುತಿಯನ್ನು ಕುರಿತ ದಾಸರ ಅಭಿಪ್ರಾಯವಿರುವ ಪಲ್ಲವಿಯಿಂದ ಕೀ. ೫೭ ಪ್ರಾರಂಭವಾಗಿದೆ. ನಂ. ೧ ಕೂಡ ಹಿಂದಿನ ಕೀ. ಯಲ್ಲಿ ಹೇಳಿದ ವಿಷಯದ ಪುನರುಕ್ತಿಯಾಗಿದೆ. ನಂ. ೨ರಿಂದ ಸ್ತುತಿ ಪ್ರಾರಂಭವಾಗಿದೆ.

ಶ್ಲೋಕ ೧ರಲ್ಲಿ, 'ಯಾವನ ನಾಭಿಯಲ್ಲಿ ಜನಿಸಿದ ಕಮಲಕೋಶದಿಂದ ಚತು ರ್ಮುಖ ಬ್ರಹ್ಮನು ಜನಿಸಿದನೋ ಯಾವ ಚತುರ್ಮುಖ ಬ್ರಹ್ಮನಿಂದ ಈ ಲೋಕವೇ ಹುಟ್ಟಿತೋ, ಅಂತಹ ಅಖಿಲಜಗತ್ತಿಗೆ ಕಾರಣನಾದವನಿಗೂ ಕಾರಣನೂ, ನಾಶರಹಿತನೂ ಆದಿಪುರುಷನೂ ಆದ ನಾರಾಯಣನಾದ ನಿನ್ನನ್ನು ನಾನು ವಂದಿಸುತ್ತಿದ್ದೇನೆ.' ಎಂದಿದ್ದರೆ,

Rarest Archiver

ಪ್ರ. ಭಾ. ಕೀ. ೫೭ರಲ್ಲಿ-

ಹೇಯಂಬುಜಾಕ್ಷ ನಮೋ ನಮಸ್ತೇ ನಮೊ
ಈ ಎರಡೇಳುಭುವನ ಪ್ರಭೊ ತೇ
ಶ್ರೀಯಾದಿ ಲಕ್ಷ್ಮೀನಾರಾಯಣ ತವನ್ಹಾ
ಭಿಯ ಪದ್ಮದಲಿ ಪೆತ್ತ್ಯಜನ ೨
ನೀನೀಗ ಬೊಮ್ಮನೊಳು ಪೊಗುವೆ ನಾ
ನಾನಂತ ಜಗವ ಪುಟ್ಟಿಸುವೆ
ಅನಾದಿ ಜೀವರ ಕರ್ಮವನು ನೋಡಿ
ನೀನೇ ಗುಣತ್ರಯದಿ ಬಂಧಿಸುವೆ ೩

ಎಂದು ಕೆಲವಂಶಗಳಲ್ಲಿ ವ್ಯತ್ಯಾಸಗೊಂಡಿದೆ. ಶ್ಲೋಕ ೨ರಲ್ಲಿ ದಶೇಂದ್ರಿಯಗಳು, ಪಂಚ ತತ್ವಗಳು, ಈ ಜಗತ್ತಿಗೆ ಕಾರಣವಾದ ಎಲ್ಲವೂ ನಿನ್ನಿಂದಲೇ ಬಂದಿವೆ ಎಂದರೆ, ಪ್ರ.ಭಾ.ದ ಕೀ. ೫೭, ನಂ.೪-೭ರಲ್ಲಿ 'ಸರ್ವೇಂದ್ರಿಯಾರ್ಥದಧಿಕಾರವನ್ನು ಮುಖ್ಯಪ್ರಾಣನಿಗೆ ಕೊಟ್ಟೆ, ಎಲ್ಲ ಸುರರನ್ನು ನಿನ್ನ ಆಜ್ಞೆಯಲ್ಲಿ ಆತನಿಚ್ಛೆಯಲ್ಲಿಟ್ಟೆ. ನೀನೇ ಎಲ್ಲದರ ನಿಯಾಮಕ, ಉಳಿದವರೆಲ್ಲ ನಿನ್ನ ಆಜ್ಞಾನುಸಾರ ವರ್ತಿಸುತ್ತಾರೆ. ಸುರರಿಗೆ ಸ್ವಾತಂತ್ರ್ಯವಿಲ್ಲ. ನೀನೇ ಎಲ್ಲರ ಹೃದಯದಲ್ಲಿರುವೆ. ನಿನ್ನ ಮಾಯೆಯಿಂದ ಮೋಹಿಸುವೆ. ನೀನೇ ಅಜ್ಞಾನವನ್ನು ಕವಿಸುವೆ' ಎಂಬ ದ್ವೈತವಿಚಾರಗಳನ್ನು ಹೇಳಲಾಗಿದೆ. ಶ್ಲೋಕ ೩ರಲ್ಲಿ 'ಬ್ರಹ್ಮಾದಿ ದೇವತೆಗಳೂ ಯಾರೂ ನಿನ್ನ ನಿಜ ಸ್ವರೂಪವನ್ನು ಅರಿಯಲಾರರು' ಎಂದಿರುವುದನ್ನು ನಂ. ೭ರಲ್ಲಿ 'ನಿನ್ನ ಕಾಣದೆಲ್ಲರು ಜಗದ್ಗುರುವೆ' ಎಂದಷ್ಟೇ ಹೇಳಲಾಗಿದೆ.

ಶ್ಲೋಕ ೪-೯ರಲ್ಲಿ ಜನರು ಪರಮಾತ್ಮನನ್ನು ನಾನಾ ವಿಧವಾಗಿ ಭಜಿಸುತ್ತಾರೆ ಎನ್ನುವುದರ ವಿವರವಿದೆ. ಇದು ನಂ. ೭-೯ರಲ್ಲಿ ಕೆಲವು ವ್ಯತ್ಯಾಸಗಳೊಂದಿಗೆ ಬಂದಿದೆ. ಶ್ಲೋಕ ೪ ಹೆಚ್ಚು ವ್ಯತ್ಯಾಸವಿಲ್ಲದೆ ನಂ. ೭ರಲ್ಲಿ ಬಂದಿದ್ದರೆ, ಶ್ಲೋಕ ೫, ೬ ಸಂಗ್ರಹ ಗೊಂಡು ನಂ. ೮ರಲ್ಲಿ ಬಂದಿದೆ. ಶ್ಲೋಕ ೭-೯ರ ವಿವರಗಳು ನಂ. ೯ರಲ್ಲಿ ಸಂಗ್ರಹ ಗೊಂಡಿವೆ. ಶ್ಲೋಕ ೮, ೯ರಲ್ಲಿ 'ಬೇರೆ ಕೆಲವರು ಅನೇಕ ಆಚಾರ್ಯರ ಮಾರ್ಗಭೇದ ದಿಂದ ಭಿನ್ನ ಭಿನ್ನವಾಗಿ ಪರಮ ಶಿವಪ್ರೋಕ್ತವಾದ ಪಾಶುಪತಾದಿ ಮಾರ್ಗಗಳನ್ನೇ ಆಶ್ರಯಿಸಿ ಶಿವಸ್ವರೂಪನಾದ ನಿನ್ನನ್ನೇ ಅಚಲವಾಗಿ ಉಪಾಸನೆ ಮಾಡುವರು. ಯಾರು ಕೆಲವರು ಭೇದಬುದ್ಧಿಯಿಂದ ದೇವತಾಂತರ ಭಕ್ತರಾಗಿದ್ದರೂ ಅವರೆಲ್ಲರೂ ಸರ್ವದೇವತಾ ಮಯನೂ ಜಗದೀಶ್ವರನೂ ಆದ ನಿನ್ನನ್ನೇ ಆರಾಧಿಸುವರು' ಎಂದಿರುವುದನ್ನು ಶ್ಲೋಕ ೭ರ ವಿವರಗಳಿಗೂ ಸೇರಿದಂತೆ ಪ್ರ. ಭಾ. ಕೀ.೫೭ , ನಂ. ೯ರಲ್ಲಿ

ನೀನೇಕರೂಪ ಬಹುರೂಪ ತಿಳಿದು ನಾನಾ ಪ್ರಕಾರದಿ ಭಜಿಪ
ಜ್ಞಾನಿಗಳು ಭೇದಾಭೇದದಲಿ ಅರ್ಚಿಪರು ನಾನಾಚಾರ ಮಾರ್ಗದಲಿ

ಎಂದು ಸಂಗ್ರಹಿಸಿದ್ದಾರೆ. ನಂ. ೧೦ ಮತ್ತು ನಂ. ೧೧ರ ಮೊದಲ ಸಾಲಿನ ವಿವರ ಮೂಲ ದಲ್ಲಿಲ್ಲ. ಶ್ಲೋಕ ೧೦ರಲ್ಲಿ ನದಿಗಳೆಲ್ಲವೂ ಕೊನೆಗೆ ಸಮುದ್ರವನ್ನೇ ಹೋಗಿ ಸೇರುವಂತೆ

Rarest Archiver

ಸಕಲ ವಿಧವಾದ ಜ್ಞಾನೋಪಾಸನಾ ಮಾರ್ಗಗಳೂ ಕೊನೆಗೆ ನಿನ್ನನ್ನೇ ತಲುಪುತ್ತವೆ–ಎಂದಿದ್ದರೆ, ಇಲ್ಲಿ ನು. ೧೧, ೧೨ರಲ್ಲಿ 'ಜ್ಞಾನಿಗಳು ಸುರ ಋಷಿ ಪಿತೃಗಳ ತರ್ಪಣವನ್ನು ನಿನಗೆ ಅರ್ಪಿಸುವರು. ನಿನ್ನವಿನಾ ಅರ್ಚನೆ ಅವಿಧಿ ಎನ್ನುತ್ತಾರೆ. ದೇವತೆಗಳು ನಿನ್ನ ಸೇವಕರು, ಭಯಾನ್ವಿತರು'.ಎಂದು ಒದಲಾಗಿದೆ. ಶ್ಲೋಕ ೧೧–೧೨ರ ವಿವರ ನು. ೧೩, ೧೪ರಲ್ಲಿದೆ. ಶ್ಲೋಕ ೧೩, ೧೪ರಲ್ಲಿರುವ ಭಗವಂತನ ವಿರಾಡ್ರೂಪದ ವರ್ಣನೆ ನು. ೧೫–೧೮ರಲ್ಲಿ ಬಂದಿದೆಯಾದರೂ ಹೇಳಿರುವ ಕ್ರಮದಲ್ಲಿ ವ್ಯತ್ಯಾಸವಿದೆ. ಮೂಲದಲ್ಲಿ 'ಅಗ್ನಿಯು ನಿನ್ನ ಮುಖ, ಭೂಮಿಯು ನಿನ್ನ ಪಾದ, ಸೂರ್ಯನು ನಿನ್ನ ಕಣ್ಣು'–ಹೀಗೆ ಬಂದಿರುವುದನ್ನು 'ನೀನಗ್ನಿ ಮುಖದಿಂದ ಪಡೆದೆ, ನೀ ಪೃಥ್ವಿಯನ್ನು ಅಂಘ್ರಿಯಿಂದ ಪಡೆದೆ, ನೀನಿನನ ನೇತ್ರದಿಂ ಪೆತ್ತೆ' ಇತ್ಯಾದಿಯಾಗಿ ಹೇಳುತ್ತ ಸಾಗಿದ್ದಾರೆ.

ಶ್ಲೋಕ ೧೫, ೧೬ರ ಭಾವ ನಂ. ೧೯–೨೩ರಲ್ಲಿ ವಿಸ್ತರಿಸಿ ಬಂದಿದೆ. ನು. ೨೩ರ ಮೊದಲ ಸಾಲಿನ ವಿವರ ಮೂಲದಲ್ಲಿಲ್ಲದ್ದು. ಆದರೆ ಆ ಸನ್ನಿವೇಶದಲ್ಲಿ ಹೊರತಾಗಿ ನಿಲ್ಲುವ ಅಂಶವಲ್ಲ. ಶ್ಲೋಕ ೧೭–೨೨ರಲ್ಲಿರುವ ದಶಾವತಾರಗಳ ಸ್ತುತಿ ನು. ೨೪–೨೯ರಲ್ಲಿ ಹೆಚ್ಚಿನ ವ್ಯತ್ಯಾಸಗಳಿಲ್ಲದೆ ಬಂದಿದೆ. ಶ್ಲೋಕ ೨೩–೨೯. ಭವಾಬ್ಧಿಯಿಂದ ತನ್ನನ್ನು ದಾಟಿಸು ಎಂದು ಅಕ್ರೂರನು ಪ್ರಾರ್ಥಿಸುವ ಈ ಭಾಗ ನಂ. ೩೦–೪೩ರಲ್ಲಿ ವಿಸ್ತರಿಸಿದೆ. ಇದೂ ಕೂಡ ಮೂಲವನ್ನೇ ಅನುಸರಿಸಿ ಬಂದಿರುವ ವಿಸ್ತರಣೆ ಎನ್ನಬಹುದು. ಉದಾ.ಗೆ ಶ್ಲೋಕ ೨೭ರ ಸಾರಾಂಶವನ್ನು ನು. ೩೫ರಲ್ಲಿ ಕೊಟ್ಟನಂತರ, ನು. ೩೬, ೩೭ ಇದೇ ಭಾವದ ವಿಸ್ತರಣೆಯಾಗಿ ಬಂದಿರುವುದನ್ನು ಗಮನಿಸಬಹುದು.

ಅಧ್ಯಾಯ ೪೧, ಶ್ಲೋಕ ೧–೧೮ರಲ್ಲಿ ಬರುವ ಕೃಷ್ಣ ಅಕ್ರೂರರ ಸಂಭಾಷಣೆ, ಅವರು ಮಧುರೆಗೆ ಬಂದನಂತರ ಅಕ್ರೂರ ಕೃಷ್ಣನನ್ನು ತನ್ನ ಮನೆಗೆ ಆಹ್ವಾನಿಸುವುದು, ಕೃಷ್ಣ ಕಂಸನನ್ನು ಕೊಂದನಂತರ ಬರುವೆನೆಂದು ಹೇಳಿ ಅವನನ್ನು ಕಳಿಸಿ ಮಧುರಾ ಪಟ್ಟಣವನ್ನು ಗೊಲ್ಲರೊಡನೆ ನೋಡಲು ಹೊರಡುವುದು–ಈ ವಿಷಯಗಳು ಕೀ. ೫೮. ನು. ೧–೨೫ರಲ್ಲಿ ಬಂದಿವೆ.

ಪಲ್ಲವಿಯಲ್ಲಿ ಭಕ್ತರ ಬಗ್ಗೆ ದಾಸರ ಅಭಿಪ್ರಾಯ ಒಂದು ಸಾಮಾನ್ಯಾಭಿಪ್ರಾಯದ ರೂಪದಲ್ಲಿ ಬಂದಿದೆ. ನಂ.೧ರಲ್ಲಿ ಶ್ಲೋಕ ೧ರ ವಿಚಾರವೇ ಬಂದಿದೆಯಾದರೂ ಮೂಲದ'ವೇಷಧಾರಿ ನಟ'ನ ಉಪಮೆಯನ್ನು ಕೈಬಿಡಲಾಗಿದೆ.ನಂ.೩ರ ವಿವರ ಮೂಲದಲ್ಲಿಲ್ಲ. ಶ್ಲೋಕ ೩–೫ರ ಭಾಗದಲ್ಲಿ ನಂ. ೪–೭ಬಂದಿದೆಯಾದರೂ ಇಲ್ಲಿಯು ಅಕ್ರೂರನ ಮಾತುಗಳಲ್ಲಿ ವ್ಯತ್ಯಾಸಗಳಿವೆ. ಶ್ಲೋಕ ೭ರಲ್ಲಿ ಬಲರಾಮ ಕೃಷ್ಣರು ಮಧುರೆಗೆ ಪ್ರಯಾಣ ಮಾಡುವಾಗ ದಾರಿಯುದ್ದಕ್ಕೂ ಬಂದು ನೆರೆದಿದ್ದ ನೆರೆಹೊರೆಯ ಹಳ್ಳಿಯ ಜನರು ಬಲರಾಮಕೃಷ್ಣರನ್ನು ನೋಡಿ ಸಂತೋಷಗೊಂಡು, ಅವರೆಷ್ಟು ದೂರ ಹೋದರೂ ಅವರಿಂದ ಕಣ್ಣು ಕೀಳಲಾರದಾದರು ಎಂದಿದ್ದರೆ, ಪ್ರ.ಭಾ.ದ ಕೀ. ೫೮, ನಂ. ೮ರ ಉತ್ತರಾರ್ಧದಿಂದ ನು. ೯ರ ಪೂರ್ವಾರ್ಧದಲ್ಲಿ,

Rarest Archiver

ಆ ಗುಣನಿಧಿ ವಸುದೇವನ ತನಯನ ಆಗಮನವನು ಕಂಡೊಡನೆ ೮

ಆಗತೆರು ಗ್ರಾಮಗ್ರಾಮದವರು ಬಂದು ಬಾಗಿ ತಲೆಯ ಸ್ತೋತ್ರಮಾಡಿ ೯

ಎಂದು ಬದಲಾಗಿರುವಲ್ಲಿ ದಾಸರ ಮನೋಧರ್ಮದ ಪ್ರಕಟಣೆಯಾಗಿರುವುದನ್ನು ನೋಡಬಹುದು.

ಶ್ಲೋಕ ೮–೧೮ರ ವಿವರಗಳು ನಂ. ೯ರ ಉತ್ತರಾರ್ಧದಿಂದ ನಂ. ೨೦ರಲ್ಲಿ ಹೆಚ್ಚಿನ ವ್ಯತ್ಯಾಸಗಳಿಲ್ಲದೆ ಬಂದಿವೆ. ನಂ.೧೨ರ ಉತ್ತರಾರ್ಧದ ಮಾತುಗಳು ಮೂಲದಲ್ಲಿಲ್ಲ. ಹೀಗೆಯೇ ನಂ. ೧೭ರ ಅಕ್ರೂರನ ಮಾತುಗಳೂ ಶ್ಲೋಕ ೧೨ರ 'ನಮ್ಮನ್ನು ಸನಾಥರನ್ನಾಗಿ ಮಾಡು' ಎಂಬುದರ ವಿಸ್ತರಣೆಯಾಗಿವೆ. ಮೂಲದಲ್ಲಿಲ್ಲದ ಆದರೆ ಸಂದರ್ಭಕ್ಕೆ ಹೊಂದುವಂಥ ಮಾತುಗಳನ್ನು ಇಂಥಲ್ಲೆಲ್ಲ ಜೋಡಿಸಿರುವುದು ಕಂಡುಬರುತ್ತದೆ. ನಂ. ೨೨ರವಿಷಯ ಮುಂದಿನ ಕೀ.ಯಲ್ಲಿ ಪುನರುಕ್ತಗೊಳ್ಳುತ್ತದೆ. ನಂ. ೨೩ ಸಂದರ್ಭಕ್ಕೆ ಹೊಂದುವಂತಿರುವುದಾದರೂ ಮೂಲದಲ್ಲಿಲ್ಲ. ನಂ. ೨೪, ೨೫ ನೇರವಾಗಿ ದಾಸರ ನುಡಿಗಳು, ಕೀರ್ತನೆಯ ಕೊನೆಯ ಫಲಶ್ರುತಿಯಾಗಿ ಬಂದಿವೆ. ನಂ. ೨೪ರಲ್ಲಿ ದಾಸರು ತಮ್ಮ ಈ ಭಾಗವತ ಕೃತಿಯನ್ನು 'ಶೋಭಿತ ಪ್ರಾಕೃತ ಪದ' ಎಂದು ಕರೆದುಕೊಂಡಿದ್ದಾರೆ.

ಶ್ಲೋಕ ೧೯–೩೦ರಲ್ಲಿ ಬಲರಾಮ, ಕೃಷ್ಣ ಹಾಗೂ ಗೋಪಾಲಕರು ಮಥುರಾ ನಗರಿಯಲ್ಲಿ ಸುತ್ತಾಡಿದುದರ ವರ್ಣನೆ ಇದೆ. ಈ ಭಾಗ ಕೀ. ೫೯, ನಂ. ೧-೧೪ರಲ್ಲಿ ಬಂದಿದೆ. ವಿವರಗಳಲ್ಲಿ ಕೆಲವು ಆಚೀಚೆ ಬಂದಿದ್ದರೂ ಒಟ್ಟಿನಲ್ಲಿ ಮೂಲವನ್ನೇ ಅನುಸರಿಸಿರುವುದು ಕಾಣಿಸುತ್ತದೆ. ಶ್ಲೋಕ ೩೧ರ ವಿಚಾರ ನಂ. ೧೫ರ ಮೊದಲ ೨ ಸಾಲುಗಳಲ್ಲಿ ಬಂದಿದೆಯಾದರೂ, ಹಾಗೆ ಮಾತನಾಡಿಕೊಳ್ಳುತ್ತಿದ್ದವರು 'ಪಟ್ಟಣಿಗರು' ಎನ್ನುವುದು ಇಲ್ಲಿ ಸ್ಪಷ್ಟವಾಗುವುದಿಲ್ಲ.

ಶ್ಲೋಕ ೩೧-೩೯ ರಲ್ಲಿ ರಜಕನ ವಧೆಯನ್ನು ವಿವರಿಸಲಾಗಿದೆ. ಇದು ಕೀ. ೫೯, ನಂ. ೧೫ರ ಕೊನೆಯ ಸಾಲಿನಿಂದ ನಂ.೧೯ರವರೆಗೆ ಹೆಚ್ಚಿನ ವ್ಯತ್ಯಾಸಗಳಿಲ್ಲದೆ ಬಂದಿದೆ. ಶ್ಲೋಕ ೪೦-೪೨ರಲ್ಲಿ ರಾಮಕೃಷ್ಣರನ್ನು ಅಲಂಕರಿಸಿದ ನೇಕಾರನನ್ನು ಅನುಗ್ರಹಿಸಿದ ವಿವರಗಳಿವೆ. ಈ ಭಾಗ ಪ್ರ.ಭಾ.ದ ಕೀ. ೫೯, ನಂ. ೨೦, ೨೧ರಲ್ಲಿ ಸಂಗ್ರಹಗೊಂಡಿದೆ. ಶ್ಲೋಕ ೪೩-೫೨ರಲ್ಲಿ ಹೂಗಾರ ಸುದಾಮನಿಂದ ಪೂಜಿತನಾದ ಕೃಷ್ಣ ಆತನನ್ನು ಅನುಗ್ರಹಿಸಿದ ಪ್ರಸಂಗ ವರ್ಣಿತವಾಗಿದೆ. ಈ ಭಾಗ ಕೀ. ೫೯, ನಂ. ೨೨-೨೯ ರಲ್ಲಿ ಕೆಲವು ವ್ಯತ್ಯಾಸಗಳೊಂದಿಗೆ ಬಂದಿದೆ.

ನಂ. ೨೫ ರಲ್ಲಿಯ 'ಕರ್ಮಾನುಸಾರದ ಫಲವು, ತಮ ತಮ್ಮ ಯೋಗ್ಯತೆಯಂತೆ ಕರ್ಮವ ಮಾಡ್ವುಂಬರು' ಎಂಬ ದ್ವೈತ ತತ್ವಗಳು ಮೂಲದ ಸುದಾಮನ ಮಾತುಗಳಲ್ಲಿಲ್ಲ.

ಶ್ಲೋಕ ೪೮ ರಲ್ಲಿ ಸುದಾಮ 'ನಾನು ನಿಮಗೆ ಯಾವ ಸೇವೆಯನ್ನು ಮಾಡಲಿ ? ಸೇವಕನಾದ ನನಗೆ ಅಪ್ಪಣೆ ಮಾಡಬೇಕು' ಎಂದಿರುವುದನ್ನು ಕೀ. ೫೯, ನಂ. ೨೬ರಲ್ಲಿ

Rarest Archiver

ನಿಮ್ಮ ಭೃತ್ಯ ಭೃತ್ಯ ಭೃತ್ಯರ ಪರಿಚಾರಕ ನಾ ಸನ್ಮಾರ್ಗದಿ ಸಿಕ್ಕಿಸೆನ್ನನು
ನಿಮ್ಮ ವೈಷ್ಣವ ಜನರ ಶುದ್ಧೋತ್ತಮರ ಸೇವೆಯುಲಿನ್ನಿಟ್ಟು
ದುರ್ಮತಿಯ ಬಿಡಿಸಯ್ಯ ಶ್ರೀ ರಮ್ಮೆಯುಳ ರಮಣನೆ

ಎಂದು ವಿಸ್ತರಿಸಲಾಗಿದೆ.

ಶ್ಲೋಕ ೫೦ರಲ್ಲಿ ರಾಮಕೃಷ್ಣರು ಅವನಿಗೆ ವರಗಳನ್ನು ನೀಡಿದರು ಎಂಬ ವಿಚಾರವಿದೆ. ಹಾಗೆಯೇ ಶ್ಲೋಕ ೫೧ರಲ್ಲಿ ಸುದಾಮ ಭಗವಂತನಲ್ಲಿ ನಿಶ್ಚಲ ಭಕ್ತಿ ಪ್ರೇಮಂಗಳನ್ನೂ, ಸರ್ವಭೂತಗಳಲ್ಲಿ ದಯೆಯನ್ನೂ ವರವಾಗಿ ಕೊಡುವಂತೆ ಕೇಳಿಕೊಳ್ಳುತ್ತಾನೆ. ಶ್ಲೋಕ ೫೨ರಲ್ಲಿ ಕೃಷ್ಣ ಅವನಿಗೆ ವಂಶಪಾರಂಪರ್ಯವಾಗಿ ಬಲ, ಆಯುಷ್ಯ, ಕೀರ್ತಿ, ಕಾಂತಿ ಎಂಬ ವರಗಳನ್ನು ಕೊಟ್ಟು ಬಲರಾಮನೊಂದಿಗೆ ಅಲ್ಲಿಂದ ತೆರಳುತ್ತಾನೆ. ಶ್ಲೋಕ ೫೦-೫೨ರ ಈ ವಿವರಗಳಿಗೆ ಬದಲಾಗಿ ಕೀ. ೫೪ರ ನಂ. ೨೮ರಲ್ಲಿ 'ಶ್ರೀ ಮಧ್ರು ಮಾರವಣ ಮುಕ್ತಿಧಾಮದಲ್ಲಿ ಅವನ ತನ್ನ ದಾಮಕರ್ತನ ಮಾಡಿದ' ಎಂದಷ್ಟೇ ಬಂದಿದೆ. ನಂ. ೨೯ ಹರಿಭಕ್ತರ ಸ್ತುತಿಯಾಗಿದ್ದು, ದಾಸರ ಸ್ವಂತ ಸೃಷ್ಟಿಯಾಗಿದೆ. ಸುದಾಮನ ಉದಾ.ಯ ಮೇಲೆ ದಾಸರ ಅಭಿಪ್ರಾಯದ ಮಂಡನೆಯಾಗಿ ಬಂದಿದೆ.

ಅ. ೪೨, ಶ್ಲೋಕ ೧-೩೮ರಲ್ಲಿ ಕುಬ್ಜೆಗೆ ಅನುಗ್ರಹ ಹಾಗೂ ಶಿವಧನುರ್ಭಂಗಗಳು ವರ್ಣಿತವಾಗಿವೆ. ಶ್ಲೋಕ ೧-೧೩ರಲ್ಲಿ ಕಂಸನ ದಾಸಿಯಾದ ಕುಬ್ಜೆ ಬಲರಾಮಕೃಷ್ಣರಿಗೆ ಗಂಧವನ್ನು ಕೊಟ್ಟು ಅವರ ಅನುಗ್ರಹಕ್ಕೆ ಪಾತ್ರವಾದ ಪ್ರಸಂಗ ವರ್ಣಿತವಾಗಿದೆ. ಈ ಭಾಗ ಪ್ರ.ಭಾ.ದ ಕೀ. ೬೦, ನಂ. ೧-೧೫ರಲ್ಲಿ ಕೆಲವು ವ್ಯತ್ಯಾಸಗಳೊಡನೆ ಬಂದಿದೆ.

ಪಲ್ಲವಿಯಲ್ಲೇ ಕುಬ್ಜೆಯ ಭಾಗ್ಯ ಯೋಗ್ಯತೆಗಳ ಪ್ರಸ್ತಾಪ ಬಂದಿದೆ. ಶ್ಲೋಕ ೧ರಲ್ಲಿ ರಾಜಮಾರ್ಗದಲ್ಲಿ ಹೋಗುತ್ತಿದ್ದ ಕೃಷ್ಣ, ಗಂಧದ ಬಟ್ಟಲನ್ನು ಕೈಯಲ್ಲಿ ಹಿಡಿದುಕೊಂಡು ಹೋಗುತ್ತಿದ್ದ ಕುಬ್ಜೆಯನ್ನು ನೋಡಿ ಮಾತನಾಡಿಸಿದ ಎಂದಿದ್ದರೆ, ಇಲ್ಲಿ ನಂ. ೧ರಲ್ಲಿ 'ರಾಜಮಾರ್ಗದಿ ನಿಂತ ತ್ರಿವಕ್ರೆ'ಯನ್ನು ಮಾತನಾಡಿಸಿದ ಎಂದಿದೆ. ಅಲ್ಲದೆ ಮೂಲದಲ್ಲಿ ಬರುವ ಕುಬ್ಜೆಯ ಆಕಾರದ ವರ್ಣನೆ ಇಲ್ಲಿ ಲುಪ್ತವಾಗಿದೆ. ಶ್ಲೋಕ ೨ ರ ಸಾರಾಂಶ ನಂ. ೨ರಲ್ಲಿದೆಯಾದರೂ 'ನಿನ್ನ ಪತಿ ಯಾರು' ಎಂಬ ಮಾತು ಪ್ರ.ಭಾ.ದಲ್ಲಿ ಹೆಚ್ಚಾಗಿ ಬಂದಿದೆ. ಶ್ಲೋಕ ೩ರಲ್ಲಿ 'ಕಂಸನಿಗಾಗಿ ತಯಾರಿಸಿದ ಈ ಗಂಧವನ್ನು ಪೂಸಿಕೊಳ್ಳಲು ನಿಮ್ಮಿಬ್ಬರನ್ನು ಬಿಟ್ಟು ಬೇರೆ ಯಾರು ಅರ್ಹರು' ಎಂಬರ್ಥದಲ್ಲಿ ಕುಬ್ಜೆಯ ಮಾತುಗಳಿದ್ದರೆ, ಕೀ. ೬೦, ನಂ, ೩ರಲ್ಲಿ 'ತವಸಮ್ಮತ ದಾಸಿನಾ....ಕಂದರ್ಪ ನಿನ್ನಿಂದಾರು ಪ್ರಿಯರೆಂದಳು' ಎಂದು ಬದಲಾಗಿದೆ.

ಶ್ಲೋಕ ೪-೬ರ ಸಾರಾಂಶ ನಂ. ೪, ೫ರಲ್ಲಿ ಬಂದಿದೆ. ಶ್ಲೋಕ ೬ರಲ್ಲಿ 'ಗೂನಿಯಾದ ಆಕೆಯನ್ನು ಸಮಶರೀರೆಯಾಗಿ ಮಾಡಲು ಮನಸ್ಸು ಮಾಡಿದನು' ಎಂದಿರುವುದನ್ನು, ನಂ. ೫ರಲ್ಲಿ 'ಕುಬ್ಜೆಯ ಮೂರು ಡೊಂಕ ತಿದ್ದಿದನು ಮುರಾರ್ದ ಮಂಕುಂದ' ಎಂದು ಬದಲಿಸಲಾಗಿದೆ. ನಂ. ೬,೭ರಲ್ಲಿ ಭಗವತ್ಕೃಪೆಯ ಬಗೆಗೆ ದಾಸರ ಅಭಿಪ್ರಾಯ

Rarest Archiver

ಗಳಿವೆ. ಶ್ಲೋಕ ೭, ೮ರ ಸಾರ ನು. ೮, ೯ರಲ್ಲಿ ಬಂದಿದೆಯಾದರೂ ಅಲ್ಲಿ ಆ ಯುವತಿ ಕೃಷ್ಣಸ್ಪರ್ಶದಿಂದ ಸುಂದರಳಾಗಿ ಕಂಡರೆ, ಇಲ್ಲಿ 'ಶಕ್ರಾಂಗನೆಯಂತೆ ತೋರ್ದಳಾಗೆ' ಎಂಬ ಉಪಮೆ ಬಂದಿದೆ. ಶ್ಲೋಕ ೯-೧೧ರ ಭಾಗ ನು. ೧೦-೧೨ರಲ್ಲಿ ಹೆಚ್ಚು ವ್ಯತ್ಯಾಸವಿಲ್ಲದೆ ಬಂದಿದೆ. ಶ್ಲೋಕ ೧೨-೧೪ರ ವಿವರಗಳು ನು. ೧೩-೧೫ರಲ್ಲಿ ವ್ಯತ್ಯಾಸಗೊಂಡಿವೆ.

ಕೀ. ೬೧ರ ಪಲ್ಲವಿ ಮುಂದಿನ ಶಿವಧನುರ್ಭಂಗದ ಘಟನೆಯನ್ನು ಕುರಿತ ದಾಸರ ಅಭಿಪ್ರಾಯವನ್ನು ಸೂಚಿಸುವಂತಿದೆ. ಶ್ಲೋಕ ೧೫-೧೮ ರಲ್ಲಿ ಶಿವಧನುವಿದ್ದಲ್ಲಿಗೆ ರಾಮ ಕೃಷ್ಣರು ಹೋಗಿ ಧನುರ್ಭಂಗ ಮಾಡುವ ವಿಚಾರ ವರ್ಣಿತವಾಗಿದೆ. ಮುರಿದ ಧನುಸ್ಸಿನ ಧ್ವನಿಯನ್ನು ಕೇಳಿ ಕಂಸ ನಡುಗುತ್ತಾನೆ. ಈ ಭಾಗ ಕೀ. ೬೧ರ ನು. ೧-೫ರಲ್ಲಿ ಕೆಲವು ವ್ಯತ್ಯಾಸಗಳೊಂದಿಗೆ ಬಂದಿದೆ. ಇಲ್ಲಿ ದಾಸರು ನು. ೨ರ ' ನೊರಜುಗಳಿಗೆ ಅಂಜಿ ಉರಿ ಹಿಂದಕಾಗ್ವದೆ', ನು. ೩ರ 'ವಿಶ್ವೈಕ ಶಾಸ್ತ್ರಾರ', ನು. ೪ರ 'ಗರ್ಜಿಸಿತು ಛಟ್ ಛಟ್ ಸಿಡಿಲುಗಳವೋಲು ನಿರ್ಜೀವರಂತೆ ಜನರ ಕಾಂತಿ ಹೋಗೆ' ಇತ್ಯಾದಿ ಮೂಲದಲ್ಲಿಲ್ಲದ ಉಪಮೆ ವಿಶೇಷಣಗಳನ್ನು ಬಳಸುವ ಮೂಲಕ ಆ ಘಟನೆಗೆ ಇನ್ನಷ್ಟು ಜೀವಂತಿಕೆಯನ್ನು ತರಲು ಯತ್ನಿಸಿದ್ದಾರೆ.

ಶ್ಲೋಕ ೧೯-೨೬ರ ವಿವರಗಳು ನು. ೬-೧೨ರಲ್ಲಿ ಬಂದಿವೆ. ಇಲ್ಲಿಯೂ ನು. ೭ ರಲ್ಲಿ ಬರುವ 'ಒರಳಿಗಿಕ್ಕಿದ ಧಾನ್ಯದಂತೆ... ಮಾಡಿದರಾಕ್ಷಣ' ಎಂಬ ಉಪಮೆ ಮೂಲದಲ್ಲಿಲ್ಲ. ಶ್ಲೋಕ ೨೨ರ ವಿವರ ನು. ೮-೧೦ರಲ್ಲಿ ವಿಸ್ತರಿಸಿದೆ. ಹಾಗೆಯೇ ಶ್ಲೋಕ ೨೪ರ ವಿಚಾರ ಪ್ರ.ಭಾ.ದಲ್ಲಿ ಲೋಪಗೊಂಡಿದೆ. ನು. ೧೩ರಲ್ಲಿ ಹೆಚ್ಚಿನ ಕೀ.ಗಳ ಅಂತ್ಯದಲ್ಲಿಯಂತೆ ಕೃಷ್ಣಸ್ತುತಿ ಇದೆ.

ಶ್ಲೋಕ ೨೬-೩೮ ರಲ್ಲಿ ಕಂಸ ಉತ್ಪಾತಗಳನ್ನು ಕಂಡು ಭಯಗೊಂಡು ಆ ರಾತ್ರಿಯನ್ನು ಕಳೆದದ್ದು, ಮಾರನೆಯ ದಿನ ಮಲ್ಲಯುದ್ಧದ ಸಿದ್ಧತೆಗಳು ನಡೆದು ಎಲ್ಲರೂ ಆ ಸ್ಥಳದಲ್ಲಿ ಬಂದು ಸೇರುವುದರ ವಿವರಗಳಿವೆ. ಈ ಭಾಗ ಕೀ. ೬೨, ನು. ೧-೧೦ರಲ್ಲಿ ಹೆಚ್ಚು ವ್ಯತ್ಯಾಸಗಳಿಲ್ಲದೆ ಬಂದಿದೆಯಾದರೂ, ಶ್ಲೋಕ ೩೫ರ 'ಹೃದಯೇನ ವಿದೂಯತಾ' ಎನ್ನುವುದು, ಇಲ್ಲಿ—

> ಹೋದ ತೇಜಾಗ್ನಿಯಂತಿದ್ದನು ರಾಜೇಂದ್ರ ಶ್ರೀಧರನ ದ್ರೋಹದಿ
> ಕೈದು ತಗಲಿದಂದದೆದೆದಿಗಿಲಿನಲಿ ನಾದಿದ ದುಶ್ಚಿತ್ತದಿ (ನು. ೮)

ಎಂದು ಬದಲಾಗಿ ಖಿನ್ನ ಕಂಸನ ಚಿತ್ರವನ್ನು ಇನ್ನಷ್ಟು ಸಮರ್ಥವಾಗಿ ಕೊಡುತ್ತದೆ. 'ಶ್ರೀಧರನ ದ್ರೋಹದಿ' ಎಂದು ಹೇಳುವ ದಾಸರ ದೃಷ್ಟಿಯೂ ಇಲ್ಲಿ ಸ್ಪಷ್ಟವಾಗಿದೆ. ಶ್ಲೋಕ ೩೬ ರಲ್ಲಿ ಬರುವ 'ವಾದ್ಯಮಾನೇಷು ತೂರ್ಯೇಷು ಮಲ್ಲತಾಲೋತ್ತರೇಷು', ಇಲ್ಲಿ ' ಸಂಗೀತ ತುತ್ತೂರಿ ತಾಳ ಜಾಗಟೆ ಬಿರುದಂಗಳ ಚಾಣೂರ....' ಎಂದು ಬದಲಾಗಿದೆ. ನು. ೧೧-೧೩ ರಲ್ಲಿರುವ ಕೃಷ್ಣಸ್ತುತಿ ಮೂಲದಲ್ಲಿಲ್ಲ. ಈ ಕೃಷ್ಣಚರಿತೆಯ ಬಗ್ಗೆ ದಾಸರಿಗಿರುವ ಹೆಚ್ಚಿನ ಪ್ರೀತಿ ಈ ೧೩ನೆಯ ನುಡಿಯಲ್ಲಿಯೂ ವ್ಯಕ್ತವಾಗಿದೆ.

Rarest Archiver

ಅಧ್ಯಾಯ ೪೩, ಶ್ಲೋಕ ೧-೩೦ ರಲ್ಲಿ ಕುವಲಯಾಪೀಡವೆಂಬ ಕಂಸನ ಆನೆಯನ್ನು ವಧಿಸಿ ರಂಗಮಂಟಪಕ್ಕೆ ಬಂದ ರಾಮಕೃಷ್ಣರನ್ನು ಕಂಡು ಜನರು ಅವರ ಲೀಲೆಗಳನ್ನು ಸ್ಮರಿಸುತ್ತಾರೆ. ಈ ಭಾಗ ಪ್ರ.ಭಾ.ದ ಕೀ. ೬೩ರ ನು. ೧-೧೯ರಲ್ಲಿ ವರ್ಣಿತವಾಗಿದೆ.

ಇಲ್ಲಿ ದಾಸರು ಪಲ್ಲವಿಯಲ್ಲಿಯೇ ಗಜವನ್ನು, ಅಷ್ಟದಿಗ್ಗಜಗಳನ್ನು, ಗಜವದನ ಜನಕನಾದ ಶಿವನನ್ನು ಪಾಲಿಸುವ, ಗಜರಿಪುವಾದ ಸಿಂಹದ ಮುಖವನ್ನೇ ಹೊಂದಿರುವ ಹರಿಗೆ ಈ ಕುವಲಯಾಪೀಡವೆಂಬ ಗಜ ದೊಡ್ಡದೆ ? ಎಂದು ಹೇಳಿ ಮುಂದಾಗುವುದರ ಸೂಚನೆಯನ್ನು ಕೊಟ್ಟಿದ್ದಾರೆ. ಮೂಲದಲ್ಲಿ ಇಂಥ ಮಾತುಗಳು ಮೊದಲಿಗೇ ಸಾಮಾನ್ಯವಾಗಿ ಬರುವುದಿಲ್ಲ. ಈ ಭಾಗದಲ್ಲಿ ಕುವಲಯಾಪೀಡದ ವಧೆಯು ಕೆಲವೆಡೆಗಳಲ್ಲಿ ಮೂಲವನ್ನು ಯಥಾವತ್ತಾಗಿ ಅನುಸರಿಸಿದ್ದರೆ,ಕೃಷ್ಣಲೀಲೆಗಳನ್ನು ಹೇಳುವಲ್ಲಿ ಕೆಲವೆಡೆ ಸಂಗ್ರಹಿಸಿದ್ದಾರೆ. ನು. ೯ರ ರಾಮಕೃಷ್ಣರು 'ನೀಲಾದ್ರಿ ರಜತಾದ್ರಿ'ಯಂತೆ ತೋರಿದರು ಎಂಬ ಉಪಮೆ ಮತ್ತು ನು. ೧೮ರ ಮೊದಲ ೨ ಸಾಲುಗಳ ವಿಚಾರ ಮೂ.ಭಾ.ದಲ್ಲಿಲ್ಲ. ಶ್ಲೋಕ ೨೫-೨೭ರ ಸಾರಾಂಶವಾಗಿ ನು. ೧೬ ಬಂದಿದೆ. ನು.೧೯ ಕೂಡ ಮೂಲದ ಶ್ಲೋಕ ೩೧ ರಿಂದ ಭಿನ್ನವಾಗಿ ಆದರೆ ಸಂದರ್ಭಕ್ಕೆ ಉಚಿತವಾಗಿ ಬಂದಿದೆ.

ಶ್ಲೋಕ ೩೧-೪೦ರಲ್ಲಿ ಚಾಣೂರ ಕೃಷ್ಣರ ಸಂಭಾಷಣೆ ಬರುತ್ತದೆ. ಈ ಭಾಗ ಕೀ. ೬೪, ನು. ೧-೬ ರಲ್ಲಿ ಬಂದಿದೆ. ಕೀ. ೬೪ರ ಪಲ್ಲವಿ ಚಾಣೂರನ ಬಗ್ಗೆ ದಾಸರ ಅಭಿಪ್ರಾಯ ಏನಿದೆ ಎನ್ನುವುದನ್ನು ಸ್ಪಷ್ಟಪಡಿಸುತ್ತದೆ—

ಮಧುಕೈಟಭಮರ್ದಕನೊಳು ಚಾಣೂರ ಮೆದಸೊಕ್ಕಿ ಕಾದುವೆನೆಂದು
ವದಿಸಿದ ರಂಗದಿ ರಂಗನೊಡನೆ ತಾ ಬದುಕಬಲ್ಲನೆ ಹೇಳಿಂದು ಪ.

ಇದೇ ದೃಷ್ಟಿಯ 'ಕಲಿ ಚಾಣೂರ ಪಾಪಭಾಜ' (ನು. ೧),'ಗೆಲುವುಂಟೆ....ಇಳೆದಿವಿಯಲಿ ಸಟೆಯೆಂದ' (ನು. ೬ರ ೨ನೆಯ ಸಾಲು) ಎಂಬ ಮಾತುಗಳು ಮೂಲದಲ್ಲಿಲ್ಲ. ಇಂಥ ಕೆಲವು ವ್ಯತ್ಯಾಸಗಳಿದ್ದರೂ ಈ ಭಾಗ ಒಟ್ಟಿನಲ್ಲಿ ಮೂಲವನ್ನು ಅನುಸರಿಸಿ ಬಂದಿದೆ ಎಂದು ಹೇಳಬಹುದು.

ಅಧ್ಯಾಯ ೪೪, ಶ್ಲೋಕ ೧-೩೦ ರಲ್ಲಿ ಕೃಷ್ಣಬಲರಾಮರಿಂದ ಚಾಣೂರ ಮುಷ್ಟಿಕರ ವಧೆಯಾಗುವುದನ್ನು ವರ್ಣಿಸಲಾಗಿದೆ. ಈ ಭಾಗ ಕೀ. ೬೪, ನಂ. ೭–೨೪ ರಲ್ಲಿ ಕೆಲವು ಸಣ್ಣ ವ್ಯತ್ಯಾಸಗಳೊಡನೆ ಬಂದಿದೆ.

ನು. ೮ರಲ್ಲಿ ಬರುವ 'ಹೆಮ್ಮದ್ದಾನೆಯ ತೆರದಲಿ' ಎಂಬ ಉಪಮೆ ಮೂಲದಲ್ಲಿಲ್ಲ. ಹಾಗೆಯೇ ಶ್ಲೋಕ ೧೯ರ ವಿವರಗಳು ಪ್ರ.ಭಾ.ದಲ್ಲಿಲ್ಲ. ಶ್ಲೋಕ ೨೪ರ 'ಇಂದ್ರಧ್ವಜ', ನು. ೨೨ ರಲ್ಲಿ 'ಸುರವರ ಚಾಪ' ಎಂದಾಗಿದೆ. ಶ್ಲೋಕ ೨೯ರ 'ಉಳಿದೆಲ್ಲ ಜಟ್ಟಿಗಳು' ಎನ್ನುವುದು, ಇಲ್ಲಿ 'ನೊರಜು ಮಲ್ಲರು' (ನು. ೨೪) ಎಂದಾಗಿದೆ.

ಶ್ಲೋಕ ೩೧ರಲ್ಲಿ ಬಲರಾಮಕೃಷ್ಣರ ಸಾಹಸಕಾರ್ಯದಿಂದ ಕಂಸನೊಬ್ಬನನ್ನು

Rarest Archiver

ಬಿಟ್ಟು ಉಳಿದ ಎಲ್ಲ ಜನರೂ ಸಂತೋಷಗೊಂಡರು, ಸಜ್ಜನರಾದ ಬ್ರಾಹ್ಮಣೋತ್ತಮರೆಲ್ಲರೂ ಸಾಧು ಸಾಧು ಎಂದು ಶ್ಲಾಘಿಸಿದರು ಎಂದಿದ್ದರೆ, ನಂ. ೨೫ರ ೨ ಸಾಲುಗಳಲ್ಲಿ–

ಶಿಷ್ಟರು ಕಂಡರಕ್ಲಿಷ್ಟರ ಕರ್ಮಕೆ ತುಷ್ಟಿಸಿ ಸಾಧು ಸಾಧು ಎನುತ
ದುಷ್ಟಕಂಸನ ಸಂಬಂಧಿಗಳೆಲ್ಲರು ಕಷ್ಟಿಸಿದರು ಬಳಲುತ

ಎಂದು ಸರಿಯಾಗಿಯೇ ಬದಲಾಗಿದೆ. ಶ್ಲೋಕ ೩೨ರ ಸಾರಾಂಶ ನಂ. ೨೫ರ ಕೊನೆಯ ಎರಡು ಸಾಲುಗಳಲ್ಲಿ ಬಂದಿದೆ. ನು. ೨೬ರಲ್ಲಿ ಕಂಸನ ಬಗ್ಗೆ ಬರುವ ಮಾತುಗಳು ಮೂಲದಲ್ಲಿಲ್ಲ. ಶುಕಮುನಿ ಪರೀಕ್ಷಿತನಿಗೆ ಹೇಳಿದ ಈ ದಿವ್ಯಕಥೆಯ ಬಗ್ಗೆ ದಾಸರಿಗಿರುವ ಅಭಿಮಾನ ಅನೇಕ ಕಡೆಗಳಲ್ಲಿಯಂತೆ ನು. ೨೬ರಲ್ಲಿಯೂ ವ್ಯಕ್ತವಾಗಿದೆ.

ಶ್ಲೋಕ ೩೩–೫೨. ಕಂಸವಧೆಯ ಚಿತ್ರಣವಿರುವ ಈ ಭಾಗ ಕೀ. ೬೫, ನಂ. ೧–೨೨ರಲ್ಲಿ ಬಂದಿದೆ. ಕೃಷ್ಣನಿಂದ ಕಂಸವಧೆಯಾಗುವುದನ್ನು ನು.೧ರಲ್ಲೇ ಹೇಳಿ, ಆ ಪ್ರಸಂಗದ ವಿವರಗಳನ್ನು ಮೂಲವನ್ನನುಸರಿಸಿ ಮುಂದಿನ ನುಡಿಗಳಲ್ಲಿ ಕೊಡಲಾಗಿದೆ.

ಶ್ಲೋಕ ೩೩–೪೦ರಲ್ಲಿಯ ಕಂಸವಧೆಯ ವಿವರಗಳು ನು. ೨–೯ರಲ್ಲಿ ಹೆಚ್ಚು ವ್ಯತ್ಯಾಸವಿಲ್ಲದೆ ಬಂದಿವೆ. ಆದರೆ ಶ್ಲೋಕ ೪೧ರಲ್ಲಿ 'ಕಂಸನು ಮೃತ್ಯುಭಯದಿಂದ ಚಕ್ರಧಾರಿ ಕೃಷ್ಣನನ್ನು ಯಾವಾಗಲೂ ನೋಡುತ್ತಿದ್ದುದರಿಂದ ಸಾರೂಪ್ಯವನ್ನೇ ಹೊಂದಿದನು' ಎಂದಿದ್ದರೆ, ದಾಸರು ನು. ೧೧ರಲ್ಲಿ–

ಬಲು ಪಟುತರಾಭ್ಯಾಸದ ಬಲದಿಂದ ಭೃಗು ಮುನೀಂದ್ರ
ಲಲಿತಗತಿಗೈದಿದ ಮಹಾತ್ಮ
ಸಲೆ ಹರಿಯ ವೈರಭಾವ ಬಲಿದ ಪಾಪಿ ಕಾಲನೇಮಿ
ನಿಲದೆ ತಮಸಕೈದಿದ ದುರಾತ್ಮ

ಎಂದು ಕಂಸನನ್ನು ನರಕಕ್ಕೇ ಕಳಿಸಿಬಿಟ್ಟಿದ್ದಾರೆ. ಇದು ಈ ಭಾಗದಲ್ಲಿ ಕಾಣುವ ಪ್ರಮುಖ ವ್ಯತ್ಯಾಸವಾಗಿದೆ. ಹಾಗೆಯೇ ಇಲ್ಲಿ ಬರುವ ಭೃಗುಮುನಿಯ ಪ್ರಸ್ತಾಪವೂ ಮೂಲದಲ್ಲಿಲ್ಲ.

ಶ್ಲೋಕ ೪೨–೫೨ರಲ್ಲಿ ಬರುವ ಕಂಸವಧೆಯ ಅನಂತರದ ವಿವರಗಳು ನಂ. ೧೨–೨೩ರಲ್ಲಿ ಮೂಲವನ್ನನುಸರಿಸಿ ಬಂದಿದ್ದರೂ ಅಲ್ಲಲ್ಲಿ ಸಣ್ಣ ಸಣ್ಣ ವ್ಯತ್ಯಾಸಗಳನ್ನು ಗುರುತಿಸಬಹುದಾಗಿದೆ. ಉದಾ. ಗೆ, ಶ್ಲೋಕ ೪೯ರಲ್ಲಿ 'ಭೂತದ್ರೋಹ ಮಾಡಿದ ಯಾವನು ತಾನೆ ಈ ಲೋಕದಲ್ಲಿ ಸುಖವಾಗಿ ಬಾಳಿಯಾನು' ಎಂದಿರುವುದು, ಕೀ. ೬೫, ನಂ. ೧೯, ೨೦ರಲ್ಲಿ 'ಭೂಪನಾಗಿ ಪ್ರಾಣಿಗಳ ಮೇಲೆ ದಯವಿರಲು ಬೇಕು ನೀ ನಿರ್ದಯನಾಗಿ ಮಡಿದೆಯಲಾ' ಎಂದು ಬದಲಾಗಿದೆ.

ಶ್ಲೋಕ ೫೦ ರಲ್ಲಿ 'ಈ ಭಗವಂತನಾದ ಶ್ರೀ ಕೃಷ್ಣನೇ ಅಲ್ಲವೆ ಇಲ್ಲಿ ಎಲ್ಲ ಭೂತಕೋಟಿಗಳ ಸೃಷ್ಟಿ ಸ್ಥಿತಿ ಸಂಹಾರಗಳನ್ನು ಮಾಡುವ ಮಹಾಪುರುಷನು. ಅವನನ್ನೇ ಅವಮಾನಗೊಳಿಸುವ ಮಾನವನು ಯಾವಾಗಲಾದರೂ ಎಲ್ಲಾದರೂ ಸುಖವಾಗಿರಲು

Rarest Archiver

ಸಾಧ್ಯವೇ ಇಲ್ಲ'-ಎಂದಿದ್ದರೆ,

..................................ನಿ
ಶ್ಚಯಿಪ್ಪೆ ಜನನ ಮರಣ ದೇಹಿಗಳ್ಗೆ
ಅಯ್ಯೊ ವ್ಯರ್ಥ ಸತ್ತೆಯಲಾ ತ್ವದೀಯ ಜನ್ಮ ಭೂತದ್ರೋಹ
ಮೈಯುಂಡು ಹೋದೆಯೆಲೊ ನರಕಕೀಗ ೨೦
ಜನಕಗೆ ದುಃಖವಿತ್ತ ನೃಪಗೆ ಕನಸಿನಲಿ ತೋರದು ಸುಖ ೨೧

ಎಂದು ಬದಲಾಗಿದೆ. ಈ ಮಾತುಗಳು ಮೂಲದಲ್ಲಿರುವ ಮಾತುಗಳಿಂದ ಭಿನ್ನವಾಗಿದ್ದರೂ ಸಂದರ್ಭಕ್ಕೆ ಹೊರತಾದ ಮಾತುಗಳಲ್ಲ. ಅಲ್ಲದೆ ಶ್ಲೋಕ ೫೦ರ ಮಾತುಗಳಿಗಿಂತ ನಂ. ೨೦, ೨೧ರ ಮಾತುಗಳು ಕಂಸನ ರಾಣಿಯರು ಆ ಹೊತ್ತಿನಲ್ಲಿ ಆಡುವಂಥವಾಗಿವೆ. ಹೆಚ್ಚು ಆಪ್ತವಾದ ಧ್ವನಿಯನ್ನೊಳಗೊಂಡಿವೆ.

ಶ್ಲೋಕ ೫೧ರಲ್ಲಿ ಕೃಷ್ಣನು ಶೋಕಿಸುತ್ತಿದ್ದ ರಾಜಸ್ತ್ರೀಯರನ್ನು ಸಮಾಧಾನಪಡಿಸಿ ಹತರಾದವರಿಗೆ ಮಾಡಬೇಕಾದ ಅಪರಕ್ರಿಯೆಗಳನ್ನು ಮಾಡಿಸಿದನು ಎಂದು ಬಂದಿದೆ. ಆದರೆ ನು. ೨೧ರಲ್ಲಿ 'ಘನಕೃಪೆಯ ನುಡಿಗಳಿಂದ ವನಿತೆಯರ್ ಶೋಕ ನಿಲಿಸಿದನು' ಎಂದು ಮಾತ್ರ ಹೇಳಿ, ಮೃತರಿಗೆ ಅಪರಕರ್ಮ ಮಾಡಿದ ವಿಷಯವನ್ನು ಕೈಬಿಡಲಾಗಿದೆ.

ಹೀಗೆಯೇ ವಸುದೇವ ದೇವಕಿಯರ ಬಂಧ ವಿಮೋಚನೆ ಮಾಡಿದ ನಂತರ ಶ್ಲೋಕ ೫೩ ರಲ್ಲಿ 'ದೇವಕಿ ವಸುದೇವರಿಬ್ಬರೂ ನಮಸ್ಕರಿಸಿದ ಮಕ್ಕಳನ್ನು ಜಗದೀಶ್ವರರೆಂದೇ ಭಾವಿಸಿ, ಭಯಪಟ್ಟು ಆಲಂಗಿಸಿಕೊಳ್ಳಲೇ ಇಲ್ಲ'-ಎಂದಿರುವುದನ್ನು,

'ತನಯರನ್ನು ಅಪ್ಪಿದರು ಮನದಿ ಭಯವ ಹಿಡಿದು ಜಗ
ಜ್ಜನಕರೆಂದು ತಿಳಿದು.................................. ೨೩

ಎಂದು ಬದಲಿಸಲಾಗಿದೆ. ಇಂಥ ಕೆಲವು ವ್ಯತ್ಯಾಸಗಳನ್ನು ಕಂಸವಧೆಯ ಈ ಭಾಗದಲ್ಲಿ ಗುರುತಿಸಬಹುದಾದರೂ ಪ್ರ.ಭಾ.ವು ಮೂಲಭಾಗವತದಿಂದ ತುಂಬ ದೂರದಲ್ಲಿ ನಿಂತಿದೆ ಎಂದೇನೂ ಅನ್ನಿಸುವುದಿಲ್ಲ.

ಅ. ೪೫, ಶ್ಲೋಕ ೧–೧೧ರಲ್ಲಿ ಕೃಷ್ಣ ವಸುದೇವ ದೇವಕಿಯರನ್ನು ಮಾತನಾಡಿಸಿ ಅವರಲ್ಲಿ ಪುತ್ರಮೋಹವನ್ನು ದೀಪ್ತಗೊಳಿಸುತ್ತಾನೆ. ಈ ಭಾಗ ಕೀ. ೬೫, ನು. ೨೩ರ ಉತ್ತರಾರ್ಧದಿಂದ ನು. ೪೦ರಲ್ಲಿ ಬಂದಿದೆ. ಇಲ್ಲಿಯೂ ವಿವರಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿರುವುದನ್ನು ಗಮನಿಸಬಹುದಾಗಿದೆ.

ಶ್ಲೋಕ ೩ರಲ್ಲಿ 'ತಂದೆಯೆ, ನೀವಿಬ್ಬರೂ ನಮಗಾಗಿಯೇ ಯಾವಾಗಲೂ ತುಡಿಯುತ್ತಿದ್ದರೂ ಸಹ ಪುತ್ರರಾದ ನಮ್ಮ ಬಾಲ್ಯ, ಪೌಗಂಡ, ಕೈಶೋರಾವಸ್ಥೆಗಳ ಲೀಲೆಗಳನ್ನು ನೋಡಿ ಸಂತೋಷಿಸಲು ಕೊಂಚವೂ ಆಗದೆ ಹೋಯಿತು' ಎಂಬ ಕೃಷ್ಣನ ಮಾತು ನು. ೨೯, ೩೦ ರಲ್ಲಿ ಇನ್ನಷ್ಟು ವಿವರಗಳೊಂದಿಗೆ ಮೈತುಂಬಿಕೊಂಡಿದೆ. ಸಂದರ್ಭಕ್ಕನುಗುಣವಾಗಿ ವಿವರಗಳನ್ನು ಹಿಗ್ಗಿಸುವ ದಾಸರ ಚಾತುರ್ಯಕ್ಕೆ ಈ ಉದಾ.ಯನ್ನು

Rarest Archiver

ನೋಡಬಹುದು —

ಸ್ವರ್ಗಸುಖವು ಜನನಿಜನಕರ್ಗೆ ಮಕ್ಕಳಾಟ ನೋಡಿ
ಹಿಗ್ಗುವುದು ಪೂರ್ವ ಪುಣ್ಯಫಲವು
ಅಗ್ರಜನ್ನ ಕೂಡಿ ವನದಿ ಅನರ್ಘ್ಯ ಆಟವಾಡಿದೆವು
ದೃಗ್ಗಳಿಂದ ಕಾಣಲಿಲ್ಲ ನೀವು ೨೯
ಪಾಲು ಬೆಣ್ಣೆ ಇಕ್ಕಿ ಆಭರಣಗಳನ್ನಿಟ್ಟು ಬರುವಂತಂಬೆ
ಗಾಲಿಕ್ಕಿಸಿ ವಲ್ಗುವಾಕ್ಯ ಕೇಳಿ
ಲಾಲಾಂಕಿತ ವದನ ರದನಸಾಲು ನೋಡಿ ಮುದ್ದುಕೊಡುವ
ಬಾಲೆ ಧನ್ಯಳು ಪುಣ್ಯಸುಶೀಲೆ ೩೦

ಉಳಿದ ಭಾಗಗಳು ಬಹುಮಟ್ಟಿಗೆ ಮೂಲವನ್ನು ಅನುಸರಿಸಿ ಬಂದಿದ್ದರೂ, ನಂ. ೩೯ರ ವಿವರ ಇಲ್ಲಿಯು ಹೆಚ್ಚಿನ ಅಂಶವಾಗಿದೆ. ನಂ. ೪೦ ಅನೇಕ ಕೀರ್ತನೆಗಳಲ್ಲಿರುವಂತೆ ಫಲ ಶ್ರುತಿಯಾಗಿ ಬಂದಿದೆ.

ಶ್ಲೋಕ ೧೭-೨೧ರಲ್ಲಿ ಕೃಷ್ಣ ತನ್ನ ಅಜ್ಜ ಉಗ್ರಸೇನನಿಗೆ ಪಟ್ಟ ಕಟ್ಟಿ, ಉಳಿದ ಅರಸರು ಆತನಿಗೆ ಕಪ್ಪಕಾಣಿಕೆಗಳನ್ನು ಕೊಡುವಂತೆ ನೇಮಿಸುತ್ತಾನೆ. ಕಂಸನ ಭಯದಿಂದ ದೇಶ ಬಿಟ್ಟುಹೋಗಿದ್ದ ವೃಷ್ಣಿ, ಅಂಧಕ ಮೊದಲಾದವರನ್ನೆಲ್ಲ ಹಿಂದಕ್ಕೆ ಕರೆಸಿ ಅವರ ವರ ಸ್ಥಳಗಳಲ್ಲಿರುವಂತೆ ಮಾಡುತ್ತಾನೆ. ಅವರೆಲ್ಲ ಕೃಷ್ಣನ ಸಹವಾಸದಲ್ಲಿ ಸುಖಿಗಳಾಗುತ್ತಾರೆ. ಈ ಭಾಗ ಪ್ರ.ಭಾ.ದ ಕೀ. ೬೬, ನಂ. ೧-೮ರಲ್ಲಿ ಬಂದಿದೆ.

ಈ ಕೀರ್ತನೆಯ ಪಲ್ಲವಿ ಕೃಷ್ಣನ ಮಹಿಮಾನ್ವಿತ ವ್ಯಕ್ತಿತ್ವದ ಕೀರ್ತನೆಯಾಗಿ ಇಲ್ಲಿಗೆ ಉಚಿತವಾಗಿಯೇ ಕಾಣಿಸುತ್ತದೆ. ಇಲ್ಲಿಯೂ ನಿರೂಪಣೆಯಲ್ಲಿ ಸಣ್ಣ ಸಣ್ಣ ವ್ಯತ್ಯಾಸಗಳನ್ನು ಗುರುತಿಸಬಹುದು. ಉದಾ.ಗೆ, ಶ್ಲೋಕ ೨೧ ಹಾಗೂ ಕೀ. ೬೬, ನಂ. ೩, ೮ನ್ನು ಹೋಲಿಸಿ ನೋಡಬಹುದು. ನಂ. ೯-೧೧ ನೇರವಾಗಿ ದಾಸರ ಮಾತುಗಳಾಗಿದ್ದು ಇವುಗಳಲ್ಲಿ ಫಲಶ್ರುತಿ, ಕೃಷ್ಣಸ್ತುತಿಗಳು ಬಂದಿವೆ.

ಅ.೪೫, ಶ್ಲೋಕ ೨೨-೫೦ರಲ್ಲಿ ಕೃಷ್ಣ ನಂದಗೋಪನನ್ನು ಗೋಕುಲಕ್ಕೆ ಕಳಿಸುವುದು, ವಸುದೇವನಿಂದ ಕೃಷ್ಣ ಬಲರಾಮರ ಉಪನಯನ, ಸಾಂದೀಪನಿಯ ಬಳಿಯಲ್ಲಿ ವಿದ್ಯಾಭ್ಯಾಸ, ಗುರುಪುತ್ರನನ್ನು ಹಿಂದಕ್ಕೆ ತಂದದ್ದು—ಇವುಗಳ ವರ್ಣನೆ ಇದೆ. ಅ. ೪೬ರಲ್ಲಿ ಕೃಷ್ಣ ಉದ್ಧವನನ್ನು ಗೋಕುಲಕ್ಕೆ ಕಳಿಸುವುದು, ನಂದ ಉದ್ಧವರ ಸಂಭಾಷಣೆ ಬರುತ್ತವೆ. ಅ. ೪೭ರಲ್ಲಿ ಉದ್ಧವ ಗೋಪಿಯರ ಸಂವಾದ, ಭ್ರಮರಗೀತೆ—ಇವುಗಳ ವರ್ಣನೆಯಿದೆ. ಅ. ೪೮ರಲ್ಲಿ ಕೃಷ್ಣನು ಕುಬ್ಜೆ ಅಕ್ರೂರರನ್ನು ಭೇಟಿ ಮಾಡುವುದು, ಅಕ್ರೂರನನ್ನು ಪಾಂಡವರ ಸ್ಥಿತಿಯನ್ನು ತಿಳಿಯಲು ಹಸ್ತಿನಾವತಿಗೆ ಕಳಿಸುವುದು—ಈ ಘಟನೆಗಳು ಬರುತ್ತವೆ. ಅ. ೪೯ರಲ್ಲಿ ಹಸ್ತಿನಾಪುರಕ್ಕೆ ಅಕ್ರೂರನ ಪ್ರಯಾಣ, ಧೃತರಾಷ್ಟ್ರನಿಗೆ ಅಕ್ರೂರನ ಹಿತೋಕ್ತಿ, ಅಕ್ರೂರನ ಪುನರಾಗಮನ—ಈ ಸಂಗತಿಗಳಿವೆ.

ಅ. ೪೫, ಶ್ಲೋಕ ೨೨ರಿಂದ ಅ. ೪೯ರಲ್ಲಿ ಬರುವ ಮೇಲೆ ತಿಳಿಸಿದ ಸಂಗತಿಗಳೆಲ್ಲವನ್ನೂ

Rarest Archiver

ಪ್ರ.ಭಾ.ದಲ್ಲಿ ಕೈಬಿಡಲಾಗಿದೆ. (ಇವುಗಳಲ್ಲಿ ಉದ್ಧವನನ್ನು ಗೋಕುಲಕ್ಕೆ ಕಳಿಸಿದ್ದು ಮತ್ತು ಅಕ್ರೂರನನ್ನು ಹಸ್ತಿನಾವತಿಗೆ ಕಳಿಸಿದ್ದರ ಸೂಚನೆ ಮಾತ್ರ ಕೀ.೬೭, ನಂ.೯ರಲ್ಲಿ ಬಂದಿದೆ) ಇವುಗಳ ಬದಲಿಗೆ ಅಂತ್ಯದಲ್ಲಿ ಬರುವ ಕೀ. ೬೭ ಒಂದು 'ಮಂಗಳಪದ'ದಂತಿದ್ದು ಕೃಷ್ಣನಿಂದಾದ ಮಹತ್ಕಾರ್ಯಗಳೆಡೆ ಒಂದು ಪಕ್ಷಿನೋಟವನ್ನು ಬೀರುತ್ತದೆ. ನಂ. ೧–೯ರಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿಯ ಘಟನೆಗಳ ಸ್ಮರಣೆ ಇದ್ದರೆ, ನಂ. ೧೦–೬೭ರಲ್ಲಿ ಕೃಷ್ಣನ ಅನಂತರದ ಬದುಕಿನ ಕೆಲವು ಘಟನೆಗಳನ್ನು ಸ್ಮರಿಸಲಾಗಿದೆ.

ಒಟ್ಟಿನಲ್ಲಿ ಪ್ರ.ಭಾ.ವನ್ನು ಮೂಲದೊಡನೆ ಹೋಲಿಸಿ ನೋಡಿದಾಗ, ಮೂಲ ಭಾಗವತದ ದಶಮಸ್ಕಂಧ ಪೂರ್ವಾರ್ಧದಲ್ಲಿ ೪೯ ಅಧ್ಯಾಯಗಳಿದ್ದು ಪ್ರ.ಭಾ.ದಲ್ಲಿ ೪೫ನೆಯ ಅಧ್ಯಾಯದ ಶ್ಲೋಕ ೨೧ರವರೆಗಿನ ಕಥೆಯನ್ನು ಮಾತ್ರ ಆಧರಿಸಿ ಕೀರ್ತನೆಗಳನ್ನು ರಚಿಸಿರುವುದು ಕಂಡುಬರುತ್ತದೆ. ಆಧರಿಸಿರುವಷ್ಟು ಭಾಗವನ್ನೂ ಅವರು ಯಥಾವತ್ತಾಗಿ ಭಾಷಾಂತರಿಸಿಲ್ಲವೆನ್ನುವುದು ಮೇಲಿನ ಅಧ್ಯಯನದಿಂದ ಮೇಲು ನೋಟಕ್ಕೇ ಕಾಣಿಸುವ ಸಂಗತಿಯಾಗಿದೆ. ಸಂಸ್ಕೃತ ಭಾಗವತದ ೪೫ ಅಧ್ಯಾಯಗಳನ್ನು ಪ್ರ.ಭಾ. ಆಧರಿಸಿದೆಯಾದರೂ, ಅನೇಕ ಸಂದರ್ಭಗಳಲ್ಲಿ ಯಥಾವತ್ತಾಗಿ ಅನುಸರಿಸಿರುವಂತೆ ಕಂಡರೂ, ಅನೇಕ ಸಂದರ್ಭಗಳು ಸಂಗ್ರಹಗೊಂಡು ಬಂದಿವೆ. ಕೆಲವೆಡೆ ವಿಸ್ತಾರಗೊಂಡು ಹೊಸ ಅಂಶಗಳು ಸೇರಿವೆ. ಹಾಗೆಯೇ ಕೆಲವು ಕಡೆಗಳಲ್ಲಿ ಮೂಲದ ವಿವರ ವರ್ಣನೆಗಳೇ ಬದಲಾಗಿವೆ. ಒಂದು ಭಾಷೆಯ ಗದ್ಯವನ್ನು ಮತ್ತೊಂದು ಭಾಷೆಗೆ ಭಾಷಾಂತರಿಸುವುದೇ ಸಾಕಷ್ಟು ತೊಡಕಿನ ಕೆಲಸ. ಅಂಥದರಲ್ಲಿ ಪ್ರಸನ್ನವೆಂಕಟದಾಸರು ಸಂಸ್ಕೃತದಂಥ ಪ್ರೌಢಭಾಷೆಯಲ್ಲಿ ಶ್ಲೋಕದಲ್ಲಿರುವ ಭಾಗವತವನ್ನು ಭಿನ್ನಜಾಯಮಾನದ ಭಾಷೆಯಾದ ಕನ್ನಡದಲ್ಲಿ, ಮೂಲದಲ್ಲಿರುವಂತೆ ಅಧ್ಯಾಯಗಳಾಗಿ ವಿಂಗಡಿಸದೆ ಬೇರೆ ಬೇರೆ ಛಂದಸ್ಸು, ಮಟ್ಟುಗಳ ವಿವಿಧ ಗಾತ್ರದ ನುಡಿಗಳಲ್ಲಿ ರಚಿಸುವ ಸಾಹಸವನ್ನು ಮಾಡಿದ್ದಾರೆ. ಈ ಎಲ್ಲ ಕಾರಣಗಳಿಂದ ಪ್ರಸನ್ನವೆಂಕಟರ ಈ ಭಾಗವತವನ್ನು ಸಂಸ್ಕೃತ ಭಾಗವತದ ರೂಪಾಂತರ ಎನ್ನಬಹುದಾಗಿದೆ.

ಭಾಗವತ ದಶಮಸ್ಕಂಧ ಪೂರ್ವಾರ್ಧದಲ್ಲಿರುವುದು ಕೃಷ್ಣನ ಕಥೆ, ಆತನ ಜನನ, ಬಾಲಲೀಲೆಗಳು, ದುಷ್ಟಶಿಕ್ಷಣ ಹಾಗೂ ಶಿಷ್ಟರಕ್ಷಣ ಕಾರ್ಯಗಳು. ಇವೆಲ್ಲಕ್ಕಿಂತ ಮುಖ್ಯವಾಗಿ ಹರಿಯೇ ಕೃಷ್ಣನಾಗಿ ಈ ಕಾರ್ಯಗಳಿಗಾಗಿ ಜನಿಸಿ ಬಂದನೆಂಬ ಕಲ್ಪನೆ–ಇವು ಹರಿಭಕ್ತರಾದ ದಾಸರನ್ನು ಸೆಳೆದದ್ದರಲ್ಲಿ ಆಶ್ಚರ್ಯವೇನಿಲ್ಲ. ಆದರೆ ಅವರು ಅದನ್ನು ಯಥಾವತ್ತಾಗಿ ಗದ್ಯದಲ್ಲೋ, ನಿರ್ದಿಷ್ಟವಾದ ಛಂದಸ್ಸಿನಲ್ಲಿ ಕಾವ್ಯವಾಗಿಯೋ ಭಾಷಾಂತರಿಸದೆ, ಕೀರ್ತನೆಗಳನ್ನಾಗಿ ವಿವಿಧ ಮಟ್ಟುಗಳಲ್ಲಿ ರಚಿಸಿದ್ದರ ಉದ್ದೇಶ ಸಂಸ್ಕೃತದಲ್ಲಿದ್ದ ಆ ಕೃಷ್ಣಕಥೆಯನ್ನು ಒಂದು ಜನಪ್ರಿಯ ಮಾಧ್ಯಮವಾದ ಕೀರ್ತನೆಗಳ ರೂಪದಲ್ಲಿ ಆದಷ್ಟು ಹೆಚ್ಚು ಜನರಿಗೆ ತಲುಪಿಸಿ ಹರಿಭಕ್ತಿಯ ಪ್ರಚಾರ ಮಾಡುವುದಾಗಿದ್ದಿರಬೇಕು. ಆ ದೃಷ್ಟಿಯಿಂದ ನೋಡಿದಾಗ ದಾಸರು ಮೂಲದಿಂದ ಕಥೆಯಲ್ಲಿ, ವರ್ಣನೆಗಳಲ್ಲಿ ಮಾಡಿಕೊಂಡ ವಿಸ್ತರಣೆ ಸಂಗ್ರಹಣೆಗಳಿಗೂ ಅರ್ಥವಿರುವಂತೆ ತೋರುತ್ತದೆ.

Rarest Archiver

ಆದರೆ ದಾಸರು ಮೂಲದ ವರ್ಣನೆಗಳನ್ನು ಅನೇಕ ಕಡೆಗಳಲ್ಲಿ ಯಥಾವತ್ತಾಗಿ ತರುವ ಪ್ರಯತ್ನ ಮಾಡಿರುವುದನ್ನೂ ಗಮನಿಸಬಹುದು. ಉದಾ.ಗೆ, ಕುವಲಯಾಪೀಡ ಮತ್ತು ಕೃಷ್ಣನ ನಡುವಿನ ಹೋರಾಟ (ಅ. ೪೩, ಶ್ಲೋಕ ೩–೧೪ ಮತ್ತು ಕೀ. ೬೩, ನಂ.೨ ರಿಂದ ೯ರ ಪೂವಾರ್ಧ). ಚಾಣೂರ ಕೃಷ್ಣರ ನಡುವಿನ ಹೋರಾಟ (ಅ.೪೪, ಶ್ಲೋಕ ೨೧–೨೪ ಮತ್ತು ಕೀ.೬೪, ನಂ, ೨೧, ೨೨) ಇತ್ಯಾದಿ. ಇಂಥಲ್ಲೆಲ್ಲ ಭಾಷಾಂತರದ ಕ್ಲಿಷ್ಟತೆಗಳಿಂದ ಕೆಲವು ವ್ಯತ್ಯಾಸಗಳಾಗಿದ್ದರೂ ವರ್ಣನೆಗಳು ಮೂಲಕ್ಕೆ ತುಂಬ ಹತ್ತಿರದಲ್ಲಿಯೇ ನಿಲ್ಲುವುದನ್ನು ನೋಡಬಹುದು.

ದಾಸರು ಕೆಲವೆಡೆ ಮೂಲವನ್ನು ಯಥಾವತ್ತಾಗಿ ತಂದಂತೆಯೇ ತಮಗೆ ತುಂಬ ಪ್ರಿಯವಾದ ಭಾಗಗಳಲ್ಲಿ ಮೂಲ ಭಾಗವತದಲ್ಲಿಲ್ಲದ ವರ್ಣನೆಗಳನ್ನು ತರುತ್ತಾರೆ, ವಿಸ್ತರಿಸುತ್ತಾರೆ. ಉದಾ.ಗೆ, ಕೃಷ್ಣನ ನಾಮಕರಣದ ಪ್ರಸಂಗವನ್ನು ಕುರಿತ ಕೀರ್ತನೆಯ ಭಾಗ (ಕೀ. ೮) ಮೂಲದಲ್ಲಿಲ್ಲ. ಹೀಗೆಯೇ ಗೋಪಿ ಕೃಷ್ಣನಿಗೆ ಹೇಳುವ ಜೋಗುಳದ ಹಾಡು (ಕೀ.೧೪), ಮಗು ಕೃಷ್ಣನನ್ನು ನೋಡಿ ನಲಿಯುವ ಗೋಪಿಯ ಚಿತ್ರ (ಕೀ.೧೫), ಕೀ. ೧೬, ೧೭ರಲ್ಲಿಯ ಕೃಷ್ಣನ ಚೇಷ್ಟೆಗಳ ವರ್ಣನೆಗಳ ವಿಸ್ತರಣೆ–ಇವೆಲ್ಲ ದಾಸರ ಆಸಕ್ತಿ ಹೆಚ್ಚಾಗಿ ಎಲ್ಲಿ ಇದೆ ಎನ್ನುವುದನ್ನು ತೋರಿಸುವುದರ ಜೊತೆಗೆ ಸುಂದರ ಕಾವ್ಯ ಭಾಗಗಳಾಗಿಯೂ, ಮೂಲದ ಸಂದರ್ಭಗಳಿಗೆ ಹೊಂದುವಂತೆಯೂ ಬಂದಿರುವುದು ಗಮನಾರ್ಹವಾಗಿದೆ. ಹಾಗೆಯೇ ಕೀ. ೩೧, ನಂ. ೮ರಲ್ಲಿ ಬರುವ ಮೂಲದಲ್ಲಿಲ್ಲದ ದಂಪತಿಗಳ ವರ್ತನೆಯ ಒಂದು ಸಹಜ ಸುಂದರ ಚಿತ್ರವನ್ನೂ ಇಲ್ಲಿ ನೆನೆಯಬಹುದು. ತನ್ನ ಹೆಗಲಿಗೆ ಹೆಗಲಿಟ್ಟು ನಿಂತ ಹಸುಗಳನ್ನು ನೇವರಿಸುತ್ತಿರುವ ಕೃಷ್ಣನ ಚಿತ್ರ (ಕೀ. ೩೧, ನಂ. ೮)ವೂ ನೆನಪಿನಲ್ಲಿ ಉಳಿಯುವಂಥ ಮತ್ತೊಂದು ಮೋಹಕ ಚಿತ್ರವಾಗಿದೆ. ಇಲ್ಲೆಲ್ಲ ಮೂಲದ ಸೊಗಸನ್ನು ಬೆಳೆಸುವ ದಾಸರ ಪ್ರತಿಭೆಯನ್ನು ಗುರುತಿಸಬಹುದಾಗಿದೆ.

ತಮಗೆ ಅಗತ್ಯ ಕಂಡೆಡೆಗಳಲ್ಲಿ ಮೂಲದ ಸಂದರ್ಭ, ವರ್ಣನೆಗಳನ್ನು ವಿಸ್ತರಿಸುವ ದಾಸರು ಈ ಮೊದಲೇ ಗುರುತಿಸಿರುವಂತೆ ಕೆಲವೆಡೆ ಮೂಲದ ಪ್ರಸಂಗಗಳನ್ನು, ವರ್ಣನೆಗಳನ್ನು ಸಂಗ್ರಹಿಸುವ ಕೆಲಸವನ್ನೂ ಮಾಡಿದ್ದಾರೆ. ಉದಾ.ಗೆ, ಅ. ೪, ಶ್ಲೋಕ ೧೫-೨೩ರಲ್ಲಿ ಬರುವ ದೀರ್ಘವಾದ ತಾತ್ವಿಕವಾದ ಕಂಸನ ಮಾತುಗಳ ಮುಖ್ಯಾಂಶವನ್ನು ಕೀ. ೬, ನಂ. ೩ರಲ್ಲಿ ಸಂಗ್ರಹಿಸಿರುವ ಪರಿ ಮೆಚ್ಚುವಂಥದು. ಸಂದರ್ಭಕ್ಕೆ, ಕೀರ್ತನೆಯ ಚೌಕಟ್ಟಿಗೆ ಉಚಿತವಾಗಿ ಬಂದಿರುವಂಥದು. ಹೀಗೆಯೇ ಮುಖ್ಯಕಥೆಗೆ ಅಗತ್ಯವಲ್ಲದ ಅ. ೪, ಶ್ಲೋಕ ೧೧, ೧೩ರಲ್ಲಿ ಬರುವ ದುರ್ಗೆಯ ಪೂಜೆ ಪ್ರಸಿದ್ಧಿಗಳ ವಿವರಗಳನ್ನು ಬಿಟ್ಟದ್ದರಲ್ಲಿಯೂ ಔಚಿತ್ಯವಿದೆ. ಮೂಲದಲ್ಲಿ ವಿಸ್ತಾರವಾಗಿ ಬರುವ ಸ್ತೋತ್ರಭಾಗಗಳು, ತಾತ್ವಿಕ ವಿವರಣೆಗಳನ್ನು ಸಂಗ್ರಹಿಸುವ ಮೂಲಕ ಅನೇಕ ಕಡೆಗಳಲ್ಲಿ ಉತ್ತಮ ಸಂಗ್ರಹಕಾರನ ಲಕ್ಷಣವನ್ನು ತೋರಿದ್ದಾರೆ. ಉದಾ.ಗೆ, ಕಾಳಿಯನ ಪತ್ನಿಯರು ಮಾಡುವ ಸ್ತುತಿಯ ಸಂಗ್ರಹಣೆಯನ್ನೇ (ಕೀ. ೨೮, ನಂ. ೨೪ರಿಂದ ನಂ. ೨೭ರ ಪೂರ್ವಾರ್ಧದವರೆಗೆ) ಗಮನಿಸಬಹುದು.

ಆದರೆ ಕೆಲವೆಡೆ ಹೀಗೆ ಉಚಿತವೆನ್ನಿಸುವ ರೀತಿಯಲ್ಲಿ ಮೂಲವನ್ನು ಸಂಗ್ರಹಿಸುವ

ದಾಸರು ಇತರ ಕೆಲವು ಸಂದರ್ಭಗಳಲ್ಲಿ ಮೂಲದ ಸನ್ನಿವೇಶಕ್ಕೆ, ವರ್ಣನೆಗಳಿಗೆ ಅನ್ಯಾಯ ವಾಗುತ್ತಿದೆಯೆನ್ನಿಸುವ ರೀತಿಯಲ್ಲಿ ಸಂಗ್ರಹಿಸಿರುವುದೂ ಇದೆ.ಮೂಲದ ಆ ಸನ್ನಿವೇಶದ ಕಲ್ಪನೆಯೇ ಅಸ್ಪಷ್ಟವಾಗಿ ಕೇವಲ ಆ ಘಟನೆಗಳ ಮುಖ್ಯಾಂಶಗಳ ವರದಿ ಮಾತ್ರ ಕೊಡುತ್ತಿರುವಂತೆ ಕಾಣಿಸುತ್ತದೆ. ಉದಾ.ಗೆ, ಅ. ೨೭, ಶ್ಲೋಕ ೨೨–೨೮ರಲ್ಲಿ ಬರುವ ಇಂದ್ರನ ಗರ್ವಭಂಗದ ನಂತರ ನಡೆಯುವ 'ಗೋವಿಂದಪಟ್ಟಾಭಿಷೇಕ'ದ ಪ್ರಸಂಗ, ಪ್ರ.ಭಾ.ದ ಕೀ. ೩೬, ನಂ. ೯ರಲ್ಲಿ ತೀರ ಅಸ್ಪಷ್ಟವಾಗಿ ಬಂದಿದೆ. ಹೀಗೆಯೇ ಪೂತನೆ, ವತ್ಸಾಸುರ, ಬಕಾಸುರ ವಧೆಯ ಸಂದರ್ಭಗಳೂ ಮೂಲದೊಡನೆ ಹೋಲಿಸಿದಾಗ ವರದಿ ಮಾತ್ರವಾಗಿ ಬಂದಂತೆ ಎನ್ನಿಸುತ್ತದೆ. ಹೀಗೆಯೇ ಮೂಲದಲ್ಲಿ ಬರುವ ಕೆಲವು ಸುಂದರ ವರ್ಣನೆಗಳೂ ಕೈಬಿಟ್ಟು ಹೋಗಿರುವುದು ಕಂಡುಬರುತ್ತದೆ. ಉದಾ.ಗೆ, ಅ. ೩, ಶ್ಲೋಕ ೫೧ರಲ್ಲಿ ವಸುದೇವ ಕೃಷ್ಣನನ್ನು ಗೋಕುಲಕ್ಕೆ ಒಯ್ಯುವಾಗ ಬರುವ ಯಮುನಾನದಿಯ ವರ್ಣನೆ, ಅ. ೬, ಶ್ಲೋಕ ೪ರ ನಂದನ ಪುತ್ರವಾತ್ಸಲ್ಯದ ಒಂದು ಚಿತ್ರ, ಅ. ೯, ಶ್ಲೋಕ ೮ರ ತುಂಟಕೃಷ್ಣ ಕೋತಿಗೆ ಬೆಣ್ಣೆ ತಿನ್ನಿಸುತ್ತಿದ್ದ ಚಿತ್ರ ಇತ್ಯಾದಿಗಳನ್ನು ಗಮನಿಸಬಹುದು. ಕೃಷ್ಣಲೀಲೆಗಳನ್ನೇ ಮುಖ್ಯವಾಗಿ ಹೇಳಹೊರಟ ದಾಸರು ಮೂಲದಲ್ಲಿ ಬರುವ ಅಘಾಸುರ ವಧೆ(ಅ. ೧೨, ಶ್ಲೋಕ ೧೩–೩೮)ಮತ್ತು ಬ್ರಹ್ಮ ಕೃಷ್ಣನನ್ನು ಪರೀಕ್ಷಿಸಿ ಸೋತ ಪ್ರಸಂಗ ಗಳನ್ನು ಪೂರ್ಣವಾಗಿ ಕೈಬಿಟ್ಟದ್ದು ಕೂಡ ಆಶ್ಚರ್ಯಕರ ಸಂಗತಿಯಾಗಿದೆ.

ಇಲ್ಲಿಯೇ ಗಮನಿಸಬಹುದಾದ ಇನ್ನೊಂದು ಅಂಶವೆಂದರೆ ಮೂಲದ ದೀರ್ಘ ಸಂಭಾಷಣೆಗಳನ್ನು, ಸ್ತೋತ್ರ ಭಾಗಗಳನ್ನು ಕೆಲವೆಡೆ ಸಂಗ್ರಹಿಸುವ ದಾಸರು ಮೂಲದಲ್ಲಿ ಇಲ್ಲದೆಡೆಗಳಲ್ಲಿಯೂ ಕೃಷ್ಣಸ್ತುತಿಯನ್ನು ಸೇರಿಸಿರುವುದು. ಅನೇಕ ಕೀರ್ತನೆಗಳ ಅಂತ್ಯ ದಲ್ಲಿ, ಕೆಲವೆಡೆ ಮಧ್ಯದಲ್ಲಿಯೂ ಕೃಷ್ಣಸ್ತುತಿ ಬಂದಿರುವುದು ಮೂಲದೊಡನೆ ಹೋಲಿಸಿ ನೋಡಿದರೆ ತಿಳಿಯುತ್ತದೆ. ಉದಾ.ಗೆ, ಕೀ. ೨೬, ನು. ೯ರ ಕೃಷ್ಣನ ಪಾದಮಹಿಮೆಯ ಸ್ತುತಿ, ಕೀ. ೨೮, ನು. ೬, ೭ರ ಸ್ತುತಿ ಇತ್ಯಾದಿ. ಜೊತೆಗೆ ಕೃಷ್ಣನ ಈ ಚರಿತ್ರೆಯನ್ನು ಕೇಳುವವರೇ ಜಾಣರು, ಅವರು ಮುಕ್ತಿಯನ್ನು ಪಡೆಯುತ್ತಾರೆ. – ಎಂಬಂಥ ಮಾತು ಗಳನ್ನು ಅನೇಕ ಕೀರ್ತನೆಗಳಲ್ಲಿ ಮತ್ತೆ ಮತ್ತೆ ಹೇಳುವ ಮೂಲಕ ಆ ಕಥೆಯ ಬಗ್ಗೆ ತಮಗಿರುವ ಅಮಿತವಾದ ಭಕ್ತಿ, ಪ್ರೀತಿ, ವಿಶ್ವಾಸಗಳನ್ನು ವ್ಯಕ್ತಪಡಿಸಿದ್ದಾರೆ. ಉದಾ.ಗೆ ಕೀ. ೨, ಕೀ. ೨೮ ಇತ್ಯಾದಿ. ಇಂಥಲ್ಲೆಲ್ಲ ಈ ಕೀರ್ತನೆಗಳ ರಚನೆಯ ಹಿಂದಿನ ಉದ್ದೇಶ ವನ್ನು ಊಹಿಸಬಹುದಾಗಿದೆ.

ಭಾಗವತದ ಕಥೆಯನ್ನು ಕೃಷ್ಣಭಕ್ತಿಗೆ ವಾಹಕವಾಗಿಸಿಕೊಂಡು ಹೇಳಹೊರಟ ದಾಸರು ಮೂಲದಲ್ಲಿ ಬರುವ ಪಾತ್ರಗಳ ಚಿತ್ರಣದಲ್ಲಿ ವಸ್ತುನಿಷ್ಠತೆಗಿಂತ ಹೆಚ್ಚಾಗಿ ವ್ಯಕ್ತಿನಿಷ್ಠತೆಯನ್ನು ತೋರಿರುವುದು ಇಲ್ಲಿ ಗಮನಿಸಬಹುದಾದ ಮತ್ತೊಂದು ಅಂಶ ವಾಗಿದೆ. ಉದಾ.ಗೆ, ಕಂಸನ ಪಾತ್ರವನ್ನೇ ನೋಡಬಹುದು. ಮೂಲದಲ್ಲಿ ತಂಗಿ ದೇವಕಿಯ ಬಗ್ಗೆ ಇದ್ದ ಮಮತೆಯಿಂದಾಗಿ ತಾನೇ ರಥವನ್ನು ನಡೆಸುವ ದೊರೆ ಕಂಸ, ಆಕಾಶವಾಣಿಯನ್ನು ಕೇಳಿದ ನಂತರ ಬದಲಾಗುತ್ತಾನೆ. ಆದರೆ ಪ್ರ. ಭಾ.ದಲ್ಲಿ ದೇವಕಿಯ

Rarest Archiver

ಬಗ್ಗೆ ಆತನಿಗಿದ್ದ ಪ್ರೀತಿಯ ಸೂಚನೆಯೂ ಇಲ್ಲ. ಹಾಗೆಯೇ ದುರ್ಗೆಯ ಮಾತನ್ನು ಕೇಳಿದ ನಂತರದ ಕಂಸನ ಸಾವಿನ ನಿರೀಕ್ಷೆ, ತಲ್ಲಣಗಳೂ ಮೂಲದಲ್ಲಿ ತುಂಬ ಸಹಜವಾಗಿ ಶಕ್ತವಾಗಿ ಚಿತ್ರಿಸಲ್ಪಟ್ಟಿವೆ. ಇಂಥ ಅಂಶಗಳಿಂದ ಕಂಸನ ಪಾತ್ರ ಪ್ರ.ಭಾ.ಗಿಂತ ಮೂಲ ದಲ್ಲೇ ಹೆಚ್ಚು ಮಾನವೀಯವಾಗಿ ಬಂದಿದೆ ಎನ್ನಿಸುತ್ತದೆ. ಕೊನೆಯಲ್ಲೂ, ಕಂಸ ಸಾವಿನ ಭಯದಿಂದಾಗಿ ಸಾವಿನ ಪ್ರತೀಕವಾಗಿಯೇ ಕೃಷ್ಣನನ್ನು ನೆನೆಯುತ್ತಿದ್ದರೂ ಆತ ಯಾವಾ ಗಲೂ ಕೃಷ್ಣನನ್ನು ನೆನೆಯುತ್ತಿದ್ದುದರಿಂದ ಸಾರೂಪ್ಯ ಮುಕ್ತಿಯನ್ನು ಪಡೆದನೆಂದು ಮೂ.ಭಾ.ದಲ್ಲಿ (ಅ. ೪೪, ಶ್ಲೋಕ ೪೧) ಬಂದರೆ ದಾಸರು ಮಾತ್ರ, ಕೀ. ೬೫, ನಂ. ೧೧ರಲ್ಲಿ-

ಸಲೆ ಹರಿಯ ವೈರಭಾವ ಬಲಿದ ಪಾಪಿ ಕಾಲನೇಮಿ
ನಿಲದೆ ತಮಸಕ್ಕೈದಿದ ದುರಾತ್ಮ

ಎಂದು ನರಕಕ್ಕೇ ಕಳಿಸುತ್ತಾರೆ. ಹೀಗಾಗಿ ಇಲ್ಲಿಯ ಪಾತ್ರಗಳೆಲ್ಲ ಎರಡೇ ಬಗೆಯವಾಗಿ ಕಾಣಿಸುತ್ತವೆ. ಒಂದು ಹರಿಭಕ್ತರು, ಶಿಷ್ಟರು. ಎರಡು ಹರಿದ್ವೇಷಿಗಳು, ದುಷ್ಟರು. ಹರಿದ್ವೇಷಿಯಾದ ಕಂಸ ನರಕಕ್ಕೆ ಮಾತ್ರವೇ ಅರ್ಹ ಎನ್ನುವುದು ಇಲ್ಲಿ ವ್ಯಕ್ತವಾಗಿರುವ ದೃಷ್ಟಿ. ಹರಿಭಕ್ತರಾದ ದಾಸರಿಗೆ ಈ ದೃಷ್ಟಿ ಸಹಜವಾದದ್ದಾದರೂ ಆ ಪಾತ್ರದ ಉಳಿದ ಮಿಡಿತಗಳನ್ನೂ ತಂದಿದ್ದರೆ ಆ ಪಾತ್ರ ಇನ್ನಷ್ಟು ಜೀವಂತವಾಗಿರುತ್ತಿತ್ತು ಎಂದಂತೂ ಅನ್ನಿಸುತ್ತದೆ.

ಈ ಕೀರ್ತನೆಗಳು ಅಭಿವ್ಯಕ್ತಗೊಂಡಿರುವ ಭಾಷೆ ಶಿಷ್ಟಕನ್ನಡ ಎನ್ನಬಹುದಾದರೂ ಅನೇಕ ಕಡೆ ಮುಖ್ಯವಾಗಿ ಕೃಷ್ಣಸ್ತುತಿ ಬರುವ ಸಂದರ್ಭಗಳಲ್ಲಿ ಈ ಭಾಷೆ ಬಹಳಷ್ಟು ಸಂಸ್ಕೃತಮಯವಾಗುತ್ತದೆ. ಇದಕ್ಕೆ ನಿದರ್ಶನವಾಗಿ ಮೊದಲ ಕೀರ್ತನೆಯನ್ನೇ ಗಮನಿಸ ಬಹುದು. ಹಾಗೆಯೇ ದಾಸರು ಲಲಿತವಾದ ಕನ್ನಡದಲ್ಲೂ ಸಮರ್ಥವಾಗಿ ಅಭಿವ್ಯಕ್ತಿ ನೀಡಬಲ್ಲರೆಂಬುದಕ್ಕೆ ಕೃಷ್ಣನ ಬಾಲಲೀಲೆಗಳ ವರ್ಣನೆಯನ್ನು ನೋಡಬಹುದು. ಒಂದು ಉದಾ :

ಕೆನೆಕೆನೆ ಮೊಸರನನುದಿನ ತುಡು ತಿಂಬನು
ನಿನ ತೋಳ್ ಮೊಸರಿಲಿ ಮುಳುಗಿದೆ ಕಳ್ಳ
ಎನಲು ನಮ್ಮೆಳೆಗರು ಮುಳುಗಿದೆ ಪಡಗದ
ದಣಿಹುಡುಕಿದೆ ನಾ ತಿನಲಿಲ್ಲೆಂಬ

(ಕೀ. ೧೭, ನು. ೨೧)

ಇಲ್ಲಿಯ ವರ್ಣನೆಗಳಲ್ಲಿ ಉಪಮೆಗಳ ಬಳಕೆಯಲ್ಲಿ ಹೆಚ್ಚಾಗಿ ಮೂಲವನ್ನೆ ಅನು ಸರಿಸಿದ್ದರೂ ಕೆಲವೆಡೆಗಳಲ್ಲಿ ಸ್ವತಂತ್ರವಾಗಿಯೂ ಉಪಮೆಗಳನ್ನು ತಂದಿರುವುದು ಕಾಣಿಸು ತ್ತದೆ. ಉದಾ: 'ವನವಿಲ್ಲದ ಮೀನದಂತಾವು ವತ್ಸವನು ಕಾಣದಂತೆ' (ಕೀ. ೧೧, ನಂ. ೭), 'ಒರಳಿಗಿಕ್ಕಿದ ಧಾನ್ಯದಂತೆ' (ಕೀ. ೬೧, ನು. ೭) ಇತ್ಯಾದಿ. ಕೆಲವೆಡೆ ಪದಗಳ ಪ್ರಾಸ ಕ್ಕಾಗಿ, ಆಕೆಯ ಕಾಯ-ಆಕೆಯಕ್ಕಾಯ (ಕೀ. ೭, ನು. ೫), ಆಹ್ಲಾದ-ಅಹ್ಲಾದ (ಕೀ.

Rarest Archiver

೧೧, ನಂ. ೧೦,) ಸವುಸ್ತ-ಸಮಸ್ತ (ಕೀ. ೧೧, ನಂ. ೧) ಎಂದು ವ್ಯತ್ಯಾಸಗೊಂಡಿದ್ದರೆ; ಇನ್ನು ಕೆಲವೆಡೆ ವೃಕ್ಷರೂಪಿಲಿದ್ದನಂ—ವೃಕ್ಷರೂಪದಲಿದ್ದನು (ಕೀ. ೨೯, ನಂ. ೨), ತೋಳಿಲಿ–ತೋಳಿನಲ್ಲಿ (ಕೀ. ೩೯, ನು. ೯), ಖಜೂರರನಂಡನಂ-ಖಜೂರರವುಂಡನಂ (ಕೀ. ೩೧, ನು. ೪)–ಇಂಥ ವಿಶೇಷ ಪ್ರಯೋಗಗಳು ಕಾಣಸಿಗುತ್ತವೆ.

ಇಲ್ಲಿಯ ಕೀರ್ತನೆಗಳಲ್ಲಿ ಸಾಂಗತ್ಯ (ಕೀ. ೫), ಷಟ್ಪದಿ (ಕೀ. ೪), ವಿವಿಧ ವೃತ್ತ (ಕೀ. ೪೫)ಗಳನ್ನು ಬಳಸಿಕೊಂಡಿರುವಲ್ಲಿ ದಾಸರ ಪ್ರಯೋಗಶೀಲತೆಯನ್ನೂ ಪ್ರೌಢಿಮೆಯನ್ನೂ ಗುರುತಿಸಬಹುದಾದರೂ, ಇವುಗಳಲ್ಲಿ ಎಲ್ಲ ಕಡೆಯಲ್ಲೂ ಛಂದಸ್ಸು ನಿಯತವಾಗಿ ಬಂದಿಲ್ಲ. ಪಾಠ ವ್ಯತ್ಯಾಸದಿಂದ ಹೀಗಾಗಿದೆಯೆ ಎನ್ನುವುದನ್ನೂ ಏಕೈಕ ಆಕರದ ಆಧಾರದ ಮೇಲೆ ಹೇಳುವುದು ಕಷ್ಟವಾಗುತ್ತದೆ.

ಇಂಥ ಮಿತಿಗಳು ಏನೇ ಇದ್ದರೂ ಈ ಕೀರ್ತನೆಗಳ ಸೃಷ್ಟಿಯ ಹಿಂದಿನ ಉದ್ದೇಶಗಳನ್ನು ನಾವು ಮರೆಯುವಂತಿಲ್ಲ. ಇಡೀ ಭಾಗವತದಲ್ಲೇ ರಸಮಯವಾದ ಭಾಗವೆಂದು ಪ್ರಸಿದ್ಧವಾದ ದಶಮಸ್ಕಂಧ ಪೂರ್ವಾರ್ಧವನ್ನು ಕುರಿತು ರಚಿತವಾದ ಪ್ರಸನ್ನವೆಂಕಟರ ಈ ಕೀರ್ತನೆಗಳು ದಾಸಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿರುವ ಕೃತಿಗಳು ಎನ್ನುವುದಂತೂ ನಿಜ. ಶ್ರೀ ವಾದಿರಾಜ ಕೃತ (?)ವೆಂದು ಅಚ್ಚಾಗಿರುವ 'ಶ್ರೀಕೃಷ್ಣ ಬಾಲಲೀಲೆ' (ಸಂ.ಲಕ್ಷ್ಮೀಕಾಂತ ಭೀ. ಮುರಗೋಡ)ಯೂ ಭಾಗವತ ದಶಮಸ್ಕಂಧ ಪೂರ್ವಾರ್ಧವನ್ನೇ ಕುರಿತು ಬಂದಿರುವ ಕೃತಿಯಾದರೂ ಸಾಹಿತ್ಯಿಕ ಅಭಿವ್ಯಕ್ತಿಯ ದೃಷ್ಟಿಯಿಂದ ಅದಕ್ಕೂ ಪ್ರಸನ್ನವೆಂಕಟರ ಈ ಕೀರ್ತನೆಗಳಿಗೂ ಅಜಗಜಾಂತರ ವ್ಯತ್ಯಾಸವಿದೆ. 'ಇವರ ಪದಗಳಲ್ಲಿ ಪದಪ್ರೌಢಿಯೂ, ಅಲಂಕಾರವೂ, ಪ್ರಾಸವೂ ಹೆಚ್ಚಾಗಿ ಕಂಡುಬರುವುದು'[1] ಎಂಬ ಅಭಿಪ್ರಾಯ ಒಪ್ಪುವಂಥದು.

"ಭಾಗವತದ ಆದ್ಯಂತವನ್ನೂ ಹಾಡಾಗಿ ವೃತ್ತವಾಗಿ ದ್ವಿಪದೆಯಾಗಿ ಸಂಪೂರ್ಣವಾಗಿ ಕನ್ನಡಿಸಿದವರು ಪ್ರಸನ್ನರಾಯರು....ಗ್ರಂಥಶೋಧಕರು ಪ್ರಸನ್ನರ ಭಾಗವತವನ್ನು ಪೂರ್ತಿಯಾಗಿ ಸಂಗ್ರಹಿಸಿ ಶೋಧಿಸಿ ಮುದ್ರಿಸಿದರೆ ಮಹಾರಾಷ್ಟ್ರದ ಏಕನಾಥ ಭಾಗವತದಂತೆ ಉಪಯುಕ್ತ ಗ್ರಂಥವಾಗುವುದರಲ್ಲಿ ಸಂಶಯವಿಲ್ಲ"[2] ಎಂಬ ಅಭಿಪ್ರಾಯವಿದೆ. ಹೀಗೆಯೇ ಪ್ರಸನ್ನವೆಂಕಟರ ಮೂವರು ಮರಿಮಕ್ಕಳಲ್ಲಿ ಒಬ್ಬರಾದ ಬಾಳಾಚಾರ್ಯರ ಪಾಲಿಗೆ ಬಂದ ಗ್ರಂಥಗಳ ಪಟ್ಟಿಯಲ್ಲಿ ಭಾಗವತ ಚತುರ್ಥಸ್ಕಂಧ ಹಾಗೂ ಭಾಗವತ ಷಷ್ಠಸ್ಕಂಧಗಳ ಹೆಸರುಗಳು ಇರುವುದನ್ನು ಗಮನಿಸಿ ಶ್ರೀ ಎ. ಟಿ. ಪಾಟೀಲರು, 'ದಶಮಸ್ಕಂಧ ಭಾಗವತವನ್ನು ಕನ್ನಡದಲ್ಲಿ ಬರೆದಂತೆ ಇವುಗಳನ್ನು ಕೂಡ ಕನ್ನಡದಲ್ಲಿ ಬರೆದಿರಬಹುದೆಂದು ಊಹೆ ಮಾಡಿದರೆ ತಪ್ಪಾಗಲಾರದು'[3] ಎಂದು ಅಭಿಪ್ರಾಯಪಟ್ಟಿದ್ದಾರೆ.

---

1 ಕರ್ನಾಟಕದ ಹರಿದಾಸರು, ಎಚ್. ಕೆ. ವೇದವ್ಯಾಸಾಚಾರ್ಯ, ಪು. ೨೯೨.

2 ಶ್ರೀ ಕರ್ನಾಟಕ ಭಕ್ತವಿಜಯ (ಭಾಗ ೨), ಬೇಲೂರು ಕೇಶವದಾಸರು, ಪು. ೨೭೫.

3 ಶ್ರೀ ಪ್ರಸನ್ನವೆಂಕಟದಾಸರು ಮತ್ತು ಅವರ ಕೃತಿಗಳು, ಡಾ॥ ಎ. ಟಿ. ಪಾಟೀಲ, ಪು. ೫೪.

Rarest Archiver

ಈ ಊಹೆ ನಿಜವೇ ಇದ್ದದ್ದಾದರೆ ಆ ಕೃತಿಗಳು ಇದುವರೆಗೂ ಸಿಕ್ಕದಿರುವುದು ಹರಿದಾಸ ಸಾಹಿತ್ಯಕ್ಕಾಗಿರುವ ಒಂದು ದೊಡ್ಡ ನಷ್ಟವೆಂದೇ ಎನ್ನಿಸುತ್ತದೆ.

ಹಸ್ತಪ್ರತಿ-ಸಂಪಾದನೆ

ಪ್ರಸ್ತುತ ಕೃತಿಯನ್ನು ನಮಗೆ ದೊರೆತ ಏಕೈಕ ಮುದ್ರಿತಪ್ರತಿ (ಮು.೫೨–ದಾಸವರ್ಯ ಶ್ರೀ ಪ್ರಸನ್ನವೆಂಕಟರ ಭಾಗವತ)ಯನ್ನು ಆಧರಿಸಿ ಸಂಪಾದಿಸಲಾಗಿದೆ. ಕಾವ್ಯಪ್ರೇಮಿಯವರ ಸಂಗ್ರಹ(ಮು. ೫೧)ದಲ್ಲಿಯೂ ಇಲ್ಲಿಯ ೮ ಕೀರ್ತನೆಗಳು ಇವೆಯಾದರೂ ಅವಕ್ಕೂ ಮು. ೫೨ರ ಕೀರ್ತನೆಗಳಿಗೂ ಪಾಠಭೇದವಿಲ್ಲ. ಮು. ೫೨ನ್ನು ಶ್ರೀ ಕೌಜಲಗಿ ಬಂಡೇರಾಯರು ಹಾಗೂ ಶ್ರೀ ಕವಿಭೂಷಣ ಬೆಟಗೇರಿ ಕೃಷ್ಣರಾಯರು ಸಂಪಾದಿಸಿದ್ದು, ಕ್ರಿ. ಶ. ೧೯೨೮ರಲ್ಲಿಯೇ ಅದು ಪ್ರಕಟವಾಗಿದೆ. ಸಂಪಾದಕರು ಆ ಕೃತಿಯನ್ನು ೩–೪ ಹಸ್ತಪ್ರತಿಗಳನ್ನು ಬಳಸಿಕೊಂಡು 'ಯಥಾಮತಿ ತಿದ್ದಿ' ಸಂಪಾದಿಸಿದ್ದಾಗಿ ಹೇಳಿಕೊಂಡಿದ್ದಾರಾದರೂ, ಅದರಲ್ಲಿ ಪಾಠಾಂತರಗಳನ್ನು ಕೊಟ್ಟಿಲ್ಲ.

ಈ ಕೀರ್ತನೆಗಳ ಬೇರೆ ಹಸ್ತಪ್ರತಿಗಳು ದೊರೆಯದ ಕಾರಣ ಮು. ೫೨ರ ಪಾಠವನ್ನೇ ಬಳಸಿಕೊಂಡು ಇಲ್ಲಿಯ ಪಾಠಪರಿಷ್ಕರಣ ಕಾರ್ಯ ನಡೆದಿದೆ. ಅದರಲ್ಲಿ ಕಂಡ ಕೆಲವು ಲಿಪಿದೋಷಗಳನ್ನು (ಹ್ರಸ್ವ, ದೀರ್ಘ, ಅಲ್ಪಪ್ರಾಣ, ಮಹಾಪ್ರಾಣ-ಇಂಥವು) ಸರಿಪಡಿಸಿ ಕೊಟ್ಟಿದೆ. ಬಳಸಿರುವ ಪ್ರತಿಯ ಪಾಠ ವ್ಯತ್ಯಾಸ ಮಾಡಿಕೊಂಡಿರುವ ಕಡೆಗಳಲ್ಲಿ ಪುನರ್ರಚಿತ ಪಾಠಗಳನ್ನು ಚೌಕ ಕಂಸಗಳಲ್ಲಿಯೂ, ಮು. ೫೨ರ ಪಾಠಗಳನ್ನು ಅಡಿಟಿಪ್ಪಣಿಗಳಲ್ಲಿಯೂ ಕೊಟ್ಟಿದೆ. ಕೆಲವು ಊಹಾತ್ಮಕ ಪಾಠಗಳನ್ನು ಅವುಗಳ ಮುಂದೆಯೇ ದುಂಡು ಕಂಸಗಳಲ್ಲಿ ಪ್ರಶ್ನಾರ್ಥಕ ಚಿಹ್ನೆಯೊಂದಿಗೆ ಸೂಚಿಸಲಾಗಿದೆ. ಇಷ್ಟಾಗಿಯೂ ಇನ್ನೂ ಕೆಲವೆಡೆ ಪಾಠ ಪರಿಷ್ಕರಣ ನಡೆಯಬೇಕಾದ್ದಿದೆ ಎನ್ನಿಸುತ್ತದೆ. ಉದಾ. ಗೆ, ಕೀ. ೧೦, ನಂ. ೫ ; ಕೀ. ೫೧, ನಂ. ೪ ಇತ್ಯಾದಿ.

ಇಲ್ಲಿಯ ಕೀರ್ತನೆಗಳಲ್ಲಿ ಬರುವ ಪುರಾಣ ಪ್ರಸಂಗಗಳನ್ನು ಅನುಬಂಧ ೧ರಲ್ಲಿ ಮೊದಲಿಗೆ ಒಂದು ಬಾರಿ ಮಾತ್ರ ವಿವರಿಸಿ, ಉಳಿದಂತೆ ಆ ವಿವರಣೆಯ ಕೆಳಗೆ ಅವೇ ಪ್ರಸಂಗಗಳು ಬರುವ ಕೀರ್ತನೆಯ ಸಂಖ್ಯೆ ಮತ್ತು ನುಡಿಸಂಖ್ಯೆಗಳನ್ನು ಸೂಚಿಸಲಾಗಿದೆ.

ಕೃತಜ್ಞತೆಗಳು

ಈ ಕೃತಿ ಹೊರಬರುವಲ್ಲಿ ಅನೇಕರು ವಿವಿಧ ರೀತಿಯಲ್ಲಿ ನೆರವು ನೀಡಿದ್ದಾರೆ. ನಮಗೆ 'ಪ್ರಸನ್ನವೆಂಕಟರ ಭಾಗವತ'ದ ಒಂದು ಪ್ರತಿಯೂ ಸಿಕ್ಕದಿದ್ದ ಸಂದರ್ಭದಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದ ಶ್ರೀ ಎಸ್. ಶಿವಣ್ಣನವರು ತಮ್ಮ ಒಂದು ಪ್ರತಿ ಶ್ರೀ ಎಂ. ವಿ. ಸೀತಾರಾಮಯ್ಯನವರ ಬಳಿ ಇರುವುದಾಗಿ ತಿಳಿಸಿದರು. ಅವರ ಸೂಚನೆಯ ಮೇರೆಗೆ ಶ್ರೀ ಎಂ. ವಿ. ಸೀ.ಯವರನ್ನು ಸಂಪರ್ಕಿಸಿ

Rarest Archiver

ದಾಗ ಅವರು ಆ ಪ್ರತಿಯನ್ನು ಕಳುಹಿಸಿ ಉಪಕರಿಸಿದ್ದಾರೆ. ಈ ಇಬ್ಬರು ಮಹನೀಯರಿಗೂ ನಮ್ಮ ಅನಂತ ವಂದನೆಗಳು ಸಲ್ಲುತ್ತವೆ. ಸಂಪಾದನಾ ಕಾರ್ಯದ ಬಗ್ಗೆ ಆಗಾಗ ವಿಚಾರಿಸುತ್ತ ಸಲಹೆ ಸೂಚನೆಗಳನ್ನಿತ್ತ ಡಾ.ಜಿ. ವರದರಾಜರಾಯರಿಗೂ, ಡಾ. ಟಿ. ಎನ್. ನಾಗರತ್ನ ಅವರಿಗೂ, ಈ ಕೀರ್ತನೆಗಳ ರಾಗತಾಳಗಳನ್ನು ನಿಷ್ಕರ್ಷಿಸಿ ಕೊಟ್ಟ ಮೈಸೂರು ವಿಶ್ವವಿದ್ಯಾನಿಲಯದ ಲಲಿತ ಕಲೆಗಳ ಕಾಲೇಜಿನಲ್ಲಿ ರೀಡರ್ ಆಗಿರುವ ಸಂಗೀತ ಶಾಸ್ತ್ರಜ್ಞರಾದ ಶ್ರೀ ಬಿ. ಎಸ್. ವಿಜಯರಾಘವನ್ ಅವರಿಗೂ, ಹಲವು ಉಪಯುಕ್ತ ಮಾಹಿತಿ ನೀಡಿ ಉಪಕರಿಸಿದ ಶ್ರೀ ಸೀತಾರಾಮ ಜಾಗೀರ್‌ದಾರ್, ಶ್ರೀ ಎಂ. ವಿ. ವರದರಾಜನ್ ಅವರಿಗೂ, ಕರಡಚ್ಚುಗಳನ್ನು ತಿದ್ದುವಲ್ಲಿ ಸಹಕರಿಸಿದ ಶ್ರೀಮಂತಿ ನಗುಂವನಹಳ್ಳಿ ಪಿ. ರತ್ನ ಅವರಿಗೂ ನಮ್ಮ ವಂದನೆಗಳು.

ಟಿ. ಕೆ. ಇಂದುಬಾಯಿ

Rarest Archiver

ಕೀರ್ತನೆಗಳ ಕ್ರಮಸೂಚಿಕೆ

Rarest Archiver

Rarest Archiver

Rarest Archiver

ಶ್ರೀ ಪ್ರಸನ್ನವೆಂಕಟದಾಸರ ಭಾಗವತ

(ದಶಮಸ್ಕಂಧ ಪೂರ್ವಾರ್ಧ)

Rarest Archiver

Rarest Archiver

೧

ರಾಗ : ನಾಟಿ **ತಾಳ : ಝಂಪೆ**

ಶ್ರೀದೇವಿಯರಾಳ್ದ ಶ್ರೀ ವೇದ್ಯೈಕವೇದ್ಯ ಜಯ
ವೇದಗರ್ಭನುತಶ್ರೀಪಾದಾಬ್ಜಯುಗ್ಮ ಜಯ
ಯಾದವಕುಲಾಬ್ಧಿಗಾಲ್ಹಾದಕರ ಚಂದ್ರ ಜಯ
ಶ್ರೀಧೇನುಗಿರೀಶ ಸನಕಾದಿ ಮುನಿವಂದ್ಯ ಜಯ ಜಯ ೧

ಭೂಸತಿಯ ಭಾರಕೆ ವಿನಾಶಕಾರಣನೆ ಜಯ
ಪೋಷಕಾಧಾರಕ ಪರೇಶ ಕೇಶವನೆ ಜಯ
ಶೇಷಶಯನ ವೈಕುಂಠನಂತಾಸನ ಜಯ
ಈಶೇಂದ್ರ ಸುರಮುನಿಪಸಂಸೇವ್ಯ ಭವ್ಯ ಜಯ ಜಯ ೨

ದಾಶರಥಿ ದಾಶಾರ್ಹ ವಾಸಿಷ್ಠ ಕೃಷ್ಣ ಜಯ
ಗೋಸಮೂಹದ್ವಿಜದೇವದ್ವೇಷಿಕುಲಹರಣ ಜಯ
ದಾಸ ಕಪಿವರ ಭೀಮ ಶ್ರೀಸುಖಿಮುನೀಶ ಜಯ
ಪೇಶಲಚರಿತ್ರ ಶ್ರೀಪ್ರಸನ್ವೇಂಕಟೇಶ ಜಯ ಜಯ ೩

೨

ರಾಗ : ಸಾರಂಗನಾಟಿ **ತಾಳ : ಏಕತಾಳ**

ಶ್ರೋತವ್ಯವು ಇದೆ ಮಂತ್ರವ್ಯವು ಇದೆ ಧಾತವ್ಯವು ನಮಗೆ
ಪೂತವು ಹರಿಗುಣಗಾಥೆಯು ಮುಕುತಿಯ ಪಾಥೇಯವು ನಮಗೆ ಪ.

ಶ್ರೀಮದ್ದಶಮಸ್ಕಂಧ ಭಾಗವತ ಭೂಮಿಪ ಪರೀಕ್ಷಿತನು
ಧೀಮಜ್ಜನಗುರು ಶುಕಮುನಿಗೆ ನಮಿಸಿ ಪ್ರೇಮದಿ ಕೇಳಿದನು
ಈ ಮುಕುತಿಯ ಪಥ ಸಾಧನವು ಖಳಪಾಮರರಿಗೆ ದೂರ
ಶ್ರೀ ಮಹಾಲಕುಮಿಯ ರಮಣನ ದಾಸರ ಸ್ತೋಮಕೆ ಸೌಖ್ಯಕರ ೧

ಕರ್ಣಪುಟಗಳಿಗೆ ನೈರಂತರದಲಿ ಪೂರ್ಣಸುಧಾರಸವು
ನಿರ್ಣಾಯಕ ಶ್ರೀದಶಪ್ರಮತಿಶಾಸ್ತ್ರಾರ್ಣವಜ್ಞರ ಹಿತವು
ಚೂರ್ಣೀಕೃತ ಪಾಪಾಚಲವಜ್ರವು ಸ್ವರ್ಣ ವಿಪಗ ಕಥೆಯುಂ
ವರ್ಣಾವರ್ಣಗಳಿಂ ಕೀರ್ತಿಪರಾಭರ್ಣ ಸುಖದ ತತಿಯುಂ ೨

Rarest Archiver

ಎನಗಿಂತೊಂದೀಗುಣ ಜ್ಯೇಷ್ಠರ ಕ್ರಮವನು ಬಲಗೊಂಡಬುಜಾ
ಸನಪರ್ಯಂತರ ಗುರುಗಳಿಗೆರಗುವೆ ಅಣು ಬಾಲಿಶಮನುಜ
ಎಣಿಸದಲೆನ್ನಯ ನುಡಿ ತಪ್ಪುಗಳನು ಮನುಜೋತ್ತಮ ಮು[1][ಖ್ಯ][1]ರು
ಕನಡುಕ್ತಿಗಳಿಪ್ಪ ಎನ್ನದೆ ಕೇಳಿರಿ ಘನರು ದಯಾಪರರು ೩

ಚಿದ್ಗುಣಗಣನಿಧಿ ಚಿನ್ಮಯರೂಪ ಸಚ್ಚಿತ್ ಗೃಹತ್ರಯ ತಾನು
ಹೃದ್ಗುಹನಿಲಯ ಸದಾಶ್ರಿತಜನಸುಖದೋಗ್ಧಾಮರಧೇನು
ವಾಗ್ದೇವಿಯರಸ ವನಜಾಸನನುತ ದುಗ್ಧಾಬ್ಧೀಶ್ವರನು
ಅಗ್ರೇಸರ ಭಗವಜ್ಜನ ಸಜ್ಜನರುಗ್ಘಡಿಸುವರಿದನು ೪

ಆರಿದ ಪೇಳುವರು ಕೇಳುವರು ಮುರಾರಿಯ ಚರಿತೆಯ
ಕೀರುತಿ ವ್ಯಾಸಕುಮಾರನು ವರ್ಣಿಪ ಚಾರು ಮುಕುತಿ ಗತಿಯ
ಈರೇಳು ಜಗದಘ ಹರಿಪುದು ಕರ್ಣಾಪೂರಿತ ಪೀಯೂಷವು
ನಾರಾಯಣ ಪ್ರಸನ್ವೆಂಕಟಕೃಷ್ಣನ ತೋರಿಕೊಡುವ ರಸವು ೫

೩

ರಾಗ : ಕನ್ನಡಕಾಂಬೋಧಿ **ತಾಳ : ಅಟ್ಟ**

ಶ್ರೀಕೃಷ್ಣನ ಲೀಲಾವತಾರ ಘನ್ನ ಪ.
ಕೊಂಡಾಡುವೆ ಶ್ರವಣ ಮನನ ಮಾಡುವೆ ಅ. ಪ.

ಆದಿನಾರಾಯಣಾಖಿಲಜಗತ್ಕಾರಣ
ಮೋದಜ್ಞಾನ ಬಲಪೂರ್ಣ ಏಕಾರ್ಣವ ನ್ಯ
ಗ್ರೋಧ ಪತ್ರಾಸನ ಗ್ರಸಿತ ವಿಶ್ವಾಸನ
ವೇದಾನಂತಾವೇದ್ಯ ವಿಷ್ಣು ತಾನೇಕಾದ್ಯ
ವೇದಗರ್ಭನ ಶತವತ್ಸರನಿದ್ರಾವಿ
ನೋದಿ ಏಕೇಶ್ವರ ನಾರಾಯಣೇಧರ
ಸಾಧನ ಸಾಧ್ಯಪರ ಆನಂದಶೋಧಕ ಹೃದ್ಗೋಚರ
ಮುಕ್ತಾಮುಕ್ತ ಭೇದಜ್ಞಜನ ಮೋಹರ ೧

ಶ್ರೀಭೂದುರ್ಗಾರೂಪಿ ಶ್ರೀಪತಿಯೆದೆಯಪ್ಪಿ
ತಾ ಬಂದೀತೆರ ನಿಂತು ಸ್ತೋತ್ರ ಮಾಡಲು ಇಂತು
ಶೋಭನ ನುಡಿಗೇಳ್ದು ಸ್ವಾಮಿ ತಾನೆದ್ದು ಶೂ

---

1 ಖ

Rarest Archiver

ನ್ಯಾಭಿದನಾದನು ಪಂಚಾತ್ಮ ದ್ವಿಷಡಾತ್ಮ
ಶ್ರೀ ಭಗವಾನ್ ದಶಶತಸಹಸ್ರಾಂಶದಿ
ಶೋಭಿಪಾನಂತ ಸ್ವರೂಪವ ಪ್ರಕಟಿಸಿ
ತಾ ಪ್ರಕೃತಿಯ ಗ್ರಹಿಸಿ ಬೊಮ್ಮಾದಿ ವೈಬುಧರನು ಸೃಜಿಸಿ
ಸೂಕ್ಷ್ಮಸೃಷ್ಟಿಯು ಬ್ರಹ್ಮಾಂಡವ ಹುಟ್ಟಿಸಿ ೨

ಬೊಮ್ಮಾಂಡವನ್ನಳಿದು ಬೊಮ್ಮನೊಳಗೆ ಇದ್ದು
ಉಮ್ಮಯದಿಂ ವಿಶ್ವ ಉದ್ಭವ ಮಾಡುವ
ಹಮ್ಮಿನ ಅಹಂಕಾರ ಹರನ ಪೊಕ್ಕರಿಸುವ
ರಮ್ಮೆಯರಸ ವಿಷ್ಣು ರಾಜೀವನಾಭನು
ಅಮ್ಮಿತಲಿವತಾರ ಅಖಿಲಭೂಭಾರಹರ
ಅಮ್ಮರ ಕಾರ್ಯಕಧ್ಯಕ್ಷ ಆಶ್ರಿತಪಕ್ಷ
ಧರ್ಮಾತ್ಮ ಖಳಸಂಹಾರ ಧರೆಯೊಳು ಧರ್ಮೋದ್ಧರಣತತ್ಪರ
ಸಂತತ ಬ್ರಹ್ಮಣ್ಯದೇವವರ ೩

ಪ್ರಣತರಿಚ್ಛೆಸುಸಾರ ಪೊರೆವ ಕೃಪಾಕರ
ಘನಶ್ರುತಿಹರನೊದ್ದ ಗಹನಾಬ್ಧಿಮಥಿಸಿದಾ
ವನಿಯಕದ್ದನ ಸೀಳ್ದ ಮರವರರಿಪುಮರ್ದ
ಮುನಿಕಶ್ಯಪನ ಕಂದ ಮತ್ತೆನೃಪರಕೊಂದ
ಅನಿಮಿಷಾಪದ್ಧುರ ಅರ್ಜುನಹಿತಕರ
ದನುಜಮೋಹನಕರ ದುರುಳಕಲಿಮಲಹರ
ಅನಂತಾನಂತವತಾರ ಅಶುಭದೂರ ಅನುದಿನ ಮುದದಾತಾರ
ಅಪ್ರಾಕೃತ ಚಿನುಮಯ ಸಚ್ಛರೀರ ೪

ಹಿಂದೆ ಸುರಾಸುರರ್ಕಿಂದಿನ ಸಂಗರ
ದಂದಪಜಯ ಹೊಂದಿದ ಸುರರು ಧರೆಗೈದಿ
ನೊಂದು ದುಃಶ್ಚಿತರಾಗಿ ನೃಪಕುಲೋದ್ಭವರಾಗಿ
ವೃಂದಾರಕಂಶದವನಿಪರ ವ್ಯಥಿಸಿದ
ರಂದು ಭೂಭಾರಿಸೆ ರಸೆಗುಂದಿ ರೋದಿಸೆ
ಬಂದು ನಿರ್ಜರರಾಗೆ ಬಳಲಿ ಹೇಳಲಾಗೆ
ಸಿಂಧುಶಯನನ ಬಳಿಗೆ ಬೊಮ್ಮಭವೇಂದ್ರರು ಹೋಗಿ ಬ್ಯಾಗೆ
ಪ್ರಸನ್ನವೆಂಕಟಮಂದಿರನ ತುತಿಸಿಲಾಗೆ ೫

Rarest Archiver

೪

ರಾಗ : ಸಾರಂಗ **ತಾಳ : ಝಂಪೆ**

ದ್ಯುಸ್ಥ ನಿಮ್ಮಂಘ್ರಿರಜ ಮಸ್ತಕದಿ ಧರಿಸುತ ನಿ
ರಸ್ತಾಘರಾವು ಚಿಂತಾಗ್ರಸ್ತರಾಗಿಹೆವು ಗಡ
ಪ್ರಸ್ತುತ ವಸುಧೆಯು ಅಂತಸ್ತಾಪವಿಡಿದು ಅಸ್ವಸ್ಥಮನದಲಿ ಉಸುರಲು
ವಿಸ್ತರಿಸಬಂದೆವು ಸಮಸ್ತ ಸುರರಿಂದೀಗ
ದುಸ್ತರದ ದೈತ್ಯರುಧ್ವಸ್ತರೆಂದೆಂದಿಗು ಪ್ರ
ಶಸ್ತೋಕ್ತಿಯಿಂದಭಯ ಹಸ್ತವಂ ನೀಡೆಂದು ತ್ವತ್ ಸ್ತೋತ್ರವಂ ಮಾಳ್ಪೆವು ೧

ನೀನು ಪರದೈವ ನಿನ್ನನ್ನು ಹೊಂದಿದೆವಾವು
ನೀನೆ ನಿನ್ನಿಂದಲವತರಿಸಿ ದುಷ್ಟರ ಸದೆವೆ
ನೀನೆ ನಿನಗಾಗಿ ಸದ್ಧರ್ಮಪದ್ಧತಿದೋರ್ವೆ ನಿನ್ನ ದೆಸೆಯಿಂದೆಲ್ಲರ
ಜ್ಞಾನೋದಯವು ನಿನ್ನ ವಿಜ್ಞಾನಭಕುತಿಯನು
ನೀನಿತ್ತು ನಿನ್ನಲ್ಲಿ ವಿಶ್ವಾಸವಂ ಬಳೆಸು
ಸಾನುರಾಗದಲಿ ಪೊರೆ ಹೇ ದಾತ ಹೇ ತ್ರಾತ ಹೇ ನಾಥನೇ ನಮೋನಮೋ ೨

ಶಿಷ್ಟರೆಲ್ಲರು ಹೀಗೆ ಸಾಷ್ಟಾಂಗದಿಂ ನಮಿಸೆ
ಹೃಷ್ಟಮುಖನಾಗಿ ಶ್ರೀವಿಷ್ಣು ನುಡಿದನೆಲೆ ನಿ
ರ್ದುಷ್ಟ ಮತಿಗಳಿರ ನಾ ಕೃಷ್ಣಾಭಿದಾನದಲಿ ವೃಷ್ಣಿಕುಲವಸುದೇವನ
ಇಷ್ಟಗೃಹಿಣಿಯ ಉದರ ಶ್ರೇಷ್ಠದಿಂದುದಿಸುತಿಹೆ
ದುಷ್ಟ ದೈತ್ಯರಕುಲವ ನಷ್ಟಮಾಡುವೆ ನಿಮ್ಮ
ಇಷ್ಟ ಪೂರಣಮಾಗೆ ತುಷ್ಟಿಪಡುವಳು ಭೂಮಿಯು ಕಷ್ಟ ಬಿಡಿ ಸುಖಿ
ಸಿರೆನಲು ೩

ಈ ಸುರರ ಮೊದಲೆ ಹರಿದ್ವೇಷಿ ಕಾಲ್ನೇಮಿ ಭೋ
ಜೇಶ ಮಥುರಾಪುರದಿ ತಾ ಸ್ವಕೀಯ ಯಾದವರ
ದೇಶಾಂತರಕೆ ಅಟ್ಟಿ ವಸುದೇವ ದೇವಕಿಯು ಲೇಸಾಗಿ ಮದುವೆಮಾಡೆ
ಈ ಸತಿಯು ಬಸಿರೆಂಟು ಮೋಸ ನಿನಗೆಂದು ಆ
ಕಾಶವಾಣಿಯು ನುಡಿಯಲಾಸಮಯಕಂಜಿ ಬಲು
ರೋಷದಲ್ಲಿ ದೇವಕಿಯ ಘಾಸಿಸಲು ಶೌರಿ ಪೃಥ್ವೀಶನಂ ತಿಳಿದುಳುಹಿದ ೪

Rarest Archiver

ಆಗ ಕೊಲದುಂಳುಹಿದನು ಯೋಗಿ ನಾರದನ ನುಡಿ
ಗಾಗಂಜಿ ಪಾಪಿ ಕಾರಾಗೃಹದಿ ಬಸಿರಾರು
ತಾ ಘಾತಿಸಿದ ಏಳನೇ ಗರ್ಭ ನಿಲ್ಲದೆ ಪತನಾಗೆ ಖಳ ಸುಮ್ಮನಾದ
ಬೇಗ ದುರ್ಗೆಯು ರೋಹಿಣೀ ಗರ್ಭದಲಿ ಇಡಲು
ನಾಗೇಶನವತಾರ ಶ್ರೀಗೋಪ್ತನಾವೇಶ
ನೀಗೇಳು ತಿಂಗಳಿಗೆ ಆ ಗೋಕುಲದಲಿ ಶುಭಯೋಗದಲಿ ಜನಿಸಿದ ಗಡ ೫

ಹರಿಯಾಜ್ಞೆ ವಹಿಸಿ ತಾ ಸಿರಿದುರ್ಗೆ ಯಶೋದೆಯುಳ
ವರಗರ್ಭದಲಿ ನಿಂತು ಧರೆಗಿಳಿದಳಾಬಾಲೆ
ಪುರುಷೋತ್ತಮ ದೇವಕಿಯು ಪರಮಜಠರದಿ ನಿಜೈಶ್ವರಿಯದಲಿ ಕ್ರೀಡಿಸುತಿರೆ
ಸುರರ ಸಮೂಹಕೆ ಅಮಿತ ಹರುಷವಾಯಿತು ಖಳನಿ
ಕರಕೆ ಉತ್ಪಾತ ಸಂದರುಶನವು ಫಲಪುಷ್ಪ
ಭರಿತ ತರುಲತೆಯುವನಿ ಚಿರಭದ್ರಮಯುವಾಗೆ ಕರೆದವಾವು ಕೊಡವಾಲ್ಗಳ ೬

ದೇವರ್ಕಳೆಲ್ಲ ಪರದೇವತೆಯ ಆಜ್ಞೆಯಲಿ
ತೀವಿದ ಸಂತೋಷದಲಿ ಭೂವಲಯದಲಿ ಹುಟ್ಟಿ
ಕೋವಿದತೆ ಬೈಚಿಟ್ಟು ತಾವು ದುರ್ಬಲರಂತೆ ದೇವರಿಪುಗಳಿಗಂಜಲು
ಮಾವ ಕಂಸನ ಕೊಲುವ ಭಾವದಲಿ ತಂದೆ ವಸು
ದೇವನಂಗನೆ ತಾಯಿ ದೇವಕಿಯು ಜಠರದಲಿ
ಶ್ರೀವಾಸುದೇವಾವಿರ್ಭಾವನಾದನು ಸ್ವೇಚ್ಛೆ ಶ್ರೀವರ ನೃಸಿಂಹನಂತೆ ೭

ಶ್ರಾವಣದ ಬಹುಳಾಷ್ಟಮಿ ವಿಧುಬಿಂಬೋದಯದಿ
ದಾವ ರೋಹಿಣಿ ಕೂಡಿದವೇಳೆ ಬೊಮ್ಮಾದಿ
ದೇವರ್ಕಳಂಬರದಿ ತೀವಿ ಸ್ತೋತ್ರವ ಮಾಡೆ ಶ್ರೀ ವನಜನಯನ ಕೃಷ್ಣ
ಶ್ರೀವತ್ಸಮಣಿಕಿರೀಟ ಕೌಸ್ತುಭಕುಂಡಲವಲಯ
ಪೀವರ ಚತುರ್ಭುಜ ಗದಾವನಜಚಕ್ರಧರ
ಪ್ರಾವೃಟ್‌ಪಯೋದಾಂಗ ಸುವರ್ಣವಸನಾದಿದೇವನದ್ಭುತಬಾಲನು ೮

ಸಾಸಿರ ಮುಂಗುರುಳ ಮುಖ ವಾಸುದೇವನ ಕಂಡು
ಸ್ತ್ರೀಸಹಾನಕದುಂದುಭಿ ಸ್ತುತಿಸೆ ಶ್ರೀಕೃಷ್ಣ
ಶೈಶ್ವರೂಪದಿ ದ್ವಿಭುಜ ಲೇಸಾಗಿ ಮೋಹಿಸಿದ ಶ್ರೀಶ ಜನನೀಜನಕರ
ಈ ಸುತನ ಕಂಡು ಗೋಸಾಸಿರದಶತಗಳನು
ಭೂಸುರರಿಗಿತ್ತನು ಸಂತೋಷದಲಿ ವಸುದೇವ
ಭೂಸತಿಗೆ ಮಾಂಗಲ್ಯರಾಶಿ ಕೈವಶವಾಯ್ತು ಶ್ರೀಪ್ರಸನ್ವೆಂಕಟೇಶನಂದಿಸೆ ೯

Rarest Archiver

೫

ರಾಗ : ಸಾರಂಗ ತಾಳ : ಏಕತಾಳ

ಶ್ರೀವಲ್ಲಭನುದಿಸಿದಾ ಕ್ಷಣದಿ ದುರ್ಗಾ
ದೇವಿ ಹುಟ್ಟಿದಳು ಗೋಕುಲದಿ ಪ.

ವನಜ ಭವೇಶೇಂದ್ರಾದ್ಯರು ನೆರೆದರು
ವನಜನಾಭನ ಸ್ತುತಿಮಾಡಿದರು
ಅನಿಮಿಷರಾಗ ಹೂವಿನ ಮಳೆಗರೆದರು
ಘನಗಂಧರ್ವರು ಪಾಡಿದರು ೧

ದೇವದುಂದುಭಿ ಮೊಳಗಿದವಂಬರಲಿ
ದೇವನಾರಿಯರ್ಹಾಡಿದರಲ್ಲಿ
ಭುವನತ್ರಯ ಮಂಗಳಮಯವಾಯಿತು
ದೇವಾರಿಗಳ ಬಲವೆಳದಾಯಿತು ೨

ಕಾವಲಿದ್ದವರಿಗೆ ಕಾವಳ ಕವಿಯಿತು
ತಾವಾಗಿ ಪುರದ್ವಾರವು ತೆರೆದವು
ಪಾವನಚರಿತನ ಮಾಯದಿ ನಿದ್ರೆಯು
ತೀವಿತು ಖಳರನು ಮೋಹಿಸಿತು ೩

ಭೋಜಪತಿಯ ಭಯಕಾನಕದುಂದುಭಿ
ರಾಜೀವನೇತ್ರನ್ನೊಯ್ದನು ಪ್ರಜಕೆ
ಶ್ರೀ ಜಗದೀಶನ ಮೇಲಮೃತವ ನೀ
ರಾಜಿಸಿದವು ಮೇಘಾಳಿಗಳು ೪

ಸಾಸಿರಫಣಿ ಫಣಛತ್ರವ ಮಾಡಿದ
ದಾಶರಥಿಗೆ ಮುನ್ನಂಬುಧಿಯು
ತೋಷದಿ ದಾರಿಯನಿತ್ತಂತ್ಯಮುನೆಯು
ಶ್ರೀಶಗೆ ಮಾರ್ಗವನಿತ್ತಳು ೫

ವಸುದೇವ ಗೋಷ್ಠಕೆ ಬಂದ್ಯಶೋದೆಯುಳ
ಶಿಶು ದುರ್ಗೆಯ ತಂದು ಸುತನಿಟ್ಟ

Rarest Archiver

ಶಶಿಮುಖಿ ದೇವಕಿದೇವಿಗೆ ಕೊಟ್ಟನು
ಪ್ರಸುತ ಸುದ್ದಿಯ ಕೇಳಿದ ಕಂಸ ೬

ಬಿಟ್ಟ ಮಂಡೆಯಲೆದ್ದು ಬಲು ಲವಲವಿಕೆಯ
ಕಟ್ಟುಗ್ರಕೋಪದಿ ನಿಶಿಥದಲಿ
ಹುಟ್ಟಿದ ಸ್ಥಳಕೈದಿ ಭಗಿನಿಯ ಕೈಯಿಂದ
ದುಷ್ಟನು ಸೆಳೆದನು ದುರ್ಗೆಯನು ೭

ಅಣ್ಣನ ಕಾಲ್ಪಿಡಿದಳುತ ದೇವಕಿದೇವಿ
ಹೆಣ್ಣುಮಗಳು ಇದು ಪುರುಷಲ್ಲ
ಪುಣ್ಯಸಂತಾನವನುಳುಹೆಂದರೆ ಆಕಾ
ರುಣ್ಯದಿ ಕೊಲಲಿಕ್ಕೆ ಅನುವಾದ ೮

ಜಗಜ್ಜನನಿಯು ಕಾಲ್ವಿಡಿದಪ್ಪಳಿಸಲು
ಮುಗಿಲಿಗೆ ಹಾರಿದಳು ನಗೆಮೊಗದಿ
ವಿಗಡ ಕಂಸನು ಬೆದರಿದ ಎದೆದಿಗಿಲಲಿ
ಖಗಗಮ ಪ್ರಸನ್ವೆಂಕಟನಿಯಮವಿದು ೯

೬

ರಾಗ : ತೆಲುಗು ಕಾಂಬೋಧಿ ತಾಳ : ಅಟ್ಟ

ಅಂತರಿಕ್ಷಾದ್ಭುತ ನೋಡಿದ ಬಹು
ಕಾಂತಿವ್ಯೈಯಳ ಕಂಡು ಬಾಡಿದ ಪ.

ಕಾಂತೆ ಮಾತಾಡಿದಳವನೊಳು ಈ
ಭ್ರಾಂತಿಯು ನಿನಗ್ಯಾಕೆಂದಳು ಅ. ಪ.

ಕಂಸಕೇಳಪರಾಧಿ ನಾನಲ್ಲ ನನ್ನ
ಹಿಂಸೆ ನಿನಗೆ ಶಕ್ಯ ತಾನಲ್ಲ
ಪುಂಸನೊಬ್ಬನ್ಯತ್ರ ಇಹನು ನಿನ್ನ
ಧ್ವಂಸಕ್ಕೆ ಕಾರಣನಹನು ೧

ಬ್ರಹ್ಮಾದಿವಂದ್ಯಳು ಕನ್ಯಳು ಆ
ಹಮ್ಮಿನ ಖಳಗಿಂತೆಂದಳು

Rarest Archiver

ದುಷ್ಟ್ಮಾನದಲಿ ಚಿಂತೆ ಬಿಟ್ಟನು ಬಂಧ
ನಮ್ಮೋಚನವ ಮಾಡಿಬಿಟ್ಟನು ೨

ವ್ಯರ್ಥ ನಿಮ್ಮಿಬ್ಬರ ನೋಯಿಸಿದೆ ಶಿಶು
ಹತ್ಯಕೆ ಕಾರಣನೆನಿಸಿದೆ
ಪ್ರಾರ್ಥನೆ ಮಾಡುವೆ ಕ್ಷಮಿಸೆಂದು ಸ
ಮರ್ಥ ಸುಶೀಲರು ನೀವೆಂದು ೩

ಶೌರಿ ನುಡಿದನು ಚಿಂತ್ಯಾತಕೆ ನೀ
ಕಾರಣನಲ್ಲೊ ಸುಖದುಃಖಕೆ
ಪ್ರೇರಕ ನಿಯಾಮಕ ಹರಿತಾನು ಸ್ವ
ಪ್ಪಾರ ಪಾತಾರ ಪಂತಾರನು ೪

ಕೋಪವ ಜರಿದು ಮನೆಗೆ ಬಂದು ಪಶ್ಚಾ
ತ್ತಾಪದಿ ಕಳೆದ ಯಾಮವನೊಂದು
ತಾ ಪುನರಪಿ ಪಾಪಕ್ಕೆಳಸಿದ ದುಷ್ಟ
ಪಾಪಾತ್ಮ ಮಂತ್ರಿಗಳ್ಕರೆಸಿದ ೫

ಮೊದಲಂತೆ ದುರ್ಗೆ ಬಾಲಿಕೆಯಾಗಿ ತಾಯ
ಬದಿ ಮಲಗಿದಳು ಹಾಸಿಕೆಯೊಂದಿ
ಮುದವನಿತ್ತಳು ತಾಯಿ ತಂದೆಗೆ ಶ್ರೀ
ಯದುಕುಲೇಂದ್ರನ ಪ್ರಿಯಳಿಂದಿಗೆ ೬

ಕನ್ಯಳ ಮಾತು ಮಂತ್ರಿಗಳಿಗೆ ಕಂಸ
ಚೆನ್ನಾಗಿ ಪೇಳಿ ಪಾಪಿಗಳಿಗೆ
ಚಿನ್ನರ ಹಿಂಸೆಗೆ ನಡೆದರು ದೈತ್ಯ
ಮನ್ಯರು ಹಿಂಸಾಕ್ರೀಡಾಪರರು ೭

ನಂದವ್ರಜದಿ ನಂದನರಾಣಿ ನಿದ್ರೆ
ಹೊಂದಿರೆ ಸುತನ ಪಡೆದ ವಾಣಿ
ಅಂದಿನ ರಾತ್ರಿಲಿ ಕೇಳ್ದರು ಆ
ನಂದಾಬ್ಧಿಯಲಿ ಓಲಾಡಿದರು ೮

ಆನಂದಸಾಂದ್ರಾಪ್ರಮೇಯನು ಚತು
ರಾನನ ಹರನ ಸೃಷ್ಟಾರನು

Rarest Archiver

ಆ ನಂದನು ಯಶೋದೆಯು ತಮ್ಮ ಈ
ಸೂನುಯೆಂದರು ನೋಡಿ ಅಮ್ಮಮ್ಮ ೯

ದೈವಜ್ಞರು ನೆರೆಕೊಂಡರು ಪರ
ದೈವ ಬಾಲಕನೆಂದು ಕಂಡರು
ದೇವೇಶ್ವರಗೆ ಜಾತಕರ್ಮವ ಮಾಡಿದ
ರು ವಿಶ್ವಕರ್ಮಜ್ಞ ಮಾಧವಗೆ ೧೦

ಮಹೋತ್ಸವದಿ ನಂದಗೋಪನು ಅಮಿತ
ಗೋವು ಹಿರಣ್ಯರತ್ನಗಳನ್ನು
ಸುವಸ್ತ್ರ ಅನ್ನ ಭೂದಾನವ ಭೂ
ದೇವರಿಗಿತ್ತನು ನಿಧಾನವ ೧೧

ಸುಪ್ರಭಾತದಲಿ ಒಪ್ಪಿದ ಬಾಲಸೂ
ರ್ಯ ಪ್ರಭಾನಂತನಂತರ ಚೆಲ್ವ
ಸುಪ್ರೀತಿಕಾರಣನು ಜನಕೆ ದೈ
ತ್ಯಪ್ರಾಣಹರಣನು ತ್ರಿಭುವನಕೆ ೧೨

ಸಿಂಗರಿಸಿದರ್ಗೋಪಗೋಗಳು ಗೋ
ಪಾಂಗನೇರ್ಮಂಗಳ ಸ್ವನಗಳು
ರಂಗಪೂರ್ಣೇಂದೂದಯವಾಯ್ತು ಅಂತ
ರಂಗ ತೋಷಾಬ್ಧಿಲಿ ಉಬ್ಬಿತು ೧೩

ಪಂಕಜನೇತ್ರೇರು ಗೋಪೇರು ವಸ್ತ್ರಾ
ಲಂಕಾರವಿಟ್ಟರು ನಲಿದರು
ಕುಂಕುಮರಸದೋಕುಳಿಯಾಟ ಶ್ರೀ
ಪಂಕಜನಾಭ ಹುಟ್ಟಿದ ಮಾಟ ೧೪

ಪ್ರತ್ಯಬ್ದಕೀವ ಕಪ್ಪವಕೊಂಡು ನಂದ
ಪೃಥ್ವೀಪತಿ ಕಂಸನ ಕಂಡು
ಅರ್ಥವನವನಿಗೊಪ್ಪಿಸಿದನು ತನ್ನ
ಭ್ರಾತೃ ವಸುದೇವನ ಕಂಡನು ೧೫

ಯಮುನಿಂದ ಬಂದು ಕಪ್ಪವ ತಂದುಕೊಟ್ಟು
ಗಮನಕುಬ್ಜುಗಿಸೆ ಶೂರಜನೆಂದು

Rarest Archiver

ಆಮಿತೋತ್ಪಾತವು ಬೃಹದ್ವನಕೆಂದ ಕೇಳಿ
ಯಮುನ ತಂಗಿಯು ತೀರಕೆ ಬಂದ ೧೬

ಅನ್ನಕ್ಕೆ ಮೊದಲೆ ಕಂಸನ ಧಾತ್ರಿದೇವ
ಕನ್ನಿಕೆಯಂತೆ ಸೋಗಿನ ಗಾತ್ರಿ
ಚಿನ್ನ ಪುರುಷೋತ್ಮನಿದ್ದಲ್ಲಿಗೆ ನಂ
ದನ್ನ ವಸ್ತ್ರದ ಗೃಹ ಪೊಕ್ಕಾಗೆ ೧೭

ಶಿಶುರೂಪ ಹರಿಯು ಮಾಯದಲಾಗೆ ತಾಯಿ
ಯಶೋದೆಗೆ ನಿದ್ರೆಯು ಕವಿದಾಗೆ
ವಿಷಮರಕ್ಕಸಿ ಮೊಲೆಗೊಟ್ಟಳು ಆಕೆ
ಯಸು ಸಹ ಹೀರಿದ ತೃಟಿಯೊಳು ೧೮

ಮೃತಳಾದಳು ಸಾರ್ಧಯೋಜನವನು
ಕ್ಷಿತಿಯನ್ನು ವ್ಯಾಪಿಸೆ ವ್ರಜಜನ
ಅತಿಯಾಶ್ಚರ್ಯವಬಡಲಾಗೆ ಗೋ
ಪತಿ ಬಂದು ಕಂಡ ಬೃಹದ್ವನದಾಗೆ ೧೯

ತ್ರೈಕಾಲದರ್ಶಿ ನಮ್ಮಣ್ಣನು ಅ
ನೇಕ ಉತ್ಪಾತವ ಪೇಳ್ದನು
ನಾ ಕಂಡೆ ಪ್ರಸನ್ವೆಂಕಟೇಶನ ಲೀ
ಲಾಕೌತುಕವೆಂದ ನಂದನು ೨೦

೭

ರಾಗ : ಗಾಂಧಾರಿ **ತಾಳ : ಅಟ್ಟ**

ಕೆಣಕಿ ಕೆಟ್ಟಳು ಪೂತನಿಯು ಹರಿಗೆ
ಸ್ತನವ ಕೊಟ್ಟು ಕೊಂಬೆನೆಂಬ ಹವಣಿಕೆಯಿಂ ಪ.

ವನಜಭವಾಂಡ ನುಂಗುವನ ಹೃದ್
ವನಜದಿ ಮುನಿಗಳಿಗ್ಹೊಳೆದು ತೋರುವನ
ನೆನೆದವರಘಕುಲಹರನ ಭಗವ
ಜ್ಜನರು ಸಜ್ಜನರಿಗೆ ಸುಲಭನೆನಿಪನ ೧

Rarest Archiver

ಶ್ರೀಲೋಲನವಳಿದೆಮೇಲೆ ಬಾಲ
ಲೀಲೆಯು ತೋರ್ದು ಇಕ್ಕಿದನು ಚಪ್ಪಾಳೆ
ಶೈಲೇಂದ್ರನಂತೆ ಬಿದ್ದವಳ ಕಂಡು
ಗೋಳಿಟ್ಟಿತಾಗ ಗೋಪಾಲರ ಮೇಳ ೨

ಎತ್ತಿಕೊಂಡಪ್ಪಿದಳು ಮಗನ ಗೋಪ
ಕರ್ತ ಸೋಜಿಗವೆಂದುತ್ಪಾತ ಗೆಲಿದನ
ಪುತ್ರಂಗೆ ಗವ್ಯಾಮೃತದಲಿ ಸೇಚಿ
ಸುತ್ತ ಗೋಖುರಪಾಂಸು ಇಟ್ಟು ಪಣೆಯಲಿ ೩

ಸತ್ಪಾತ್ರರಿಗೆ ಸರ್ವಸ್ವವನು ಕೊಟ್ಟು
ಸೂಕ್ತಗಳಿಂದಾಶೀರ್ವೋಕ್ತಿ ಪಡೆದನು
ಮುಕ್ತಾಮುಕ್ತರ ಒಡೆಯನಿಗೆ ಯೋಗಿ
ಹೃತ್ಪೀಠದಲ್ಲಿ ರಾಜಿಸುವ ಮಹಿಮಗೆ ೪

ರಕ್ಕಸಿಗಗ್ನಿಯ ಕೊಡಲು ಆಕೆ
ಯಕ್ಕಾಯ ಧೂಮಾಮೋದವಾಗಿರಲು
ಚಿಕ್ಕ ರಂಗನ ಬಾಯಿ ಮುಟ್ಟಿ ಇ
ದಕ್ಕಾರಣ ಪ್ರಸನ್ವೆಂಕಟನ ಸೃಷ್ಟಿ ೫

೮

ರಾಗ : ಮೋಹನ ಕಲ್ಯಾಣಿ ತಾಳ : ಅಟ್ಟ

ಪುತ್ರಂಗೆ ಎರಡಾರನೆಯ ದಿನ ಗೋಪಿ
ಮುತ್ತೈದೆಯರ ಕರೆದಳಾದಿನ ಪ.

ಮಿತ್ರೇಂದುಕೋಟಿಕಳಾತ್ಮಗೆ ಮೃಗ
ನೇತ್ರೇರಲಂಕರಿಸಿದರಾಗೆ ಅ. ಪ.

ಮುದ್ದುಮೋರೆಯ ಮುಂಗುರುಳಾಳಿಯ ಸ
ತ್ಪದ್ಮರಾಗದ ಅರಳೆಲೆಯ
ಮುದ್ದಿಕಾಯಿ ಮಕರ ಕುಂಡಲಕರ್ಣ ಸ್ನೇಹ
ಪೊದ್ದಿದ ಕರ್ಣ ಕಾಡಿಗೆಗಣ್ಣ ೧

Rarest Archiver

ಸುಧೆಯ ಸೂಸುವನಾಗಿ ಕೂಸಿಗೆ ರತ್ನ
ಪದಕ ಹಾರಗಳೊಪ್ಪೆ ಶ್ರೀಶಗೆ
ಚದುರೇರಿಟ್ಟರು ತಮ್ಮ ಮನೋಹರ ಅಂ
ಗದ ಹುಲಿಯುಗುರು ಮುತ್ತಿನಸರ ೨

ಕೊರಳ ಕೌಸ್ತುಭ ಮುಂಗೈ ಮುರಿಗೆಯ ಸಣ್ಣ
ಬೆರಳುಂಗುರದ ಮುರಾರಿಯು
ಕಿರಿಗಂಟೆ ಉಡುದಾರ ಬುಲ್ಲಿಕಾಯಿಯ ಶ್ರೀ
ಚರಣದಂದುಗೆ ಗೆಜ್ಜೆಕಾಯಿಯ ೩

ತರಳನಪ್ಪಿಕೊಂಡರು ತರಳೆಯರು ನೀಲ
ಮರಿಬಂಡುಣಿಯ ಕುರುಳೆಯರು
ಹರಿಯ ಹರಿಮಣಿ ತೊಟ್ಟಿಲಲಿಟ್ಟರು ಬಲು
ಹರುಷವಾರ್ಧಿಲಿ ಜೋಗುಳಿಟ್ಟರು ೪

ಜೋಜೋ ಝಷಕುಲೋತ್ತರ ಕರ್ಮ ಜೋಜೋ
ಜೋಜೋ ಜಲಧಿ ಮಂಥನ ಕೂರ್ಮ
ಜೋಜೋ ವಸುಂಧೆ ಸ್ಥಾಪಕ ಕೋಲ ಜೋಜೋ
ಜೋಜೋ ಖಳವಿದಾರಣ ಶೀಲ ೫

ಜೋಜೋ ಬಲಿವಿದಾರಕ ಭ್ರಾತ ಜೋಜೋ
ಜೋಜೋ ಸುರಭಿ ಭೂಸುರನಾಥ
ಜೋಜೋ ವನಚರಾನ್ವಯಚರ ಜೋಜೋ
ಜೋಜೋ ನವನೀತದ ಚೋರ ೬

ಜೋಜೋ ಜಿತಖಳ ಪತಿವ್ರತ ಜೋಜೋ
ಜೋಜೋ ಮತಿಹೀನ ಕಲಿಹರ್ತ
ಜೋಜೋ ದ್ರುಹಿಣ ಶಂಕರ ಗೋಪ್ತ ಜೋಜೋ
ಜೋಜೋ ನಿಖಿಳ ಭುವನ ವ್ಯಾಪ್ತ ಜೋಜೋ ೭

ಮದಿರ ನಯನೆಯರು ಹಾಡಿದರ್ಹಿಗೆ ಅತಿ
ಮೃದು ಸ್ವನದಿಂದೆ ಒಪ್ಪಿದರಾಗೆ
ಯದುಕುಲದರಸಂಗೆ ಹಸುಳರಿಗೆ ವಿ
ಶ್ವದಲಿ ಪೂರಣೆಂಟನೆಯರಸಂಗೆ ೮

Rarest Archiver

ಮಂಗಳ ನಾಮಂಗಳಿಟ್ಟರು ಶ್ರೀ
ಮಂಗಳಾಕ್ಷತೆಯ ಹಣೆಗಿಟ್ಟರು
ಮಂಗಳಾರತಿಯ ಬೆಳಗಿದರು ಗೋ
ಪಾಂಗನೆಯರು ಬಾಗಿನ ಹಿಡಿದರು ೯

ಅಂದಿನ ಭಾಗ್ಯಕ್ಕೆ ಎಣೆಯಿಲ್ಲ ಶ್ರೀ
ಮಂದರಧರವಿಷ್ಣು ಗೋಪಾಲ
ನಂದನೆನಿಸಿಕೊಂಡ ಶ್ರೀಪಾಲ ನಿತ್ಯಾ
ನಂದ ಪ್ರಸನ್ವೆಂಕಟ ನಿಜಲೀಲ ೧೦

೯

ರಾಗ–ಶಂಕರಾಭರಣ **ತಾಳ–ಅಟ್ಟ**

ರಂಗಗೆ ನಮೊ ಪಾಂಡುರಂಗಗೆ ನಮೊ ಪ.

ರಂಗಗೆ ನಾಲ್ಕನೆಯ ತಿಂಗಳೊಳು ಜನ್ಮ ಋಕ್ಷ
ಸಂಗವಾದ ದಿವಸ ಬಹಿರ್ನಿಷ್ಕ್ರಮಣವು
ಅಂಗನೆ ಗೋಪೆಮ್ಮ ತನ್ನ ಸಿಂಗನ ಕೂಡಿ ಮಿಂದಳು
ಮಂಗಳಾರ್ತಿ ಬೆಳಗಿದರಂಗನೇರೆಲ್ಲ ೧

ಬಹಳನ್ನಪಾನವಸನ ಮಹೀಸುರರಿಗೆ ಇತ್ತು
ಬಹು ಪುಣ್ಯ ಗುಣಶೀಲ ನಂದಗೋಪಾಲ
ಅಹಸ್ಯನುದಯದಲ್ಲಿ ಮಹೋತ್ಸವ ಕಾಳಿಂದಿಯಲ್ಲಿ
ಅಹಿಶಯನ ಶಕಟದ ನೆಳಲಿನಲ್ಲಿ ೨

ಮಲಗಿರೆ ಕಂಸಭೃತ್ಯರೊಳಂ ಶಕಟಾಖ್ಯ ದೈತ್ಯ
ಒಳಪೊಕ್ಕು ಬಂಡಿಯ ತಳದಲಾತನ
ಕೊಲುವೆನೆಂಬನಕಾಂಘ್ರಿ ತಳದಲವನ ಒದ್ದ ಬಾಲ
ಕುಳುಕುಳಿಸಿ ಶಕಟವು ಭಗ್ನವಾಗಿರೆ ೩

ಬಂಡಿಗಾಲಿ ವ್ಯಸ್ತವಾದವು ತುಂಡು ತುಂಡಾದವು ಕಾಷ್ಟ
ಕಂಡರಂ ಜನರು ಆಶ್ಚರ್ಯಕಾರ್ಯವ
ಪಾಂಡುರಂಗನೆಳೆಯ ಪಾದ ಬಂಡಿಯ ಖಂಡಿಪುದುಂಟೆ ಉ
ದ್ದಂಡ ಮೃತ್ಯು ಗೆದ್ದನೆಂದ ನಂದದಿ ನಂದ ೪

Rarest Archiver

ಶಂಕಿಸಿ ಕಂದನ್ನ ಅಪ್ಪಿಕೊಂಡಳು ಗೋಪೆಮ್ಮ
ಪಂಕಜಾಕ್ಷಗೆರೆದಳು ಕಾಳಿಂದಿಯಲ್ಲಿ
ಸಂಖ್ಯೆಯಿಲ್ಲದಾಶೀರ್ವೋಕ್ತಿ ಮಾಡಿಸಿ ಮೊಲೆಗೊಟ್ಟಳು
ಹುಂಕರಿಸಿ ಗರ್ಜಿಸಿದ ಗೋಪ ಗೋಪಿಗೆ ೫

ಉತ್ಸಾಹದಲಿ ಮರೆದೆ ಅಚ್ಯುತನ್ನ ಎಂದು ಗೋಪಿ
ವಚ್ಚೇರೆಗಂಗಳೆ ನಂದನಂಘ್ರಿಗೆರಗಿ
ಪಶ್ಚಾತ್ತಾಪ ಹೊಂದಿ ನಾನಿನ್ನೈಚ್ಚತ್ತೆನೆಂದ್ಯಶೋದೆ
ಹೊಚ್ಚಿ ಮಲಗಿಸೆ ನಿದ್ರೆಮುದ್ರೆ ಹೊಂದಿದ ೬

ಶೈಶು ಲೀಲೆಯ ಮುಕುಂದ ತಾ ಶಯನ ಮಾಡಿದನು
ಶಾಶ್ವತ ವಿಶ್ವೈಕ ಪ್ರಸನ್ವೆಂಕಟ ನಾಥ
ಕುಶಲ ದಿನವಲ್ಲಿ ಶೇಷನವತಾರ ಅಚ್ಯುತಾ
ವೇಶ ಬಲರಾಮ ತೋಷದಲ್ಲಿದ್ದ ಸಮರ್ಥ ೭

೧೦

ರಾಗ–ಕನ್ನಡಗೌಳ **ತಾಳ–ಜಕ್ಕಣಿ (?) [ಏಕತಾಳ]**

ಏತತ್ಪೂರ್ವದಿ ಮಧುರೆಲಿ ಮಹಾ
ಪಾತಕಿ ಕಂಸ ಯೋಚನೆಯಲ್ಲಿಹಾ
ಪೂತೆ ದೇವಕಿ ಗರ್ಭಜಾತರ ತಾ
ಘಾತಿಸುವೆನೆಂಬ ಸತ್ವರ ೧

ವಸುದೇವ ದೇವಕಿಯಿಬ್ಬರ ಶೃಂಖ
ಳಿಸಿ ಉಳಿದ ಶೌರಿ ಹೆಂಡಿರ
ಬಸಿರು ಪಲ್ಲಟಿಪ ಅಂಜಿಕೆಯಲ್ಲಿ ಆ ಅ
ರಸಿ ರೋಹಿಣಿಯನ್ನಿಟ್ಟ ದೂರಲಿ ೨

ವರರೋಹಿಣಿ ಗರ್ಭಿಣಿ ಧನ್ಯೆ ಶ್ರೀ
ಪುರುಷೋತ್ತಮನವತಾರದ ಮುನ್ನೆ
ವರಗೋಕುಲದಿ ತ್ರಿಮಾಸಕೆ ಹರಿ
ಗ್ಹಿರಿಯ ಪುತ್ರನ ಪಡೆದಳು ಆಕೆ ೩

Rarest Archiver

ಪೂರಣೇಂದು ಕಳೆಯ ಶ್ರೀ ಬಲಭದ್ರ ಸಾ
ಸಿರಫಣನವತಾರ ಗುಣಸಾಂದ್ರ
ವರ ಶುಕ್ಲಕೇಶಾವೇಶನು ಗಡ ನಿತ್ಯ
ಹರುಷದಿ ಬೆಳೆದರಿಬ್ಬರು ಗಡ ೪

ರೋಹಿಣಿ ದೇವಕಿ ವಸುದೇವ ಮುನ್ನೆ
ಮಹಾ ತಪವ ಮಾಡೆ ವಾಸುದೇವ
ಶ್ರೀಹರಿ ಪ್ರಸನ್ವೆಂಕಟ ಕೃಷ್ಣ ಸೇವೆ
ಗೈ ಹಿರಿಯನು ದ್ವಿತಿಯಂಗೇಷ್ಟ (?) ೫

೧೧

ರಾಗ : ತೆಲುಗುಕಾಂಬೋಧಿ ತಾಳ : ಅಟ್ಟ

ಈ ತಮ್ಮನೆ ಪರಬೊಮ್ಮ
ಈ ತಮ್ಮನ ಮಗನೇವೆ ಬೊಮ್ಮ ಪ.

ಒಮ್ಮಾನೊಮ್ಮೆ ಅಮ್ಮಿಯಯುಣುತಾಕಳಿಸಿದ
ರಮ್ಯ ವದನದಿ ಕಂಡಳು ತಾನ್ಯಶೋದ
ಸಮ್ಮಸ್ತ ಭುವನ ಕಂಡಳಾಶ್ಚರ್ಯ
ಬೊಮ್ಮಾಂಡದೊಳಗಣ ಹೊರಗಣ ಸ್ಥಿತಿಯ ೧

ಬ್ರಹ್ಮೇಶೇಂದ್ರ ರವಿಮುಖ್ಯ ನಿರ್ಜರರ
ಸಮ್ಮೂಹಕಧಿಕ ದ್ವೀಪಗಳ ವಿಸ್ತಾರ
ತಮ್ಮಾನಂದಮಯ ಸ್ವರೂಪವನು
ರಮ್ಮೆಯರಸ ತಾಯಿಗೆ ತೋರಿದನು ೨

ಅಮ್ಮ ಕಣ್ಮುಚ್ಚಿ ಬೆದರಿದಳು ತಾನು
ತಾ ಮತ್ತೆ ಬಚ್ಚಿಟ್ಟನು ಪ್ರಪಂಚವನು
ಅಮ್ಮಾ ಅಮ್ಮೆಯೆಂದು ಮಾಯದಳಿದನು
ಸುಮ್ಮನಸರನಾಳ್ವ ಸರ್ವಜ್ಞ ತಾನು ೩

ಮಗನ ಮಾಯದಿ ಮೋಹಿಸಿದಳು ಗೋಪಮ್ಮ
ಮಗುವೆ ಬಾಯೆಂದು ಲಾಲಿಸಿದಳಮ್ಮಮ್ಮ

Rarest Archiver

ಜಗದೀಶ್ವರನ ತನ್ನ ತೊಡೆಯ ಮೇಲಿಟ್ಟು
ಬಗೆ ಬಗೆಯಾಡಿಸಿದಳು ಮುದಬಟ್ಟು ೪

ತಾಯಿಯ ತೊಡೆಯ ಮೇಲಾಡುವ ಪಸುಳೆ
ಶೈಲಕೂಟದ ಭಾರದಂತಾಗೆ ಅಬಲೆ
ಆಯಾಸದಿಂದಿಳೆಗಿಳುಹಿದಳಾಕೆ
ವಾಯು ಚಕ್ರೋತ್ಪಾತವು ಬರಲಿಕ್ಕೆ ೫

ಏನಾಯಿತು ಮಗಗೆನುತಂಜುತಿರಲು
ಶ್ರೀನಾಥಗಳುಕಿಲ್ಲ ಕುಳಿತ ಜಡದೊಳು
ಹೀನ ತೃಣಾವರ್ತನವ ಕಂಸಭೃತ್ಯ
ತಾನೆತ್ತಿ ಒಯ್ದನು ಅಣುಗನಾ ದೈತ್ಯ ೬

ಘನಚಕ್ರವಾತದೊಳವನಂಜಿಸುತ
ತನಯನ ಒಯ್ದಿರಲಂಜುತ ಅಳುತ
ವನವಿಲ್ಲದ ಮೀನದಂತಾವು ವತ್ಸ
ವನು ಕಾಣದಂತೆ ಮರುಗಿದಳತ್ಯಂತ ೭

ಖಳಗಂತರಿಕ್ಷದಿ ಮಾಡಿದ ಶಿಕ್ಷಾ
ಇಳೆಯ ಮ್ಯಾಲೆ ಕೆಡವ್ಯಾತನ ಪಕ್ಷ
ದಲಿ ಆಡುತಿದ್ದನಿರುದ್ಧಾಂಬುಜಾಕ್ಷ ಅ
ಚಲದಂತೆ ಬಿದ್ದನು ಖಳಕ್ಷಾಂಕ ರಕ್ಷಾ ೮

ಹಿಂಡು ಗೋಪರು ಇದ ಕಂಡಾಶ್ಚರಿಯದಿ
ಪುಂಡರೀಕಾಕ್ಷನ ಕೊಂಡಾಡಿ ಸುಖದಿ
ಗಂಡಹೆಂಡಿರು ಮಗನಪ್ಪಿದರಾಗ ಉ
ದ್ದಂಡ ಉತ್ಪಾತ ಗೆಲಿದನು ರಂಗ ೯

ಅಹೋ ಪಾಪಿಯಿಂದು ಹತನಾದನೆಂದು
ಮಹಾ ವಿಸ್ಮಯೆಂದು ವ್ರಜಾಂತಸ್ಥರಂದು
ಬಹು ಪುಣ್ಯ ನಂದಯಶೋದೆಯರೆಂದು
ಆಹ್ಲಾದವಾರ್ಧಿಲೋಲಾಡಿದರಂದು ೧೦

ಸೃಷ್ಟ್ಯಾದಿಕಾರಣಗಚ್ಚರಿಯಲ್ಲ
ಶಿಷ್ಟಜನ ಪ್ರತಿಪಾಲ ಶ್ರೀನಲ್ಲ

Rarest Archiver

ದುಷ್ಟಕುಲಾಂತಕ ಪ್ರಸನ್ವೆಂಕಟಲೀಲ ವಿ
ಶಿಷ್ಟಾನಂದ ಸಮುದ್ರಕಲ್ಲೋಲ ೧೧

೧೨

ರಾಗ : ಮ್ಲೇಚ್ಛಬೌಳಿ ತಾಳ : ಏಕತಾಳ

ಲಲಿತಲೀಲೆಯ ತೋರುವೆನೆಂದು ತಾ
ಬಲನಿಂದ ಕೂಡಿ ಭರತಬಂಧು
ಬೆಳೆದಂತೆ ತೋರಿ ಗೋಕುಲದೊಳಗೆ
ಎಳೆ ಗೆಳೆಯರಿಂದವ ಬಲುಬ್ಯಾಗೆ ೧

ನವನೀತಸಾರನಾದವ ಚೋರ
ನವಯುವತಿಯರಿಗೆ ಮನೋಹರ
ಅವರವಯೋಗ್ಯತೆಯನುಸಾರ
ಸವಿದೋರಿದಾ ನಂದಕುಮಾರ ೨

ಕೆಲವು ಗೋಪಿಯರತಿ ಮುದ್ದಿಪರು
ಕೆಲವು ಗೋಪಿಯರೊಮ್ಮೆ ಕ್ರುದ್ಧಿಪರು
ಬೆಳದಿಂಗಳ ನೀಲ ಮೈಯವರು
ಚೆಲುವಿಕೆಯಲಿ ಥಳಥಳಿಸುವರು ೩

ವೀರ ಯಾದವರ ಪುರೋಹಿತನು
ಶೌರಿ ಕಳುಹಲಲ್ಲಿಗಾಗಾತನು
ಧೀರ ಮುನೀಂದ್ರ ಗರ್ಗನುಭಯರಿಗೆ ಕ್ಷ
ತ್ರೀರ ಸಂಸ್ಕಾರ ಮಾಡಿದನಾಗೆ ೪

ನಿನ್ನ ಮಗನು ಸಾಕ್ಷಾದ್ವಿಷ್ಣು
ನಿನ್ನ ಪುಣ್ಯಫಲತಾಯಿಷ್ಟು
ನಿನ್ನ ಮಗನೆಂಬುವ ಮೋಹವ ಬಿಡು
ಧನ್ಯನಾದೆ ಗೋಪತಿ ಕೇಳು ೫

ಈತ ಶೂರಜ ದೇವಕಿಜಾತ ಅ
ಜಾತಗೆ ಜಾತನೆಂಬುದು ಮಿಥ್ಯ

Rarest Archiver

ಈತನಿಂದ ಸರ್ವಭೂತಕೆ ಸೃಷ್ಟಿ
ಈತನೆ ಭುವನವ್ಯಾಪ್ತನು ಗಟ್ಟಿ ೬

ಈತನಾರಾಧಿಪಬ್ರೊಮ್ಹಾದಿಕರು
ಈತ ಪ್ರಸನ್ವೆಂಕಟ ಜಗದಗುರು
ಈ ತೆರ ಉಪದೇಶಿಸಿ ನಡೆದ
ಆತುರದಲಿ ತನ್ನ ಸ್ಥಾನಕೆ ಹೋದ ೭

೧೩

ರಾಗ : ಮೋಹನಕಲ್ಯಾಣಿ **ತಾಳ : ಏಕತಾಳ**

ಕರಚರಣಂಗಳ ಸ್ಪರುಶದಿ ಗೋಷ್ಠವ ಪರಮಪವಿತ್ರವ ಮಾಡಿ
ಚರಿಪರು ನಲಿನಲಿದಾಡಿ ಶ್ರೀ ಹರಿಬಲರೀರ್ವರು ಕೂಡಿ
ಹರಿಹರಿದ್ಯೆದಿ ಕೆಸರಿನಲಿ ಚಿಲಿಪಿಲಿ ಬರಿಮೈಯ್ಯರ್ಭಕರ ನೋಡಿ ೧

ಅಕಟಕಟೆನ್ನುತ ಸಖಿ ರೋಹಿಣಿ ಗೋಪಿಕುಮಾರರನಪ್ಪುವಳು ಬಾ
ಲಕರ ಸೆರಗಿಲೊರಸುವರು ಅವರ್ಮುಖವ ನೋಡಿ ನಗುತಿಹರು
ಸುಖಪೂರ್ಣರು ಜನನಿಕರಾಗ್ರದಿ ತಾವ್ ಕಳಕಳ ನಗುತಿಹರು ೨

ಹರಿ ತಾಯ್ ನಿರಿಯಲಿ ಹರುಷದಿ ನಿಂದು ಚಪ್ಪರಿದಮ್ಮಿಯನುಂಬುವನು ತನ್ನ
ಕಿರಿನಗೆ ಜೊಲ್ಬಾಯಿಯನು ಬಾಯ್ದೆರೆಯೆನೆ ಪಲ್ದೋರುವನು
ಪರಮಪುರುಷ ಪೆತ್ತರಿಗುಪಕರಿಸುತ ಚಿರಸುಖವಂ ಬೀರುವನು ೩

ತನಯರ ಉಲುಹಿಲಿ ಮನೆಗೆಲಸಂಗಳು ಇನಿತು ನಡೆಯಲಿಲ್ಲಾಗ ಆ
ಜನನೇರು ಮೋಹಿಪರಾಗ ತಮ್ಮ ದಿನ ತಕ್ಕಾಟದಲೀಗ
ಅಣುಅಣು ಕರಿಶಾವಕದಂದದಿ ರಿಂಖಣವಿಡುವರ್ ಬ್ಯಾಗ ಬ್ಯಾಗ ೪

ಇರುಕಳುಪಶಂ ನೀರುರಿಗಂಜರು ಕ್ಷಣ ಕ್ಷಣಕ್ಹರಿದಾಡಂಫರಲ್ಲಿ ಅಸಿ
ಯರು ಹಿಡಿಹಿಡಿ ತಹರಲ್ಲಿ ತಾಯರಿಗೊಪ್ಪಿಪರು ನಗುತಲಿ ಎಳೆ
ಗರಂಗಳ ಬಾಲವ ಜಿಗಿಜಿಗಿದೆಳೆವರು ನಡೆವರು ಅರ್ಥಿಯಲಿ ೫

ಪುಚ್ಛವಿಡಿಯೆ ಬೆದರ್ವತ್ಸಗಳೋಡಲು ಅಚ್ಯುತ ಕೂಗಿ ಅಂಜುವನು ಜನ
ಕಚ್ಚರಿಯವ ತೋರುವನು ತಾ ಸ್ವೇಚ್ಛೈಕಲೀಲಾನ್ವಿತನು
ಒಚ್ಚೆರೆಗಂಗಳ್ಯಶೋದೆಯು ಬಿಗಿದಪ್ಪೆ ಬೆಚ್ಚಿದಂತಿಹ ಕೇಶವನು ೬

Rarest Archiver

ಸರಿಯಂ ತರಳರೊಳು ಹಿರಿಯಗ್ರಜನೊಳು ಪರಿಪರಿ ಕ್ರೀಡೆಯನಾಡೆ ಅಲ್ಲಿ
ಹರಿಣಾಕ್ಷಿಯರ್ಬಂದು ನೋಡೆ ಘನ ಹರುಷದಿ ರಂಗನ ಕೂಡೆ
ಸರಸವನಾಡಿ ಸೋದರ ಮಾವನಣುಗೇರು ಉರುಸುಖವಾರ್ಧಿಲೀಸಾಡೆ ೭

ತನುಮನ ಸೂರೆಯು ಕ್ಷಣಕ್ಷಣಕಿತ್ತರು ವನಜನಾಭನ ಪದರತರಂ ಆ
ಮನಸಿಜ ಮಾರ್ಗಣಹತರು ಮತ್ತಿನಿಗೋಲನ ಸನ್ಮತರು
ಅನುದಿನ ನಂದನ ಸುತನ ನೆನಹಿನಲಿ ಮುನಿಪರಿ ಧ್ಯಾನಂಗತರಂ ೮

ತೊದಲು ಮೃದುಲನುಡಿ ವದಿಸುವ ಮೆಲ್ಲನೆ ವೇದವೇದಾಂತ ವಿಖ್ಯಾತ ತ
ನ್ನುದರದಿಂದಜನ ಪೆತ್ತಾತ ಮೃದು ಮೃದು ಪದನ್ಯಾಸವ ಕಲಿತ
ಹದಿನಾಲ್ಕು ಭುವನವ ವದನದಿ ತೋರಿದ ಪದಚೇಷ್ಟಕ ಹೃನ್ನಾಥ ೯

ಪಟ್ಟಸಾಲೆಯಲಿ ದಟ್ಟಸಾಲಿಕ್ಕಿಸಿ ದಟ್ಟಡಿ ನೋಡಿ ಹಿಗ್ಗುವಳು ನನ್ನ
ಪುಟ್ಟ ದಣಿದೆಯೆಂಬುವಳು ಮೊಲೆಗೊಟ್ಟು ಮೈ ತಡುವುವಳು ತ
ನ್ನುಟ್ಟ ಸೀರೆಯ ಮೇಲ್ ಕೃಷ್ಣನ ಕುಣಿಸಿದಳ್ ಅಟ್ಟಹಾಸದಿ
ಯಶೋದೆಯಂಳು ೧೦

ಇಂದುವದನೆ ತನ್ನ ಕಂದಗೆ ಮೊಲೆಗೊಡಲೊಂದಮ್ಮಿಯುಂಡು ಚಪ್ಪರಿವ ಮ
ತ್ತೊಂದಮ್ಮಿಲಿ ಕೈಯಿಡುವ ಗೋವಿಂದ ಮೋರೆಯ ನೋಡಿ ನಗುವ
ನಂದನ ರಾಣಿಯು ನಂದಕೆ ಸರಿಯಿಲ್ಲ ಹಿಂದಣ ಸುಕೃತ ಸಂಭಾವ ೧೧

ಕಾಲ ನಾಮಕನಿಗೆ ಕಾಲ್ಮ್ಯಲ್ಮಲಗಿಸಿ ಪಾಲ್ಬೆಣ್ಣೆಯ ನೀಡುವಳು ಶ್ರೀ
ಲೋಲಗೆ ನಿದ್ರೆ ಬೇಡುವಳು ತೊಟ್ಟಿಲೊಳಿಟ್ಟು ಜೋಗುಳ್ಹಾಡುವಳು
ಭಾಳ್ಬವ್ ಬರುತಿವೆ ಕಂದ ಮುಕುಂದ ಬಾಲಕ ಮಲಗೆಂಬುವಳು ೧೨

ಬಾಲಕ್ರೀಡೆಯಲಜಾಂಡವನಾಳುವ ಶ್ರೀಲಲನೆಯ ವಲ್ಲಭನು ತಾ
ಓಲಾಡಿ ಆನೆಯಾಡುವನು ಚಪ್ಪಾಳಿ ಹೊನ್ನುಗುಬ್ಬಿಯಾಡುವನು ವಿಶ್ವ
ಪಾಲಕ ಶಿಕ್ಷಕ ಜೋಗಿಗೆ ಅಂಜಿ ಗೋಪಾಲರ ಬಾಲನಂತಿಹನು ೧೩

ತೋಳನ್ನಾಡುವ ತೋಳ್ಜಗದಂಬೆಯು ಲಾಲಿಸುವ ತಲೆಗಿಂಬು ಅಂಬೆ
ಗಾಲಿನ ತವಕ ವಿಡಂಬು ಮತ್ತಾಲದೆಲೆಯ ಲಯದಂಬು
ಆಲಯುದವನಿಗೆ ತೊಟ್ಟಿಲ ನಿದ್ರೆಯ ಹೇಳುವುದೇ ಭ್ರಮೆಂಗಿಂಬು ೧೪

ಆ ಪ್ರಳಯದಿ ದುರ್ಗಾ ಪ್ರಾರ್ಥಿಸಿ ಶ್ರುತಿರೂಪದಿ ಕಡೆಗಾಣಳಂತೆ ಅ
ದ್ವೇ ಪರಬ್ರಹ್ಮನಿವನಂತೆ ಸುರತಾಪಸರಿಗೆ ಪ್ರಭುವಂತೆ
ಶ್ರೀ ಪ್ರಸನ್ವೆಂಕಟ ಉಪನಿಷದ್ವೇದ್ಯಗೆ ಗೋಪಿಯ ಜೋಗುಳವಂತೆ ೧೫

Rarest Archiver

೧೪

ರಾಗ : ಭೈರವಿ ತಾಳ : ತ್ರಿಪುಟ

ಜೋ ಜೋ ನಂದನ್ನಕಂದ ಗೋವಿಂದ
ಜೋ ಜೋ ಜೋ ಜೋ ಸದ್ಗುಣಸಾಂದ್ರ
ಜೋ ಜೋ ನಿಗಮಾನಂತ ಸುವೇದ್ಯ
ಜೋ ಜೋ ಜೋ ಜೋ ಭುವನೈಕಾದ್ಯ ಜೋ ಜೋ ಪ.

ತೃವಿ ತೃವಿ ವಟಪತ್ರಶಯನ ಕಾಲಾತ್ಮ
ತೃವಿ ತೃವಿ ತೃವಿ ತೃವಿ ಶ್ರೀಪರಮಾತ್ಮ
ತೃವಿ ತೃವಿ ಚತುರ್ದಶ ಭುವನಾಂತರಾತ್ಮ
ತೃವಿ ತೃವಿ ತೃವಿ ತೃವಿ ಶ್ರೀ ಪರಮಾತ್ಮ ಜೋ ಜೋ ೧

ಲಾಲಿ ಪರಾತ್ಪರ ಬ್ರಹ್ಮ ಪರಮ್ಮ
ಲಾಲಿ ಲಾಲಿ ಕ್ಷೀರಾಂಬುಧಿಧಾಮ
ಲಾಲಿ ವೈಕುಂಠ ಮುಂಕುಂತಜನಗೇಯ
ಲಾಲಿ ಲಾಲಿ ಅಮೃತಮಯ ಗೇಹಾ ಲಾಲಿ ೨

ಹೋಯಿ ಹೋಯಿ ಹಸುಳೆ ಮುದ್ದು ಮಗ್ಗಲ ಮರಿಯೇ
ಹೋಯಿ ಹೋಯಿ ಹೋಯಿ ಹೋಯಿ ಅಮರರ ಸಿರಿಯೇ
ಹೋಯಿ ಹೋಯಿ ನಿನಗೊಬ್ಬ ಚೇತನ ಸರಿಯೇ
ಹೋಯಿ ಹೋಯಿ ಶ್ರೀಪ್ರಸನ್ವೆಂಕಟ ದೊರೆಯೇ ಲಾಲಿ ೩

೧೫

ರಾಗ : ರೇಗುಪ್ತಿ ತಾಳ : ಅಟ್ಟ

ಧ್ಯಾನವಿದು ಮೌನಿ ಧ್ಯಾನವಿದು
ಮಾನವರ್ಗಮೃತದ ಪಾನವಿದು ಪ.

ಮೊಳೆವಲ್ಲೊಗುವ ಜೊಲ್ಲಬಟ್ಟಬಾಯಿ
ಪಲ್ಲವಾಧರದೆಡೆ ಗಲ್ಲದ ಛಾಯೆ
ಚೆಲ್ವ ಮುಂದಲೆಯಲ್ಲಿ ಅಳಕದ ಸೊಂಪು
ಚಲ್ಲೆಗಂಗಳಿಂ ನೋಡುವರಿಗೆ ಇಂಪು ೧

Rarest Archiver

ತಿದ್ದಿದ ಹುಬ್ಬು ಕಾಮನ ಬಿಲ್ಲ ಮಾಟ
ಸ್ನಿಗ್ಧ ಭಾಲವೇ ಸುಖವಾರಿಧಿ ಮಾಟ
ಗದ್ದವೆಂಬುದು ಸವಿಮುದ್ದಿನ ಗಂಟು
ಮುಂದ್ದಿನ ಮುಖ ನೋಕ್ಷದ ಜನ ನಂಟು ೨

ಕೊರಳೊಳೊಪ್ಪುವ ತ್ರಿರೇಖೆಯು ಸುಂದರ
ಉರದ ವಿಸ್ತರ ಶ್ರೀಯಳಿಗೆ ಮಂದಿರ
ಕರಯುಗ ಕರಿಶಾವಕದ ಶುಂಡಿಲವು
ಕರತಳದಂಗುಲಿ ಪೀಯೂಷ ಫಲವು ೩

ಅತಿ ಅತಿ ಮೃದುಡೊಳ್ಳು ತ್ರಿವಳಿ ಶೋಭೆಯು
ಸತತ ಗರ್ಭಿತ ಭುವನನಾಭಿಯು
ಅತುಲ ವರ್ತುಲ ಊರು ಜಂಘೆಗಳಿರವು
ಮತಿಗೆ ಮಂಗಳವು ಬುಲ್ಲಿಕಾಯಿ ಲಿಂಗವು ೪

ಸಿರಿಗೆ ಸಿಂಗರವಾದರುಣ ಪಾದಾಬ್ಜ
ಹರಿಧ್ವಜಾಂಕುಶ ವಜ್ರಾಂಕಿತ ಪಾದಾಂಭೋಜ
ಶರಧಿಜಾತನ ಗೆಲುವ ಅಂಗುಲಿ ನಖವು
ತರಳನ್ನ ನೋಡಿ ನಲಿವಳ ಸುಕೃತವು ೫

ಅರಳೆಲೆ ತಲೆ ರನ್ನಕುಂಡಲಕರ್ಣ
ಕೊರಳ ಪದಕ ಹಾರ ಕೌಸ್ತುಭ ಚಿಹ್ನ
ಸರಪಣಿ ಮಣಿ ಸುಪ್ಪಾಣಿ ಸೂಸರವು
ಕರವಲಯ ಉಡಿದಾರ ಕಾಲ್ಪೆಂಡೆ ಪ್ರಭೆಯು ೬

ಘಿಲಿ ಘಿಲಿ ಘಿಲಿಕೆಂಬ ಅಂದುಗೆ ಗೆಜ್ಜೆ
ಎಳೆನೀಲ ಹವಳ ಮುತ್ತಿನ ಹುಲಿಗೆಜ್ಜೆ
ಬೆಲೆಯಿಲ್ಲದಂಗಕೆ ಬೆಲೆಯಿದ್ದಾಭರಣ
ನಳಿನನಾಭನ ಲೀಲೆ ಲೋಕಾನುಕರಣ ೭

ಥಳಥಳಿಸುವ ಇಂದ್ರನೀಲದ ಬಿಂಬ
ಜಲಧಿಶಯನನಂತ ಜೀವದ ಬಿಂಬ
ನಳಿನಮುಖಿಯು ಗೋಪಿ ನೋಡಿ ದಣಿಯಳು
ಲಲಿತ ಶ್ರೀ ಕೃಷ್ಣ ಲಾವಣ್ಯಾಬ್ಧಿರತಳು ೮

Rarest Archiver

ಗೋಪಿ ನೋಂಪಿ ಭಾಗ್ಯ ನೋಡಿ ನಿರ್ಜರರು
ಶ್ರೀಪತಿಯಮ್ಮನ ಬಲುಕೊಂಡಾಡಿದರು
ಈ ಪರಿ ಶುಕಮುನಿ ಪೇಳ್ದ ಭೂಪತಿಗೆ
ಶ್ರೀ ಪ್ರಸನ್ವೆಂಕಟಕೃಷ್ಣ ಭಕ್ತನಿಗೆ ೬

೧೬

ರಾಗ–ಸಾವೇರಿ ತಾಳ–ಅಟ್ಟ

ನಂದನ್ನರ್ಧಾಂಗಿಯ ಬಳಿಗೆ ಬಂದು
ಇಂದು ಮುಖಿಯರ್ಘಾಳಿಘಳಿಗೆ ನಿನ್ನ
ಕಂದ ದುರುಳನೆಂಬುವರು ನಮ್ಮ
ಮಂದಿರ ಬಿಡನೆಂಬುವರು ೧

ಎಳೆಯನಂತೊಪ್ಪಿದ ತಾಯಿಗೆ ಪ್ರಾಣ
ಗೆಳೆಯನಂತಪ್ಪಿದವರಿಗೆ
ಲಲಿತಚರಿತನ ಚರಿತ್ರೆ ಗೋ
ವಳೆಯರು ಪೇಳ್ವುದೊಂದರ್ಥ ೨

ಅನಂತ ಕರ್ಮಾನಂತ ನಿ
ತ್ಯಾನಂತ ಪೂರ್ಣ ಅನಂತ
ಅನಂತ ನಿಗಮಕ್ಕೆ ನಿಲುಕ ಸ
ದಾನಂತ ಪ್ರಸನ್ವೆಂಕಟ ಲೋಕ ೩

೧೭

ರಾಗ : ಪಂತುವರಾಳಿ ತಾಳ : ಏಕತಾಳ

ತಾಳಲಾರೆವಮ್ಮಾ ಉಪಟಳವ ನಂದನ್ನ ರಾಣಿ
ಹೇಳಬಾರದ ಆಟವನಾಡುವ ಪ.

ಕೆನೆವಾಲ್ಮೊಸರನು ಮನದಣಿ ಮೆಲುವ
ತನಯರ ನಿಕರಕೆ ಉಣಲಿತ್ತು ನಲಿವ

Rarest Archiver

ನಿನ ಮಗ ನಮ್ಮೆಲ್ಲರಣುಗರ ಒಡಿವ
ವನಿತೆರಿಗಣಕಿಸಿ ಮನೆಗೋಡಿ ಬರುವೆ ೧

ಎಳೆಗರು ಆವಿನ ಮೊಲೆಯುಂಣ ಬಿಡುವ
ಗೆಳೆಯರ ಸಹ ಚಪ್ಪಳಿ ಇಕ್ಕಿ ಕುಣಿವ
ಕೆಲೆದೆರ ಕಣ್ಣು ಮುಚ್ಚಿ ಕಿಲಿಕಿ ತಾ ನಲಿವ
ಪಾಲ್ ಬೆಣ್ಣೆ ಗುಂಡಿಗೆಗಳನೊಡೆಬಡಿವ ೨

ಒರಳಿನ ಮೇಲೊಂದೊರಳ ನಿಲಿಸುವ
ತರಳರ ಹೆಗಲೇರಿ ಒರಳನಡರುವ
ಕರದಲಿ ಕೋಲ್ಪಿಡಿದುರು ಘನ ಪಾಲ್ದಧಿ
ಹರವಿಯನೊಡೆದು ಗವ್ಯಾಮೃತ ಸುರಿವ ೩

ನಾರೇರು ನೆರದೀಚೋರನ ಹಿಡಿಯೆನೆ
ಸಾರಿ ಸಾರಿಗೆ ಫೂತ್ಕಾರವ ಮಾಡುವ
ಮೋರೆಯ ಮೇಲುಗುಳ್ದಾರುವ ಹಿಡಿದರೆ
ಜಾರುವ ನಡುಗುವ ತೋರುವನೊಮ್ಮೆ ೪

ಅಂಧಕಾರದ ಮಂದಿರ ಮಣಿಗಣ
ದಿಂದ ಪ್ರಕಾಶಿಸಿ ಬಂದ ಗೋಪಾಲಕ
ವೃಂದಕೆ ಗೋರಸ ಚಂದದಿಂದುಣಿಸುವ
ಗೊಂದಣಕಿಕ್ಕುವ ತಾಂ ದಣಿಯುಣುವ ೫

ಕಂಡಿವನಾಟವ ದಂಡಿಪೆವೆನುತಲಿ
ದುಂಡಸಿಯರು ಬಂದಂಡಲಿದರೆ ಒಳ
ಕೊಂಡೆಯನಿಕ್ಕಿ ಪೌಗಂಡರ ನಮ್ಮ ಬೆಳ
ಕಿಂಡಿಲಿ ಸಿಲುಕಿಸಿ ಪುಂಡ ನೋಡಿದನೌ ೬

ವೃಷ್ಟ್ಯನ್ನವನಟ್ಟಿಟ್ಟರೆ ಮಿಸಲು
ಷಟ್ಟಿಗರಾಯಗೆ ಕೊಟ್ಟೇವೆನುತಿರೆ
ಪುಟ್ಟ ಗೋವಳರೊಳು ಕೃಷ್ಣನು ಬಂದ
ದೃಷ್ಟಿಗೆ ತೋರದಂತಷ್ಟು ಸವಿದನೌ ೭

ಕಟ್ಟೆಯ ದೇವರ ಗಟ್ಟಿ ಹಂಗಡದಲಿ
ಕಟ್ಟೆಳೆದೊಯ್ದನು ಬಟ್ಟ ಬಯಲಿನಲಿ

Rarest Archiver

ಇಷ್ಟೆಯಂ ದೇವರನಿಟ್ಟಿಹ ಜಗುಲಿಲಿ
ವಿಷ್ಟಿಸಿ ಓಡಿದ ಅಟ್ಟಹಾಸದಲಿ ೮

ಕೃಷ್ಣನಾಡುವ ದುಷ್ಟಾಟಿಕೆ ಬಲು
ಕಷ್ಟಬಟ್ಟು ಆ ವಿಷ್ಟೆಯು ತೆಗೆದೆವೆ
ವಿಷ್ಟಾವೋದ ವಿಶಿಷ್ಟ ಕಸ್ತೂರಿಗಿಂ
ಪುಷ್ಟಾಯಿತಂ ಇನ್ನೆಷ್ಟುಸುರುವೆವೆ ೯

ಮುದ್ದಿನ ಮೋಹಿಯೊಳಿದ್ದ ಮುಕುಂದನ
ಗದ್ದವಿಡಿದು ನಾವ್ ಮುದ್ದನೀಡಿದರೆದೆ
ಲಿದ್ದ ನಿಬಿಡ ಕುಚ ಹೊದ್ದಪ್ಪಿ ಬಿಡನೌ
ಮದ್ದಿಕಾಯ ಮಗುವಿಗೆ ಬುದ್ಧಿಯಿದೊಳಿತೆ ೧೦

ನಿನಗಿದು ತರವಲ್ಲೆನಂತ ಹಿಡಿದರೆ
ಕೊನೆವಲ್ಲಿಲಿ ಗಲ್ಲವನು ಕಚ್ಚೋಡುವ
ದಿನ ದಿನಕೋಜೆಯು ಘನವಾಯಿತು ಚಿಕ್ಕ
ವನಿತೆಯರೊಳು ಚನ್ನ ಕ್ಷಣ ಕ್ಷಣಕಾಡುವ ೧೧

ಕರೆವ ಸಮಯ ರಂಗ ಬರುವನು ಅವ್ವಗಳ
ತೊರೆದ ಮೊಲೆಯ ಕರವಿಡಿದು ಉಣ್ಣುವನು
ಕರಮೇನೋ ನೀ ಹರಿಯೆಂದರೆ ಬಾಯ್
ತೆರೆದಿಲ್ಲೆಂಬುವ ಬರಿ ಹುಸಿಯವನು ೧೨

ಕರೆದಿಟ್ಟಿಹ ಬದಿನೊರೆಹಾಲ್ಗಡಿಗೆಯ
ತ್ವರಿತದಿ ಒಯ್ದುಗ್ಗರಜಗೆ ಕೊಡುವ
ಸರಿತೋಕರಿಗಿವ ಉರೆ ಸೂರ್ಯಾಡುವ
ಮರಿಗರುಗಳ ತಂಪ್ಪಿರಿದೆತ್ತಿರುವ ೧೩

ಶಶಿಮುಖಿರುದಯಕೆ ಮೊಸರ ಮಥಿಸುತಿರೆ
ಹಸಂಗೋಪರು ಬಲನ ಸಹಿತ ಬರುವ
ನಸುನಗೆ ನಗುತಲಿ ಹೊಸ ನವನೀತವ
ಅಸಿಯರಂಜಿಸಿ ಕೊಂಡಸುರಾರಿ ಸವಿವ ೧೪

ಮೀಸಲು ಮುರಿಯದಿರೊ ಸರ್ವೋತ್ತಮ
ಮೋಸಪ್ಪ ದೈವಾಕಾಶದ ಬೊಮ್ಮನಂ

Rarest Archiver

ಘಾಸಿಯಾಗುವಿಯೆಂನೆ ಆಕಾಶದವಗೆ ನನ್ನ
ಮೀಸಲು ಬುಲ್ಲಿಯು ಲೇಸೆಂದೆನುವ ೧೫

ಎಳೆಹಾವಿನ ಮರಿಗಳ ತಂದಬಲೆರ
ಗಳಕಿಕ್ಕುವ ನೀವಿಯೊಳು ಬಿಡುವ ಮಂ
ಗಳ ಮೂರುತಿ ಹೆಂಗಳು ವಸನಂಗಳ
ಕಳೆದು ನಿಲ್ಲಲು ಹರಿ ಕಳಕಳ ನಗುವ ೧೬

ಗಡಿಗೆಸಹಸ್ರಗಳೊಡೆವ ನಿರಂತರ
ತುಡುಗಿಲಿ ಬಲ್ಲಿದ ಹುಡುಗೇರ ಕೆಡಿಸಿದ
ಅಡಿಗಡಿಗಡಗುವ ಹಂಡುಕಿ ಹಿಡಿದಂತರೆ
ಮಡದೇರ ಬಡನಡುವಡರೆದೆ ಬಡಿವ ೧೭

ಒಮ್ಮೆ ನಿನ್ನ ಮಂಗನ್ನುಮ್ಮೆಲಿ ಕಟ್ಟಿದೆ
ಮಮ್ಮ ಇವ ಪರಬೊಮ್ಮನೆಂದರಿಯಂದೆ
ನಮ್ಮ ಮಕ್ಕಳ ನಾವೇ ಮತ್ತೆ ಕಟ್ಟಿದೆ
ಮಮ್ಮಮ್ಮ ಮೋಹನನಿವನಮ್ಮ ೧೮

ಶಿಶುಗಳ ಶಿಖವನು ಪಶುಗಳ ಬಾಲಕೆ
ಹೊಸೆದು ಗಂಟನು ಮಿಸುಳಿಸಿ ಕಟ್ಟುವ
ನಸುನಗಿಯಲಿ ನಮುಗುಸುರುವ ನಿಮ್ಮಯ
ಹಸುಳರ ಪಡಿಪಾಟಲ ನೋಡೆನುವ ೧೯

ನಂದನರಾಣಿಯು ಕಂದನೆ ನಿನಗಿದು
ಚಂದವೆ ಮಕ್ಕಳ ಅಂದಗೆಡಿಸುವದು
ಎಂದೆನೆ ಕೊಲುದಿಲ್ಲೆಂದೆನುತಲಿ ತಾಂ
ಕೊಂಡೋಡದೆ ಬಿಡ ಮಂದರಧರನು ೨೦

ಕೆನೆ ಕೆನೆಮೊಸರನುದಿನ ತುಡು ತಿಂಬನು
ನಿನ ತೋಳ್ ಮೊಸರಿಲಿ ಮುಳುಗಿದೆ ಕಳ್ಳ
ಎನಲು ನಮ್ಮೆಳೆಗರು ಮುಳುಗಿದೆ ಪಡಗದಿ
ದಣಿ ಹುಡುಕಿದೆ ನಾ ತಿನಲಿಲ್ಲೆಂಬ ೨೧

ರಸಭರಿತೋಖಣಿ ಹಸುಳನ ಹುಸಿಗೇಳಿ
ಶಶಿವದನೆಯುಮೂರ್ಛಿಸಿ ಅಪ್ಪಿಕೊಂಡರೆ

ಎಸೆವ ನಿರಿಯ ಮ್ಯಾಲ್ ಶಿಶುವರ ಕುಣಿವನಂ
ಅಸಿಯರ ವಸನವ ಬಿಡಿಸಿ ತಾ ನಗುವ ೨೨

ವಂತೊಂದಿನ ನಿನ್ನ ಪುತ್ರನ ಕಟ್ಟಿದೆ
ವರ್ಥಿಲಿ ನಿನ್ನೆಡೆ ತರ್ತಿರೆ ನಡುವೆ ಪ್ರ
ವಂತ್ತ ಘೂಳಿಯಂ ತೆರ ಚಿತ್ರದಿಂದಂಜಿಸೆ
ಸತ್ವರ ಬಿಟ್ಟೋಡಿ ಸತ್ತುಳಿದೇವೆ ೨೩

ಪುಟ್ಟರ ಚೆದುರಿಸಿ ಅಟ್ಟದ ಮ್ಯಾಲ್ ಬೈ
ಚಿಟ್ಟ ಬೆಣ್ಣೆಯ ಚಟ್ಟಿಗೆಗಳ ತೆಗೆ
ದಷ್ಟನು ಸವಿದನು ಎಷ್ಟು ಪೆದ್ದೆಂದರೆ
ಬಟ್ಟ ಕುಚವ ಪಿಡಿದಿಷ್ಟೇ ಎನುವ ೨೪

ಗಟ್ಟೆದೆಗಳ್ಳನು ಕೃಷ್ಣನೆನುತ ಕೈ
ಕಟ್ಟಿದರಂಜದೆ ಬಿಟ್ಟುಕೊಂಡನು ನಮ್ಮ
ಜಟ್ಟಿಗನಾಣೆಯನಿಟ್ಟೋಡಿದನವ
ನಟ್ಟುಳಿ ಘನವಿನ್ನೆಷ್ಟುಸುರುವೆವೆ ೨೫

ತಿಳಿತುಪ್ಪಿಟ್ಟ ಬಿಸುಳಿಗೆಯೊಳಗೆ ತನ್ನ
ಕೆಳಲನು ನೋಡಿದನೆಳೆಯರರಸನಂ
ಗೆಳೆಯನೊಬ್ಬಡಗಿಹ ಒಳಗೆನ್ನುತ ಕ
ಲ್ಲಿಲಿ ಗಡಿಗೊಡದನು ನಳಿನನಯನನು ೨೬

ಹರಿಬಲರೀರ್ವರು ಉರು ಮಾಯ್‌ಕಾರರು
ಚಿರರುಚಿರರು ಸುಂದರವರರಿವರು
ಪುರುಷೋತ್ತಮರ ಸುಚರಿತೆಯ ಪೇಳ್ವೆವು
ಪರಸನ್ವೆಂಕಟಗಿರಿವರನಿಲಯ ೨೭

೧೮

ರಾಗ : ಮೋಹನಕಲ್ಯಾಣಿ ತಾಳ : ತ್ರಿಪುಟ

ಲೀಲೆ ಘನ ಹರಿಲೀಲೆ ಘನ ಈ
ಬಾಲಕನಿವ ಜಗತ್ಪಾಲ ಘನ ಪ.

Rarest Archiver

ಶ್ರೀಲಲನೆಯ ಮತಿಜಾಲಕೊದಗದಿಹ
ಮೌಳಿಯ ಚಿದ್‌ಗುಣಶಾಲಿ ಘನ ಅ. ಪ.

ಅಪ್ರತಿಮಲ್ಲರಂ ಆ ಗೋಕುಲದಿ
ಸುಪ್ರತೀಕನಂತೆ ರಂಜಿಪರಂ
ತಾ ಪ್ರಾಕೃತ ಅರ್ಭಕರಂತೆ ಲೀಲೆಯ
ಆ ಪ್ರಜರಿಗೆ ತಾವ್ ತೋರುವರು ೧

ವ್ರಜದ ವೀಥಿಯಲಿ ಆಡುತಲಾಡುತ
ನಿಜ ಸಖರೆದುರಂ ಮೃತ್ತಿಕೆ ಮೆಲಲು
ಆ ಜನನಿ ಯಶೋದೆಗೆ ಪ್ರಜರ್ಕ್ಳೆಲಂ
ಅಜನಯ್ಯನ ತಾ ಕೇಳಿದಳು ೨

ಅಮ್ಮ ನಾ ಮೆಲಲಿಲ್ಲವೆ ಮೃತ್ತಿಕೆಯನ್ನಂ
ಸುಮ್ಮನೆ ಹುಸಿ ಹೇಳ್ಯಾಡುವರು
ಆ ಮೊಡುವೆ ನೋಡೆಂದು ಪುಟ್ಟ ಬಾಯೊಳಂ
ಬೊಮ್ಮಾಂಡವ ಹರಿ ತೋರಿದನು ೩

ತಮ್ಮಂತಸ್ಥ ಬಾಹ್ಯಾಂತಸ್ಥ ತೋರಿ
ತಮ್ಮಮ್ಮನು ಬೆದರುವಳೆಂದೆನುತ
ತಾ ಮತ್ತೆ ಬೈಚಿಟ್ಟನು ಬಾಯೊಳು ಪರ
ಬ್ರಹ್ಮಾತ್ಮಕ ಶಕ್ತ್ಯಾತ್ಮಕನು ೪

ತಾಯಿಯ ವಶದಿ ಮಕ್ಕಳು ಇಹ ಪರಿಯಲಿ
ಶ್ರೀಯರಸನು ಮಾಯವದಳೆದು
ಬಾಯತೆರೆದು ಅವ್ವಿಯ ಚಪ್ಪರಿದುಣ
ಲೀಯಚ್ಚರಿಯನು ನೆನೆನೆನೆದು ೫

ಎನ್ನಯ ಬುದ್ಧಿಯ ಭ್ರಮೆಯೊ ಸ್ವಪ್ನವೊ
ಅನ್ನಿಮಿಷರ ಮಾಯಾದ್ಭುತವೊ
ತನ್ನಯ ಸನ್ನುತ ಚಿನ್ನನ ಗುಣಕೀ
ರ್ತನ್ನೆಯ ಮಾಡಿದಳೆಂದವ್ವೆ ೬

ಎಂದಿನ ತೆರ ಮನೋವಾಕ್ಕಾಯದಿ ಯದುಂ
ನಂದ ವ್ರಜದವರ ಮೋಹಿಸಿದ

Rarest Archiver

ಕಂದನ ಲೀಲಾನಂದಾಂಬುಧಿಯಲಿ
ನಂದಿಸಿದರು ಗೋಕುಲೌಕಸರು ೭

ಶ್ರೀಕೃಷ್ಣ ಭಗವಾನ್ ಲೋಕೇಶ್ವರನು ತಾ
ನಾಕದ ಜೀವರ ಶೋಕಹರ
ವೈಕುಂಠಾಲಯ ಏಕಾನೇಕ ದಿ
ವಾಕರ ಕೋಟಿ ನಿಶಾಕರಭಾ ೮

ಲೆಕ್ಕಕೆ ನಿಲುಕದ ಲಕ್ಕುಮಿಯರಸನು
ಕುಕ್ಕಿಯೊಳಾಳುವ ಭುವನಗಳ
ರಕ್ಕಸರಳಿವನು ಭಕ್ತರ ಬೆಳೆವ ಗೋ
ವರ್ಗಳೊಳಿಹ ಪ್ರಸನ್ವೆಂಕಟನ ೯

೧೯

ರಾಗ : ದೇಶಾಕ್ಷಿ **ತಾಳ : ಏಕತಾಳ**

ಮೊಸರು ಕಡೆದಳಮ್ಮ ತನಯಗೆ ಹೊಸಬೆಣ್ಣೆಗಾಗಮ್ಮ ಪ.

ಬಿಸಜಸಖನುದಯವಾಗದ ಮುನ್ನೆ
ಶಶಿಮುಖಿ ಗೋಪಿ ತನ್ನನು ಸಿಂಗರಿಸಿ ಅ. ಪ.

ಹೊಂದಿನಿದ್ರೆಯ ದೇವ ನಂದಾದೀಪವ
ಅಂದು ಪ್ರಜ್ವಳಿಸುತ ಮಿಂದುಟ್ಟು
ಪೊಂದಟ್ಟೆಯ ಮಣಿವೃಂದದ ಭೂಷಣ
ಸಿಂಧೂರ ಸೀಮಂತದಲಿಟ್ಟು ೧

ಗಂಧ ಕಸ್ತುರಿಯಿಟ್ಟು ಮಂದಿರದೈವಕೆ
ವಂದಿಸಿ ಮುಡಿಗೆ ಮಲ್ಲಿಗೆ ಮುಡಿದು
ಇಂದುಕಾಂತಿಯ ಭಾಂಡದಿ ದಧಿ ತುಂಬಿ
ಧುಂ ಧುಂ ಧುಂಡುಕೆಂಬ ಚೆಂದದಲಿ ೨

ಪವಳದ ಕಡಗೋಲು ಪಿಡಿದು ಬೆಳ್ಳಿಯ
ನವನೇಣುವ ಸುತ್ತಿ ಸ್ವರ ತೆಗೆದು

Rarest Archiver

ಕುವಲಯಪ್ರಿಯ ಕುಲೋದ್ಭವನ ಗುಣಂಗಳ
ಸವಿಯಿಂದೊಲಿದು ಪಾಡುವಳಂದು ೩

ಶರಚರ ಗಿರಿಧರ ಧರೋದ್ಧರ ನರಹರೆ
ವರವಟು ಪರಶಂಕರಾ ರಘುಪ
ನರಸಖ ಸುರಮೋಹಕರ ಹರಿಚರ
ಸುರವರ ಪರಾತ್ಪರ ಹರೆಯೆನುತ ೪

ಅಡಿಗಡಿಗಲೆಯಲು ಬಡನಡು ಬಳುಕಲು
ಮುಡಿಯ ಮಲ್ಲಿಗೆ ಮಾಲೆ ಸಡಿಲುದುರೆ
ನಡಂಗಲಿಟ್ಟೆದೆಮೊಲೆ ನಿಡುಂಗಂಧ ಕತ್ತುರಿ
ಕಡು ಬೆವರಿಡೆ ಕಡಲೊಡೆಯನ ಅವ್ವೆಯು ೫

ಕೊರಳಪದಕ ಮುತ್ತಿನ್ ಹಾರ ತೂಗಾಡಲು
ಕರಿಕರಭಕರಕಂಕಣ ಸರಿಯೆ
ಚಿರರುಚಿರತ್ನನೂಪುರ ಝಣತ್ಕರಿಸಲು
ಪರಮಪುರುಷ ನಮ್ಮ ಹರುಷದಲಿ ೬

ಮಂಥನ ರವಕೆ ನವನೀತ ಬೇಡಿ ಹರಿ ತಾಳ್
ಗತಿಯಿಂದೆ ಕುಣಿಯೆ ಗೋಪತಿಯುರಸಿ
ಸುತ ಪ್ರಸನ್ವೆಂಕಟಪತಿಗೆ ಹೈಯಂಗವೀ
ನಿತ್ತಪ್ಪಿದಳತಿ ತೋಷಿತೆಯಾಗಿ ೭

೨೦

ರಾಗ : ಆನಂದಭೈರವಿ ತಾಳ : ಅಟ್ಟ

ರಂಗ ಗೋಕುಲದೊಳಗಾಡಿದ ಬಲು
ಶೃಂಗಾರ ಚೇಷ್ಟೆಯ ಮಾಡಿದ ಪ.

ಮಂಗಳಮಹಿಮಂ ಕೊಂಡಾಡಿದ ಭಕ್ತ
ಜಂಗುಳಿಗೆ ಮುಕ್ತಿ ನೀಡಿದ ಅ. ಪ.

ಮತೊಂದುದಿನ ಮೊಸರ್ಕಡೆವಾಗ ರಂಗ
ಹಸ್ತು ಬಂದನು ಗೋಪಿ ಬಳಿಗಾಗ

Rarest Archiver

ತಾ ಸ್ತನಪಾನ ಬೇಡಿದನಾಗ ದಧಿ
ಮಂಥನದಂಡ ಪಿಡಿದ ಬ್ಯಾಗ ೧

ಕಡೆವ ಕೆಲಸವನು ಇಟ್ಟಳು ತನ್ನ
ತೊಡೆಯನೇರಿಸಿ ಮೊಲೆಗೊಟ್ಟಳು
ಪಡಗದ ಪಾಲೊಳಗುಕ್ಕಲು ಮೊಲೆ
ಬಿಡಿಸಿ ಮಂದಿರದೊಳು ಪೊಕ್ಕಳು ೨

ತೃಪುತಿಯಾಗದ ಪ್ರಾಕೃತರಂತೆ ನಿತ್ಯ
ತೃಪುತನು ತಾನು ರೋದಿಸಿ ಮತ್ತೆ
ಕುಪಿತನಾಗುತ ಕಲ್ಲುವಿಡಿದನು ಬೆಣ್ಣೆ
ಯ ಪಡಗವಾಕ್ಷಣ ಒಡೆದನು ೩

ಹರುಷದಿ ಬೆಣ್ಣೆಯ ಗುಳಿಗೆಯ ಒಯ್ದು
ಒರಳ್ ಮೇಲೆ ಮೆಲುತಿದ್ದ ಜನಯ್ಯ
ಅರಸಿ ಗೋಪಮ್ಮನು ಹಾಲಿಗೆ ನೀರ
ನೆರೆದು ಬಂದು ಕಂಡಳೀ ಬಗೆ ೪

ಕೋಪದಿ ಕೋಲು ತಕ್ಕೊಂಡಳು ನೋಡಿ
ಶ್ರೀ ಪ್ರಸನ್ವೆಂಕಟ ನೋಡಲು ದ
ಯಾಪರ ಮೆಲವೆಲ್ಲಸೈದಲು ಕಂಡು
ಗೋಪಮ್ಮ ಸಿಕ್ಕಿದೆಯೆಂದಳು ೫

೨೧

ರಾಗ : ಘಂಟಾರವ ತಾಳ : ಏಕತಾಳ

ಸಾರಿ ಸಾರಿಗೆ ಗೋವಿಂದ ಮಹಾ
ಕಾರಣಿಕಜಭವಸುರವಂದ್ಯ ಪ.

ತಾಯಿ ಬಳಲುವದು ಮಕ್ಕಳಿಗೆ ಸಂ
ನ್ಯಾಯವಲ್ಲವೆನ್ನುತೆ ಬ್ಯಾಗೆ
ಆಯಸಪಡಿಸಿ ಸಿಲುಕಿದ ತನ್ನ
ಮಾಯದಿ ತಾ ವರ್ತಿಸುವ ಮುಕುಂದ ೧

Rarest Archiver

ಕೃಷ್ಣನ ಕಟ್ಟಲು ಕುಂದರದನೆ ಯ
ಥೇಷ್ಟ ಕಣ್ಣಿಗಳಿಂದಾ ಜನನೆ
ಅಷ್ಟು ದಾಮವು ಸಾಲದಾಗೆ ಹರಿ
ಕಟ್ಟಿಕೊಂಡನು ಪಕ್ಷ್ಮದಾಮದಾಗೆ ೨

ಒರಳನೆಳೆದುಕೊಂಡು ಹೋಗಿ ಮತ್ತಿ
ಮರಗಳ ಮುರಿದ ಚೆನ್ನಾಗಿ
ಸುರಋಷಿ ಶಾಪದಿ ನಳಕೂಬರರನ್ನು ಉ
ದ್ಧರಿಸಿದ ಸಿರಿವರ ಅತಿಬ್ಯಾಗೆ ೩

ದಿವ್ಯಪುರುಷರು ಇಳೆಯಲ್ಲಿ ಸು
ಸೇವ್ಯನ ಪಾದಕ್ಕೆರಗುತಲಿ
ಭವ್ಯಚರಿತನ ಕೊಂಡಾಡಿದರು ಬಹು
ದ್ರವ್ಯಾಧಿಪನ ಸುತರ್ ಭಕ್ತಿರತರು ೪

ನಿನ್ನ ಗುಣಕಥನೆಗೆ ವಾಣಿಗಳು ಹರಿ
ನಿನ್ನ ಕಥೆಗೆ ಶ್ರವಣಗಳು
ನಿನ್ನ ಸೇವೆಗೆಮ್ಮ ಪ್ರಾಣಗಳು ಹರಿ
ನಿನ್ನ ಸ್ಮೃತಿಗೆ ಮನವಿರಲಿ ದಯಾಳು ೫

ನಿನ್ನ ಪಾದಾಬ್ಜಕೆ ತಲೆಯೆರಗಿ ಹರಿ
ನಿನ್ನ ನೋಟವೇ ದೃಷ್ಟಿಗಾಗಿ
ನಿನ್ನವರ ಸಂಗತಿ ಇತ್ತು ಹರಿ
ಚೆನ್ನಾಗಿ ನಮ್ಮ ರಕ್ಷಿಪುದೆ ಸಂಪತ್ತು ೬

ಅವರು ಸ್ತೋತ್ರ ಮಾಡೈದಿದರು ಮ
ತ್ತವರ ಕಾಣುತಾ ವ್ರಜದವರು
ಇವ ಪರಂಜೀವನೆಂದರಿದರು ಪ್ರಸ
ನ್ನವೆಂಕಟನ ಸ್ತವಿಸಿ ಸುಖಿಪರು ೭

೨೨

ರಾಗ : ರೇಗುಪ್ತಿ **ತಾಳ : ಜಕ್ಕಣಿ (?) [ಆದಿತಾಳ]**

ತೊರೆದ ಮೊಲೆಯಿಂದಲಿ ಕರೆದಳು ಕಂದನ
ಭರಿತ ಪ್ರೇಮದಿಂದ ಅರಸಿ ಗೋಪಮ್ಮ ಪ.

Rarest Archiver

ಪರಮಲೋಭಿಗೆ ಧನ ದೊರಕಿದಂತೆ ತಾನೊಂ
ದರಗಳಿಗೆಯು ಬಿಟ್ಟಿರಲಾರಳಮ್ಮ ಅ.ಪ.

ಎಷ್ಟು ಹೊತ್ತಾಯಿತು ಆಡಹೋಗಿ ರಾಮ
ಕೃಷ್ಣ ಬರಲಿಲ್ಲವೇಕೀಗಳೆಂದು
ತುಷ್ಟಿಲಿ ಕರೆದಳ್ ಶ್ರೀಕೃಷ್ಣ ಹೇ ಬಲಭದ್ರ
ಇಷ್ಟೊಂದಾಟವು ಬೇಡ ಬಿಟ್ಟುಬನ್ನಿರೆಂದು ೧

ದಾಶಾರ್ಹರುಣ ಬನ್ನಿರೈ ಸಂಭ್ರಮದಿಂದೆ
ಸೋಸಿಲಿ ವ್ರಜನಾಥ ಮಿಾಸಲ ಪಾಯಸ
ನೀ ಶಿಶುಗಳ್ ಕರೆತಾ ಸಖಿಯೆಂದುಣ
ಲೇಸಂ ಜನ್ಮವ ತಾರೆ ಶ್ರೀಶ ನಿನಗೆನಂತ ೨

ಭಾಸುರ ಮೈ ಧೂಳಿಧೂಸರವಾಗಿದೆ
ಳೇ ಶಿಶುಗಳಿರಾ ಮಿಂದು ಶುಚಿಯಾಗಿ
ಭೂಷಣಾಂಬರಗಳಿಂ ಭೂಷಿತರಾಗಿ ನೀವ್
ಗೋಸಾಸಿರ ದಾನ ಭೂಸುರರ್ಗೀಯಿರೈ ೩

ನಿಜಜನಕನ ಸಹ ದ್ವಿಜಜನಪಂಕ್ತಿಲಿ
ಭೋಜನವ ಮಾಡಿರೊ ಸುಜನ ಪ್ರಿಯರಿರ
ಸಂಜಲವು ಮುಖವಾಸ ರಜತಾಭಾ ತಾಂಬೂಲ
ವ್ಯಜನ ಮಾಲ್ಯ ಗಂಧ ಭಜಕರಾಗಿರೆಂದು ೪

ನಿಮ್ಮೊರಿಗೆಯಲಿದ್ದ ಗೋಮಕ್ಕಳಂತೀಗ
ನಮ್ಮನೆಲಿರಿಯೆಂದು ಅಮ್ಮ ಕರೆದೊಯ್ದು
ಸುಮ್ಮಾನದಲಿ ಪರಬೊಮ್ಮ ಪ್ರಸನ್ವೆಂಕಟ
ಸನ್ಮಂದಿರನ ಯಶೋದೆಮ್ಮ ಪೂಜಿಸಿದಳು ೫

೨೩

ರಾಗ : ರೇಗುಪ್ತಿ ತಾಳ : ಏಕತಾಳ

ಪಾಹಿ ಗೋವಿಂದ ಪಾಹಿ ಮುಕುಂದ
ಪಾಹಿ ಪಾಹಿ ನಿತ್ಯಾನಂದ ಉಪೇಂದ್ರ ಪ.

Rarest Archiver

ವೃಂದಾವನಕೆ ಪಯಣೋದ್ಯೋಗದಿಂದ
ನಂದನಂದನ ತನುರುಹ ಕೃಪೆಯಿಂದ
ಅಂಧಕನು ಪಡೆದಾ ವ್ಯಾಘ್ರವೃಂದ
ವಂದಿಯ ಬಾಧಿಸೆ ನಡೆದನು ನಂದ ೧

ಭಕ್ಷ್ಯಪಾಯ್ಸನ್ನ ಭೋಜನವ ಮಾಡಿದರು
ಸೂಕ್ಷ್ಮಾಂಬರ ಅಲಂಕಾರ ಧರಿಸಿದರು
ಗೋಕ್ಷೀರ ದಧಿ ಘೃತ ಭಾಂಡ ತುಂಬಿದರು
ಲಕ್ಷೋಪಲಕ್ಷ ಶಕಟವ ಹೊಡೆಸಿದರು ೨

ಬಂಡಿಯ ಮೇಲೆ ಭಾಜನ ಹೇರಿ ಹತ್ತಿ
ಪುಂಡರೀಕಾಕ್ಷ ಸಂಕರ್ಷಣರೆತ್ತಿ
ಕೊಂಡರು ತಾಯ್ಗಳಂದಾಯಿತು ಅರ್ಥಿ
ಹಿಂಡು ಗೋವ್ಗಳ ಗೋವಳರನು ಬೆಂಬತ್ತಿ ೩

ಕುಂಭಕುಚಗಳ್ಗದಗದಿಪ ಚೆಲ್ವೆಯರು
ಅಂಬುಜಾಕ್ಷನ ಗುಣಕೀರ್ತ್ನೆ ಮಾಡಿದರು
ಕೊಂಬು ಕೊಳಲು ತಾಳ ತಪ್ಪಟೆ ಭೇರಿ
ಸಂಭ್ರಮದಿಂದ ವೃಂದಾವನ ಸಾರಿ ೪

ಅರ್ಧಚಂದ್ರಾಕಾರ ಶಕಟವ ನಿಲಿಸಿ
ಅದ್ರಿತಪ್ಪಲುಕೂಲ ಯಮುನೆಯ ಬಳಸಿ
ಸದ್ರತ್ನನಿಭ ಪುಲಿನಸ್ಥಳವಿಡಿದು
ಉದ್ರೇಕದಿಂದಲಿ ನೆಲೆಗೊಂಡರಂದು ೫

ಉಚ್ಚಶೈಲ ಗೋವರ್ಧನ ತಳದಿ
ಅಚ್ಯುತ ಬಲರಾಮರಾಡಿದರ್ ಮುದದಿ
ಸ್ವೇಚ್ಛೈಕಲೀಲನಂತಂದು ಲಾವಣ್ಯ
ವತ್ಸಗಳ ಕಾಯ್ದುದ್ದು ನಂದನ ಪುಣ್ಯ ೬

ಕರುಗಳ ಕಾಯ್ದರು ಹರಿ ಸಂಕರ್ಷಣರು
ಸರಿ ಗೆಳೆಗೋವಳರ್ವೆರಸಿ ಸುಂದರರು
ವರ ಕಲೋಚ್ಚಾರದಿ ವ್ರಜವಾದಿ ಜನಕೆ
ಹರುಷಾಮೃತಾಬ್ಧಿಲಿಟ್ಟರು ಕ್ಷಣಕ್ಷಣಕೆ ೭

Rarest Archiver

ಒನ್ಮೊಮ್ಮೆ ಮಂಜುಳ ಕೊಳಲನೂದುವರು
ಒಮ್ಮೊಮ್ಮೆ ಮಲ್ಲರಾಟವನಾಡುವರು
ಒಮ್ಮೊಮ್ಮೆ ವೃಷಪಿಕದನಿಯನೆಸಗುವರು
ಒಮ್ಮೆ ಭೂರುಹದಾಟ ನೀರಾಟಾಡುವರು ೮

ಶ್ರೀಕಾಂತೆಯನ್ನಾಳ್ವ ವೈಕುಂಠಧಾಮ
ತೋಕವೇಷದ ಶ್ರೀಕೃಷ್ಣನೆ ಪರಬೊಮ್ಮ
ಆಕಳಕಾಯ್ವರ ಕೂಡಿದ ಕೀರ್ತಿ
ಶ್ರೀಕರ ಪ್ರಸನ್ವೆಂಕಟ ಶರಣಾರ್ಥಿ ೯

೨೪

ರಾಗ : ರೇಗುಪ್ತಿ **ತಾಳ : ಏಕತಾಳ**

ಹರಿ ಹರಿ ಗೋವಿಂದ ಖಳ
ಹರಣ ಪ್ರಣತರಾನಂದ ಪ.

ಕುತ್ಸಿತಮತಿ ಕಂಸನ ಭಟನೊಬ್ಬನು
ವತ್ಸಾಕೃತಿಯಲಿ ಬಂದ
ಅಚ್ಯುತರಾಮರ ಕೊಲುವ ಉದ್ಯೋಗವ
ನಿಶ್ಚೈಸ್ಯವರೊಳು ನಿಂದ ೧

ವೃಕ್ಷದ ತುದಿಗೊಗೆದವನ ಮಡುಹೆ ಬಕ
ಪಕ್ಷಿಯ ತೆರ ಖಳನೋರ್ವ
ವೃಕ್ಷದಿ ಬಾಯ್ದೆರೆದೆತ್ತಿದಗೋಣಿಲಿ
ಭಕ್ಷಿಸಲಿಕ್ಕವ ಬಂದ ೨

ಹರಿ ಕರಪಲ್ಲವ ಅವನ ವದನದಲಿ
ತುರುಕಲು ಉರಿದು ಕಾರಿದನು
ದುರುಳನ ಚಂಚುಪುಟೆರಡನು ಮಾಡಿದ
ತ್ವರಿತದಿ ನಗುತೆ ಅಚ್ಯುತನು ೩

ಸರಸಿಜ ಭವ ಸುರವರರಂಬರದಲಿ
ನೆರೆದು ನಂತಿಸಿ ಪೂಮಳೆಯ

Rarest Archiver

ಗರೆದುರು ಅಣ್ಣನ ವೆರಸಿ ಮುಕುಂದನು
ಮರಳಿದ ಗೋಪತಿ ಬಳಿಗೆ ೪

ವ್ರಜನಾಥನು ಮಕ್ಕಳ ಬಿಗಿದಪ್ಪಿದ
ಭಜಿಸಿ ಸ್ತೋತ್ರವ ಮಾಡಿದನು
ದ್ವಿಜವರ ಗರ್ಗನು ಹೇಳಿದ ನುಡಿಗಳು
ನಿಜಉತ್ಪಾತ ಗೆಲಿದನು ೫

ಎನುತಲಿ ಸುಖದಲಿ ವನದಲಿ ಮಂಗಳ
ದಿನದಿನ ವರ್ಧಿಸುತಲ್ಲಿ
ವನಜನಯನನ ಗುಣಸಂಕೀರ್ತನೆ
ಘನಜನ ಪೊಗಳುವರಲ್ಲಿ ೬

ಗೋಪರು ಗೋಪಿಯರಾವ್ಗಳು ತರುಲತೆ
ದೇವಾಂಶರು ವ್ರಜರೆಲ್ಲ
ಶ್ರೀವರ ಪ್ರಸನ್ವೆಂಕಟ ಕೃಷ್ಣರೇಯನ
ಭಾವುಕರ್ ಮಾನವರಲ್ಲ ೭

೨೫

ರಾಗ : ತೆಲುಗು ಕಾಂಬೋಧಿ ತಾಳ : ಏಕತಾಳ

ಸ್ವರ್ಗಕೆ ಸಮ ವೃಂದಾವನವು
ವೆಗ್ಗಳಿಸಿತು ಸೌಖ್ಯದೀವನವು ಪ.

ಹರಿ ಸಂಕರ್ಷಣರೀರ್ವರು ಹರುಷದಿ
ಚರಿಸಿದರಾಕಳ ಕಾಯುತಲಿ
ವರ ಗೋವರ್ಧನಗಿರಿಯ ತಪ್ಪಲಿನಲಿ
ನಿರುತದಿ ಯಮುನೆಯ ತೀರದಲಿ ೧

ಅಲ್ಲಿದ್ದ ಲೋಕಂಗಳು ನಾಕಲೋಕವು
ಅಲ್ಲಿದ್ದ ಧೇನುಗಳು ಸುರಧೇನು
ಅಲ್ಲಿಹ ವೃಕ್ಷಂಗಳು ಕಲ್ಪವೃಕ್ಷವು
ಅಲ್ಲಿಹ ನಾರಿಯರಪ್ಸರೆರು ೨

Rarest Archiver

ಚಿಣ್ಣಿ ಬೊಗರೆ ಚಂಡು ಗುಮ್ಮುಗುಸಕುಹಿಡಿ
ಅಣ್ಣೆಕಲ್ಲು ಹಲ್ಲೆ ಗಜಗ ಘಲ್ಲೆ
ಕಣ್ಣುಮುಚ್ಚುಳೆ ಮರನೇರಾಟ ನೀರಾಟ
ಸಣ್ಣವರೊಳು ಸೋಲು ಗೆಲುವ ಆಟ ೩

ಸಂದೋಹನ ಮಾಡುತ ರಂಗ ರಂಗಾ
ಸಂದೋಹದಿಂದೆಂಬರು ರಂಗ
ನಂದಾಬ್ಧಿಯುಲಿ ಗೋಪಿಯುರಂತರಂಗ
ನಂದಿಸಿದಾನಂದಚಂದ್ರ ರಂಗ ೪

ಜಲಸೇತುಬಂಧನದಾಟ ನಿಲಯುನ
ಪಲಾಯುನದಾಟ ಕಪಿಪ್ಲವನ
ಕಲಹಂಸೋಚ್ಚರ ಅಳಿಗಳ ಝೇಂಕಾರ
ಗಿಳಿಶಿಖಿಯುಚ್ಚರ ಪಿಕೋಚ್ಚಾರ ೫

ಗಜಸಿಂಹಗರ್ಜನೆ ಗೋವೃಷಗರ್ಜನೆ
ಸುಜಲದ ಘೋಷಣೆ ಭೇಕರವ
ಸುಜನ ಗೋವಳರಿಗೆ ಶಿಕ್ಷಿಪ ದ್ವಿಜಪರ
ಧ್ವಜ ನಿಗಮೇಶ್ವರ ಅಜನಪಿತ ೬

ಲೋಲಾಕ್ಷಿಯರೊಳು ನೋಟ ಬೇಟ ವಿ
ಶಾಲ ಗುಣಾಢ್ಯ ಸುರೇಢ್ಯ ಹರಿ
ನೀಲಾಂಬುದಶಾಮಲ ಪಶುಗಳ ಪ್ರತಿ
ಪಾಲಿಸಿದನು ಗೋಪಾಲರೊಳು ೭

ವೃಂದಾವನದಿ ಗೋವಿಂದ ವೇಣುಸ್ವರ
ದಿಂದ ಸ್ವಯಶೋವಿಖ್ಯಾತ ಗಡ
ಇಂದಿರೆಯುರಸ ಗೋವೃಂದವ ಕಾಯ್ದನು
ಹಿಂದಣ ಪುಣ್ಯ ವಸುಂಧರೆಗೆ ೮

ನಳಿನಗಂಧವನುಂಬ ಅಳಿಗಳಘೋಷ ಘುಂ
ಜುಳವಾಗಿರೆ ವಿಹಂಗಗಳ
ಬಳಗ ಮೃಗಾವಳಿಗಳ ಕ್ರೀಡೆಯೊಪ್ಪಿತು
ಬಲಂ ಕುಸುಮಾಕರ ಸ್ಥಾನದಲಿ ೯

Rarest Archiver

ಎಲೆ ಬಲ ನೋಡಿವು ಎಳೆದಳಿರು ಕುಸುಮ
ಗಳ ಗೊಂಚಲ ಫಲಭಾರಿಡುತ
ತಲೆಬಾಗಿ ನಲಿವಿಲಿ ನಿಮಗೊಂದಿಸುತಿವೆ
ಎಳೆಯೆಲರ್ ಸೋಂಕಿ ಅಲರುದುರುತಿವೆ ೧೦

ಫಲವತಿ ಪುಷ್ಪಿಣಿಯರು ತುಂಬಿದ ಉಡಿ
ಯಲಿ ಹಿರಿಯರಿಗೆ ವಂದಿಪ ತೆರದಿ
ಇಳೆ ಸಾಕಿದ ಬೆಳೆಸಿದ ಉಪಕಾರಕೆ
ಲಲಿತಲತಾದ್ರುಮ ನತಿಸುತಿವೆ ೧೧

ಸ್ಥಾವರ ಜೀವದ ಯೋಗ್ಯತೆ ನೋಡಣ್ಣ
ದೇವ ನಿಮ್ಮರ್ಚನೆ ಮಾಡುತಿವೆ
ಈ ಉರುತರುಲತೆ ಜನ್ಮವೆ ಧನ್ಯವು
ದೇವಮುನಿಗಳಿರ್ಪರ್ ನಿಶ್ಚಯವು ೧೨

ಹರಿಯಗ್ರಜನಿಗೆ ಮಾನವನಿತ್ತು ಸಂ
ಚರಿಸುವ ಸೌಭಾಗ್ಯಕೆ ಮೆಚ್ಚಿ
ತರತರ ಬರುಹಿಗಳ್ ಗರಿಗೆದರಾಡಲ್
ಎರಳೆವೆಯಿಕ್ಕದೆ ನೋಡಿದವು ೧೩

ಹರಿಯ ಸೌಂದರ್ಯಾಂಬುಧಿಲೀಸಾಡುವ
ಹರಿಣಾಕ್ಷಿಯರಕ್ಷಿಮೀನಗಳು
ಮರುಳಿಟ್ಟು ನಿಂದವು ಹರವೇಣುನಾದಕೆ
ಹರಿನೋಟಸ್ಮರಶರಪೀಡಿತರು ೧೪

ಕುಡಿತೆಗಣ್ ಮಡದಿಯರ ಮುಡಿ ನುಡಿ ಪಲ್ ಮೊಲೆ
ನಡು ನಡೆಗ್ಹರಿಣ ಮಯೂರ ಕೀರ
ದಾಡಿಮೇಭ ಹರಿಯಂಚೆಯುಡವಿಗಿಡ
ಮಡುವಿಡಿದವು ನಾಚಿಕೆ ಹಿಡಿದು ೧೫

ಗೋಪಿಯರ್ ಗಾನವ ಪೋಲ್ವ ಭೃಂಗಾವಳಿ
ಗೋಪಿಯರ್ ನೋಟವು ಕುರಂಗಾಳಿ
ಗೋಪಿಯರ್ ನಡೆಯು ಹರಿಯ ಹಂಸಾಳಿಗಳ್
ಶ್ರೀಪತಿಸೇವೆಗೊಪ್ಪಿದವಲ್ಲಿ ೧೬

Rarest Archiver

ವೃಂದಾವನವದು ನಂದನೋದ್ಯಾನವು
ನಂದನ ಮನೆಯಮರಾವತಿಯು
ಇಂದಿರೆಯರಸ ಪ್ರಸನ್ವೆಂಕಟ ಉ
ಪೇಂದ್ರ ಎಲ್ಲರು ವೃಂದಾರಕರು ೧೭

೨೬

ರಾಗ : ಕನ್ನಡ ಗೌಳ **ತಾಳ : ಅಟ್ಟ**

ಧನ್ಯ ಧನ್ಯ ಯಮುನೆ ಗೋವರ್ಧನ್ನ ಗಿರಿಪತಿ
ಚಿನ್ಮಯಾಂಗ ಸ್ಪರುಶ ಪಾವನ್ನಮೂರಂತಿ ಪ.

ಎಳೆದಳಿರು ಶಾವಂತಿಗೆ ನೀಲೋತ್ಪಲ ಪೊಂಗ್ಯಾದಗೆಯ
ನಳಿನ ಚಂಪಕ ಪಾಟಲ ಬಕುಳ ಮೊಲ್ಲೆ ಮಲ್ಲಿಗೆಯ
ಅಲರು ತುಳಸಿ ಬರುಹಿಬರುಹ ಗೆಳೆಯರೀವರು ಗೆಳೆಯರಿಗೆ
ಒಲಿದು ಇತ್ತು ತಾನಿಡುವನು ಚೆಲುವರರಸನು ೧

ಮುಕುತಬಳಗದೊಡನೆ ಸಂತತ ಲಕುಮಿ ಪೂಜಿಪಳು
ಮುಕುತ ಕುಸುಮ ಗಂಧಾಲಂಕಾರ ಶ್ರೀಕಾಂತೆ ತಾನಹಳು
ಮುಕುತಾಮುಕುತರಿಗೆ ದುರ್ಲಭ ವ್ಯಕತಾವ್ಯಕತನು
ಆಕಳಕಾಯ್ವರ ಮಕ್ಕಳು ಅರ್ಚಿಸೆ ಸ್ವೀಕರಿಸುತಿಹನು ೨

ಶುಕಪಿಕಗಳು ಮೃದುಧ್ವನಿಯ ಝೇಂಕಾರವದಿಂ ಕರೆವಂತೆ
ಪ್ರಕಟಿಸುತಿವೆ ಗ್ರಹಮೇಧಿಗಳಾಗಿ ಭಕುತಿ ವಿನಯರಂತೆ
ಸುಖಿಗಳವರೇ ಸಾಧುಕುಲ ಸೇವಕರು ಭಾವುಕರು ಜೀವನ್
ಮುಕುತರವರೆ ಪರೋಪಕಾರದಿ ಮುಕುತಿ ಪಡೆವರು ೩

ಮಧುಕರಗಳ ಕೂಡಿ ಝೇಂಕಾರ ಮುದದಿ ಮಾಳ್ಪರು
ಹೃದದ ಹಂಸ ಸಾರಸ ರಂಹಸ ವದಿಸಿ ನಗುವರು
ಕೆದರಿದಗರಿಬರುಹಿಗಳೊಡನೆ ಮುದದಿ ಕುಣಿಯುವರು
ಬೆದರು ಹುಲ್ಲೆಗಳಂತೆ ನೋಡಿ ಕದಲಿ ಜಿಗಿಯುವರು ೪

ಹರಿಬಲರೀರ್ವರು ಸರಿಗೋವಳರೊಳ್ ಬೆರಸಿ ತಿರಂಗುತ
ತರುಲತೆಗಳ ಮೃಗ ಪಕ್ಷಿಗಳಚ್ಚರಿಯಂ ನೋಡುತ

Rarest Archiver

ಸರಸವಚನ ನುಡಿದರೆಲೆಲೆ ತಿರ್ಯಗ್ಜಾದ್ಯರ
ಪರಮಧರ್ಮವ ನೋಡಿ ಅತ್ಯಂತ ಹರುಷ ತೋರುವರು ೫

ಚಕೋರ ಕುರರಿ ಕ್ರೌಂಚ ತಿತ್ತಿರಿ ಶಕುಂತ ಕಾರಂಡ
ಬಕಗಳು ಪಾರಾವತ ಕಲವಿಂಕ ಚಕ್ರವಾಕಗಳ
ಸುಕಳೋಚ್ಚಾರವ ಮಾಡುತ ಪಾಡುತ ಆಕಳ ಕಾಯ್ದನು
ಸಖ ಗೋವಳರ ನಿಕರಕ್ಕಕ್ಷಯ ಸುಖವನುಣಿಪನು ೬

ಮೇಘಗಂಭೀರರವದಿ ದೂರಿದ್ದ ಗೋಗಳ ಕರೆಯುವನು
ಮೃಗಪ ವ್ಯಾಘ್ರಗಜಗಳ ಧ್ವನಿಗೆ ದಿಗಿಲು ತೋರುವನು
ಜಗದ ಪ್ರಭು ಮುಕುಂದ ದಣಿದ ಬಗೆಯ ಬಲ್ಲದವ
ನಗುತ ಗೋವಳರ್ಹೆಗಲಿನಲಿ ಬಾಹುಗಳನ್ನೇರುವ ೭

ಸಖರ ತೊಡೆಯ ತಲೆಗಿಂಬಿನಲಿ ಮುಖವನ್ನೆ ಇಡುವ
ಭಕುತವತ್ಸಲ ನಿದ್ರೆಯ ಮಾಡುವ ಸುಖದಿ ತರುಮೂಲ
ಸಂಖಸಮುಂದ್ರ ನಿದ್ರಾಮುದ್ರ ಸುಕಲೆದೋರಿದ
ಆಕಳಕಾಯ್ವರ ಕೈಯಿಂದಂಘ್ರಿಕಮಲಗಳೊತ್ತಿಸಿದ ೮

ಲಕುಮಿ ಭಜಿಪ ಪಾದ ಚತುರ್ಮುಖನರ್ಚಿಪ ಪಾದ
ಲೋಕಗಳಳೆದ ಪಾದ ಗಂಗೆಯ ಪ್ರಕಟಿಸಿದ ಪಾದ
ಮುಕುತ ವ್ಯಕತ ಪಾದ ಕಾಳಿಂಗ ಭಕುತೋದ್ಧರ ಪಾದ
ಶಕಟವನೊದ್ದ ಪಾದ ಗೋವಳಸಖರೊತ್ತುವ ಪಾದ ೯

ಕುಣಿದು ಕುಣಿದು ದಣಿದು ನಡೆದು ತನುವು ಬೆವರಿದ
ವನಜನಯನ ಫಣಿಶಯನನು ಮಣಿದು ಮಲಗಿದ
ತನಯರೊಡನೆ ಯುದ್ಧದಿ ಗಾಯನದಿ ಶಾಂತನು
ದನುಜಮಥನ ಪುಣ್ಯಕಥನ ಸುನಿದ್ರೆಯಾಂತನು ೧೦

ಕದನಚೌಪಟ ಮದನಜನಕ ವದನದಿ ಬಾಡಿದನು
ಸದನತ್ರಯನು ಆ ದನ ಕಾಯ್ದುನ್ಯಶೋಧನ ಪೂರಣನು
ಹದಿನಾಲ್ಕು ಲೋಕಾದ್ಯದನ ಕರ್ಮಜ್ಞ ಸುಧನರೊಡೆಯನು
ಈ ಧೇನುಪಳ್ಳಿಯ ಬದಿ ನದಿವನದಿ ದಧ್ಯೋದನ ಸವಿದನು ೧೧

Rarest Archiver

ಅಣುಗರ ಕರವಿಡಿದು ನಗುತ ದಣಿದರ್ಭಕರಂತೆ
ತಣಿರ ಮರದ ನೆಳಲಿಗೈದಿ ಘನಶ್ಯಾಮಲ ಕೃಷ್ಣ
ತಣಿರು ಕಸೆಪು ತೊಡಿ ತಲೆಗಿಂಬು ಗೆಣೆಯರು ಮಾಡಿದರು
ವನಜನಾಭನ ಗುಣಸಂಕೀರ್ತನೆ ನೆನೆದು ಪಾಡಿದರು ೧೨

ವನಮಾಲಿ ಗಂಧವ್ಯಜನ ಪಾದ ಸಂಹನ ಚಾಮರಗಳಿಂ
ವನಜಾಸನನ ಪಿತನ ಒಲಿಸಿದರಣುಗ ಗೋವಳರು
ಘನ ಶ್ರುತಿಗಳ ಮನಕೆ ನಿಲುಕದ ಸನಕಾದೀಶ್ವರನು
ವನಗೋಚರರ ಗುಣಗ್ರಾಹಿಯಾದ ಮುನಿಜನೇಢ್ಯನು ೧೩

ದಾಮಸಖಾರ್ಚಿತ ಗ್ರಾಮ್ಯರ ಕೂಡಾಡಿ ವ್ಯಾಮೋಹಿಪ ವಿಶ್ವ
ಭೂಮಿಲತಾದ್ರುಮ ಯಮುನಾ ಪರ್ವತ ಸ್ತೋಮದಿ ಚರಿಸುವ
ಕೋಮಲ ತೃಣ ಕುಸುಮಾವಳಿಗಳ ತಾ ಮಾಡುವ ಧನ್ಯರ
ಶ್ರೀಮನೋಹರ ಸ್ವಜನೋಪಕಾರ ಕಾಮಿತದಾತಾರ ೧೪

ಕರಜಾಕರಪಲ್ಲವ ಆಲಿಂಗನ ಚರಣಾಂಬುಜಗಳಿಂ
ಸ್ಪರುಶನದಿಂದ ಕರುಣನೋಟದಿ ಹೊರೆವ ಪೆಣ್ಣುಗಳ
ಸ್ವರತ ಸ್ವಪ್ರಿಯ ಪರಮಪುರುಷ ಪರಾತ್ಪರ ಕೃಷ್ಣ
ವರ ಗೋಪಿಯರ ಸುರಧೇನು ಕಲ್ಪತರು ಪ್ರಸನ್ವೆಂಕಟ ೧೫

೨೭

ರಾಗ : ಮುಖಾರಿ **ತಾಳ : ಏಕತಾಳ**

ಶ್ರೀವಳಾಧವ ಬಲರಾಮರ ಸಖಿ ಶ್ರೀದಾಮ ಬಿನ್ನವಿಸಿದ ಹರಿಗೆ
ತಾಮಸ ಧೇನುಕನು ಮದಮತ್ತನು ಈ ಮಹಾತಾಳ್ವನದೊಳಗೆ ಪ.

ಖರನಾಕೃತಿಯಲಿ ಖಳನಿಕರದ ಗೂಡಿರುವನು ಬರಗೊಡೊಬ್ಬರಿಗೆ
ಸುರಭಿ ಸುರಸಫಲ ದುರುಗಮವಾಗಿವೆ ಹರಿ ನೀ ಕರುಣಿಸು ನಮಗೆ ೧

ಸುಖಮಯ ಮೂರುತಿ ಸಖನ ನುಡಿಗೆ ನಗೆಮುಖದಲಿ ಕೂಡಿ ಗೋವರನು
ಕುಖಿಳನ ತಾಳ್ವನ ಅಕ್ಕರದಿ ಪೊಕ್ಕು ತರುನಿಕರಗಳಲ್ಲಾಡಿದನು ೨

ಇತ್ತೆಣಿಕಿಲ್ಲದ ಕತ್ತೆಬಳಗದೊಳು ಶತ್ರುಧೇನುಕ ಕೊಲಬಂದ
ಖ್ಯಾತ್ಕರಿಸುತ ಕಿವಿ ಎತ್ತಿ ಹಿಂಗಾಲ್ಗಳಲೊತ್ತ್ಯೊದೆಯುತಲವ ನಿಂದ ೩

Rarest Archiver

ಹೇಸರಗತ್ತೆಯು ತಾ ಸತ್ವರದಲಿ ಬೀಸಿ ವೃಕ್ಷಾಗ್ರಕೆ ಒಗೆದ
ವಾಸುದೇವ ಮತ್ತಾ ಸಂಕರುಷಣ ರಾಸಭಗಳನೆಲ್ಲ ಸಿಗಿದ ೪

ದುರುಳರು ತಮಸಿಗೆ ತೆರಳಲು ದುಂದುಭಿ ಅರಳುಮಲ್ಲಿಗೆಯ ಸೂಸಿದರು
ತರಳ ಮುಕುಂದನ ಸರಳ ವಿಕ್ರಮಂಗಳ ಮರಳಿ ಮರಳಿ ಸುರರ್ಹೊಗಳಿದರು ೫

ಸುರಭಿ ಸದೃಶದಿಂ ಭರಿತ ಫಲಂಗಳ ಹರಿ ಚಿರಗೋವರಿಗುಣಿಸಿದನು
ಹರುಷದಿ ಎಲ್ಲರು ಹರಿಯ ಗುಣಂಗಳ ಸ್ಮರಿಸುತ ಗೋಗಳ ಮೇಸಿದರು ೬

ನಳಿನದಳಾಂಬಕ ಬಲಗೋವಳರಿಂ ಫಲಗಳ ಭುಂಜಿಸಿ ಮುದದಿ
ತಲೆಯಲಿ ಬರ್ಹ ಪೂಗಳ ಮುಡಿದಾಕಳುಗಳ ಕೂಡಿ ಬರುತಿಹ ೭

ಸಿಂಗರವಾಗಿರೆ ಮುಂಗುರುಳೊಳಿಗೆ ಮಂಗಳ ಗೋಖುರ ಧೂಳಿ
ಹೆಂಗಳ ಗೋಪೆರ ಕಂಗಳ ಮಧುಕರರಂಗಾಸ್ಯಾಬ್ಜದ ಕೇಳಿ ೮

ಮೃಗಶಾಬಾಕ್ಷೆರ ಬಗೆಗೊಳುತೀಕ್ಷಿಪ ಮುಗುಳುನಗೆಯ ಸವಿನೋಟ
ಝಗಝಗಿಪಾಭರಣಗಳಿಗೆ ಭೂಷಣದ್ಯುಗರು ಮೋಹಿಪ ಮೈಮಾಟ ೯

ಹೆಂಗಳ ವಿಸ್ಮರ ಕಂಗಳ ಹಸಿವೆಗೆ ರಂಗನ ವದನವೆ ಆಪ್ಯಾಯನ
ಪೊಂಗೊಳಲು ಶ್ರವಣಂಗಳ ಕ್ಷುಧೆಗೆ ಕ್ಷಣಂಗಳಿಗೆಲ್ಲ ಆಪ್ಯಾಯನ ೧೦

ನಳಿನಾಕ್ಷನ ಮುಖಬೆಳದಿಂಗಳಿನಲಿ ಲಲನೆರ ನಯನಚಕೋರ
ನಲಿದವು ನಾಭಿಯ ಸಲಿಲಾಶಯದಲಿ ಹೊಳೆವಕ್ಷಿಮೀನವಿಹಾರ ೧೧

ಚೆಲುವ ಪಾದಾಂಬುಜಗಳ ರಸವುಂಬುವ ಅಳಿಗಳ ಸರಿಯಕ್ಷಿಭೃಂಗ
ಕೆಳದಿ ಗೋಪಿಯರ ಸುಲಲಿತ ಮನದಲಿ ಹೊಳೆವುದು ಹರಿಯ ಸರ್ವಾಂಗ ೧೨

ಸವಿ ಹರಿನಾಮಂಗಳ ಸವಿಯದಮೃತ ಕಣ ಯುವತೆರ ಜಿಹ್ವೆಗಾನಂದ
ನವಭಕುತಿಯ ರಸ ನವಕದ ಚೆಲುವೆಯರು ಟವಟವಿಪರು ಮುಖದಿಂದ ೧೩

ಶ್ರೀ ಗೋವಿಂದನು ಗೋಗಳ ಸಹ ವ್ರಜಕಾಗಿ ಬರಲು ಜನನಿಯರು
ಬೇಗಪ್ಪಲು ವನದಾಗಿನ ವಾರ್ತೆಯ ಆ ಗೋವರು ಹೇಳಿದರು ೧೪

ಖಳರ ವಧಿಸಿ ಬಲು ಬಳಲ್ದಿರೆನುತ ಪರಿಮಳಜಲತೈಲದಲೆರೆದು
ಕಲಧೌತಾಂಬರ ಮಲಯಜ ವ್ಯಜನ ಸ್ರಗ್ಗಳ ಮೃಷ್ಟೋದನದಿಂದ ೧೫

Rarest Archiver

ನಿಜಸುಖಪೂರ್ಣನ ಭಜಿಸೆ ಸುಜಪವನು ಸುಜನನಿ ತಾ ಮಾಡಿಸಲಂದು
ತ್ರಿಜಗತ್ಪತಿ ಮುಕ್ತಜನವಂದಿತಪದ ರಜನಿಯುಲೊಪ್ಪಿದನಂದು ೧೬

ಪ್ರಸನ್ನತರ ಚರಿತ ಪ್ರಸನ್ನಯಶೋಂಕಿತ ಪ್ರಸನ್ನಮೂರುತಿ ದೀನಬಂಧು
ಪ್ರಸನ್ನವೆಂಕಟಕೃಷ್ಣ ಪ್ರಸನ್ನಗತಿಪ್ರದ ಪ್ರಸನ್ನನಾಗಲಿ ನಮಗಿಂದು ೧೭

೨೮

ರಾಗ : ಸೌರಾಷ್ಟ್ರ **ತಾಳ : ಅಟ್ಟ**

ಕಾಳಿಯಫಣಿಮದಹರಣ ಕೃಪಾಳು ಸುಜನರಾಭರಣ
ಶ್ರೀಲಾಲಿತ ಮಂಗಲಚರಣ ಮತ್ತ ಖಳದನುಜಸಂಹರಣ ಪ.

ಯಮುನೆಯೊಳೇಕದೇಶದಲಿ ಅಹಿರಮಣ ಕಪಟಿ ಹೊಂದಿರಲಿ
ಅಮಲಜಲವು ವಿಷವಾಗಿ ತೀರ ಕ್ಷಮೆಗೆ ಹತ್ತಿದಂತೆ ಬ್ಯಾಗಿ ೧

ತೀರದ ತೃಣ ವೃಕ್ಷ ಗುಲ್ಮ ಶಕೆ ಸಾರಿ ಸುಟ್ಟರೆ ಅಲ್ಲಿಗೊಮ್ಮೆ
ವೀರ ಗರುಡನಮ್ಮರಿತದ ಕುಂಭ ಹೇರಿ ಕದಂಬನುಳಂಹಿದ ೨

ಒಂದು ದಿನವು ಗೋವಿಂದ ಬಲ ಬಾಂಧವನುಳಿದಲ್ಪೋದ
ಚಂದದಿ ಗೋವಳರಿಂದ ಗೋವೃಂದವ ಚರಿಸುತ ನಿಂದ ೩

ಆಗಲೆ ನೀರಡಿಸಿದರು ತಾವು ಬೇಗ ಯಮುನೆಗೈದಿದರು
ಗೋಗೋವರು ವಿಷಜಲವ ಕುಡಿದಾಗಳೆ ನೀಗಿದರಸುವ ೪

ಯೋಗೇಶ್ವರನಾದ ರಂಗ ದಯಾಗುಣ ಕರುಣಪಾಂಗ
ಬೇಗನೆಬ್ಬಿಸಲಾಗವರು ಹರಿಗೋವಿಂದನೆಂದೆದ್ದರವರು ೫

ಪಾಹಿ ಪಾಹಿ ಕರುಣಾಳೊ ಪಾಹಿ ಪಾಹಿ ತಪ್ಪುಗಳನ್ನು ತಾಳೊ
ದೈಹಿಕ ಚಿಂತಾಮಣಿಯೆ ಖಳದಾಹಕ ಸದ್ಗುಣಖಣಿಯೆ ೬

ಬಹಳ ಸ್ತುತಿಯ ಮಾಡಿದರು ಮಹಾಮಹಿಮನ ಮೊರೆ ಹೋಗಲವರು
ಅಹಿವರಶಯನ ಮುರಾರಿ ಎನಲು ವಹಿಲದೆ ಸಲಹಿದ ಶೌರಿ ೭

ಕಡವಿನಮರ ತುದಿಗೇರಿ ಗಾಢ ನಡುಬಿಗಿದಂಬರ ಹರಿ
ಘುಡುಘುಡಿಸುತ ಧುಮುಕಿದನು ವಿಷಮಡುವನು ಹರಿ ಕದಡಿದನು ೮

Rarest Archiver

ಸಂಕ್ಷೋಭಿಸಿ ಜಲವುಬ್ಬೆ ಹಾರ್ಯಾಕ್ಷಣ ಶತಧನು ಹಬ್ಬೆ
ಅಕ್ಷಯವಿಕ್ರಮ ಹರಿಗೆ ಮತ್ತೀಕ್ಷುದ್ರಬಲವೇನವಗೆ ೯

ಭೀಷಣ ತೆರೆಗಳೆದ್ದಾಡೆ ಮಂತ್ರಾಶಿವಿಷನಿದನೋಡೆ
ವಾಸಸ್ಥಾನಕೆ ಇಲ್ಲಿ ಬಂದು ಈ ಕ್ಲೇಶನಿತ್ತವನಾರೆಂದು ೧೦

ರೋಷದಿ ಎದ್ದವನಾಗಾ ವಿಷಶ್ವಾಸವನುಗುಳುತಲಾಗ
ವಾಸುದೇವನ ಕಚ್ಚಬಂದ ಕೊಂದು ಘಾಸಿಸುವೆನೆಂದ ಮಂದ ೧೧

ಅಹಿಭಕ್ಷಕವಾಹನನ ಈ ಅಹಿ ಕಟ್ಟಿದ ಬಿಗಿದವನ
ದಹಿಸುತ ಮೈಸುತ್ತಿದನು ಹರಿ ಬಹುತಪ್ಪನು ತಾಳಿದನು ೧೨

ನೀಲನೀರದಶರೀರ ಶ್ರೀ ಲೋಲ ಸುಂದರ ಸುಕುಮಾರ
ಕಾಲಾಹಿವೇಷ್ಟಿತ ತಾನು ತನ್ನ ಲೀಲೆಯಿಂ ನಿಶ್ಚೇಷ್ಟಿತನು ೧೩

ರಕ್ಕಸಹರಣನ ಕಂಡು ಅತಿ ದುಃಖದಿ ಗೋಗಳ ಹಿಂಡು
ಸಖ್ಯದ ಸಖಗೋಪಳರು ಚಿತ್ತಖೇದದಿ ರೋದಿಪೆರು ೧೪

ಶ್ರೀವತ್ಸದ ಲಾಂಛನನು ಹಾ ಸಾವ ಲೋಕದ ಚೆನ್ನಿಗನು
ಶ್ರೀವಕ್ಷದಿ ತೋರಿದನು ಸರ್ಪಾವೇಷ್ಟಿತನೊಪ್ಪಿದನು ೧೫

ಇತ್ತಲೀ ಗೋಕುಲದೊಳಗೆ ಬಹು ಉತ್ಪಾತವ ಕಾಣುತಾಗೆ
ಹೃತ್ತಾಪದಿ ಬಳಲಿದರು ಬಲನುಕ್ತಿಯ ಕೇಳದಲವರು ೧೬

ಬಂದರು ಹರಿಯಿದ್ದೆಡೆ ಗೋಪಿ ನಂದಾದಿ ಗೋವರು ಬ್ಯಾಗೆ
ಕಂದಕೃಷ್ಣನ ನೋಡಿದರು ಮನನೊಂದು ಶೋಕಾರ್ಣವದಿಹರು ೧೭

ಬಲನಾಶ್ರಯಿಸಿ ಬಂದಿಹರ ಗೋವಳರಾರ್ತವ ಪರಿಹಾರಾ
ಖಳಭಕ್ತನುಕ್ಕನು ಮುರಿದ ಅವನ ತಲೆಯಲಿ ತಾಂಡವನಾಡಿದ ೧೮

ಚಿತ್ರವಿಚಿತ್ರತಾಂಡವನು ನಕ್ಷತ್ರಕುಲಪನಾಡಿದನು
ಧಾತ್ರಾದ್ಯರು ಸ್ತುತಿಸಿದರು ದೇವಸ್ತ್ರೀಯರು ನಟಿಸಿದರು ೧೯

ಗಂಧರ್ವರು ಪಾಡಿದರು ಸುರದುಂದುಂಭಿಗಳ ಸಂಡಿಸಿದರು
ಅಂದದಿ ಪೂಮಳೆಗರೆದರು ಆನಂದಾಬ್ಧಿಯಲಿ ನಲಿದರು ೨೦

Rarest Archiver

ದಂಷ್ಟ್ರಾಹಿಯ ಫಣಗಳಲಿ ಶ್ರೀಕೃಷ್ಣನು ನರ್ತಿಸುತಿರಲಿ
ಕಷ್ಟಿಸಿದನು ಕಾಳಿಂಗ ಮದಬಿಟ್ಟನು ನಿರ್ವಿಣ್ಣಾಂಗ ೨೧

ನೆತ್ತರವನು ಕಾರಿದನು ಬಹು ವಕ್ತ್ರದಲಾ ಆಶೀವಿಷನು
ಭಕ್ತನುಳುಹಿ ನಂದಸೂನು ಪದನೃತ್ಯಕುಟ್ಟಣ ನಿಲಿಸಿದನು ೨೨

ಕಾಯದಿ ಬಲು ಕುಂದಿಸಿದ ತಾ ಸಾಯಲು ನಿಶ್ಚಯಿಸಿದ
ಆಯಾಸದಿಂದ ದುಃಖಪಟ್ಟು ನಾರಾಯಣನಲಿ ಚಿತ್ತವಿಟ್ಟು ೨೩

ಕಂಡರು ಅಹಿರಾಜನನು ಬಹು ಹೆಂಡಿರು ನಿರ್ವಿಷನನ್ನು
ಕೊಂಡಾಡಿದರು ಜಗದ್ಗುರುವೆ ಫಣಿ ದಂಡಾರ್ಹನು ಅಹುದೇವೆ ೨೪

ದಂಡಿಸಿದ್ದುಚಿತ ನಮ್ಮೊಳು ಬುಧಮಂಡಲಕೆಲ್ಲ ದಯಾಳು
ದಂಡನೆ ತಪ್ಪುಗಳ ತಾಳು ನಮ್ಮ ದಂಡಪ್ರಣಾಮತುತಿ ಕೇಳು ೨೫

ನಿನ್ನಿಂದುದುಭವ ಸ್ಥಿತಿಯು ಹರಿ ನಿನ್ನಿಂದ ಜಗಕಪ್ಪಯವು
ನಿನ್ನಿಂದ ಬಂಧನ ಮೋಕ್ಷ ಹರಿ ನಿನ್ನಿಂದ ಸುರರಪರೋಕ್ಷ ೨೬

ಬಂದ ನಿನ್ನ ದಾಸಿಯರ ನೋಡೊ ನಮಗಿಂದ್ಯೈದೆತನವನು ನೀಡೊ
ಬಂದೆನಲವರ ನೋಡಿದನು ಪದದ್ವಂದ್ವಕುಟ್ಟಣ ನಿಲಿಸಿದನು ೨೭

ದುಷ್ಟನ ಮದವಿಳುಹಿದನು ಶ್ರೀ ಕೃಷ್ಣನವನನುಳುಹಿದನು
ನಷ್ಟೇಂದ್ರಿಯ ಪ್ರಾಣಾದವನು ಬಂದಿಷ್ಟು ಸ್ವಸ್ಥನಾದನವನು ೨೮

ವಂದಿಸಿದನು ವಿನಯದಲಿ ಸಲಹೆಂದರ್ಚನೆಯ ವಿಧಿಯಲಿ
ಅಂದವ ಮಾಡಲು ಕೃಷ್ಣ ಸ್ಥಳ ಸಿಂಧುವಿನಲಿ ಮಾಡಿಟ್ಟು ೨೯

ಗರುಡನ ಭಯ ನೀಗಿಸಿದ ತನ್ನ ಚರಣಾಂಬುಜದಲಿ ಚಿಹ್ನಿಸಿದ
ಉರಗನ ಪೆಡೆಯ ಶೋಭಿಸಿದ ನಿಜಚರಣಶರಣನ ಸಲಹಿದ ೩೦

ಅಭಯವ ಕೊಟ್ಟವನಟ್ಟಿ ಈ ತ್ರಿಭುವನಕೊಬ್ಬನೆ ಜಟ್ಟಿ
ಅಬಲೆ ಯಮುನೆಯಂಬುವನು ಸುಧೆನಿಭ ಮಾಡಿದನು ಮಹಿಮನು ೩೧

ಶುಕಮುನಿ ನೃಪಗ್ಹೇಳಿದನು ನೃಪ ಭಕುತಿಭರಿತ ಕೇಳಿದನು
ಆಕಳಕಾವನ ಚರಿತೆಯನು ಚತುರ್ಮುಖಭವರು ಪೇಳ್ವುದನು ೩೨

Rarest Archiver

ಹರಿಯಾಶ್ಚರ್ಯ ಕರ್ಮಗಳ ಉಚ್ಚರಿಸುತ ಗೋವರ ಮೇಳ
ಹರುಷದಲಾ ರಾತ್ರಿಯಲಿ ಸುಸ್ಥಿರರಾದರು ಯಮುನೆಯಲಿ ೩೩

ನಂದನಸತಿ ಸುಖಿಸಿದಳು ತನ್ನ ಕಂದನ ಬಿಗಿದಪ್ಪಿದಳು
ನಂದಾದ್ಯಖಿಳ ಗೋವಳರು ಅಲ್ಲಿಯೊಂದ್ಯಾಮಿನಿಯ ನೂಕಿದರು ೩೪

ಆ ನಿಶಿ ದಾವಾಗ್ನಿಯನು ನುಂಗ್ಯಾನಿಖಿಳರ ಸಲಹಿದನು
ಸ್ಥಾನಕೆ ಸುಖದಿ ಐದಿದರು ದಯಾನಿಧಿ ದಯಾಪೂರಣರು ೩೫

ಇಂತಾಮರಮುನಿಗೇಯ ಅನಂತಾದ್ಭುತ ಶುಭಚರಿಯ
ಸಂತಸವಿಬುಧ ಸಂಪ್ರಿಯ ವಿಶ್ರಾಂತಿದಹಿತ ಗುಣಗೇಹ ೩೬

ಈ ಕಾಳಿಯ ಉದ್ಧರಣ ಪಾಪಾಕರಷಣ ಸುಖಕಾರಣ
ಶ್ರೀಕರ ಪ್ರಸನ್ವೆಂಕಟೇಶ ಸರ್ವದಾ ಕರುಣಿಪನು ಸರ್ವೇಶ ೩೭

೨೯

ರಾಗ : ಭೈರವಿ ತಾಳ : ಅಟ್ಟ

ಕಾಲ ಕಾಲ ದುರಿತ ಕೋಲಾಹಲದಿಂ ಪ್ರಜಾ ಜಗತ್
ಪಾಲ ಪಾಲಿಸುತಿದ್ದ ನಂದನಾತ್ಮಜ ಪ.

ಜನಕೆ ತುಷ್ಟಿಯಿಲ್ಲದಿಹ ಗ್ರೀಷ್ಮಋತು ಬರಲ್
ವನಜನಾಭನಾಜ್ಞೆಯಿಂ ವಸಂತಕಾಲದೋಲ್
ದಿನದಿನಕ್ಕೆ ಅಧಿಕ ಸೌಖ್ಯದೋರಿ ಸಕಲರ
ಮನಸಿಗುಲ್ಲಾಸವಾಯ್ತು ಕೃಷ್ಣರಾಮರ ೧

ಒಮ್ಮೆಂದೊಮ್ಮೆ ವಿಷದ ಗಾಳಿಯಲ್ಲಿ ಬೀಸಿತು
ದುಮ್ಮನದಿಂದುಪದ್ರ ಜನವಿನಾಶ ಮಾಡಿತು
ಬೊಮ್ಮನಿಂದವಧ್ಯವರವನೈದಿ ಉಗ್ರನು
ಆಮ್ಮಹಿಯಲ್ಲಿ ದೈತ್ಯ ವೃಕ್ಷರೂಪಿಲಿದ್ದನು ೨

ವೃಕ್ಷ ಗಂಧಗಾಳಿ ಸೋಕಿ ಸಕಲ ತರುಗಳು
ಕಕ್ಷದಹನವಾಗಿ ಹೋಗಿ ಕಾಡಕಿಚ್ಚಿನೊಳು

Rarest Archiver

ಆ ಕ್ಷಣಕ್ಕೆ ಒಣಗಿಹೋಗೆ ಪತ್ರಪೂಫಲ
ಅಕ್ಷಿಗೋಚರವಿಲ್ಲದಾಗೆ ಬಹಳಮಂಗಳ ೩

ಅದರ ಗಾಳಿ ಬೀಸಿ ಗೋಗಳು ನರರು ಗೋವರು
ಬೆದರುಪದ್ರ ಬಂದು ಬಿದ್ದರು ಬಲಮುಖಾದ್ಯರು
ಸುಂದರುಶನಧರನು ಸೀಳಿದ ವಿಷದ ತರುವನು
ಮುದವನಿತ್ತು ಹೊರೆದ ಅಗ್ರಜ ಗೋವು ಪ್ರಜರನು ೪

ಸಕಲರಾರೋಗ್ಯ ಭಾಗ್ಯವಂತರಾದರು
ಮುಕುತವಂದ್ಯನಂಘ್ರಿ ಸೋಂಕಿ ಶಾಂತಪೂರ್ಣರು
ಭಕುತಿ ಜ್ಞಾನ ವೈರಾಗ್ಯಯುಂಕುತರಾದರು ಜೀವನ್
ಮುಕುತರಾಗಿ ಅಜನ ಲೋಕದಂತೆ ಬಾಳ್ದರು ೫

ಸಿಟ್ಟಿನೇಳು ಗೂಳಿಗಳನು ಶೀಘ್ರ ಸದೆದನು ಶ್ರೀ
ಕೃಷ್ಣ ಕುಂಭಕನ್ನ ಕನ್ನಿಕೆಯಾಳ್ದ ಧೀರನು
ದುಷ್ಟಮಥನ ಪುಣ್ಯಕಥನ ಯಶೋದೆಯಣ್ಣನ
ಶಿಷ್ಟತನುಜೆ ನೀಲಾದೇವಿಯರಸ ಮೋಹನ ೬

ಹೀಗೆ ಶ್ರೀಕೃಷ್ಣ ರಾಮರಾಚರಣೆಗಳು ನಿತ್ಯ
ಯೋಗಿ ಜನರ ಹೃದಯ ಧ್ಯಾನ ಜ್ಞಾನಕೊಪ್ಪಲು
ಪೂಗಣೆಯನಾಟ ಪುಣ್ಯಗೋವಳೆಯರೊಳು ಪೂರ್ಣ
ಭೋಗಿ ಪ್ರಸನ್ವೆಂಕಟಕೃಷ್ಣನ ಆಜ್ಞೆ ಮೆರೆಯಲು ೭

೩೦

ರಾಗ : ಕನ್ನಡಗೌಳ **ತಾಳ : ಏಕತಾಳ**

ನಾಕೇಶನ ವನವೀ ವೃಂದಾವನ
ಗೋಕುಲಪ್ರಜರೇ ನಾಕಜರು
ಈ ಕಾಳಿಂದಿಯೇ ಸ್ವರ್ಧುನಿ ಶ್ರೀಬಲ
ಶ್ರೀಕೃಷ್ಣರು ವಾಸವಾಗಿಹರು ೧

ಶುಷ್ಕ ಲತಾತರು ವರ್ಜ್ಯವು ವನದಲಿ
ಪುಷ್ಕರಿಲ್ಲದ ನೀರಿಲ್ಲ

Rarest Archiver

ಪುಷ್ಕಳ ಕರೆವವು ಆವು ಮಹಿಷಿಯಜ
ದುಷ್ಕೃತಹರಹರಿ ಸಿರಿನಲ್ಲಿ ೨

ಶುಕ ಪಿಕ ಶಿಖಿಹಂಸಗಳ ಕಲೋಚ್ಚರ
ನಿಖಿಳವನ ಸುಸ್ಥಳದಲ್ಲಿ
ಸಕಲ ಕುಸುಮ ಫಲ ಸತತ ಸುಪೂರ್ಣವು
ಲಕುಮಿಯ ರಮಣನಿದ್ದಲ್ಲಿ ೩

ಕಕ್ಷಾಶನನಾಟವೆ ನಡೆಯದು ಕಮಂ
ಲಾಕ್ಷನ ಪಾದಸ್ಪರ್ಶದಲಿ
ತೀಕ್ಷ್ಣಕರೇಂದುಕರಗಳೆ ತೋರವು
ಪಕ್ಷಿಗಮನನ ಸುಳಹಿನಲಿ ೪

ನಿರ್ಝರ ಜಲಸಂಕೀರ್ಣವು ಝರಿಗಳ
ಗರ್ಜನೆ ಶ್ರಾವ್ಯವಾಗಿಹವು
ಪರ್ಜನ್ಯಾಪೇಕ್ಷೆಯು ತೋರದು ಶ್ರೀ
ನಿರ್ಜರಪತಿಯ ಸಂಚರವು ೫

ಕಂಜ ಬಕುಳ ಕಲ್ಹಾರೋತ್ಪಲರಜ
ವ್ಯಂಜಕದಾಮೋದದಲಿ
ಮಂಜುಳ ಮಧುಕರ ಝೇಂಕಾರ ಮನೋಹರ
ಕಂಜಾಕ್ಷನ ಆಟಣೆಯಲಿ ೬

ಕುಸುಮಾಮೋದದ ಸಹ ಸಂಚರಿಸುವ
ವಸುಯೆಳೆಯೆಲರಿನ ಸುಳಿವು
ಎಸೆವ ವಿಚಿತ್ರ ಮೃಗಾಳಿಯ ಕ್ರೀಡೆಯು
ಶಶಿಕುಲದರಸನ ನಲಿನಲಿವು ೭

ಹೀಗಿರುತಲ್ಲಿಯ ಶ್ರೀಕರವನದಲಿ
ಗೋಗೋಪರನು ಬೆರಸಿಹನು
ಪೂಗೊಂಚಲವು ಪ್ರವಾಳ ಬರುಹಿಗರಿ
ಶ್ರೀಗೋವಿಂದನು ಮುಡಿದಿಹನು ೮

Rarest Archiver

ಗೋಗಳ ಚರಿಸುತ ಅತಿ ಅತಿ ಮೃದುರವ
ರಾಗದ ವೇಣುಸ್ವನದಿಂದಾ
ಯೋಗಿಜನೇಶ್ವರ ಮೋಹಿಪ ಭುವನಜ
ನೌಘವ ವಿಧಿಭವಸುರವಂದ್ಯ ೯

ಮೋದವು ದಕ್ಷಿಣ ಪಕ್ಷವು ಗಡ ಪ್ರ
ಮೋದವು ಉತ್ತರಪಕ್ಷ
ಮೋದಾತ್ಮನ ಕಿವಿಮೇಲೊಪ್ಪಿತು ವಿ
ನೋದಕೆ ಶ್ರೀಕಾಕಪಕ್ಷ ೧೦

ಶ್ರೀಕರಜೋದ್ಭವ ವಿಪಹಿಪ ಪುರಹರ
ನಾಕೇಶನ ನಾಟಕನೀಗೆ
ಈ ಕಾನನದಾಟವು ನಟವೇಷವು
ಯಾಕಿನ್ನಿವು ಬೇಕಿನ್ನವಗೆ ೧೧

ಹಾರಾಟವು ಗೋವತ್ಸಗಳ ದಂಡಿಗೆ
ಏರಾಟವು ಭ್ರಮಣದ ಆಟ
ಹಾರವದ್ಹಾಸ್ಯವು ಫಲಗಳನೊಗೆಯುತ
ಚೀರಾಟವು ಕಣ್ಮುಸುಕಾಟ ೧೨

ಚೆಂಡು ಚಿಣ್ಣಿ ಪದಕಳಿ ಬೊಗರೆಗಳು
ಗುಂಡೆತ್ತಾಟವು ಮರದಾಟ
ಹಿಂಡು ಗೋವಳರ್ಧರಿ ಬಲರಾಮರು ಪೃಥಕ್
ಮಂಡಲ ಮಾಡ್ಯಾಡುವ ಆಟ ೧೩

ಯಮುನೆಯ ತೀರದಿ ಗಿರಿತಪ್ಪಲ ಬದಿ
ರಮಣೀಯ ಕುಂಜ ಪುಳಿನಸ್ಥಳದಿ
ಅಮಿತ ಕ್ರೀಡೆಯನಾಡಲು ನೋಡುವ
ರಮರರು ತಾವ್ ಸುಖಹೊಂದಿ ೧೪

ಅಲ್ಲಲ್ಲಾಕಳುಗಳ ಕಾಯುತ ಸಖ
ಗೊಲ್ಲರ ವೆರಸಿ ಮುಕುಂದ
ಉಲ್ಲಾಸದಲಿರೆ ದೈತ್ಯ ಪ್ರಲಂಬನು
ಗೊಲ್ಲರ ವೇಷದಿ ತಾ ಬಂದ ೧೫

Rarest Archiver

ದಾಶಾರ್ಹರ ಕೊಲಬೇಕೆನ್ನುತಲಿ ಖಳ
ದ್ವೇಷದಿ ಗೆಳೆತನವಿಡಿದ
ಶ್ರೀ ಸರ್ವಜ್ಞ ಶಿಖಾಮಣಿಯುವನೊಳು
ತಾ ಸಖ್ಯವನು ಬೆರಸಿದ ೧೬

ಭಾಂಡೀರವನದ ವಟತಳ ಗೋಗಳ
ಹಿಂಡನು ಅಗಲಿರೆ ಮುರಮಥನ
ಮಂಡಲವೆರಡನು ಮಾಡಿದ ದಾಮನ
ತಂಡಕೆ ದಾಮಾ ವೃಷಭರನು ೧೭

ಮೇಳೈಸಿದ ಸೋತವ ವಾಹಕ
ಸೋಲ್ದವನೇ ವಾಹ್ಯನು ಎಂದೆನುತ
ಹೇಳಿದ ಭದ್ರಸೇನಾದಿ ಸಕಲ ಗೋ
ಪಾಲರರಿಗೆ ಜಗತ್ಕರ್ತ ೧೮

ಸೋಲು ಗೆಲುವಿನಲಿ ವಾಹಕವಾಹ್ಯಕೆ
ಸಾಲುಗೋವಳರಾಡ್ಯೆಂದು
ಶ್ರೀಲೋಲನು ತಾ ಅಸುರನ ಸಹ ಗೋ
ಪಾಲಕರೊಡನೆ ಬೇರಿದ್ದು ೧೯

ಪಕ್ಷದ್ವಯವನು ಮಾಡ್ಯಾಡಲು ಖಳ
ರಾಕ್ಷಸ ಕಂಸನ ಭಟನು
ಋಕ್ಷಬಲನ ಎತ್ತ್ಯೊಯ್ದನು ತಾನಂತ
ರಿಕ್ಷಕ್ಕೆ ಬರುತಿರೆ ಬಲನು ೨೦

ಬೆದರುತ ಹರಿಸ್ತುತಿ ಮಾಡಲು ಸಾಸಿರ
ವದನನ ಸಮವು ಬಲಬಂದು
ವಂದವಂತ್ರಪನಿಗೆ ನಿತ್ರಾಣಾಯಿತು
ಕುಧರನ ಗೌರವವ ಕಂಡು ೨೧

ಕುಟಿಲ ಖಳನ ಅಲಂಕಾರಾಕಾಶದಿ
ತಟಿತ ದ್ಯುಮಣಿಯಂತೆ ಜ್ವಲಿಸೆ
ಪಟಂಬಲನೊಪ್ಪಿದ ದುಷ್ಟನ ಪೃಷ್ಠದ
ತಟದಿ ಶಶಿವೋಲ್ ಥಳಥಳಿಸೆ ೨೨

Rarest Archiver

ರೋಷದಿ ದೃಢಮುಷ್ಟಿಯಲಿ ಗುದ್ದಿದ
ದ್ವೇಷಿಯ ನೆತ್ತಿಯ ಮೇಲೆ
ವಾಸವನ್ವಜ್ರದಿ ಗಿರಿಕೆಡೆದೋಲ್ ಶಿರ
ಸಾಸಿರ ಶೀರ್ಣಾಗ್ಯವ ಬೀಳೆ ೨೩

ನೆತ್ತರು ಕಾರುತ ಗಿರಿಯೋಲ್ ಬಿದ್ದಿರೆ
ಸುತ್ತಣ ಗೋವರುಗಳು ನೋಡಿ
ಸ್ತೋತ್ರವ ಮಾಡಿದರ್ ಸಾಧು ಸಾಧು ಭಲ
ಶತ್ರುಹನನ ಕೊಂಡಾಡಿ ೨೪

ಸುಮನ ವೃಷ್ಟಿಯನು ಸುಮನಸರ್ಗರೆದರು
ಅಮಿತ ದುಂದುಭಿ ವಾದ್ಯವನು
ಕಮಲನಯನ ಬಲ ಬಲಶಾಲಿಗಳು ತಮ್ಮ
ರಮಣೀಯ ಗೃಹಕೈದಿದರು ೨೫

ಪ್ರೇಮದಿ ನಂದ ಯಶೋದೆ ರೋಹಿಣಿ
ಈ ಮಕ್ಕಳನಪ್ಪಿದರು
ಆ ಮಹಾತೋಷಕೆ ಎಣೆಯುಂಟೆ ಬಲ
ರಾಮ ಶ್ರೀಹರಿಗೆ ಸಮರುಂಟೆ ೨೬

ಗಂಧ ಮಾಲ್ಯಾಂಬರ ಭೂಷಿತರಾಗಿಹ
ಸುಂದರವರರು ಒಪ್ಪಿದರು
ವೃಂದಾರಕವಂದಿತ ಪ್ರಸನ್ವೆಂಕಟ
ಮಂದಿರದರಸುಗಳಿವರು ೨೭

೩೧

ರಾಗ : ಮೋಹನ ಕಲ್ಯಾಣಿ **ತಾಳ : ಏಕತಾಳ**

ವೃಷ್ಣಿವರ್ಯ ಕೃಷ್ಣನಂಘ್ರಿ ಸ್ಪೃಷ್ಟವಾದ ಗೋಷ್ಠಕೆಲ್ಲ
ತುಷ್ಟಿಯಾಯಿತು ವೃಷ್ಟಿಕಾಲ ಕಷ್ಟದೋರದು
ತುಷ್ಟವಾಗ್ಯಥೇಷ್ಟವಾರಿ ಪುಷ್ಟ ಪೈರ್ಗಳಷ್ಟು ಬೆಳೆಯೆ
ಮಿಷ್ಟ ಅಶನ ಸ್ಪಷ್ಟಜ್ಞಾನನುಷ್ಠಾನ್ಹೆಚ್ಚಿತು ೧

Rarest Archiver

ನೀಲ ನೀರದಾಳಿ ಸಿಡಿಲ್ಗಾಳಿ ಕೆಂಧೂಳಿಗಳ
ಏಳಿಗೆಯಿಂ ಕೋಲುಮಿಂಚು ಮೇಲೆ ಮೇಲೆಯೆ
ಲೋಲೈಸೆ ಸ್ಥೂಲಧಾರೆಜಾಲ ಮುಸುಕಿ ಬಹಳ ವರ್ಷ
ಕಾಲ ಒಪ್ಪೆ ಶ್ರೀಲಲನೆಯ ಲೋಲನಿದ್ದಲ್ಲಿ ೨

ಕೆರೆಬಾವಿಗಳುಂ ತೊರೆಗಳುಂ ಪುಷ್ಕರಣಿಗಳುಂ ಭರಿತ ಜಲದಿ
ಹೊರಚಲ್ಲಿದವಿರದೆ ಯಮುನೆ ಬೆರಸಿ ನಡೆದವು
ತರು ವೀರುಧ ಉರು ಪುಷ್ಪಾಗೆ ವರಜಂಬು ಖರ್ಜೂರ ದ್ರಾಕ್ಷೆ
ಪರಿಪಕ್ವದಿ ಮೆರೆದವಲ್ಲಿ ಹರಿಯ ವನದಲಿ ೩

ಮಾನವರ್ಗೆ ಗೋನಿಕರ ನಾನಾಜಾತಿ ಪ್ರಾಣಿಗಳಿಗೆ
ಪ್ರಾಣ ಕಾಯ ನಯನ ನಂದಸೂನುವಿದ್ದಲ್ಲಿ
ಶ್ರೀನಾಥ ಸಖ ನಿಕಟದಿ ವನದ ನವೀನ ಜಂಬು
ವನು ಖರ್ಜೂರನುಂಡನು ಆನಂದಾತ್ಮನು ೪

ಕೆಚ್ಚಲ ಭಾರದಿ ಚರಿಪ ಚೊಚ್ಚಿಲಾವ್ಗಳುಚ್ಚುಣಲು
ನಿಚ್ಚ ಕರೆದನಚ್ಚರಿಯ ಉಚ್ಚಾರಂಗಳಿಂ
ಪಚ್ಚವರ್ಣೆ ಸ್ವಚ್ಛರೂಪೆ ಅಚ್ಚನೀಲೆ ಹೆಚ್ಚಿನಮ್ಮ
ಮಚ್ಚಿನಮ್ಮ ಉಚ್ಚಗಂಣಿಯೆ ಹಚ್ಚಗಿಣಿಯೆ ಬಾ ೫

ಗಂಗೆಗೌರಿ ತುಂಗಭದ್ರೆ ಮಂಗಳೆ ಧೂಮ್ರಾಂಗೆ ಗೋವೆ
ರಂಗೆ ಭೀಮೆ ಸಿಂಗರೇ ಸುಸಂಗೆ ತ್ರಿವೇಣಿ
ಭೃಂಗೆ ಚಿಂಚೆ ಪಿಂಗೆ ಹಂಡೆ ಶೃಂಗಿ ಕೃಷ್ಣೆರಂಗು ಮುತ್ತೆ
ಪಿಂಗಳೆ ಹೇಮಾಂಗಿಯೆಂದು ರಂಗ ಕರೆದನು ೬

ವಾರುಣಿ ಕವೇರಕುವರೆ ನೀರದಾಂಗೆ ನೀರಜಾಕ್ಷಿ
ಸಾರಸ್ವತಿಯೇ ಭೀರುನೇತ್ರೆ ಚಾರುವದನೆ ಬಾ
ಶ್ರೀರಮಣ ಗಭೀರರವದಿ ಸಾರಿ ಕರೆಯೆ ದೂರದಿಂದಂ
ಬಾರವದಿ ತೂರಿಬಂದವು ವೀರವೇಗದಿ ೭

ಬಂದು ಬದಿಯ ಹೊಂದಿ ಹರಿಯ ಸ್ಕಂಧದಲಿ ಸ್ಕಂಧವಿಟ್ಟಾ
ನಂದದಿ ಆನಂದಾತ್ಮನ ಇಂದು ಲೇಹಿಪವು
ಮಂದಹಾಸದಿಂದ ಕೃಷ್ಣ ಒಂದೊಂದಾವ ಸುಂದರ ಕೈ
ಯಿಂದ ತುರಿಸೆ ಅಂದು ಮೋಕ್ಷಾನಂದದೋರಿತು ೮

Rarest Archiver

ಇರಸಲ್ಮಳೆಯುಗರೆಯಲಾಗೆ ಹರಿಬಲಗೋಪರರು ಹೊಕ್ಕು
ಗಿರಿಗುಹ್ಯದಿ ಚರವಿಸಿದರು ಕಂದಮೂಲಫ
ಪರಮ ಫಲಗಳ ಪರದಧ್ಯಾನ್ನ ಚಿರವ್ಯಂಜನ ಹರಿಯಮೇಲೆ
ಹರುಷದಿಂದುಂಬರು ಕೂಡೆ ನಿರುತ ತೃಪ್ತರು ೯

ಎಳೆಯ ಹುಲ್ಲು ಮೆಲುವಾಗ ಕಂಗಳನ್ನು ಮುಚ್ಚಿ ಗೋವು
ನಳಿನಾಕ್ಷನ ಚೆಲುವ ಮೂರುತಿ ಹೊಳೆವು ನೋಡಿದವು ೧೦

ಶರತಕಾಲ ಬರವಾಯಿತು ನಿರುಮಲದಿ ಸರಗಳೊಪ್ಪೆ
ವಿರಹಿತಾಭ್ರ ಶಾರ್ವರೀಶ ಸರ್ವರಿಗಿಪ್ಪನು
ಪರಮತಿಗ್ಮಕಿರಣತಾಪ ಸರಿದುಹೋಗೆ ಇರುಳಿನಲ್ಲಿ
ಸ್ಮರನ ಬಾಣ ಸರಸಿಜಾಕ್ಷೇರ್ಗೆರಗುತಿದ್ದವು ೧೧

ರಂಗನಂಗಸಂಗಕೆ ಗೋಪಾಂಗನೇರು ಸಂಗಡಿಸಿ
ಸಂಗೀತಡಿ ಮಂಗಳ ಗುಣಂಗಳ್ಪೇಳ್ವರು
ಅಂಗನೇರು ಅಂಗಜನ್ನ ಸಂಗರ ಮತ್ತಾಂಗಿಯರು
ಸಿಂಗರ ವನಂಗಳಲ್ಲಿ ಹಿಂಗದಿಪ್ಪರು ೧೨

ಕುಸುಮನಾಭ ಕುಸುಮಿತ ವನಪ್ರಸರದಲ್ಲಿ ಪಶುಕಾಯುತ್ತ
ಮಿಸುನಿಕೊಳಲ ರಸತುಂಬಿ ನಾದಿಸುತಲಿರ್ದನು
ಹೊಸಪ್ರಾಯದ ಅಸಿಯರು ಪರವಶರಾಗುಲ್ಲಸದಿ ರತಿ
ರಸಿಕೆರೆಲ್ಲ ರಸಿಕನ ಇಚ್ಛಿಸುತಲಿರ್ದರು ೧೩

ವರವರ್ಣೇರು ವಿರಹತೆರೆಯ ಶರಧಿಲೀಸುತಿರಲು ಕಂಡು
ಸ್ಮರನಯ್ಯನುದ್ಧರಿಸಿದನು ಕರುಣವಾರಿಧಿ
ಇರುಳು ಹಗಲು ಹರಿಯಲೀಲೆ ಸ್ಮರಿಸುತಿಪ್ಪರರಸಿಯರು
ಪರಮ ಭಕ್ತಿಭರಿತರಾಗಿ ಹರಿಣನೇತ್ರೆರು ೧೪

ಅಹೋರಾತ್ರಿ ಶ್ರೀಹರಿಯ ರೂಪಧ್ಯಾನ ಮೋಹಿತರು
ದೇಹೇಂದ್ರಿಯ ಗೇಹ ಪ್ರಾಣ ಸ್ನೇಹವವನಲ್ಲಿ
ಬಾಹ್ಯವಿಷಯರಹಿತೆಯರು ಆ ಹೆಂಗಳ ಮೋಹರವು
ಮಹಾಪುರುಷರಾ ಹೋಲಿಕೆಯಲಿಹರು ವ್ರಜದಿ ೧೫

Rarest Archiver

ಕಣ್ಣಿಲಿ ರಂಗನ್ನ ಮೂರ್ತಿ ಕರಣಗಳಿಗೆ ಅವನ ವಾರ್ತೆ
ಮನ್ನವು ಧ್ಯಾನಾನ್ವಿತ ಕೀರ್ತನ್ನೆ ಜಿಹ್ವೆಗೆ
ಕನ್ಯೆಯರು ಧನ್ಯರು ಪಾವನ್ನೆಯರು ಚಿನ್ಮಯ ಪ್ರ
ಸನ್ನವೆಂಕಟಮಾನ್ಯೆಯರು ಪುಣ್ಯಶಾಲೆರು ೧೬

೩೨

ವೇಣುಲೀಲೆ

ರಾಗ : ಕನ್ನಡಗೌಳ **ತಾಳ : ಅಟ್ಟ**

ವೇಣುಗೋಪಾಲನ ವೇಣು ವರ್ಣಿಪರು ಜಾಣೆ ಗೋಪೇರೆಲ್ಲ ಗಾನಾಮೃತವುಂಡು
ಬಾಣಪಂಚಕನ ಬಾಣದಟ್ಟು+[1]ಳಿಗೆ ಪ್ರಾಣ ಡೆಂಡಣಿಸಿ ಧ್ಯಾನಿಪರು ಪ.

ಎಳೆನೇಸರ್ಗಳ ಬಳಗದಂತಿಪ್ಪ ಹೊಳೆವ ರತುನ ಮೌಳಿ ಕುಂಡಲ್ಗಳ
ಬೆಳಗಿಲಿಹ ಕಪೋಲದ ಕಾಂತಿ ಪವಳದುಟಿಯಲ್ಲಿ ಬಿಂಬಿಸಲು
ನಳಿನದಳವ ಪೋಲುವ ನೇತ್ರ ಭ್ರೂ ವಿಲಾಸಾಪಾಂಗದಿ ಕೊಳಲನಾದಿಪ
ತಳಿರು ಬರುಹ ಮಲ್ಲಿಗೆದಂಡೆ ಗೊಂಚಲುಗಳ ಗುಂಜಿದೊಂಗಲಿನ ೧

ವಾಮಬಾಹುವಿನಲಿ ವಾಮಗಂಡವಿಟ್ಟು ಹೇಮವೇಣುರಂಧ್ರವ ಮುಟ್ಟಿಅಂಗುಲಿ
ನೇಮದಲಿ ಸರಿಗಮಪದನಿಯಾ ಮಂಜುಳ ಸ್ವರ ನುಡಿಸಲು
ರಾಮೆಯಂಬಾಧರ ಸೋಮರಸವನ್ನು ಪ್ರೇಮದಿ ಸವಿವ ಶ್ರೀಮದ್ವೇಣುವಿಲಿ
ಈ ಮಹಾಭಾಗ್ಯವ ಕಾಮಿನೇರ್ನೋಡಿರೆಂದು ಮಾತನಾಡುವರ್ ರಾಮೆಯರು ೨

ಬ್ರಹ್ಮಗಂಧರ್ವಗಾನವಿಮ್ಮರುಪಾ ಗೀತ ಅಮ್ಮರ ಗಂಧರ್ವರಮ್ಮರ ನಾರೇರು
ಉಮ್ಮಯದಿಂ ಕೇಳಿ ಸಮ್ಮೋಹಿಸಿದರು ಈಮ್ಮಹಿಯ ವ್ರಜರಮ್ಮಣೇರು
ಬ್ರಹ್ಮಗಚ್ಚರಿಯ ರಮ್ಮೆಯರಸನ್ನ ಸನ್ಮಾರ್ಗಿಯಾ ವೇಣುಸುಮ್ಮೂರ್ಛೆಯಿಂ ಕೇಳಿ
ಸುಮ್ಮೃಗ ಪಕ್ಷಿಗಳ್ ತಾಮ್ಮರುಳಿಟ್ಟವು ರಮ್ಮ್ಯಾರಣ್ಯದಿ ತಂತಮ್ಮೊಳು ೩

ಚೂತ ಪ್ರವಾಳ ಬರ್ಹೋತ್ಪಲ ತಾವರೆ ಪ್ರೀತಿಲಿ ಮುಡಿದ ನಾಥಗೋಪಾಲನ
ಗೀತಕೆ ಭೂರುಹವ್ರಾತ ಲತೆಗಳು ಸೋತು ಅಶ್ರುಪ್ರೋಕ್ಷವಾತವವು
ಆತನ ನೀಲ ಜೀಮೂತಾಂಗ ವೀಕ್ಷಿಸಿ ಪೂತ ನವಿಲ್ಗಳ ಯೂಥವು ನರ್ತಿಸೆ
ಶ್ರೋತ್ರರಕಮೃತವಾತ ಹುಲ್ಲೆಗಳು ಜಾತಾನಂದದಿಂದ ಕೂತವಂದು ೪

1 + ಗ

Rarest Archiver

ಗೋವಿಂದಾಟವಿಲಿ ಗೋವಿಂಡುಗಳನು ಕಾವುತ ಸ್ವರ್ಣವಂಯ ವೇಣುನಾದಿಸೆ
ಆವು ಕಿವಿಗೊಟ್ಟು ಯಾವಸವಂ ಕಚ್ಚಿ ತಾ ವತ್ಸವಂ ಬಿಟ್ಟು ಹುಚ್ಚೆನಿಟ್ಟು
ಆ ಪೀಕ್ಷಿಸಿ ಕೃಷ್ಣಲಾವಣ್ಯಸುಧೆಯ ಸೇವಿಸಿ ನೇತ್ರದಿ ತೀವಿದಾನಂದದಿ
ತಾವಶ್ರುಗರೆದವು ಭಾವುಕ ಜನರ ಭಾವದಿ ಲಾಂಗೂಲಗ್ರೀವವೆತ್ತಿ ೫

ದೇವನಾರಿಯರ ನೀವಿ ಸಡಿಲ್ದುವು ಭಾವೇರ ಮುಡಿಯ ಪೂವು ಚೆಲ್ಲಿದವು
ಭಾವಜನಂಬಿಗೆ ಆವೆಂಗಳ್ಬುಚ್ಚಿಟ್ಟು ಶ್ರೀ ವೇಣುವಿನ ರಸವನುಂಡಂ
ಗೋವೇರ ಸುಕೃತ ದಾವುದೊ ರಂಗನ್ನ ಸೇವೆಗೆ ಸನ್ನದ್ಧಳಾವೇಳೆ ಕಾಳಿಂದಿ
ತಾ ವೇಗ ಬಿಟ್ಟೂರ್ಮಿ ಬಾಹ್ವಿಂದಲಪ್ಪಿದಳ್ ದೇವನಂಘ್ರಿವನಜವನಂದು ೬

ಶ್ರೀವರ ಶ್ರೀಕೃಷ್ಣಾಟವಿಯ ಸಂಚರಿಸುವಾಗ ಪಾದರಾಜೀವದ ಗಂಧವು
ಭೂವಿಯ ತೃಣದಿ ಸವ್ಯಾಪಿಸಿರಲು ದೇವಪುಳಿಂದೆಯರ್ತಾವದನು
ಗ್ರೀವ ಕುಚದಲಿಟ್ಟು ವಾಸುದೇವನ ಪಾವನ ಚರಿತ್ರೆ ಭಾವಭರಿತರಾ
ಗಾವಳಿ ಮಾರ್ಗದಿ ಕೋವಿದೆರ್ಕ್ಪೇಳಿದರ್ ದೇವಗಂಧರ್ವರ ರೀವಿಯಲಿ ೭

ಮೇಘಶ್ಯಾಮಲನ ರಾಗರಸಾಮೃತ ಭೋಗಗನ ತುಂಬಲಾಗ ದೇವರ್ಕಳು
ಆಗಸದಿಂ ಪೂವಾ(ವು?)ಳಿಗರೆದರರ್ಥಿಯಾಗಿರೆ ಸಾಧುಗಳೌಘ ಕಂಡು
ಮೇಘಾಳಿ ರಂಗನ ಮೇಗಾತಪತ್ರಂಗಳಾಗಿರ್ದವಲ್ಲಿಯ ಗೋಗೋಪ ಗೋವೇರು
ಆ ಗೋವರ್ಧನಾದ್ರಿ ಭಾಗದೇಯಕೆ ತಲೆದೂಗಿದರು ಸ್ವರ್ಗಾಗಾರೆಂದು ೮

ಅನಂತ ಬೊಮ್ಮಾಂಡವನ್ನಾಳ್ದ ದೇವ ಗೋ ಕಾನನದಟಣೆ ಗೋನೀಕ ರಕ್ಷಣೆ
ಮಾನವ ಲೀಲೆಗದೇನು ಭೂಷಣವೊ ತಾನಣ್ಣನೊಡನೆ ವಿನೋದಕೆ
ಆ ನಂದ್ಯಶೋದೆಯ ಸೂನುವೆನಿಸಿದ ಆನಂದ ಶತಕನನಾದಿ ಜನಕ
ಶ್ರೀನಾಥ ಗೋಪಕಾಮಿನೆಯರಾಳ್ವ ದಯಾನಿಧೆ ಪ್ರಸನ್ವೆಂಕಟ ಕೃಷ್ಣ ೯

೩೩

ವಸ್ತ್ರಾಪಹರಣ

ರಾಗ : ರಾಮಕ್ರಿಯಾ **ತಾಳ : ಅಟ್ಟ**

ಹೈಮಂತದ ಪ್ರಥಮಮಾಸದಿ ಶ್ರೀ ಸೋಮಶೇಖರನರ್ಧಾಂಗಿಯ ಹೊಂದಿ
ಸೀಮಂತಿನಿಯರರ್ಚಿಸಿದರಂದು ನಿತ್ಯ ಯಮುನೆಯ ವಾರಿಲಿ ಮಿಂದು ೧

Rarest Archiver

ಮಳಲಗೌರಿಯ ಮಾಡಿ ನೋಂತರು ಮಂಗಳ ಹವ್ಯಾನ್ನವನುಂಡು ಕಾಂತೇರು
ಫಲಪುಷ್ಪ ಗಂಧಮಾಲೆಗಳಿಂದ ಕೆಂದಳಿಲು ಧೂಪದೀಪ ಬಲಿಯಿಂದ ೨

ನಂದನಾತ್ಮಜ ತಮ್ಮ ಪತಿಯಾಗಬೇಕೆಂದುಂಮೆಯನು ಬೇಡಿದರಾಗ
ಸುಂದರ ಕಾತ್ಯಾಯನಿಯರ್ಚನೆ ಭಕ್ತಿಯಿಂದ ಪ್ರದಕ್ಷಿಣೆ ವಂದನೆ ೩

ಉಚ್ಚ ಪಾಡಿ ಹರಿಗುಣಕೀರ್ತನೆ ಮತ್ತೆ ನಿಚ್ಚ ನಿಚ್ಚಂಬಿಕೆಯಳ ಪ್ರಾರ್ಥನೆ
ಅತ್ಯಂತ ಯಾಚ್ನೆಯ ತಿಳಿದನು ಈ ಅಚ್ಯುತನಲ್ಲಿಗೆ ಬಂದನು ೪

ಯೋಗಿಜನೇಶ್ವರ ಕಂಡನು ಅವರ್ ನೀಗಿದಂಬರವೆತ್ತಿಕೊಂಡನು
ಭಾಗ್ಯೆಯರ್ ಮಿಂದು ಬಾಹನ್ನಕ ಕೃಷ್ಣ ವೇಗದಿ ನೀಪವಡರಿ ನಕ್ಕ ೫

ಮೊಗುವ ಬಾಲೆರ ನೋಡಿ ನಗುತಿದ್ದ ಬಲು ಸುಗುಣೇರು ಬನ್ನಿರಿಲ್ಲಿಗೆಯೆಂದ
ತೆಗೆದುಕೊಳ್ಳಿರಿ ನಿಮ್ಮಾಂಬರವೆಂದ ನರ್ಮಂಗಳ ಮಾತಿಲಿ ಶ್ರೀ ಗೋವಿಂದ ೬

ನಿಮ್ಮ ನಿಮ್ಮುಡಿಗೆಯನು ನಿಮಗೀವೆ ಬನ್ನಿ ಶ್ರಮವೇಕೆ ನೀರೊಳಗೆ ನೀವೆ
ಹಿಮವು ವ್ರತಸ್ಥೆಯರಿಗೆ ಕಷ್ಟ ಅಕ್ರಮವಿನ್ನು ಆಕಟಾಯೆಂದನು ಕೃಷ್ಣ ೭

ಕಾಮಜನಕನ ನರ್ಮಕೆ ನಾಚಿ ಆ ಕಾಮಿನಿಯರಿಗೆ ಕಾಮವು ಹೆಚ್ಚಿ
ಶಾಮಸುಂದರ ನಿನ್ನ ದಾಸೇರು ಎಲೆ ಸ್ವಾಮಿ ನಾವು ವಿವಸ್ತ್ರೆಯರು ೮

ಅಚ್ಯುತ ನಮ್ಮುಡುಗೆಯ ನೀಡೈ ನಿಮ್ಮಚ್ಚಾನುಗೆಯರು ಕನ್ನೆರು ನೋಡೈ
ಸಚ್ಚಿದಾನಂದ ನಂದಜ ಸಾಕು ಶ್ರೀ ವತ್ಸಲಾಂಛನ ಬಿನ್ನಹ ಪರಾಕು ೯

ಕೋಮಲೆಯರು ಬಲು ತೋದೆವು ಧರ್ಮಧಾಮ ಚಳಿಗೆ ಮುಟ್ಟಿಗಾದೆವು
ಸ್ವಾಮಿ ನಂದಗೆ ಹೇಳ್ವೆವು ಕೇಳೈ ನಿಮ್ಮ ಕಾಮಿಸುವೆವು ವಸ್ತ್ರವ ನೀಡೈ ೧೦

ದಾಶಾರ್ಹ ಕನ್ನೆರಿಗೆಂದನು ವ್ರಜೇಶಗೆ ಹೇಳಿ ಮಾಡುವುದೇನು
ದಾಸೇರಾದರೆ ಬನ್ನಿ ಬಳಿಗೀಗೆ ನಿಮ್ಮ ವಾಸಂಗಳನು ಕೊಡುವೆನು ಬ್ಯಾಗೆ ೧೧

ಶೀತದಿಂದೆರಡು ಅಂಗೈ ಹಚ್ಚಿ ರತಿನಾಥನ ಸದನದ ಕದಮುಚ್ಚಿ
ಸೋತು ಲಜ್ಜೆಯನೀಗಿ ಮುಖದಲಿ ಕಾಳಿಂದಿತೀರ್ಥ ಉಳಿದು ಹರಿಯಿದ್ದಲ್ಲಿ ೧೨

ಬಂದು ಭೂರುಹದೆಡೆ ನಿಂತಿಹ ಬಂದ ಸುಂದರಿಯರ ಭಾವ ತಿಳಿದಿಹ
ಇಂದುಮುಖಿಯರ ದಿವ್ಯಾಂಬರ ತನ್ನ ಸ್ಕಂದದಲಿಟ್ಟ ವಿಶ್ವೇಶ್ವರ ೧೩

Rarest Archiver

ಸ್ನೇಹಾವಲೋಕದಿ ನೋಡಿದಾ ವಸ್ತ್ರದೇಹಿಕರೊಳು ಮಾತನಾಡಿದ
ಹೇ ಹರಿಣಾಕ್ಷೇರೇ ಕೇಳಿರೆ ಅಂಬಿಕಾಹೇಲನವ ಮಾಳ್ಪ ಚೆಲುವೆಯರೆ ೧೪

ನಗ್ನ ವಿಂದಪಲಾಧ ಕ್ಷಮಿಸೆಂದು ಕರಯುಗ್ಮವ ಮುಗಿದು ಬೇಡಿರಿ ಬಂದು
ವಿಘ್ನೇಶನಮ್ಮಗೆ ಬೇಡಲು ನಿಮ್ಮ ನಷ್ಟಾಂಬರವೀವೆ ಈಗಲು ೧೫

ಕೇಳಿ ಕೆಲದೆರೊಂದು ಕರದಲಿ ಇಂದು ಮೌಳಿಯರ್ಧಾಂಗಿಗೆ ನಮಿಸಲಿ
ಶ್ರೀಲೋಲನವತಿರಸ್ಕರಿಸಿದ ಎರಡು ತೋಳೆತ್ತಿ ನಮಿಸಿ ಪ್ರಾಂಜಲಿಲೆಂದ ೧೬

ಎಂದ ಮಾತಿಗೆ ಲಜ್ಜಿಸಿದರು ಬಾಹು ದ್ವಂದ್ವವೆತ್ತ್ಯಭಿವಂದಿಸಿದರು
ಇಂದಿರೇಶಗೆ ವಸ್ತ್ರ ಬೇಡಲು ಪ್ರೀತಿಯಿಂದಿತ್ತ ಭೇರೆ ಬೇರೆ ದಯಾಳು ೧೭

ತವಂತಮ್ಮಾಂಬರವನು ಉಟ್ಟರು ಶ್ರೀ ಕಮಲಾಕ್ಷನಲಿ ದೃಷ್ಟಿಯಿಟ್ಟರು
ಸುಮುಖಿವ ಲಜ್ಜೆಯಿಂದೀಕ್ಷಿಸಿ ಶ್ರೀರಮಣನ ಸಂಗವಪೇಕ್ಷಿಸಿ ೧೮

ನವಸಂಗಮಾದೋರೆ ನೋಟದಿ ಅಂಘ್ರಿವನಜ ಸ್ಪರ್ಶೇಚ್ಛೆಯನು ಹೊಂದಿ
ದ್ಯುಮತಿ ಪ್ರತಸ್ಥರ ನೋಡಿದ ಸಂನವರಸವಾರ್ಧಿಲಿ ರಮಿಸಿದ ೧೯

ವೇದೋಕ್ತಿಯಂತೆ ಕಾಮಿನಿಯರ್ಕಾಮವಿತ್ತ ವೇದೇಶ್ವರನು ಪೂರಣಕಾಮ
ಬೋಧಿಸಿದನು ತನ್ನರ್ಚನೆ ಫಲ ಪ್ರಾಪ್ತವಾದುದು ನಡೆಯಿರೆಂದ ಶ್ರೀಲೋಲ ೨೦

ನಂದಜನಾಜ್ಞದಿ ಬಂದರು ತಮ್ಮ ಮಂದಿರಕೆ ಚಂದ್ರಮುಖಿಯರು
ಸುಂದರ ಪ್ರಸನ್ವೆಂಕಟೇಶನ ನಂಬಿ ನಂದಿಸಿದರು ಕನ್ಯೆರನುದಿನ ೨೧

೩೪

ರಾಗ : ರಾಮಕ್ರಿಯಾ **ತಾಳ : ಅಟ್ಟ**

ವರ್ಣಿಪ ಕವಿಗಳಿಂದ ಉಘೇ ಸುಖಾರ್ಣವ ಮುಂದೋರುವ್ರದುಘೇ ಪ.

ಇಂದಿರೆಯರಸನು ವೃಂದಾವನ ಉಳಿದೊಂದಿ(ದಂದಿ?)ನ ಪೊರೈದಿದನು ಗಡ
ಸಂದಟಿಸಿದ ತರುವೃಂದವು ಛತ್ರಗಳೆಂದಾಗಲಿ ಹರಿ ತುತಿಪ ಗಡ ೧

ಕೇಳೈ ಸುಬಲ ವಿಶಾಲ ಸ್ತೋಕಬಾಲ ಶ್ರೀದಾಮ ಗೋಪಾಲ ರುಕ್ಷಾ
ಕೇಳೈ ಸುರಪ್ರಸ್ಥಾಲತೆ ತರುಗಳು ಕಾಲಕಾಲಕತಿ ಉಪಕರಿಸುತಿವೆ ೨

Rarest Archiver

ಭಾಳ ಬಿಸಿಲು ಬಿರುಗಾಳಿ ಸಿಡಿಲು ಮಳೆ ಕಾಳಗಿಚ್ಚು ಚಳಿಗಾಲವನು
ತಾಳಿ ಮನುಷ್ಯರ ಜಾಲಕಾಶ್ರಯವಾಗಿ ಮೇಲೆ ನಮ್ಮಾಪ್ತರೀತಿಹವಹುದೆ ೩

ಫಲ ಕುಸುಮವು ಎಳೆದಳಿಲಿಂ ಘನಗಂಧ ಸಲೆ ಕಂದಮೂಲತ್ವಚೆಗಳಿಂದ
ಬಲಂ ಪ್ರಾಣಿಗಳನಂ ಸಲಹುತಲಿವೆ ಹೀಗಿಳೆಯಲಿ ಗೃಹಮೇಧಿಗಳಾಗಿ ೪

ಔಚಿತ ಕರ್ಮಾದಿ ಯಾಚಿಸಿದರ್ಥಾದಿ ಯಾಚಕರ ಕರೆದು ಅರ್ಚಿಸುವ
ಆಚಾರಾನ್ವಿತರೆ ಚತುರ್ವಿಧ ಮುಕ್ತಿಗೋಚರರೆ ಪ್ರಿಯ[ರು][1] ನಮಗೆ ೫

ಶ್ರುತಿಬಳಿಗೆಳೆವರು ಅತಿಥಿಗಳ್ ಭಜಕರು ಕ್ಷಿತಿಭೂಷಣರ್ ಭಗವಜ್ಞನರು
ಸ್ತುತಿಗರ್ಹರು ಪರಸತಿಧನವಿರತರು ಸತತ ಸತ್ಪಥಗರು ಮತ್ಪ್ರಿಯರು ೬

ಮತ್ಕಥಾಶ್ರವಣ ಸಂಕೀರ್ತನೆ ಸ್ಮರಣೆ ಮತ್ಪದಸೇವನೆ ನಿತ್ಯಾರ್ಚನೆ
ಮತ್ತಭಿವಂದನೆ ದಾಸ್ಯಸಖಿತ್ವವು ಆತ್ಮನಿವೇದನೆ ಭಕ್ತಿ ಮುಕ್ತಿ ೭

ಎನಗೆ ಪ್ರಕೃತಿ ಸ್ತ್ರೀ ವನಜೋದ್ಭವಸುತ ತ್ರಿನಯನ ವಿಪಾಹಿಪ ತನುಜಜರು
ಅನಿಮಿಷಪತಿ ನಪ್ತೃವು ಸುರಋಷಿ ನೃಪ ಜನಸೇವಕರೆಂಬುವ ಮುಕುಂತ ೮

ಸೃಷ್ಟ್ಯಾದಿಕಾರಣ ಶಿಷ್ಟಸಂರಕ್ಷಕ ದುಷ್ಟಹರಣನಾ ತುಷ್ಟಿತನು
ಸೃಷ್ಟ ಮಹಿಮ ಯಥೇಷ್ಟ ನಿಗಮವೇದ್ಯ ವಿಷ್ಣು ಕೃಷ್ಣನೆಂಬುವ ವೈಷ್ಣವನು ೯

ಈ ಲಸದ್ವರ್ಗ ಪ್ರತಿಕೂಲರೆ ಅಧಮರು ಭೂಬಲನೆಗೆ ಭಾರಕರವರು
ಹೇಳಲೇನವರ ಜನ್ಮಾಳಿಗಳ್ ತರುಲತೆಗೀಳಿಲು ನಿರಯದ ಪಾಲವರು ೧೦

ಫಲ ಪೂ ಗೊಂಚಲಿಂ ತಲೆಬಾಗಿಹ ತರುಗಳ ಮಧ್ಯ ಯಮುನಾ ಜಲಮೀಂಟಿ
ತಳಿತುಪವನದಲಿ ಗೆಳೆಯರು ಹಸಿದು ಶ್ರೀ ಬಲಪ್ರಸನ್ವೆಂಕಟಗೆ ಬೇಡಿದರು ೧೧

೩೫

ಸತ್ರದಡಿಗೆಯ ಊಟ

ರಾಗ : ಸೌರಾಷ್ಟ್ರ **ತಾಳ : ಏಕತಾಳ**

ಮಹಾ ಬಾಹುಶಾಲಿ ಕೇಳಂ ರಾಮಾ ರಾಮ ದುಷ್ಟ
ದಾಹಕ ಶ್ರೀಕೃಷ್ಣ ಕೇಳ್ ಪೂರ್ಣಕಾಮಾ
ಬಹಳ ಬಾಧಿತರಾದೆವು ಕ್ಷುಧೆಯಲೀಗ ನಿರು
ವಾಹ ನಿಮ್ಮಿಂದಲೆಂದರ್ ಗೋಪರಾಗ ೧

---

[1] ರೇ

ಹೀಗೆಂದ ವಿಜ್ಞಾಪನೆಯ ಕೇಳಿ ಶೌರಿ ದಯಾ
ಸಾಗರ ನಿರೂಪಿಸಿದ ದುಃಖಹಾರಿ
ಯಾಗಶಾಲೆಯಲ್ಲಿ ಸತ್ರವೆಂದು ನೀವು ಹೋಗಿ
ಯಾಗಿಗಳಿಗನ್ನ ಬೇಡಿ ಪೇಳ್ದಿವಾವು ೨

ಯಜ್ಞಪತಿಯಾಜ್ಞೆಯಿಂದ ಯಜ್ಞಕೈದಿ ಋತ್ವಿ
ಜರ್ಗೆ ಅನ್ನವ ಬೇಡಿದರ್ ಸುವಿನಯದಿ
ಸ್ವರ್ಗಕಾಮಾಕರ್ಮರವರು ಮತ್ತರಾಗಿ ಬಾಲ
ಕರ್ಗೆ ಗರ್ಜಿಸಿದರು ವಿನಯವ ನೀಗಿ ೩

ಕಾಲವಲ್ಲವೆಂದು ನಾಸ್ತಿಕರು ನುಡಿಯಲು ಗೋ
ಪಾಲಕರು ತಿರುಗಿ ಬಂದು ಹರಿಗೆ ಹೇಳಲು
ಬಾಲೆಯರ್ಗೆ ಬೇಡಿ ಪುರುಷರನ್ನು ಬೇಡದೆ ಯಾಗ
ಶಾಲೆಗೈದಿ ಪುನರಪಿ ಅನ್ನ ಬೇಡಿದರಂದೆ ೪

ಕೃಷ್ಣನಾಜ್ಞೆ ಕೇಳಿ ಬಾಲೆರು ಹೃಷ್ಟ ಮನದಲಿ ಶ್ರೀ
ಕೃಷ್ಣನ್ನ ಸಂದರ್ಶನಾಶೆ ಮಾಳ್ಪಭರದಲಿ
ಮೃಷ್ಟೋದನ ಭಕ್ಷ್ಯಪಾಯಸಾಜ್ಯಕ್ಷೀರವು ಯ
ಥೇಷ್ಟ ಶಾಕ ಪಪ್ಪಡ ಪಳಿದ್ಯ ದಧಿ ವ್ಯಂಜನವು ೫

ತಂಡ ತಂಡದ್ದ್ವರಿವಾಣಗಳ ಚಷಕದೊಳಗೆ ತುಂಬಿ
ಕೊಂಡು ಬಂದರಿಂದುವದನೇರ್ಹರಿಯಿದ್ದೆಡೆಗೆ
ಗಂಡರ ಮಕ್ಕಳ ಆಪ್ತರೆಲ್ಲರ ಬಿಟ್ಟು ಶ್ರೀ
ಪುಂಡರೀಕನಯನನಂಘ್ರಿಯಲ್ಲಿ ಚಿತ್ತಿಟ್ಟು ೬

ಬ್ರಾಹ್ಮಣಿಯರು ಷಡ್ರಸದನ್ನ ತಂದು ನಮಿಸಲು ಪರ
ಬ್ರಹ್ಮನುಂಡ ಗೋಪಾಲಕರ ಕೂಡಿ ದಯಾಳು
ಬ್ರಹ್ಮಜ್ಞ ನಾರಿಯರ ಭಕ್ತಿರಸವನುಂಡನು ಅವರ್ಗೆ
ಬ್ರಹ್ಮ ನಿರ್ವಾಣವನಿತ್ತ ಪುರುಷಶೌಂಡನು ೭

ಮತ್ತೊಬ್ಬಳು ಬಾಹನ್ನಕ ಗಂಡ ತಡೆಬಲು ಆಕೆ
ಮುಕ್ತಿಪತಿಯ ನೆನೆದು ತನ್ನ ಪ್ರಾಣಬಿಟ್ಟಳು
ಇತ್ತ ಯಜ್ಞಪತ್ನಿಯರನ್ನವಿತ್ತು ಕೃಷ್ಣನ ಗುಣ
ಕೀರ್ತನೆ ಪಾಡಿ ಪರವಶದಲ್ಲಿದ್ದರಾದಿನ ೮

Rarest Archiver

ಗೋಗೋವರ ಬೆರಸಿ ಕೃಷ್ಣ ವ್ರಜಕೆ ತೆರಳಲು ಈ
ನಾಗಗವಮನೆಯರ್ಹೆಜ್ಜೆ ಮುಂದಕ್ಕೀಳದಿರಲು
ಯೋಗಿಧ್ಯೇಯ ವಿಶ್ವನಾಥನವರ ಮನ್ನಿಸಿ ಪೋಗ
ಲಾಗ ನಾರಿಯರ್ ತಮ್ಮತಮ್ಮ ವಾಟ ಹೊಂದಲು ೯

ಯಜ್ಞ ದೀಕ್ಷ ಮುನಿಗಳವರ ಭಾವವರಿತರಂ ತಮ್ಮ
ಅಜ್ಞ ವೃತ್ತಿಯನ್ನು ನೆನೆದು ಖಿನ್ನರಾದರು
ಯಜ್ಞೇಶ್ವರರಿಗೀಶ್ವರನವಜ್ಞ ಮಾಡಿದ ಅನ
ಭಿಜ್ಞರಾವು ನಮ್ಮ ಕರ್ಮ ಧಿಗಧಿಗೆಂದರು ೧೦

ತಮ್ಮ ಹೆಂಗಳ ಸುಕೃತಕ್ಕೆ ಒಪ್ಪಿಕೊಂಡರು ಇನ್ನು
ನಮ್ಮ ಜ್ಞಾನಯೋಗ ತಪವು ಸುಡುಸುಡೆಂದರಂ
ಬ್ರಾಹ್ಮಣರು ಪಶ್ಚಾತ್ತಾಪರಾಗಿ ನುಡಿದರು ಪೂರ್ಣ
ಬ್ರಹ್ಮ ಪ್ರಸನ್ವೆಂಕಟಕೃಷ್ಣನ ಒಲಿಸಿಕೊಂಡರು ೧೧

೩೬

ಗೋವರ್ಧನೋದ್ಧಾರ

ರಾಗ : ಘಂಟಾರವ **ತಾಳ : ಅಟ್ಟ**

ನಿತ್ಯೋತ್ಸವ ಪುಣ್ಯಸಂಕುಲ ನಂದಗೊಕುಲ ನಂದಪುತ್ರನ ಲೀಲಾ
ಸ್ತೋತ್ರವ ಮಾಳ್ಪರ್ಗೆ ಕಡೆಯಿಲ್ಲ ಶೇಷಗಳವಲ್ಲ ದುಷ್ಟದೈತ್ಯಹೃತ್ಶೂಲ
ಭೃತ್ಯದೇವಾನ್ವಯಪ್ರತಿಪಾಲ ವೇಣುಗೋಪಾಲ ವಿಕ್ರಮತ್ರಯಶೀಲ
ಮುಕ್ತಾಮುಕ್ತಾಮರಜನಧ್ಯೇಯ ಮುನಿಕುಲಗೇಯ ೧

ಗೋಷ್ಪದ ಜನರೆಲ್ಲ ಒಂದಿನ ದೇವೇಂದ್ರನ ಅಬ್ದತುಷ್ಟಿಗುತ್ಸವದಿ
ಮೃಷ್ಟಾನ್ನಪಾನ ಸಿದ್ಧವ ಮಾಡೆ ಇತ್ತತ್ತೋಡ್ಯಾಡೆ ಶ್ರೀಕೃಷ್ಣ ನಿಂದಿಸಿದ
ಇಷ್ಟಾರ್ಥವೀವ ಗೋವರ್ಧನ.ಗಿರಿವೃದ್ಧನು ಈತಗಿಷ್ಟು ಪೂಜೆಯನು
ಶಿಷ್ಟರು ಮಾಡ್ಯೆಂದಾಜ್ಞಾಪಿಸಿದ ಬುದ್ಧಿಗಲಿಸಿದ ಗಿರಿಗಿಟ್ಟು ಉಣಿಸಿದ ೨

ಬಹುಗುಣೋಪೇತಾನ್ನವುಂಡನು ಗೂಢಲಿಂಗನು ಆ ಮಹೀಧ್ರ ಪೊಕ್ಕನು
ಮಹಾವಿಶ್ವತತ್ವವ ತೋರ್ದನಾ ಜನಾರ್ದನ ಕಂಡ ಸಹಸ್ರಾಕ್ಷ ಇದನಂ
ಬಹುಕೋಪ ತಾಳ್ದನು ಘನವೊತ್ತಕಾಜ್ಞೆಯನಿತ್ತ ಸಪ್ತಾಹ ಮಳೆಗರೆದ
ಶ್ರೀಹರಿಯೆ ಕೃಷ್ಣನೆಂಬುದು ಮರೆತ ಐಶ್ವರ್ಯೋನ್ಮತ್ತ ಪ್ರಳಯದಹನಿಯಿಂದ ೩

Rarest Archiver

ಆಕ್ರಂದಿಸಿದ ಪ್ರಾಣಿಗಳನ್ನೆಲ್ಲ ನೋಡಿ ಸಿರಿನಲ್ಲ ಪರಾಕ್ರಮಶೀಲ
ನಕ್ಕು ಸತ್ಕರಪಲ್ಲವದಿಂದ ಗಿರಿಯೆತ್ತಿದ ಚಿಕ್ಕ ಮಕ್ಕಳುಚ್ಛ್ರಿಲೀಂದ್ರ
ನಕ್ಕತ್ತಾಡುವಂತೇಳ್ದಿನ ಮತ್ತಸೂದನ ತನ್ನ ಒಕ್ಕಲುಳುಹಿದ
ಆಕ್ಕರದಿ ದೀನವತ್ಸಲ ಜಿತಖಳಜಾಲ ಇಂದ್ರನುಕ್ಕನು ಮುರಿದ ೪

ಆರೊಂದಿನಿಂದ್ರ ಘೋರ್ವರ್ಮಳೆಗರೆದ ಹರಿಯೆಲ್ಲರ ಹೊರೆದ ನಿತ್ಯಭೂರ್ಯನ್ನಪಾನ
ಚಾರುಶಯ್ಯಾಸನಪಿತ್ತನು ವಿಶ್ವಕರ್ತನು ಶ್ರೀನಾರಾಯಣನು
ಸಾರಿದ ಸಜ್ಜನರನು ಕಾವ ಬೊಮ್ಮಾದ್ಯರ ದೇವ ಸಾಸಿರನಯನನು
ಶ್ರೀರಮಣನ ಮಹಿಮೆ ನೋಡಿದ ಮೈಯಿಡಾಡಿದ ಇಳೆಯಸಾರಿ ಸ್ತುತಿಸಿದ ೫

ಪ್ರಿಯೋಕ್ತಿಗಳ ರಚನೆಯಿಂದ ಉಪಸಿಷದಿಂದ ಸಾಧುಪ್ರಿಯಗೋವಿಂದ
ನಾಯೇನನರಿಯೆ ನಿನ್ನವನೆಂದ ತನ್ನ ಸಲಹೆಂದ ವಿಧಿವಾಯು ಭವಾದ್ಯಮರ
ನಾಯಕ ಜನಕೆಲ್ಲ ಗುರು ನೀನು ಬಾಲಕ ನಾನು ಜಗನ್ನಿಯಾಮಕನು
ನೀಯಾಕಳ ಕಾವ ಬಗೆ ಹೇಳೊ ಮಹಾದಯಾಳೊ ಎನ್ನಯ ತಪ್ಪುತಾಳೊ ೬

ವೇದಕ್ಕೆ ನಿಲುಕದ ಗುಣವಾರಿಧಿ ವಿಶ್ವಕ್ಕೇಕಾದಿ ವೇದೋದರಜನಕ
ಆಧಾರ ಪೋಷಕ ಶಿಕ್ಷಕ ಮೋಕ್ಷದಾಯಕ ನಿನ್ನ ಸದೃಶರಾರಿಲ್ಲ
ಆಧಿಕರ್ಕಾಲತ್ರಯದಲಿಲ್ಲ ಲಕುಮಿಯ ನಲ್ಲ ನಿನ್ನ ಹೊರತಾರಿಲ್ಲ
ಈ ದತ್ತ ಸಿರಿಯಿಂದ ಉಕ್ಕಿದೆ ಮದಸೊಕ್ಕಿದೆ ಬಂದು ಪಾದಕೆರಗಿದೆ ೭

ಕ್ಷಮಿಸೆನ್ನವಗುಣ ದಯಮಾಡೈ ಕೃಪೆಯಲಿ ನೋಡೈ ಪಾದಕಮಲವಾಶ್ರೈಸಿದೆ
ಕುಮತಿ ನಿನ್ನವರನು ಕೆಡಿಸಿದೆ ಕೇಡನೆಣಿಸಿದೆನೆಂದು ಅಮರೇಂದ್ರ ತುತಿಸಿ
ನಮಿಸಿ ನಮಿಸಿ ತಾ ನುಡಿಯಲು ಕೃಷ್ಣ ದಯಾಳು ತಾ ಕ್ಷಮಿಸಿ ನುಡಿದನು
ಅಮರೇಶ ನಿನ್ನರ್ಚನೆ ಕೆಡಿಸಿದೆ ಮದವಿಳಿಸಿದೆ ಇನ್ನು ಭ್ರಮೆ ಬೇಡೆಚ್ಚರವು ೮

ಸುರಭಿ ಪಯೋಧರ ತೊರೆದಳು ಮಳೆಗರೆದಳು ಶ್ರೀಹರಿಗಭಿಷೇಕ
ಪರಮ ಭಕುತಿಯಿಂದೆರೆದಳು ಸ್ತುತಿ ಮಾಡ್ದಳು ನಮಿಸಿ ಸುರಪತಿಯೊಡನೆ
ಸುರಲೋಕಕ್ಕೈದಿದಳ್ ಮಾನಿಯು ಹವಿರ್ದಾನಿಯು ಈ ಹರುಷವಾರಿಧಿಯು
ವರಗೋಕುಲಸ್ಥರ ಸುಖಿಸಿತು ನಿತ್ಯ ನಲಿಸಿತು ಶ್ರೀಪರಸನ್ವೆಂಕಟದಯದಿ ೯

೩೭

ವರುಣಪಾಶ ಬಂಧಮೋಚನ

ರಾಗ : ತೋಡಿ ತಾಳ : ಏಕತಾಳ

ಹರಿಪ್ರಮಣರು ಗೋಪಾಲಕರು ಶ್ರೀ
ಹರಿಕಥಾಮೃತ ವ್ರತಸ್ತುತಿರತರು ಪ.

Rarest Archiver

ಕಾಂಬುದು ಕೇಳ್ವುದು ಕೊಂಬುದು ಕೊಡುವುದು
ಸಂಭಾಷಣ ಪ್ರಾಣ ನಡೆ ಶ್ವಾಸ
ಸಂಭ್ರಮ ಮನೋರಥೆಲ್ಲ್ಯವಸ್ಥಾತ್ರಯ
ಅಂಬುಜನಾಭನಿಗರ್ಪಿಪರು ೧

ಕರಣತ್ರಯವು ಸುಕೃತ ದುಷ್ಕೃತ ಬಂಧಕವು
ಪರಮಪದವು ಸತ್ವಾತ್ರಯವು
ಹರಿಯಧೀನವು ಸಿರಿಸರಸಿಜಭವ
ಹರಸುರರ್ ಹರೆದಾಸರೆನುತಿಹರು ೨

ಗೋದೋಹನ ರವ್ಯುದಯ ದಧಿಮಂಥನ
ಮೋದಗೃಹದ ಕೃತ್ಯಾದಿಯಲಿ
ಶ್ರೀಧರ ಬಲಭದ್ರರೌದಾರ್ಯ ವಿಕ್ರಮ
ಆದರದಲಿ ನಿತ್ಯ ಪಾಡುವರು ೩

ಹರಿದಿನ ನಿರಶನ ನಿರ್ಜಲವ್ರತದಲಿ
ಹರಿಜಾಗರ ಮಾಡಿ ವ್ರಜನಾಥ
ವರ ಯಮುನಾಸ್ನಾನವ ಮಾಡುತಿರಲು
ವರುಣದೂತರು ಕಟ್ಟಿಕೊಂಡೊಯ್ಯಲು ೪

ಹೇ ಕೃಷ್ಣ ರಾಮ ಎನುತ ಕೂಗಿದರು ಅ
ನೇಕಾರ್ತಸ್ವರದಲಿ ಗೋವಳರು
ಶ್ರೀಕೃಷ್ಣ ಕೇಳಿ ವರುಣಾಲಯಕೈದಲು
ಶ್ರೀಕಾಂತನ ಕಂಡು ಪ್ರಣಮಿಸಿದ ೫

ತವ ಪಿತನ್ನರಿಯದೆ ದೂತರು ತಂದರು
ಭವಹರ ತ್ರಾಹಿ ತ್ರಾಹಿ ಪಾಹಿಯೆನುತ
ಸ್ತವಿಸಿದ ಈ ಘನ ಸವೆಯದ ತಪ್ಪು ಕ್ಷಮಿಂ
ಸ್ಯವಲೋಕಿಸು ನಿನ್ನ ಭಟನೆಂದ ೬

ಇಂದೆನ್ನ ಜನ್ಮ ಸಫಲವು ಸರ್ವಸಿದ್ಧಿ
ಇಂದಿಗೆ ನಿನ್ನ ಪದವಾರಿಜವ
ಹೊಂದಿದೆ ನಮಿಸಿದೆ ಮಹಿಮೆಯನರಿಯದೆ
ತಂದರು ತಂದೆಯು ತಂದೆ ನಮೊ ೭

Rarest Archiver

ಬಲು ಅಪರಾಧವ ಕ್ಷಮಿಸು ದಯಾನಿಧೆ
ಸಲೆ ನಿನ್ನಯ್ಯನ ಗ್ರಹಿಸು ಹರೆ
ಸಲಹೆನ್ನನು ಎಂದು ಬಹಳ ಭಕುತಿಯಿಂದ
ನಳಿನಭವೇಶನ ಪೂಜಿಸಿದ ೮

ಎನ್ನ ಸಂಶಯವೆಲ್ಲ ದೂರವು ಯದುಪತೆ
ಧನ್ಯನೆನಿಸಿದೆ ತವಾರ್ಚನೆಯಿಂ
ಎನ್ನುತ ಪುನ: ಪುನ: ಪ್ರಣಮಿಸಿ ರಮೆಯರ
ಸನ್ನನ ಪ್ರಸನ್ನೀಕರಿಸಿದನು ೯

ಅಪ್ಪಂಗೆ ತಾನಭಯಂವನಿತ್ತು ಶ್ರೀಪತಿ
ಅಪ್ಪನಿಗಾಶ್ಚರ್ಯ ತೋರ್ದ ಹರಿ
ಒಪ್ಪುವ ಬಂಧುಂ ಬಳಗಕೆಲ್ಲ ಹೇಳಿದ
ತಪ್ಪದೆ ನಂದವ್ರಜಕೆ ಬಂದು ೧೦

ಆತ್ಯಾನಂದದಿ ನುಡಿದರು ನಿನ್ನ ಮಗ
ಮುಕ್ತಾಮುಕ್ತವಂದಿತಚರಣ
ನಿತ್ಯಾನಂದನ ಈಶ್ವರತ್ವವ ನಾವ್
ಪ್ರತ್ಯಕ್ಷ ನೋಡಿದೆವೆಂದರವರು ೧೧

ತನ್ನೀಶ್ವರತ್ವದ ಬಗೆಯನು ತಿಳಿಯಬೇ
ಕೆನ್ನುವ ನಿಜಭಕ್ತ ಗೋವಳರ
ಬಿನ್ನಹವಾಲಿಸಿ ಬ್ರಹ್ಮ ಹ್ರದದೊಳು
ಚೆನ್ನಾಗಿ ಮುಳುಗಿಸಿ ತೋರಿದನು ೧೨

ಅವಿದ್ಯಾಕಾಮ್ಯ ಕರ್ಮವ ಮಾಡಿ ಬಲು ಬಲು
ಹೇವದಿಂ ಸ್ವರ್ಗಭವಕೈದುತಿಹ
ಪ್ರಾವೃತರ್ಗಳಿಯುವ ಮೌನಿಜನಸ್ಥಳ
ದೇವ ತೋರಿದ ಅಪವರ್ಗವನು ೧೩

ಅನಂತ ಛಂದಸ್ಸುಗಳಿಂದ ಸ್ತುತ್ಯನನು
ಆನಂದ ಜ್ಞಾನಮಯ ರೂಪನನು
ಆ ನಂದಗೋವರಾನಂದದಿ ಕಂಡರು
ಆನಂದ ಯೋಗಮಯನಾಶ್ರಿತರು ೧೪

Rarest Archiver

ಅತ್ಯದ್ಭುತ ಮಹಿಮಾತಿಶಯನ ಕೃಷ್ಣ
ಸತ್ಯೇಶ ಭವ ವಿಪಾಹಿಪರಿಂ ನುತನು
ನಿತ್ಯಾನಂದ ಪ್ರಸನ್ವೆಂಕಟಕೃಷ್ಣ
ಭಕ್ತರು ಜೀವನ್ಮುಕ್ತರವರು ೧೫

೩೮

ರಾಸಕ್ರೀಡೆ

ರಾಗ : ಕೇದಾರಗೌಳ **ತಾಳ : ಜಕ್ಕಣಿ (?) [ಏಕತಾಳ]**

ಕಾಮನಯ್ಯನ ಕಾಮಿನಿಯರ ಕಾಮುಕ ಭಕ್ತಿಯೆ ಮುಕ್ತಿ
ಸೋಮಕುಲಾಬ್ಧಿಸೋಮ ನೀರದಶಾಮನ ಪ್ರೇಮಪಾತ್ರರು ಪ.

ಮುಗ್ಧಾಂಗಿಯಳ ಮುಖವನು ಪ್ರಿಯನು ಸ್ನಿಗ್ಧ ಸುಹಾಸದಲಿ ಚುಂಬಿಸುವಂತೆ
ದುಗ್ಧಾಬ್ಧಿಯ ಜಾತನಂದಯದಲಿ ಪ್ರಾಕ್‌ದಿಗ್ವಧು ಸಂಗಮ ಪೆರೆಯಲು
ಸುಗ್ಗಿಯಾಯಿತು ಗೋಪಾಲಕರ ವಧುವರ್ಗಕೆಯೆಲ್ಲ ಕಬ್ಬುಬಿಲ್ಲಿನವನ ಸು
ಮಾರ್ಗಣಕ್ಕೆ ಮರುಳುಗೊಂಡರಾಗವರ್ ಉಗ್ಗಡ ವೇಣುನಾದಕ್ಕೆ ೧

ಕುಸುಮ ತರುಲತಾಖ್ಯ ಶಿಶುಗಳಿಸೆವ ಕರಸ್ಪರ್ಶದಿಂದಲಿ
ಶಶಿಯು ಪರಾಮೃಶವ ಮಾಡಿ ಸುಸುಖವೀವ ತೆರದಲಿ
ಪಸರಿಸಿದನು ಶೀತಕಿರಣಗಳ್ ಬಿಸಜಸಖನ ತಾಪವಡಗೆ
ಶಿಶಿರರುತುವಿನ ಯಶಸು ವನದಿ ಶಶಿಮುಖಿಯರೆದೆಗೆ ಇಸಿತು ೨

ಶ್ರೀಕರನ ವ್ಯಾ(ಆ?)ರುಣ ಕುಂಕುಮದಿಂದ ಲಕುಮಿ ಮುಖವು ಒಪ್ಪುವ ತೆರದಿ
ಸಂಕಲಾನಿಧಿಯ ಬಿಂಬವ ವನದಿ ಶ್ರೀಕೃಷ್ಣ ಕಂಡು ವೇಣುವನು
ಬೇಕಾದ ವಾಮದೃಶೆಯರಿಗೋಸುಗನೇಕ ಮಂಜುಳ ರಾಗಂಗಳ ನುಡಿಸಿದ
ಆ ಕಾಂತೆಯರಾಗ ಕೇಳಿದರು ಮಾರಸಾಯಕದಿ ಉರುಚಿತ್ತವೇಗದಿ ೩

ನೂಕಿ ಲಜ್ಜೆಯನು ನಡೆದರೆಲ್ಲರು ಶ್ರೀಕಾಂತನನ್ನೊಡಗೂಡಲಾಗಿ ಮನೆ
ಯ ಕೆಲಸವನು ಬಿಟ್ಟು ಮೋಹಿಸಿದರ್ ಮಕ್ಕಳು ಸ್ವಕೀಯ ಪುರುಷರ
ಆಕಳ ಕರೆಸಿ ವೃಷಕೆ ಮುರುವ ಹಾಕಿ ಶಿಶುಗಳಾಕ್ರೋಶವ ಕೇಳದೆ
ತೋಕರೆಂದಳತೀ ಮಾನವೆತ್ತಿಕೊಂಡು ರಾಕಾಚಂದ್ರಾಸ್ಯೆಯರು ನಡೆದರು ೪

ಕರೆದ ಹಾಲ ಬಿಸುಟು ತಮ್ಮಯ ತರಳರ್ಗೆ ಸ್ತನ ಪೂರ್ಣ ಕೊಡದೆ
ಪರಿವೇಷಣವ ಮಾಡುತ ಬಿಟ್ಟರು ಹರಿಯ ಕೊಳಲ ಧ್ವನಿಕೇಳಿ ೫

Rarest Archiver

ಕರವಲಯುವ ಕಾಲಿಗಿಟ್ಟುಕೊಂಡು ಚರಣಭೂಷಣ ಕೈಗೆ ಸಿಕ್ಕಿಸಿ
ಕರಣಕುಂಡಲ ನಾಸದಲಿಟ್ಟು ಬರಿಯ ಮುಗುತಿ ಕಿವಿಗಿಟ್ಟು
ಕೊರಳ ಮಾಲೆಯನೆ ಕಟಿಗೆ ಸುತ್ತಿ ಕೊರಳಿಗೆ ಕಾಂಚೀದಾಮವ ಹಾಕಿ
ನೆರೆ ನಿವಾರಿಸುವರನು ನೂಕಿ ಪರಮಪುರುಷನೈದಿದರು ೬

ಭವನ ಧವನ ಬಿಟ್ಟು ಶಿರಿಮಾಧವನು ಭಕುತಿನಟ್ಟು ವಿರಹದಾ
ಹವದಿ ನೊಂದು ವಿಷ್ಣು ಭಾವುಕರಮರು ವೇಣುರವರಸ
ಸವಿದು ಪ್ರಿಯವಿಯೋಗ ದುಸ್ಸಹ ಲವಯುಗವೆಂದು ಗುಣತ್ರಯಂಗಳ
ಹವಣ ಮುರಿದು ಜಾರ ಭಕುತಿ ಭಾವದಿ ಅಚ್ಯುತನ ನೆನೆದರು ೭

ಅವ್ಯಕ್ತಪ್ರಮೇಯ ಗುಣಗಣಾಬ್ಧಿಯು ಸುವ್ಯಕ್ತಮಾಡಿದ ಕಾಮಿನಿಯರ್ಗೆ ಸ್ನೇಹ
ನವ್ಯ ನವ್ಯ ಸುಖವಪರ್ಗಿತ್ತ ನಿರ್ಲಿಪ್ತ ಭಾವ್ಯಜ್ಞಾನಾತ್ಮ ಮೂರುತಿದೇವ
ದಿವ್ಯಜ್ಞಾನವು ಭಕ್ತಿಭರಿತಗೋವರ್ಗೆ ದಿವ್ಯ ಜ್ಞಾನೋಪದೇಶವನು ಮಾಡಿದ
ದಿವ್ಯಜನಗುರು ಮೋಹಿಸಿದನು ಕಾಮವ್ಯಥೆ ಉದ್ರೇಕವಾಗುವಂತೆ ೮

ಆ ಗೋಷ್ಠ ನಾರಿಯರ ನೋಡಿ ಮುಕುಂದ ಈಗಾಗಮನವೇಕೆಂದ ನಿಮಗೆ ಭೀಕರಾ
ದಾ ಘೋರ ರಾತ್ರಿಲಿ ದುಷ್ಟವಿಹಾರವು ನಾಗಾರಿಮಧ್ಯೆಯರ್ಗುಚಿತವಲ್ಲ
ಬೇಗದಿ ನಿಮ್ಮಾಪ್ತರು ಅರಸಿ ಕಾಣದಾಗಿದ್ದು ಖೇದ ಮಾಳ್ಪುದೆ ಅಧರ್ಮವು
ಸಾಗಿ ಬಂದುದಕೆ ಕಂಡಿರಿ ನಮ್ಮನು ಪೂಗೊಂಚಲು ತರುಲತೆಗಳ ೯

ರಮ್ಯವನವು ಪಲ್ಲವ ಶಾಖೆ ಕುಂಜ ಧರ್ಮಾನುಚಾರ್ವೇಗ ಸೌಂದರ್ಯ ನೋಡಿ
ನಿಮ್ಮ ಮುಖ ಬಾಲಕಾರ್ಕ ದೀಪದಲಿಯೆ ನಿಮ್ಮಾಳ್ವತ್ತೆ ಮಾವ ಪುರುಷರ
ಸಮ್ಮತವಲ್ಲ ಉಪೇಕ್ಷೆಯು ಸ್ತ್ರೀಯರ ಜನ್ಮಕ್ಕೆ ವರ್ಯರ ಸೇವೆಯೇ ಮುಖ್ಯವು
ಧರ್ಮವಲ್ಲನ್ಯಪುರುಷರ ಸೇವೆಯು ಸಖ್ಯ ಸಂಭಾಷಣ ಸಹವಾಸವು ೧೦

ಸನ್ನೀಕ್ಷಣ ಶ್ರವಣ ಕೀರ್ತನೆ ಧ್ಯಾನದ ಪುಣ್ಯವೇ ಅಧಿಕವಾ ಮತ್ಸೇವೆಗೆ
ಸನ್ನಿಕರಷಣ ಫಲವಧಿಕವಲ್ಲ ಇನ್ನೈದಿರೆಂದ್ಹರಿ ನುಡಿದರೆ
ಕನ್ಯೆಯರಿಗೆ ಹೃತ್ತಾಪವಡರಿತು ಇನ್ನೇಕೇ ಜನ್ಮವೆನುತಾರ್ತಸ್ವನದಿ
ಚಿನ್ಮಯ ಹರೆ ವ್ಯರ್ಥವಾಯಿತು ಎಂದು ವಾಕ್ ಸನ್ನಿರೋಧರಾಗಿ ತಲೆಬಾಗಿ ೧೧

ಕಣ್ಣಲಿ ಅಶ್ರು ತುಂಬಿ ಬಂದು ಧಾರಿಟ್ಟವು ಪೊನ್‌ಗೊಡವೊಲೆಯು ಗಂಧಾನು
ಲೇಪದ
ಹೊನ್ನ ಕುಪ್ಪಸವ ತೋಯಿಸಿದವಿಳೆಯು ಕನ್ಯೆರುಂಗುಟದಿ ಲೇಖಿಸುತ್ತ

Rarest Archiver

ಕನ್ಯೆರಾಂತಕದ ನುಡಿಯು ಕೇಳಿದರಿನ್ನೇನು ಪ್ರಿಯನಪ್ರಿಯಂಕರ ವಾಕ್ಯ
ವನ್ನು ನುಡಿದನೆಂದು ರೋದಿಸಿ ಶಿಷ್ಟೆರು ಸನ್ನಗದ್ಗದ ನುಡಿಯಲಿಂತೆಂದರು ೧೨

ಇಷ್ಟವಲ್ಲೈ ಖಳನೃಶಂಸರ ಮಾತು ಕಷ್ಟದಿ ನೊಂದೆವು ಸಮಸ್ತ ವಿಷಯಂ
ಬಿಟ್ಟು ಬಂದಿಹೆವು ನಿನ್ನಂಘ್ರಿಮೂಲವ ಮುಟ್ಟಿಪೆ ಪೂಜಿಪೆವೆಂದೆಮ್ಮ ಮನವು
ಕೃಷ್ಣ ನಿನ್ನುಳಿದು ಅನ್ಯಾಶ್ರಯ ಕಾಣೆವು ಶಿಷ್ಟರಾರ್ತಬಂಧೋ ಕೇಳೊ
ಮುಮುಕ್ಷಂಗೆ
ನಿಷ್ಠೆ ನಿಮ್ಮಲ್ಲಿದ್ದು ಸ್ಥಿತಿಯುಸ್ಥಿತಿಯ ಕೆಟ್ಟಾಸೆಯೇಕಿನ್ನವರಿಗೆ ೧೩

ಸ್ತ್ರೀಯರ್ಗೆ ತಮ್ಮ ಪತಿಯೇ ಸುಹೃತ್‌ಸ್ನೇಹ ನೀ ಈವದು ಧರ್ಮವು ನೀ
ನೆಂದುದಂ ಸತ್ಯ
ಪ್ರೀಯರು ನಿನ್ನ ಸಂಪರ್ಕದಿಂದೆಲ್ಲರು ಪ್ರಿಯನು ಸರ್ವರಿಂದೆಂದರಸುತ
ಶ್ರೀಯಂಘ್ರಿಯ ಸ್ನೇಹ ತೊಡಕಿ ಬಂದೆವು ಪ್ರಿಯೋತ್ತಮ ನಮ್ಮ ಆಸೆ ವೃಥಾ
ಮಾಡೋ
ದೀಯಧರ್ಮವು ನಿಮಗೆ ಸಲ್ಲದು ಹೃದಯತಾಪಹಾರಕ ಕೇಳೊ ಶ್ರೀಹರೆ ೧೪

ನಿಮ್ಮ ಶ್ರೀ ಪಾದಾಬ್ಜ ಬಿಟ್ಟೇಳಲೊಲ್ಲವು ನಮ್ಮ ಕಾಲ್ಗಳು ಮುಂದಕೆ ತವಾಧರ
ದಮೃತವನ್ನು ಸೇಚಿಸು ಮಂದಸ್ಮಿತೇಕ್ಷಣಲಕ್ಷಣನಾಗಿ
ಸನ್ಮಾರ್ಗ ವೇಣುನಾದವನು ಕೇಳಿಸು ರಮ್ಮಣಿಯರರ್ಥ ಪೂರೈಸೊ ಮುಕ್ಕುಂದ
ನಿಮ್ಮಂಘ್ರಿಪದ್ಮದ ವಿರಹಜಾಗ್ನಿಯ ಶಮ್ಮನವನು ಮಾಡು ಶ್ರೀಪತೆ ೧೫

ನಿನ್ನ ಕೃಪಾಂಬುಧಿಲಿಂದೆಮ್ಮ ನಂದಿಸು ಇನ್ನೆಮ್ಮುಪೇಕ್ಷಿಪೆಯಾದರೆ ಪ್ರಾಣವ
ಚಿನ್ಮಯಾಂಘ್ರಿಗೊಪ್ಪಿಪೆವು ನೀನೆ ಸಾಕ್ಷಿ ಕನ್ಯೆ ಲಕುಮಿ ನಿಮ್ಮ ಹೃನ್ಮಂದಿರ
ವನ್ನಾಶ್ರಯಿಸಿದ್ದು ತೃಪ್ತಿ ಇಲ್ಲದೆ ಹೊನ್ನ ಶ್ರೀ ತುಲಸಿಯಾದಳು ಶ್ರೀಪಾದ
ವನ್ನು ಬಿಡಳು ನಾವೆಂತು ಬಿಡುವೆವು ಧನ್ಯವು ವರಜನಪ್ರಭೊ ೧೬

ಇಂದೆಮ್ಮ ನೀಕರಿಸುವುದು ಧರ್ಮವೇ ಇಂದಿರೆಯುರಸ ಮೂಲೋಕ ಸುಂದರ
ಎಂದೆಂದು ಸರಿಮಿಗಿಲಿಲ್ಲದಚ್ಯುತ ಬಂದೆವು ತಪಸಿಯಿಂದೀಗ
ಹೊಂದಿಸು ಕೈಯ ನಮ್ಮುರೋಜಗಳಿಗೆ ಇಂದೀವರೇಕ್ಷಣ ಪ್ರಸನ್ನವದನ
ಎಂದು ಪ್ರಾರ್ಥಿಸಿದರಬಲೆಯರು ದಯಾಸಿಂಧು ಮುಕುಂದ ಸಲಹೆಂದರು ೧೭

ಅಂದು ಯೋಗೇಶ್ವರೇಶ್ವರ ದಯಾಂಬುಧಿ ಇಂದುಮುಖೇರ ರಮಿಸಿದ ಸ್ವರಮಣ
ಮಂದಸ್ಮಿತೇಕ್ಷಣರೋಚಿಯಿಂದಚ್ಯುತ ಇಂದು ಭಾಮೆಯರ ಮಧ್ಯದಲಿ

Rarest Archiver

ಚಂದಾದ ವೈಜಯಂತಿ ಕೊರಳಿಂದ ಗೋಪೇರ ವೃಂದದಿ ರಾಜೀವ ನೀಲೋತ್ಪಲ ಕುಸುಮಂ
ಗಂಧ ಮಾರುತನೆಡೆ ಗಾನಕೇಳಿ ಕಂದರದನೆಯುರು ನಂದದಿಂದ ೧೮

ಕಾಳಿಂದಿಕೂಲ ಭ್ರಾಜದ್ಧ್ವನಂಗಳಲಿ ಆ ಲೋಲನೇತ್ರೇರ ಕ್ರೀಡಿಸಿ ಅಲ್ಲಲ್ಲಿ
ಮೆಲ್ಲೆದೆಗಾರ್ತೆರ ತೋಳಲಿ ತೋಳಿಟ್ಟು ಭಾಳ ನವೋಕ್ತಿಯಿಂದಲೊಪ್ಪಿ
ಶ್ರೀಲೋಲ ಹಾಸೋಕ್ತಿಗಳಿಂದ ಕೂಡಿ ಕರಾಳ ಕ್ರೀಡೆಯಿಂದ ವಾಸವ ಜಗುಳಿಸಿ
ಮೇಲಿಟ್ಟೆಡೆ ಮೊಲೆಯಲ್ಲಿ ಲೇಖಿಸಿದ ಸಾಲು ಕರಜಾಗ್ರಗಳಿಂದಲಿ ೧೯

ಕಾಮಾಗ್ನಿಯಿಂ ತಪ್ತರಾಮೆಯರಿಗೆ ಪೂರ್ಣಕಾಮಂ ಮನ್ನಿಸಿದರೆ ಮತ್ತರಾದರು
ಪ್ರೇಮಾವಲೋಕನ ಭಾಗ್ಯವುದಿಸಿತಂ ಸೋಮಪೂರ್ಣ ಸುಮುಖಿಯರಿಗೆ
ಶ್ರೀ ಮಾಧವ ತಮ್ಮ ವಶ್ಯನೆಂದರಿತು ವಾಮದೃಶೆಯರು ತಿಳಿದರಾಕ್ಷಣ
ಈ ಮಹಾಪರಾಧವ ಕಂಡು ದೇವೇಶ ತಾ ಮತ್ತೆ ಅಪ್ರತ್ಯಕ್ಷನಾದನು ೨೦

ಶ್ರೀ ಭೂದುರ್ಗಾಲೋಲ ಲೀಲಾವಿಶಾಲನು ತ್ರಿಭುವನೇಶ್ವರ ತ್ರಿಭುವನಾಧಿಪ
ಭೂಭೃತ ಸಂಭೃತ ಸನ್ನುತ ಶ್ರೀಪದ್ಮನಾಭನಂತಾನಂತ ಭಾನುಭಾ
ಭೂಭಾರಸಂಹಾರಪಾರಕೃಪಾಕರ ಸ್ವಭಾವ ವೈಭವ ಜ್ಞಾನಾನಂದಘರ
ಶ್ರೀಭೃತ್ ಪ್ರಸನ್ನವೆಂಕಟಕೃಷ್ಣ ಸರ್ವೇಷ್ಟ ಶೋಭಿಸಿದನು ವ್ರಜದಿ ೨೧

೩೯

ರಾಗ : ಬೇಗಡಾ **ತಾಳ : ಅಟ್ಟ**

ಶ್ರೀಕೃಷ್ಣ ಒಮ್ಮೆಂಡೊಮ್ಮೆರಳಿ ತನ್ನ ಕೃತಿಯಡಗಿಸಿ ಮರಳೆ
ಗೋಕುಲದರಸೆರ್ಗೆ ವ್ಯಾಕುಲಚಿತ್ತವು ಶೋಕಸಮುದ್ರವು ಮುಂದೋರೆ ಪ.

ಪ್ರೇಷ್ಠಾನುಪ್ರೇಷ್ಟನಂತಾಗೆ ಗುಣೋತ್ಕೃಷ್ಟವ ಪಾಡಿದರಾಗೆ
ಕಷ್ಟ ಭ್ರಾಂತಿಯಲಿ ತರುಲತೆ ಸದಿಯೊಳ್ಯಥೇಷ್ಟ ನುಡಿಯ ನುಡಿದರಾಗೆ ೧

ಸೃಷ್ಟಿಯೊಳ್ ಪರಿಪೂರ್ಣ ಹರಿಯ ಕಂಗೆಟ್ಟು ಕೇಳುವದಾಶ್ಚರ್ಯ
ವೃಷ್ಣಿಕುಲೇಶನು ಬಿಟ್ಟನು ನಮಗೇನು ಬಟ್ಟೆ ಹೇಳಿದ ಹೇಳಿ ತ್ವರಿಯ ೨

ಪಿಪ್ಪಲ ನ್ಯಗ್ರೋಧ ಬದರಿ ನೀಪ ಸಂಪಿಗೌದುಂಬರ ಹದರಿ
ಆಪ್ಪುತಪ್ಪುತ ಹೋದ ನಾರೇರ ನಂದಜ ತಪ್ಪಿಸೈದಿದನು ಕಂಡಿಹಿರೆ ೩

Rarest Archiver

ಕುರವಕಶೋಕ ಕಿಂಶುಕವೇ ಶ್ರೀ ಹರಿಪ್ರಿಯ ತುಲಸಿಯಧಿಕವೆ
ಸುರಹೊನ್ನೆ ನಾಗ ಪುನ್ನಾಗವೆ ಬಲಾನುಜನಿರವಲ್ಲಿ ಕಂಡಿಲ್ಲವೆ ೪

ಮರುಗ ಮಲ್ಲಿಗೆ ಮಾಲತಿಯೆ ಬಕ್ಕೆ ಮರಜಂಬು ಚೂತ ಸಂತತಿಯೆ
ಸುರಗಿ ಶಾವಂತಿಗೆ ಬಕುಲ ಕೋವಿದಾರ ಪರಮಪುರುಷನೆಲ್ಲಿ ಎಲ್ಲೆ ೫

ಕಂಡಿರಾ ಮಾಧವನಿಂದೆ ನದಿ ತಂಡ ತಂಡದ ಮರದ ಮಂದೆ
ಪುಂಡರೀಕಾಕ್ಷನ ಕರಲಪಾಮೃತವನುಂಡುಂಡ ಪೂಬಳ್ಳಿಯ ವೃಂದೇ ೬

ಹರಿಪಾದ ಸ್ಪರ್ಶ ಪುಣ್ಯಧಾತ್ರೆ ಶ್ರೀ ಹರಿಯಶಸ್ರಜ ಪಾರಿಜಾತೆ
ನೆರೆ ನಮ್ಮ ಕುಲಸ್ವಾಮಿ ಬರಲಿಲ್ಲವೇ ಇಲ್ಲಿ ಪರಮಪುರುಷ ಕುಂದಜಾತೆ ೭

ಇಂತು ತರುಲತೆ ಭ್ರಮರಗಳ ಕೇಳಿ ಕಾಂತೇರು ವಿರಹಾಗ್ನಿದಿಗಿಲ
ಶಾಂತತಿಲ್ಲದೆ ಕಂಡರು ಭುವಿಯೊಳು ಶ್ರೀಕಾಂತನ್ಹೆಜ್ಜೆ ಹೊಂದಿದವಳ ೮

ಪತಿಯ ಕೂಡ್ಯೈದಿದವಳ ಕಂಡು ರತಿಪತಿಯ ಮಾರ್ಗಣೆ ತಾಕಿದ್ಹಿಂಡು
ಪತಿ ತನ್ನಂಗನೆಯಳ ರತಿಯಿಂದಪ್ಪುವಂತೆ ಸತಿಯ ತೋಳಿಲಿ ತೋಳಿಟ್ಟಿಹನೆಂದು ೯

ಪರಮ ಸುಕೃತಿಯವಳೆಂದು ದುಃಖಭರಿತರಾಗಿ ನಡೆತಂದು
ಧರೆಯ ಮೇಲವಳ್ಹೆಜ್ಜೆ ಅಡಗಿದ್ದವಲ್ಲಿ ಶ್ರೀ ಹರಿ ಹೆಜ್ಜೆ ಕಂಡಂದು ನೊಂದು ೧೦

ನುಡಿದರು ಹೃತ್ತಾಪದಿಂದ ತನ್ನ ಮಡದಿ ಬಳಲಿದಳು ಹಾ ಹಾಯೆಂದು
ಹೆಡಕನೇರಿಸಿಕೊಂಡು ನಳಿನನಯನ ನಿಂತ ಅಡಿಗಳು ಜಡಿದವು ಇಳೆಯಲ್ಲೆಂದು ೧೧

ಲಲನೇರೆ ನೋಡೆಬನ್ನ್ಯೆನುತ ಚಂಚಲದಿಂದ ಸುಯಿಲಡಿ ಇಡುತ
ನಳಿನಜ ಸುರರಿಗೆ ಹರಿಯಂಘ್ರಿ ರಜಾಮೋಘ ಈ ಕೆಳದಿಗೆ ಹೆಗಲಿತ್ತ ನಾಥ ೧೨

ಹೆಗಲನೇರಿದವಳ ಕೈಯಿಂದ ಹೂವ ತೆಗೆಸಿದನಿಲ್ಲಿ ಗೋವಿಂದ
ಜಗತೀಲವನ ಪಾದಪದ್ಮ ಒಪ್ಪುತಿವೆ ಮಿಗೆ ಧ್ವಜ ಚಕ್ರಾಬ್ಜದಿಂದ ೧೩

ಕೇಶ ಪ್ರಸರಣವ ಮಾಡಿ ಹೂವ ಕೇಶಕ್ಕೀಶ ಮುಡಿಸಿದ ನೋಡೆ
ಕೇಶವನು ಬಳಿಗಭೀಷ್ಟೆ ಪೂರೈಸಿದ ಈ ಸೌಖ್ಯ ನಮಗಿಲ್ಲ ಪ್ರೌಢೆ ೧೪

ಹೀಗೆ ಪ್ರಲಾಪಿಸುವುದನು ದಯದಿ ಶ್ರೀ ಗೋಪಿನಾಥ ತಿಳಿದನು
ಹೀಗವಳ ಮೇಲೆ ತಾ ಸ್ನೇಹ ಮಾಡಲ್ಕೆ ಬೇಗ ಸೊಕ್ಕಿದಳವಿವೇಕೆ ೧೫

Rarest Archiver

ನಾ ಗೋಪೇರೊಳು ಚೆಲ್ವೆ ತಿಳಿದತಾ ಶ್ರೀ ಗೋಪೀನಾಥನವರನುಳಿದ
ಈಗೆನ್ನ ಹೊತ್ತಿಹನೆಂಬಾಕೆ ಮನಸೊಕ್ಕು ಬೇಗ ದುರ್ಮತಿಯೆಂದು ನಕ್ಕು ೧೬

ಈಕೆಯ ಮತಿತಕ್ಕ ಶಿಕ್ಷಾಯೆಂದು ಶ್ರೀಕೃಷ್ಣನಾದ ಅಪ್ರತ್ಯಕ್ಷ
ತಾ ಕಾಂತನ ಕಾಣದೆ ಹಾ ಹರೇಯೆಂದು ಶೋಕಿಸಿದಳು ಕಡುನೊಂದು ೧೭

ಹೇ ನಂದಜಾತ ಬಳಲಿದೆ ದಯಾನಿಧೆ ಮೊಗದೋರು ಮುಂದೆ
ಅನಂತ ಅಪರಾಧಿ ನಾನು ಮುರಾರೆ ದೀನವತ್ಸಲ ಸುರಧೇನು ೧೮

ಈ ಪರಿ ಬಳಲ ಬಾಹವಳ ಕಂಡು ಗೋಪೇರು ಕೇಳಿದರವಳ
ಗೋಪತಿ ನಂದಜನೆಲ್ಲಿಹನೇ ಈಗ ನೀ ಪರಮಾಪ್ತಳಿನ್ನವಗೆ ೧೯

ಮಾನಿನಿ ಹೇಳಿದಳಾಗೆ ತನ್ನ ಮಾನಾಪಮಾನವರಿಗೆ
ಆ ನಾರೇರಾಶ್ಚರ್ಯಬಟ್ಟು ಹರೇಯೆಂದು ನೀ ನಮ್ಮ ಕೂಡಿದೆಯೆಂದು ೨೦

ಪತಿಯನರಸಿ ಬಳಲಿದರು ತಾರಾಪತಿಯಡಗಿದ ಬಳಿಕವರು
ತುತಿಸಿದರ್ಕವಿಯೂಥಪತಿರತಿಪತಿಪಿತ ಗತಿಮತಿ ತತಿದಾತನೆಂದು ೨೧

ತಿರುತಿರುಗುತ ನಿಶೆಯಲ್ಲಿ ಶ್ರೀಹರಿಯ ಮನಸ್ಕೆಯರಲ್ಲಿ
ಹರಿಗುಣ ಹೊಗಳಿ ಸಿರಿಕಾಳಿಂದಿ ಮಳಲಲ್ಲಿ ಸಿರಿಕೃಷ್ಣ ಭಾವುಕೆರಲ್ಲಿ ೨೨

ನೆರೆಕೊಂಡು ಕುಳಿತಾಲಾಪಿಸುತ ಗಾತ್ರ ಸರಸೋಕ್ತಿವ್ರಾತ ಸಂಗೀತ
ಪರಸನ್ನವೆಂಕಟನ ಪರಸನ್ನೀಕರಿಸಿದರ್ ಪರಸನ್ನಮುಖಿಯರು ಸತತ ೨೩

೪೦

ಗೋಪೀಗೀತ

ಜಯಂವ್ರಜಕೆ ನೀ ಜನ್ಮಿಸಧಿಕವು ಶ್ರೀಯಳ ವಾಸವು ಶಾಶ್ವತಿಲ್ಲಿಯಂ
ಪ್ರಿಯಗೆ ಪ್ರಾಣವರ್ಪಿಸಿ ನೋಡುವ ಪ್ರಿಯೆರ ದೃಷ್ಟಿಗೆ ಪ್ರಾಪ್ತಿಯಾಗದೆ ೧

ಸ್ವಜನ ವಿಸ್ಮಯಾಸ್ಮಿತದಲಳಿದೆಯೊ ವ್ರಜದ ದುಃಖವನೊದ್ದ ವೀರನೆ
ಭಜಿಸು ಕಿಂಕರೇರ್ಬಾಸಖಾ ಹ[1][ರೇಂ][1]ಬುಜಸಮಾಸ್ಯವ ಅಕ್ಷಿಗೆ ತೋರ್ವನೆ ೨

ಶರತ ಕಾಲದ ಸ್ವಬ್ಜಗರ್ಭದ ಸಿರಿಗೆ ಪೋಲುವಾಸ್ಯೇಕ್ಷೆಯೊಪ್ಪುವ
ಸುರತ ಸ್ವಾಮಿ ನೀಂ ಶುಲ್ಕದಾಸೆರ್ಂ ವರದ ಕಾಯದೆ ವಿಧಿಯದಾವುದೈ ೩

[1] ರೊ ,

Rarest Archiver

ವಿಷದ ನೀರ್ದೊರೆ ವ್ಯಾಳರಾಕ್ಷಸನಿಂ ವಿಷಮಗಾಳಿ ಮಳೆ ವೈದ್ಯುತಾಗ್ನಿಯಿಂ
ವೃಷಭ ಮುಖ್ಯರಿಂ ವಿಶ್ವದುಃಖದಿಂ ವೃಷಭ ನಮ್ಮನಂ ರಕ್ಷಿಸಿದೆಯೊ ನೀ ೪

ಅಖಿಲಜೀವ ಕಾಂತರ್ನಿಯಾಮಕ ಗೋಕುಲರಕ್ಷಕಾರ್ಗೆಂತೆ ಬಾಲಕ
ವಿಖನಸಾರ್ಥಿತ ಸರ್ವಗೋಪಿಕಾಸಖ ನೀ ಪುಟ್ಟಿದೆ ಸಾತ್ವವಂಶದಿ ೫

ವರವರಿಷ್ಠನೆ ವಾರ್ಷ್ಣಿಕಾಂತನೆ ಶರಣು ಹೊಕ್ಕರ ಸಂಸೃತಿಹರ
ನೆರೆ ಕರಾಬ್ಜವನಿಟ್ಟು ಶೀರ್ಷಪಾದರಿಸು ಶ್ರೀಕರ ಧರಿಸಿದಾಕರ ೬

ಪ್ರಣತ ಪ್ರಾಣಿಗಳ ಪಾಪಕರ್ಷಕಾವಿನ ಬಳಿಲಿಪ್ಪ ವೈಷ್ಣವಾರ್ಚಿತ
ಫಣಿಯ ಪೆಡೆಲಿಹ ಪಾದಪದ್ಮವ ಸ್ತನಕೆ ಹೊಂದಿಸೈ ತಾಪವಾರಿಸೈ ೭

ಬುಧರ ಮೆಚ್ಚಿನ ಬುದ್ಧಿಕಾರಣ ಮಧುರ ಮಾತಿನಂಬೋಜನೇತ್ರನೆ
ತ್ವದೀಯ ಆಜ್ಞೆಯ ತಪ್ಪದಿಪ್ಪವರ್ಗಧರ ಸೋಮಂವ ಊಡು ವೀರನೆ ೮

ನಿನ್ನ ಕಥಾಮೃತವು ನೀಚ ಜೀವನಂ ಮುನಿಗಳರ್ಥವು ಮತ್ತೆ ಅಘಹರಂ
ಮನನ ಭವ್ಯವು ಮಹಾಭಾಗ್ಯವು ನೆನೆವ ಭಕ್ತರು ನಿತ್ಯದಾತರು ೯

ಪ್ರಿಯ ನಿನ್ನಾಸವು ಪ್ರೇಮನೋಟವು ದಯೆಯು ಕ್ರೀಡೆಯು ಧ್ಯಾನಶೋಭನವು
ನಯರಹಸ್ಯವು ಮನವು ಬೇಯಿಸಿ ನೋಯಿಸುವ ಬಂಧ್ಕಿ ಕೈತವ ೧೦

ವ್ರಜವ ಬಿಟ್ಟು ಆವನ್ನು ಮೇಸುವಾಂಬುಜವ ಹೋಲುವಾ ಅಂಘ್ರಿಗೊತ್ತುವ
ರಜತೃಣಾತ್ಮವಾಲೋಚಿಸಿ ಮನವು ಭಜಿಸದೈ ಸುಖ ಭೂಪತೆ ಸಖಾ ೧೧

ದನದ ಧೂಳಿಯಿಂದೊಪ್ಪುವಳಕದಿಂ ವನಜವಕ್ತ್ರವ ವೀಕ್ಷಿಸಿ ಮನ
ನೆನೆಸಿ ಇಚ್ಛಿಪೆವು ನಿನ್ನ ರೂಪವ ಇನನ ಅಸ್ತದಿ ವೀರ ನಿತ್ಯದಿ ೧೨

ಭಕುತರಿಚ್ಛಿಪ ಅಬ್ಜ ಜನರ್ಚಿಪ ಪೃಥಿವಿ ಭೂಷಿಪಾಪತ್ತುವಾರಿಪ
ಸುಖಕೆ ಶ್ರೇಷ್ಠವಾ ಸತ್ಪದಾಬ್ಜವ ಸುಕುಚದಲ್ಲಿಡೈ ಸುವ್ಯಥೆ ಸುಡೈ ೧೩

ಸುರತ ಹುಟ್ಟುವ ಶೋಕವಟ್ಟುವ ಸ್ವರಿಪ ವಂಶವ ಸಂಧಿಸೊಪ್ಪುವಾ
ನರರ ರಾಗವನಟ್ಟಿ ಮರೆಸುವ ಅರಸ ನಿನ್ನಧರಾಂಕಿತ ಸುಧಾ ೧೪

ಹಗಲ ಚರಿಸುವಿ ಹೋಗಿ ಅಟವಿ ಯುಗಕೆ ವೆಗ್ಗಳವು ಒಂದು ತೃಟಿಯುದಂ
ಪೊಗದ ಸಿರಿಗುರುಳ್ಮೈಚ್ಚಿ ನೋಡಲು ಮುಗುಳೆ ಜಡದೊಳು ಮೋಹಿಪೆವೀಗಳು ೧೫

Rarest Archiver

ಎಳೆಯರಿನಿಯರ ಇಷ್ಟರಾಪ್ತರ ಬಲವ ಮೀರುತ ಬಂದೆವಚ್ಯುತ
ಲಲಿತ ಗೀತದಾಲಾಪ ಮೋಹದಾಬಲೆರ ನೈಶಕೆ ಬಿಟ್ಟ ಕುಹಕ ೧೬

ಮುಗುಳನಗೆ ಮೊಗವು ಮೋಹ ನೋಟವು ಮುಗುಳಗಣ್ಣೆಯನು ಮೀಟುವ ಘನ
ಮುಗಿಲು ನಿಮ್ಮದೆ ಮಾಟ ಕಂಡೆದೆ ಬಿಗಿದು ಅಪ್ಪುವೆಂಬೆಸೆವ ಮೋಹವು ೧೭

ಆಕಳ ಕಾವರಾಮಂಗಳಾಹರ ಪ್ರಕಟ ನಿನ್ನದು ಪಾಪ ಪೋಪುದು
ಸ್ವಕಿಯರಾರ್ತಿಹ ಸರ್ವರೋಗಹ ನಿಖಿಳರಾಶೆಯ ನೀ ಪೂರೈಸಯ್ಯ ೧೮

ಪ್ರಸನ್ನವೆಂಕಟಾ ಪಶುಪ್ರಪಾಲಕಾ ಅಸಿಯರ್ಗೀತವ ಅರಿತು ಮಾಧವ
ಪ್ರಸನ್ನವಾಗುವಾಪತ್ತು ಹರಿಸುವ ಶಶಿಮುಖಿಯರೊಳು ಸ್ನೇಹತಪ್ತರಾ ೧೯

ಇತಿ ಗೋಪ್ಯಃ ಪ್ರಗಾಯಂತ್ಯಃ ಪ್ರಲಪಂತ್ಯಶ್ಚಿ ಚಿತ್ರಧಾ
ರುರುದುಃ ಸುಸ್ವರಂ ರಾಜನ್ ಕೃಷ್ಣ ದರ್ಶನ ಲಾಲಸಾಃ ೨೦

ತಾಸಾಮಾವಿರಭೂಚ್ಛೌರಿಃ ಸ್ಮಯಮಾನ ಮುಖಾಂಬುಜಃ
ಪೀತಾಂಬರಧರ ; ಸ್ರಗ್ವೀ ಸಾಕ್ಷಾನ್ಮನ್ಮಥ ಮನ್ಮಥಃ ೨೧

೪೧

ರಾಗ : ಸಾವೇರಿ **ಚೂರ್ಣಿಕಾವೃತ್ತ**

ಈ ಪರಿ ಗೋಪಿಕೆಮೂಪರಲಾಪಿಸೆ ತಾಪಿಸೆ
ಶ್ರೀಪತಿ ಭೂಪತಿ ಗೋಪತಿ ತಾ ಪರಾತ್ಪರನೈಸೆ
ಆಪದ್ಧಾರಕ ವ್ಯಾಪಕ ರೂಪಕ ತಾ ಪುನರಪ್ಯುದಿಸೆ
ಭಾಪತಿವಂಶಪ್ರದೀಪಕ ಗೋಪಿ ಸಮೀಪಕೆ ಬರೆ ಥಳಥಳಿಸೆ ೧

ದಿನಮಣಿ ಗಣಮಣಿ ಮೌಳಿಮಕರಕುಂಡಲಮಂಡಿತ ಗಂಡ
ವನಜನಯನ ತೆಣ್ಣದಿರನಂತಿರುವ ತುಂಡ
ಘನನೀಲನಿಭತನು ಕರಿಕರಾಭ ದೋರ್ದಂಡ
ಮನೋಜನಜನಕ ಸಿರಿವನಿತಾನನನವೀನ ನೀರಜ ಚಂಡ ೨

ಮಿನುಗುವೆಳೆನಗೆ ಮೋಹನ ಭ್ರೂ ನಟನವಿಲಾಸದ ಶೌಂಡ
ವನಸ್ರಗ್ವೈಜಯಂತಿಧರ ಘನ ಕೌಸ್ತುಭಕೇಯೂರ ಚಿರರುಚಿರಾಂಬರೋದ್ದಂಡ

Rarest Archiver

ಕ್ವಣತ್ ಕಿಂಕಿಣಿ ಕಂಕಣದಾಮ ಸುನೂಪುರ ಮಂಡನ ಮಂಡಿತ ಗಂಡುಗಲಿ ಪುಂಡರ ಹಿಂಡಿನ ಗಂಡ
ಎನಂತಲಿ ವನಿತೇರು ಪ್ರಸನ್ವೆಂಕಟನ ಕಣ್ಮನದಣಿಯೆ ಕಂಡರು ತಂಡ ತಂಡ ೩

೪೨

ರಾಗ : ಕೇದಾರ **ತಾಳ : ಅಟ್ಟ**

ತೋರಿದಾ ತನ್ನ ತೋರಿದಾ ತನ್ನ ಸಾರಿದ ನಾರೇರ ವೋರೆ ಇದುರಿನಲ್ಲಿ ಪ.

ಶ್ರೀಕೃಷ್ಣ ಸಂದರುಶನದಿ ಗೋಪಿಯರು ಅನೇಕ ಪ್ರಲಾಪಿಸಿ ರೋದಿಸುತಿಹರು
ಏಕ ಸುಸ್ವರದಿ ಪಾಡುವ ನಿಷ್ಠೆಯ ನೋಡಿ ತಾ ಕರುಣಾಂಬುಧಿ ಉದಯಮಾಡಿ ೧

ಮಂದಸ್ಮಿತಾನನ ಮಕರಕುಂಡಲದಿ ಕಂದರ್ಪ ಚಂದಿರಕೋಟಿಗಳ ತೆರದಿ
ಸೌಂದರ್ಯಸಾರಬಲೇರು ಮನೋಹರ ಕುಂದದ ಪೀತಾಂಬರ ವನಸ್ರಗ್ಧರ ೨

ಪ್ರಸನ್ನವದನ ಪ್ರಸನ್ನಾಲಯಪೂರ್ಣ ಪ್ರಸನ್ನಭೂಷಣ ಪ್ರಸನ್ನಮಯಲೋಚನ
ಪ್ರಸನ್ನಚರಿತ್ರ ಪ್ರಸನ್ನಾಬ್ಧಗಾತ್ರ ಪ್ರಸನ್ವೆಂಕಟಕೃಷ್ಣ ಪ್ರಸನ್ನವರಿಷ್ಠ ೩

೪೩

ರಾಗ : ಕೇದಾರ ಗೌಳ **ತಾಳ : ಅಟ್ಟ**

ನೆರೆದರು ಹರಿಯ ಗೆಳತಿಯರು ಸ್ಮರನ ಶರದಟ್ಟುಳಿಗೆ ನೊಂದ ಸುಂದರಿಯರು ಪ.

ಮಂಗಳ ಮೂರ್ತಿಯ ಕಂಡು ಗೊಲ್ಲವೆಂಗಳೆಯರ ಹಿಂಡು ಹಿಂಡು
ಕಂಗಳ ಹಬ್ಬವನುಂಡು ಅಂತರಂಗರಸ ಬಂದನೆಂದುಕೊಂಡು ೧

ಉದುರುವ ನಯನಾಶ್ರುಗಳಿಂ ಗದ್ಗದ ವಾಕ್ಯದ ಬಾಯಿಗಳಿಂ
ಯದುವರನಂಘ್ರಿಗೆರಗಿದರು ವಿಧುವದನೆಯರುಶೋಕ ಹರುಷಪೂರ್ಣರು ೨

ಗತಪ್ರಾಣಾಗತರಂತೆ ಸುವಿರತರಿಗೆ ಪದದೊರೆದಂತೆ
ಅತಿದಾರಿದ್ರ್ಯರಿಗಾಗ ಶ್ರೀಪತಿ ಪ್ರಸನ್ವೆಂಕಟನಿಧಿ ಬರಲಾಗ ೩

Rarest Archiver

೪೪

ರಾಗ : ಕೇದಾರಗೌಳ **ತಾಳ : ಜಕ್ಕಣಿ ?**

ಆ ಸಖಿಯರ ಸುಖಿಕೆ ಸರಿಯೆಂಬಂತೆ ಮಾಸಖ ಪೂರ್ಣಶಶಾಂಕ
ಶ್ರೀ ಸಂರರಿಗೆ ಸಂಧೆ ಕೈಸೇರಿದ ಪರಿ ಲೇಸಾಯಿತು ಬೆಳತನಕ ಪ.

ಶ್ರೀ ಶೌರಿಯ ಪಾಣಿಸರಸಿಜಗಳ ಬಾ ಸಖ ಎನ್ನುತ ಒಬ್ಬಳ್ಪಿಡಿದಳು
ಪೋಷಿತ ಚಂದನದಾ ಸರಳ್ದೋಳ್ಗಳ ಬೀಸಿ ಬಿಗಿದಪ್ಪಿದಳೊಬ್ಬಳು
ಶ್ರೀಶನ ತಾಂಬೂಲಕಾಸತಿ ಕೈಯೊಡ್ಡಿ ಹಾಸದಿ ಮೆದ್ದಳೊಬ್ಬಳು
ಈಶನ ಪದಪದ್ಮ ಲೇಸಾಗಿ ಓರ್ವಳು ತಾ ಸ್ತನದಲಿ ಧರಿಸಿದಳು ೧

ಭ್ರುಕುಟಿಗಳನು ಗಂಟಿಕ್ಕಿ ಸ್ನೇಹನೋಟದಿ ಮುಖದಿರುಹಿದಳೌಡುಗಚ್ಚಿ
ಸಖನಾಸ್ಯವ ಎವೆಯಿಕ್ಕದೋರ್ವಳು ನೋಡಿ ಸುಖಿಸಿದಳ್ ಕಣ್ಮನ ಮೆಚ್ಚಿ
ನಿಖಿಲಾತ್ಮನ ಚೆಲುವಿಕೆಯನು ಧೇನಿಸಿ ಸಖಿಯುಳಿದ್ದಳು ಅಂತಕ್ಕೆಚ್ಚಿ
ವಿಕಸಿತಮುಖಿ ನಾಸಿಕ ತುದಿಯಲಿ ಪ್ರಾಣಸಖನಿಟ್ಟರೆ ಕಣ್ಣುಮುಚ್ಚಿ ೨

ಸಂಸೃತಿ ಮೋಕ್ಷದ ಸಂಶಯಿಲ್ಲದ ಪರಮಹಂಸರ ಸ್ಥಿತಿಯಂತವರು
ಕಂಸಾರಿಯ ರೂಪಾಂಶವನ್ನೆ ನೆನೆದು ಸಂತತ ಪರವಶರು
ಹಂಸವಾಹನ ಶೀತಾಂಶುಧರಮರೋತ್ತಂಸಾರ್ಚಿತನರಸಿಯರು
ಹಂಸಗಾಮಿನಿಯರು ಮಾಂಶಾವೇಶರು ಧ್ವಂಸಿತ ವೃಜಿನ ಶುಚಿಯರು ೩

ವನಜಾಕ್ಷನ ಮುಖವನಜಾಮೃತನುಂಡು ದಣಿಯವು ಅವರಕ್ಷಿಮಧುಪ
ವನಜನಾಭನ ನಾಭಿವನಧಿಲಿ ನಲಿದವು ವನಿತೆಯರಕ್ಷಿಮೀನಚಲಿಪ
ಮುನಿಜನದೋಲು ತನುಮನಧನವೊಪ್ಪಿಸಿ ಸೆನೆದರು ಇನಿಯನ ರೂಪ
ಸನಕಾದಿವಂದ್ಯನ ಘನಸೌಂದರ್ಯಾಬ್ಧಿಯೋಳ್ ಮುಣುಗಿಸಿ ಬಿಟ್ಟರು ಹೃತ್ತಾಪ ೪

ವಿಜ್ಞಾನೋದಯ ಸಂಗ್ಗಿಯಂ ಯೋಗಿ ಜನರ್ಗಾಗಿರೆ ಮನೋಹರ್ಷ
ವೆಗ್ಗಳಿಸಿತು ಶ್ರೀಯಜ್ಞೇಶ್ವರಪದಸ್ವರ್ಗದ ಲಾಭೋತ್ಕರ್ಷ
ಒಗ್ಗೂಡಿದ ಸ್ತ್ರೀವರ್ಗಕೆ ತೋರ್ವಪವರ್ಗವು ಈ ಪರಿತೋಷ
ಸ್ವರ್ಗಿಗರಿವರು ಭಕ್ತಾಗ್ರೇರು ಗೋಪೇರು ನಿರ್ಗತಶೋಕೆರು ಸಹಸಾ ೫

ಕುಂದ ಮಂದಾರಾರವಿಂದವ ಹೊಂದಿದ ಮುಂದಾನಿಲ ಪರಿಮಳವು
ಮಾಂದ್ಯ ಸಂಶೈತ್ಯವು ಅಂದು ವಿರಹಿಗಳಾನಂದದ ವೃದ್ಧಿಗೆ ಗೆಲವು

Rarest Archiver

ಮಂದಗಮನೆ ಕಾಳಿಂದಿಯ ಕೂಲದ ಸುಂದರ ಪುಳಿನಸ್ಥಳವು
ಅಂದೊಪ್ಪುವ ಶಾರದೇಂದು ಬೆಳಗಿನಲಿ ನಂದಜನಟಣೆಗೆ ನೆಲೆವು ೬

ಚಿರ ಝೇಂಕರಿಪ ಷಟ್ಚರಣಮಂಜುಳಘೋಷ ಹರಿಣಾಕ್ಷೆರ ಕಿವಿಗಳಿಗೆ
ಹರಿಯ ಸಂದರುಶನ ಸ್ಪರುಶನೋಲ್ಲಾಸದಿ ಸ್ಮರಶರದುಪಟಳ ತಾಗೆ
ವರ ಶಾಸ್ತ್ರಾರ್ಥವು ಪರಶ್ರುತಿ ಹೊಂದಿದ ಪರಿ ಯುವತಿಯರ್ಹೊಂದಲಾಗೆ
ಪರಕೆ ಪರಾತ್ಪರ ಸಿರಿವರ ಸುಂದರ ನೆರೆಗನವರನು ತಾ ಬ್ಯಾಗೆ ೭

ಇಂದೀವರಾಕ್ಷೆರು ಕಂದರ್ಪನಯ್ಯನ ಮುಂದಕೆಳೆದುಕೊಂಡು ತಮ್ಮ
ದ್ವಂದ್ವನಿಬಿಡಕುಚ ಹೊಂದಿದ ಉತ್ತರೀಯಂದೆಗೆದರು ಸಂಭ್ರಮ್ಮ
ಚಂದನ ಕುಂಕುಮ ಗಂಧ ಕಸ್ತೂರಿ ಪುನಗಿಂದಾತ್ಮವು ಮನೋರಮ್ಮ
ಚಂದದಾಸನವಿತ್ತು ಕುಂದರದನೆಯರ ವೃಂದದೊಪ್ಪಿದ ಪರಬ್ರಹ್ಮ ೮

ರಮೆಯಾತ್ಮಕವಾದ ಅಮೃತ ಕ್ಷೇಮಾಭಯ ವಿಮಲಾಸನದ ಮುಕುಂದ
ಅಮಮ ಗೋಪೇರ ಕುಚಬೆವರ್ಹೊಂದಿದ ಗಂಧ ರಮಣೀಯಾಂಬರ ಸಾಕೆಂದ
ಭ್ರಮತ್ರಯ ನೀಗಿದ ಸುಮುನಿವರರ ಹೃತ್ ಕಮಲಾಲಯ ಗೋವಿಂದ
ಯಮುನೆಯ ಪುಲಿನದಿ ಸುಮೃಗಶಾಬಾಕ್ಷೆರ ಕಾಮುಕಭಕುತಿ ಬೇಕೆಂದ ೯

ಯೋಗೇಶೇಶ್ವರ ಹೀಗಾಶ್ಚರ್ಯದ ಸಾಗರಲೀಲೆಯ ತೋರ್ದ
ಆ ಗೋಪಿಯರಿಗೆ ಪೂಗಣೆಯನ ಗಣೆ ವೇಗವ ತಾ ಪ್ರೇರಿಸಿದ
ಆಗ ಅವರು ತಪಯೋಗಾಲಂಬಿಸೆ ಶ್ರೀಗೋಪತಿ ನಲವಿಂದ
ಬ್ಯಾಗವರಿಗೆ ಸಂಯೋಗದ ಬಯಕೆಯ ಶ್ರೀಗೋಪ್ತನು ನಿಯಮಿಸಿದ ೧೦

ಭ್ರೂ ಭ್ರಮಣೇಕ್ಷಣ ಶೋಭಿಪ ನಖಸ್ಪರ್ಶಲೋಭದ ವಚನಗಳಿಂದ
ತ್ರಿಭುವನೇಶ್ವರ ತಾ ಬ್ಯಾಗನೆ ರತಿಲೋಭದ ಸುಖವೈದಿಸಿದ
ಸೀಬಿಲ್ಲನ ಗಣೆಗಿಂಬಾದವು ಪುಲ್ಲನಾಭನ ಬಲು ಒಲುಮೆಂದ
ಶ್ರೀಭೃತ ಉಡುಪಗೆ ಭಾಮೆಯರೆಂದರು ಸ್ತೋಭ ಪ್ರಣಯಕೋಪದಿಂದ ೧೧

ಎಲೆ ವಿಭುವೆ ಒಬ್ಬೊಲಿಸಿದರೊಲಿವನು ಒಲಿಯನು ಒಬ್ಬೊಲಿಸಿದರೆ
ಒಲಿಸದೆ ಒಲಿವನು ಇಳೆಯೊಳು ಎರಡನು ತಿಳಿಯನು ಕೇಳು ಮುರಾರೆ
ತಿಳುಹೈ ಈ ನಾಲ್ವರೊಳದಾವನು ಘನ ಎಲೆ ದಯಾನಿಧೆ ಶ್ರೀಹರೆ
ಸಲೆ ನಿಮ್ಮಂಘ್ರಿಯನಳಿನಕೆರಗುವೆವು ಲಲಿತಚರಿತ್ರ ಅಘಾರೆ ೧೨

Rarest Archiver

ಇಂದ್ರಿಯ ಮುಖಿಯರ್ತೀಗೆಂದರೆ ನುಡಿದನು ಮಂದರಧರ ಸಿರಿನಲ್ಲ
ಹೊಂದದ ಬಯಕೆಯು ಮಂದಮತಿಗಳ ಕೂಡಿಂದು ಸೌಹೃದ ಧರ್ಮವಲ್ಲ
ಒಂದಿನಿತಾರ್ಥವ ಎಂದು ಇಚ್ಛೈಸದಿಹ ಮಂದಿಗೊಲಿವೆ ಹುಸಿಯಲ್ಲ
ತಂದೆಗೆ ತನ್ನಯ ಕಂದಗಳಲಿ ಸ್ನೇಹ ಬಂದಂತಿರೆ ಕೈವಲ್ಯ ೧೩

ನಿತ್ಯಚಿತ್ತದಿ ಸರ್ವಾತ್ಮರಾಮಗೆ ಮನಹತ್ತಿದ್ದ ಧೀರರಿಗೊಲಿವೆ
ಪುತ್ರಕಲತ್ರಸನ್ಮಿತ್ರವಿತ್ತಾಧಿಕ ಮತ್ಪ್ರಿಯಹರಿಯೆಂದರ್ಗೊಲಿವೆ
ಮತ್ತೊಂದು ಲಾಭಕೆ ಎತ್ತೆತ್ತೆಳಸದ ಮುಕ್ತಿಶೋಧಕರಿಂಗೊಲಿವೆ
ಭಕ್ತರ ಸುರಭಿ ವಿರಕ್ತರ ಸುರತರು ಹತ್ತಿಯವರ ಹೊಂದಿರುವೆ ೧೪

ಹೋದರ್ಥದಲಿ ಧನಾಧಿಪನ ಚಿತ್ತಖೇದವು ಬಳಲಿಸಿದಂತೆ
ರೋದಿಸಿ ವನವನ ಶೋಧಿಸಿದಿರಿ ಪರಮಾದರದಲಿ ನೀವಿಂತೆ
ಮೇದಿನಿಲಿ ನಿಮ್ಮ ಋಣಬಾಧೆಯು ಸಾರಿಹು ನಾ ದಾವ ಪರಿ ತಿದ್ದಲ್ಮತ್ತೆ
ಐದೆರಿಗೆಂದನು ಮಾಧವ ಮೋಕ್ಷದ ಹಾದಿಯ ಮಾತುಗಳಂತೆ ೧೫

ಹರಿಮುಖ ನಿಸೃತೋತ್ತರದ ಸುಧಾರಸ ಕರ್ಣಪುಟಗಳಿಂದ ಸವಿದು
ವಿರಹದಿ ಜನಿಸಿದ ಜ್ವರವಡಗಿರೆ ಸುಂದರನಂಗಸಂಗಿಯರ್ಗಂದು
ಪರಮಪ್ರರುಷಹರಿ ಸ್ವರಮಣ ಗೋಪೇರೊಳ್ ವರರಾಸಕ್ರೀಡೆಗೆ ಬಂದು
ಹರಿಣಕುಣಕನೇತ್ರೆರ ಕರೆದನು ಸತ್ ಸರಸಮಂಡಲದಲಿ ನಿಂದು ೧೬

ಯೋಗೇಶೇಶ್ವರ ನಾಗಗಮನೆಯರ ಯೋಗಮಂಡಲದ ಮಧ್ಯದಲಿ
ಬೇಗಿಬ್ಬಿಬ್ಬರಿಗಾಗೊಂದು ರೂಪ ತಾನಾಗೊಪ್ಪಿದ ಸ್ವಸುಖದಲಿ
ನಾಗವೇಣಿಯರ ಬಾಹುಗಳಲ್ಲಿ ಬಾಹ್ವಿಟ್ಟು ಕೈಗಳಿಗಿಂಬು ಕಂಠದಲಿ
ಭೋಗಿಸಿದನು ಚೆನ್ನಾಗಿ ಗುಣತ್ರಯ ನೀಗಿದಗೊಲಿವಂದದಲಿ ೧೭

ಸ್ತ್ರೀರತ್ನಂಗಳೊಳಾರಾಜಿತೆ ನೀಲನೀರದಗಾತ್ರ ಹೈಮಮಣಿ
ಹಾರದ ಮಧ್ಯದಿ ಚಾರು ನೀಲದ ಮಣಿ ತೋರುವ ತೆರದಿ ಗುಣಮಣಿ
ಭಾರಿ ನೂಪುರ ಝುಣತ್ಕಾರದ ವಲಯದ ನೀರೆಯರ ಕಂಠಮಣಿ
ಮೇರೆಯಿಲ್ಲದ ಸುಖವಾರಿಧಿ ನಂದಕಿಶೋರ ಚಿದ್ಗುಣಗಣದ ಖಣಿ ೧೮

ಹೊಳೆವ ಶಂಕುಮಂಡಲ ಮಧ್ಯ ಸ್ಥಾಪಿಸಿ ಗೆಳತಿಯರನು ಹೊಂದಿ ಶೌರಿ
ವಲಯಾಕಾರದಿ ನಿಲಿಸಿದ ಗೋಪೆರ ಬಳಗವನಾಗ ಮುರಾರಿ
ಕೆಳದೆರ ಗಾತ್ರಮುಂಜುಳಮಧುರ ಸ್ವರಗಳ ಕೇಳಿದನು ಉದಾರಿ
ಚಲಿತ ಪದನ್ಯಾಸಗಳ ಪಠಣೆಗಳ ಕಲಿಸಿದನಭಿನಯ ತೋರಿ ೧೯

Rarest Archiver

ಕಾಮ ಕ್ರೋಧವ ಗೆದ್ದು ನೇಮದಲಿದ್ದ ಸೋಮಕುಲಕೆ ದುರ್ಲಭವು
ಹೋಮವ ಮಾಡ್ಯಂತ್ಯ ಸೋಮರಸವನುಂಬ ಸ್ತೋಮಕತ್ಯಂತ ದುರ್ಲಭವು
ಭೂಮಂಡಲ ಸುತ್ತಿ ಹೈಮಪರ್ವತದಾನ ತಾ ಮಾಡಿದರ್ಗೆ ದುರ್ಲಭವು
ಶ್ರೀ ಮಹಾಲಕ್ಷ್ಮಿಯ ಸ್ವಾಮಿ ಶ್ರೀಕೃಷ್ಣನ ಕಾಮಿನೇರ್ಗೀಭಾಗ್ಯ ಸುಲಭವು ೨೦

ರಂಗನ ಮಂಗಳ ಅಂಘ್ರಿಯುಗಂಗಳ ಸಂಗತಿಯಂ ಗುರುತಿಟ್ಟು
ಹಿಂಗದಪಾಂಗದ ಕಂಗಳ ಸಿಂಗರ ಅಂಗನೆರಿಂಗಿತದಷ್ಟು
ಅಂಗಜನಂ ಗೆಲ್ವನಂ ಗುಣ ಸಂಗೀತ ಸಂಗಿಸೆ ಹೆಂಗಳಿರಷ್ಟು
ತುಂಗ ವಿಹಂಗ ತುರಂಗ ಪ್ರಸನ್ವೆಂಕಟ ಸಂಗೆಯರ್ಗೀಶುಭವಿಷ್ಟು ೨೧

೪೫

ಸ್ರಗ್ಧರಾ ವೃತ್ತ

ಪಾದನ್ಯಾಸಂಗಳಿಂದಾ ಭುಜಗಳ ಒಳುಪಿಂ ಭ್ರೂವಿಲಾಸಂಗಳಿಂದಾ
ಮೋದ ಸ್ಮಿತೇಕ್ಷಣದಿಂದಾ ಮಣಿವ ನಡುವಿನಿಂ ನರ್ತಿಪಾ ಜವ್ವನೇರು
ದೇದೀಪ್ಯಪ್ರೋಚ್ಚ್ರವಾಲೇ ಕದಪಿಲಿ ಹೊಳೆಯಲ್ ಸೋಮರ್ಯಡೀಬಿಟ್ಟಲೇಯಲ್
ಸ್ವೇದಾಸ್ಯಾಳೇಯರಿಂದಾ ಹರಿವಧು ತಟಿತವು ಮಿಂಚೆ ಮೇಘಾಂಗದಲ್ಲಿ ೧

ವೃತ್ತ ಪಂಚಚಾಮರ ತಾಳ : ಮಠ್ಯ

ಸ್ವರವನೆತ್ತಿ ಪಾಡಿದರ್ ಸುಕಂಡೆಯರ್ಮದಾನ್ವಿತೇರ್
ಹರಿಸ್ಪರ್ಶೋತ್ಸವಾಗಿರಲ್ ಸುಗಾಯಕೇರ್ಹರಿಪ್ರಿಯರ್ ೨

ಮುಕುಂದಗಾನಕೆ ಸಮ ಸುಕುಂದದಂತಿನಿಯೋರ್ವಳು
ಸ್ವಕೌಶಲವ ತೋರ್ದಳು ಸುಸಾಧು ಸಾಧು ಎನ್ನಲು ೩

ಸ್ವರಂಗಳ ಸುಜಾತಿಗೆ ಹರಿಯು ಮೆಚ್ಚಿದಾಕೆಗೆ
ಪರಮ್ಮ ಮಾನವಿತ್ತನು ಪರಾತ್ಪರ ಸ್ವಪ್ರಿಯನು ೪

ಬಳಲಿದ ನಾರಿಯೊಬ್ಬಳ ಅಲರ್ಮುಡಿಯು ಚೆಲ್ಲಲು
ಬಳಿಯಲಿರಲು ಗದಾಧರನು ಅವಳ್ಗೆ ಸ್ಕಂಧವಿತ್ತನು ೫

ಸುಚಂದನೋತ್ಪಲಂಗಳಿಂ ಸುಚಿನ್ಹಿತಾ ಸುಬಾಹುಗಳಿಂ
ಚುಂಚುಬಿಸ್ಯಾಘ್ರಾಣಿಸಿದಳು ಶುಚಿವ್ರತೆಯು ಒಬ್ಬಳು ೬

Rarest Archiver

ಬೆವಂದ್ರು ಶ್ರಾಂತಗೋವಳೇರವುದ್ರು ಅಪ್ಪಿ ತೋಳ್ಗಳಿಂ
ಸುವೃಷ್ಟ ತಾಂಬುಲಿಚ್ಛಿಸಲ್ ಸುವಾರನಯ್ಯ ನೀಡಲು ೭

ಕಪೋಲದೊಳ್ ಕಪೋಲವಂ ಸುಪ್ರಿಯಂಳೊಬ್ಬಳಿಟ್ಟಳಂ
ಗೋಪಾಲಕೇಶನೋಷ್ಠದೊಳ್ ನಿಜೋಷ್ಠ ಒಬ್ಬಳಿಟ್ಟಳು ೮

ಸುಗಂಧವೆತ್ತ ತಂಬುಲವ ಸ್ವನಾಥ ನೀಡೆ ಮೆದ್ದಳು
ಸಂಗೀತವೆತ್ತಿ ಪಾಡಿದಳ್ ಸುನೃತ್ಯ ಒಬ್ಬಳಾಡಿದಳ್ ೯

ಝುಣತ್ಕರಿಪ ಅಂದುಗೆ ಕಿಣಿಕ್ಕಿಣಿಪ್ಪ ಕಿಂಕಿಣಿ
ಮಣಿಯ ಕಾಂಚಿದಾಮದಿಂ ಮಣಿವ ಮಧ್ಯೆಯೊಬ್ಬಳು ೧೦

ಕುಣಿದು ದಣಿದಂ ಒಬ್ಬಳು ಮನೋಜನಯ್ಯನಪ್ಪಲು
ಸ್ತನದ್ವಯಂಗಳೊಳ್ಹರಿಯ ಪಾಣಿಯನೊತ್ತಿಕೊಂಡಳು ೧೧

ಏಕಾಂತಪ್ರಿಯನಂಸದೊಳು ಸ್ವಕಂಧರೊಬ್ಬಳಿಟ್ಟಳು
ಸುಖಿಗಳಗ್ರಣಿಯೊಬ್ಬಳು ಮುಖಂ ಮುಖಕ್ಕೆ ನೀಡಲು ೧೨

ಪ್ರಸನ್ನಕೃಷ್ಣನಂಗನೇಪ್ರಸನ್ನತೆಯೊಳಿದ್ದನು
ಪ್ರಸನ್ನವಾದ ಶುಕಮುನಿ ಪ್ರಸನ್ನ ವಾಕ್ಯಕೀರ್ತನೆ ೧೩

ಪ್ರಸನ್ನ ವೆಂಕಟೇಶನ ಪ್ರಸನ್ನವಾರ್ತೆ ಕೇಳ್ದನು
ಪ್ರಸನ್ನಚಿತ್ತ ಭೂಪತಿ ಪ್ರಸನ್ನ ಭಾಗವತವನು ೧೪

೪೭

ರಾಗ : ಮೋಹನಕಲ್ಯಾಣಿ ತಾಳ : ಜಕ್ಕಣಿ ?

ರಾಸ ಕ್ರೀಡೆಯಲಾಸಖರ್ಗೆ ವಾಸುದೇವನ
ಲೇಸಿನಾಟ ಲೇಶ ತೋರ್ದು ತೋಷಿಸಿ ಮನ ಪ.

ತುರುಬು ಸಡಲಿ ಮೋರೆಯ ಮರೆಯ ಕುರುಳಿನಸಿಯರು
ಕರದ ಕಂಕಣ ನೂಪುರ ಝುಣತ್ಕರಿಪ ಅಬಲೇರು ೧

ನೆರೆ ಬೆಮರ್ದು ಮೆರೆವ ವದನ ಕಿರಿಯುನಗೆಯರು
ಹರಿಣಾಂಕನ್ನ ಭರಿತ ಕಾಂತಿಲಿ ವರಿಸುತಿದ್ದರು ೨

Rarest Archiver

ಮುಡಿಯುಮಾಲಿಕೆ ಎಡಲಿದುದಕೆ ಹಿಡಿವ ರಭಸದಿ
ಕಡಲಶಯನನೊಡನೆ ಸಮವಿಡಿದುಲ್ಲಾಸದಿ ೩

ಬಿಡದೆ ಲಯುವ ಜಡಿದು ನರ್ತಿಸೆ ಮೃಡ ಸುರೇಶರ
ಗಡಣ ತಮ್ಮ ಮಡದಿಯರನು ಹಿಡುಕಂತಿದ್ದರು ೪

ಕೆಳದಿಯರ ಮಂಜುಳಗಾಯನ ನಳಿನನಯನನ
ಗಳದ ಸೊಬಗಿನೊಳಗೆ ಮೆರೆವ ಅಳಿಗಳ ಸ್ವನ ೫

ಲಲಿತದೋರೆ ನಳಿನಸಂಭವೇಶರುಗಳಾದ್ಯರ
ಬಳಗ ಮೌನದಲಿ ಕುಳಿತರು ತಲೆಬಾಗಿ ಅವರ ೬

ಹರಿಕರಾಬ್ಜದಿ ಸ್ಪರು ಶಿ ಗೋಪೇರ ಕರಿಕರಾಭದ
ಸರಳ ತೋಳುಗಳೆರಡನಪ್ಪಿದ ಕರುಣರಸದಿಂದ ೭

ಪರಮಪುರುಷ ಪರಮಮುಕುಂತರರಸ ಸಿರಿವರ
ನರವಿಡಂಬನ ಅರುಹಿದ ಗೋಪೆಯರಿಗೆ ಮನೋಹರ ೮

ಹಸಿತವಕ್ತ್ರ ಲಸತ್ ಸ್ವತಂತ್ರ ಶಶಿಮುಖಿಯರೊಳು
ಅಸಮ ಕ್ರೀಡಾವಿಲಾಸದಿ ಒಪ್ಪಿದ ಸ್ವಸುಖಿ ದಯಾಳು ೯

ಕಾಮಾರ್ದಿತರಾದ ಕಾಮಿನಿಯರಿಗೆ ಕಾಮ ಪೂರೈಸಿದಾ
ರಾಮೇರಿಗೆ ಆತ್ಮರಾಮ ಸಂಗಿಸಿದ ಪ್ರೇಮಾಕುಲೇಕ್ಷಣದ ೧೦

ಬಿಟ್ಟ ಮುಡಿಗಳ ಕಟ್ಟಲಿಲ್ಲವರು ಉಟ್ಟಂಬರ ಹೊಂದರು
ಇಟ್ಟಡಿ ಕುಚದ ಪಟ್ಟಿಕೆ ಕಾಣರು ಗಟ್ಟ್ಯಾಗಿ ಬೆರೆತರು ೧೧

ಇಟ್ಟಿಹಾಲಂಕಾರವಷ್ಟು ಮರೆದರು ತೊಟ್ಟ ಕಂಚುಕಗಳ
ಪುಟ್ಟವು ಬಿಟ್ಟರೆ ದಿಟ್ಟಿಯಿಂ ನೋಡರು ಕೃಷ್ಣ ಭಾವುಕೆಯರು ೧೨

ದೇಹೇಂದ್ರಿಯ ಪ್ರಾಣಾ ಶ್ರೀಹರಿಗರ್ಪಿಸಿ ಬಾಹ್ಯಾರ್ಥವ ಮರೆದ
ಸ್ನೇಹಕ್ಕೆ ಮೆಚ್ಚಿದ ಆ ಹೆಂಗಳೌಘದ ಸಾಹಸಕೊಪ್ಪಿದ ೧೩

ಈ ಸರ್ವವಿಷಯದಾಸೆಯ ಮರೆದ ಅಸಂಪ್ರಜ್ಞಾತರಿಗೆ
ಈಶನೊಲಿದಂತೆ ಆ ಸತಿಯರನುಲ್ಲಾಸದಿ ಕೂಡಿದಾಗೆ ೧೪

Rarest Archiver

ಸುರನಾರಿಯರು ಹರಿಯಕ್ರೀಡೆಗೆ ಬೆರೆತು ಸಂಭ್ರಮಿಸಿ
ನೆರೆದರ್ ತಮ ತಮ್ಮರಸರ ಸ್ಮರಶರಕೆ ಮೋಹಿಸಿ ೧೫

ಮೃಡನಹಿತನ ನಿಡುಸರಳಿಗಂಜಿ ಉಡುಪ ತನ್ನಯ
ಮಡದಿಯರನು ಹುಡುಕಿ ವೇಗದಿ ಕೂಡಿದ ನೋಡಿರಯ್ಯ ೧೬

ಭಾವಕೆ ಮೆಚ್ಚಿದ ಶ್ರೀವತ್ಸಲಾಂಛನಾ ಗೋಪೇರನಪ್ಪಿದನು
ದೇವಿಯರಾನಂದ ತೀವಿದ ವಾರ್ಧಿಗೆ ಶ್ರೀವರ ಚಂದ್ರಮನು ೧೭

ಗೋಪೇರ ಸಂಖ್ಯೆಗೆ ಶ್ರೀಪತಿ ಸ್ವಕೀಯ ರೂಪಗಳ ತೋರಿದ
ಆಪನ್ನರಭೀಷ್ಟ ತಾ ಪೂರ್ಣಮಾಡಿದ ಪ್ರೇಮದಿ ಮುಕುಂದ ೧೮

ಸತಿಯರೆಲ್ಲರು ರತಿವಿಹಾರದಿ ಅತುಳ ಶ್ರಾಂತರಾಗೆ
ರತಿಪತಿಪಿತಾಚ್ಯುತ ಹೆಂಗಳ್ಗಳಾ ಪ್ರತತಿ ಹೊಂದಿ ಆಗೆ ೧೯

ಕಮಲಾಕ್ಷಿಯರ ಶ್ರಮೆಯ ಬೆಮರ ರಮೇಶ ತೆಗೆದರೆ
ಅಮರನಾರೇರು ಭ್ರಮಿಸಿ ಲೀಲೆಗೆ ಅಮಮ ಎನುತಿರೆ ೨೦

ಕಬ್ಬುಬಿಲ್ಲನ ಕೊಬ್ಬು ಮುರಿದಿಹ ಹಬ್ಬನುಂಡಸಿಯರು
ಹುಬ್ಬೋರೆಗಣ್ಣಿಲಿ ಉಬ್ಬುಬ್ಬಿ ನೋಡಿದರಬ್ಧೀಶನಂಗನೇರು ೨೧

ಹೊಳೆವಕುಂಡಲ ಉಲಿವ ಕುಂತಳ ಎಳೆನಗೆಕಾಂತಿಯ
ಬೆಳಗಿಲೊಪ್ಪುವ ನಲ್ಲನ ನೋಡಿ ಕಂಗಳವು ದಣಿಯವೈ ೨೨

ಈಶನ ಸುರತಹಾಸ ವಿಲೋಕನಕೆ ಸತಿಯರು ಮೆಚ್ಚಿ
ಶ್ರೀಶಂಭಗುಣವ ತೋಷದಿ ಪಾಡಿದರು ಸುಖಾಂಬುಧಿ ಹೆಚ್ಚಿ ೨೩

ತನ್ನಂಗಸಂಗದಿ ಖಿನ್ನಾಸ್ಯ ಬಳಲಿದ ಕನ್ಯೇರ ಕುಚದಲಿ
ಖಿನ್ನ ಕುಂಕುಮ ಗಂಧಾನುಲೇಪಾಂಗವ ನೋಡಿದ ದಯೆಯುಳಿ ೨೪

ಪೀನ ಪಯೋಧರದಾ ನಾರಿಯರಿಂದ ಜ್ಞಾನಾನಂದವಾರಿಧಿ
ತಾ ನೀರ ಪೊಕ್ಕ ಹೆಣ್ಣಾನೆಗಳ ಕೂಡಿ ಮದ್ದಾನೆಯಂತೆ ಭರದಿ ೨೫

ಕಾಳಿಂದಿ ಮಧ್ಯದಿ ಕಾಳಾಹಿಮೇಶೇರ ವ್ಯಾಳದಿ ಸ್ನೇಹದಲಿ
ಶ್ರೀಲೋಲ ಕ್ರೀಡಿಸೆ ಬಾಲೇರು ರಂಗಂಗೆ ಮೇಲೆ ನೀರು ಚೆಲ್ಲಲಿ ೨೬

Rarest Archiver

ಕೃಷ್ಣ ಮುರಳಿ ಯಥೇಷ್ಟ ನೀರು ಚಲ್ಲೆ ತುಷ್ಟಿಸಿ ಸಖಿಯರು
ಸ್ಪೃಷ್ಟೇಶನ ಮೇಲೆ ಒಟ್ಟಿದರು ಜಲದೊಟ್ಟಿಲು ಸುಗುಣೇರು ೨೭

ರಂಗನ ಆಟಕೆ ಅಂಗನೇರ್ನೋಟಕೆ ಭೃಂಗಗಳ ಪಾಠಕೆ
ಜಂಗುಳಿಗಟ್ಟಿ ಸುರಾಂಗನೇರ್ಸುರರು ಸಂಗೀತ ಹೇಳಲಿಕ್ಕೆ ೨೮

ವೈಮಾನಿಕರೆಲ್ಲ ಪ್ರೇಮಾಬ್ಧಿಲೋಲಾಡಿ ಪೂಮಳೆಗರೆಯಲಿ
ರಾಮೆಯರೊಳಾತ್ಮರಾಮ ಕ್ರೀಡಿಸಿದ ಸೋಮಾಂಶುಕಾಶದಲಿ ೨೯

ಆಮೋದಮಯವಾದಾ ಮಂದಮಾರುತ ವಾಮದೃಶೇರಾವೃತ
ರಾಮಾನುಜನೋಡಿ ಯಮುನೆ ಕೂಲ ನಿಸ್ಸೀಮವೆಂದವನಿ ತಾ ೩೦

ಸರ್ವಧರ್ಮಜ್ಞನು ಸರ್ವಗೋಪ್ತ ವ್ಯಾಪ್ತ ಸರ್ವಸ್ವತಂತ್ರ ತೃಪ್ತ
ಸರ್ವ ವಿಶ್ವೇತರ ಸರ್ವ ಸುರೇಶ್ವರ ಸರ್ವಾರ್ಥದಾತ ನಾಥ ೩೧

ಯಾವ ಮುಕುಂದನಂಘ್ರಿಪಾರಿಜರಸ ಸೇವಿಪ ಯೋಗಿಗಳ
ಭಾವತೃಪ್ತಿಯ ಕಂಡು ವಾಸುದೇವಗೆ ಈ ವಿಷಯಾಸೆಗಳ ೩೨

ಯಾವ ಹೇಳುವವನೇವೆ ತಮೋಯೋಗ್ಯ ಕೋವಿದರೆ ಬಲ್ಲರು
ಅವನ ಕ್ರೀಡಾಗುಣ ವಿಶಿಷ್ಟ ಲೀಲೆಗೆ ವಿಶ್ರಾಂತಿಗಾಣರು ೩೩

ನಮೊ ನಮೊ ನಮೊ ನಾರದ ಸಂಗೇಯಾ ನಮೊ ನಮೊ ಸ್ವಪ್ರಿಯಾ
ನಮೊ ನಮೊ ನಮೋನಂತ ಸದ್ಗುಣಾತ್ಮಾ ನಮೊ ನಮೋಂತರಾತ್ಮ ೩೪

ವಿಷ್ಣುರಾತಂಗೆ ವಿಶಿಷ್ಟ ಕೃಷ್ಣಲೀಲ ಶಿಷ್ಟ ಬ್ರಹ್ಮರತನು
ಸ್ಪಷ್ಟಾಗಿ ಹೇಳಲು ತುಷ್ಟಿಲಿ ನೃಪೇಶನು ಇಷ್ಟಲಿ ಕೇಳಿದನು ೩೫

ಶ್ರೀಕೃಷ್ಣನಾಶ್ರಿತ ಏಕಾಂತಿಗಳಿಗೆ ವ್ಯಾಕುಲ ಚಿತ್ತವಿಲ್ಲ
ಶ್ರೀಕೃಷ್ಣಗ್ಹೇಳುವ ಪೋಕದನುಜರನೀಕ ಸಂದೇಹವಿಲ್ಲ ೩೬

ಗೋಷ್ಟದ ಗೋಪೇರಿಗಿಷ್ಟ ಸುಖವಿತ್ತು ಸ್ಪಷ್ಟ ತಾ ನಿರ್ಲಿಪ್ತನು
ಶಿಷ್ಟರ್ಗೆ ಮೋಹಪೊಂದಿಷ್ಟು ತೋರದೆಂದು ದುಷ್ಟರ ಮೋಹನನು ೩೭

ಶ್ರೀಪತಿಯಾಜ್ಞೆಯಿಂ ಗೋಪೇರು ಸಾರ್ದರು ತಾಪಬಟ್ಟಾಲಯಂಪ
ಸ್ವಪತ್ನಿವಿಯೋಗ ಗೋಪಗೆ ತೋರದು ಪ್ರೇರಿಸೆ ಮಾಧವ ೩೮

Rarest Archiver

ಶ್ರೀದೇವಿಯಿೀತನ ಪಾದಾಂಗುಲಿ ನಖ ಆದರದಿಂ ನೋಡುತ
ಮೋದದಿಂದೊಂದು ಗುಣಾದ್ಯಂತ ಕಾಣಲು ವೇದೋಕ್ತಾನುಕ್ತಗಾಥಾ ೩೯

ಸೃಷ್ಟ್ಯಾದಿಕಾರಣ ಶಿಷ್ಟಸಂರಕ್ಷಣ ದುಷ್ಟನಾಶಕ ಮೋಹನ
ಗೋಷ್ಪದ ನಾರೇರಂಧಿಷ್ಟಾನುಸಾರ ಫಲೇಷ್ಟದಾಘದಹನ ೪೦

ಆಪನ್ನ ಜನರ ತಾಪಪಾಪಹರ ಶ್ರೀ ಪರಬ್ರಹ್ಮ ಕೃಷ್ಣ
ಈ ಪರಿ ಹೊರೆವನು ಶ್ರೀಪ್ರಸನ್ವೆಂಕಟಾಧಿಪ ವೃಂದಾರಕೇಷ್ಟ ೪೧

೪೭

ರಾಗ : ಮ್ಲೇಚ್ಛಬೌಳಿ **ತಾಳ : ಅಟ್ಟ**

ಗೋಷ್ಪದ ಜನಕೆಲ್ಲ ಸೃಷ್ಟಿಕೋಟಿಗೆಲ್ಲ ಕೃಷ್ಣನೆ ಪೋಷಕನು
ಮೃಷ್ಟಾನ್ನಪಾನದ ತುಷ್ಟಿದ ಮುಕ್ತಿದ ದುಷ್ಟಜನಾರ್ದಕನು ಪ.

ಒಂದಿನಂಬಿಕೆಯು ಜಾತ್ರೆ ನೆರೆಯಲಂದು ಬಂದು ನಂದಗೋಪನು
ಬಂದಾ ವಿಪ್ರಾನೀಕ ಕುಟುಂಬ ಸಹವಾಗಿ ಮಿಂದು ಸರಸ್ವತಿಯನು
ಸ್ಕಂದನಮ್ಮನಿಗೆ ವಂದಿಸಿ ಪೂಜಿಸ್ಯಾನಂದದಿ ಭೋಜನವ
ಬಂದ ಇಷ್ಟಜನರಿಂದ ಮಾಡಿದನು ಚಂದದಿಂದ ದಾನವ ೧

ವ್ರಜಪತಿಯನು ನುಂಗಿತು ಒಂದು ಅದ್ಭುತ ಅಜಗರವಲ್ಲಿ ಬಂದು
ಸಂಜನ ಗೋಪರು ರಾಮಕೃಷ್ಣ ಹರೆ ಹರೆ ಭಜಕರಕ್ಷ ನೀನೆಂದು
ರಜನಿಯಲ್ಲಿ ಕೊಳ್ಳಿಯುವಿಡಿದಂಜುತ ಅಜಗರನ್ನ ಕೊಂದರಂದು
ಭುಜಗವಂಜದೆ ಗ್ರಸಿಸೆ ಕಂಡನಚ್ಯುತ ಅಜಸ್ಮರರಯ್ಯನಂದು ೨

ತಂದೆಯ ನುಂಗುವ ಅಹಿಯನ್ನು ಪಾದಾಬ್ಜ ಹೊಂದಿಸಿ ಉದ್ಧರಿಸಿದನು
ದಂದಶೂಕಗೆ ದಿವ್ಯಶರೀರಪಾಕ್ಷಣ ತಂದಿತ್ತ ಸರ್ವೇಶನು
ಹಿಂದೆ ವಿದ್ಯಾಧರ ತಾನು ಮುನಿಯ ಶಾಪದಿಂದಹಿಯಾಗಿರಲು
ಇಂದಿರೆಯರಸನ ಅಂಘ್ರಿಯು ಸೋಂಕೆ ಬಂದೀ ಸ್ತೋತ್ರವ ಮಾಡಲು ೩

ವಾಣಿಗಳೆಲ್ಲ ನಿನ್ನಾನಂದಮಯ ಗುಣವನು ಹೊಗಳ್ವಂತೆ ಮಾಡು
ಶ್ರೀನಯ ನಿನ್ನ ಕಥಾಮೃತ ಶ್ರವಣಕೆ ಪಾನದ ಲಾಭವ ನೀಡು
ಪಾಣಿಗಳಿಂ ನಿನ್ನ ಸತ್ಕರ್ಮ ವ್ಯಾಸಂಗವು ನಿನ್ನ ಶ್ರೀಪಾದಕೆ
ದೀನವತ್ಸಲ ನನ್ನ ತಲೆ ವಂದನೆಗೆ ಮಾಡು ಧ್ಯಾನಕೆ ಮನಮಾಡು ೪

Rarest Archiver

ನಿನ್ನ ಮೂರ್ತಿಗಳೆನ್ನ ನೇತ್ರ ಚಿತ್ತದಲಿಟ್ಟು ನಿನ್ನ ದಾಸರ ಸಂಗವು
ಅನಂತ ಜನ್ಮಕೆ ದೊರಕಲಿಯೆನುತ ವಿಮಾನ ಹತ್ತಿ ನಡೆದ
ಈ ನಾಟ್ಯವ ನೋಡಿ ನಂದಾದಿ ಗೋವರು ಆನಂದಭರಿತರಾಗಿ
ಏನಾಶ್ಚರ್ಯವೆಂದಾನಂದವಮಯ ಪ್ರಸನ್ವೆಂಕಟನ ಹೊಗಳಿದರು ೫

೪೮

ರಾಗ : ಸೌರಾಷ್ಟ್ರ ತಾಳ : ಜಕ್ಕಣಿ?

ಅವರೇ ಸುಖಿಗಳು ಅವರೇ ಧನ್ಯರು ಗೋವಿಂದನಾಶ್ರಿತರು
ಸವೆಯದ ಭಕ್ತಿ ಸ್ತವನಗಳಿಂದ ಭವವ ಗೆದ್ದವರು ಪ.

ಆ ವಿದ್ಯಾಧರನು ವಿಮಾನವೈದಿದ ವಿವರವರಿತನು
ಗೋವರಿಗೊಡೆಯನ ಮಗನ ಮಹಿಮೆಯ ಸ್ತವಿಸಿ ನಲಿದನು
ಸವೆಯದಾಶ್ಚರ್ಯ ಕರ್ಮವ ಮನುಜ ದಿವಿಜರ್ಗೊಗಳಲು
ಗೋವ ಗೋವೇರಿಂದ ವ್ರಜ ಪೊಕ್ಕನು ಭುವನದೊಡೆಯನು ೧

ಶ್ರೀಮನೋಹರ ಸಖಿಯರ ಬೆರಸಿ ರಾಮಸಹ ನಿಶದಿ
ಕಾಮನೋತ್ಸವದಿ ವನವನ ತಿರುಗೆ ಕಾಮಿನೇರ್ ಸುಸ್ವರದಿ
ಪ್ರೇಮ ಸುಹೃದ್ಗಾನ ಲಾಲಿಸುತಿರಲು ಕೌಮುದಿಯ ಕಾಶದಿ
ಕ್ಷೌಮಾಂಬರನುಟ್ಟು ಸ್ರಗ್ಗಂಧಲೇಪನದಿ ಮತ್ತಳಿಗಳ ತೆರದಿ ೨

ವಿಶ್ವಾನಂದಕರು ರಾಗವ ಮಾಡಲು ವಿಶ್ವಗೋಪಿ ಜನರು
ಸುಸ್ವರ ಮೂರ್ಛೆಯೊಳು ವಸ್ತ್ರಾಭರಣ ಸ್ವಕೀಯವೆಂದರು
ಸುಶ್ವಾಸೋಚ್ಛ್ವಾಸವ ಬಿಡುತ ಮುಕುಂದ ಶಶ್ವದೇಕೇಶನೆಂದು
ಸುಸ್ವಭಾವ ಹೊಂದಿ ಪೂತಾಂಗೇರು ತಾವು ಅಸ್ವತಂತ್ರ್ಯರಾದರಂದು ೩

ಪೂಗೋಲನಬ್ಬರ ನಿಬ್ಬರವಾಗಿದೆ ಶ್ರೀಗೋವಿಂದ ಕಾಯಿದನು
ಆಗೊಬ್ಬ ಖಳನು ಶಂಖಚೂಡನು ಈ ಗೋಪೆರೊಯ್ಯೆ ಬಂದನು
ನಾಗಗಮನೇರು ಹರೆ ಕೃಷ್ಣರಾಮ ನೀ ಗತಿ ಕಾಯೆಂದರು
ಈಗಂಜಬೇಡ್ವೆಂದು ಅಗ್ರಜನ ಸಹ ಬೇಗದಿ ಬೆಂಬತ್ತಿದನು ೪

ರಾಮಾಧೋಕ್ಷಜರು ಚೋರನ ಬೆನ್ನಟ್ಟಿ ಶ್ರೀಮತ್ತಾಳ ಹಸ್ತದಿ
ಆಮತ್ತದೈತ್ಯನ ಮಸ್ತಕವಿಳುಹಿ ಸುಮೌಳಿರತ್ನವ ಕಿತ್ತಿ

Rarest Archiver

ರಾವಂಗೆ ಕೊಟ್ಟನು ವಾಮಾಕ್ಷೇರ ಬಿಡಿಸಿದ ಮನೋಹರ ಹರಿ
ಕಾವರ್ನಯ್ಯನ ತಾವ್ ಮೊರೆಹೊಕ್ಕರು ಸ್ವಾಮಿ ದುಷ್ಟಕುಲಹರೆ ೫

ಹೇ ಕೃಷ್ಣ ಅಚ್ಯುತಾ ದುಃಖಹರ್ತಾ ಭಕ್ತರಕಾಮಧೇನು ಮಂಕುಂದ
ಹೇ ಕೇಶಿಸೂದನ ಪೂತನಾಂತಕ ದೇವ ಚಕ್ರವಾತಘ್ನಾನಂದ
ಹೇ ಕಂಜಲೋಚನ ಗೋಪಿಕಾಮನೋಹರ ಹೇ ಕಾಳಿಂದಿವಿಹಾರ
ನಾಕೇಶಮದಹರ ಗೋವರ್ಧನೋದ್ಧಾರ ಲೋಕೈಕ ಸತ್ಸುಂದರ ೬

ಕಾಲಿಯಮದಹಾಹಿಕಾಮಿನೇಸ್ತುತಿಪ್ರಿಯ ಭೂಲಲನಾ ಭಯಘ್ನ
ಬಾಲಕ ಲೀಲಾವಿಶಾಲ ಶ್ರೀಲೋಲ ಭೂಲೋಲ ದುರ್ಗಾಂಗನೇಶಾ
ಮಾಲಾಲಿತಾಂಘ್ರಿ ತ್ರಯಾಲಯ ಸುರಮುನಿಲಾಲಿತಚರಣಾಂಬುಜ
ತ್ರಿಲೋಕಸೃಷ್ಟ್ಯಾದಿಮೂಲಕಾರಣ ಗುಣಜಾಲ ಶ್ರೀ ನಾರಾಯಣ ೭

ಪೋಕ ಶಂಖಚೂಡ ಬಂದೆಮ್ಮನೊಯ್ಯಲು ನೀ ಕಾಯಿದೆಯೆ ದಯಾಳು
ಸಾಕು ನಮೊ ನಮೊ ನಮೊ ನಮೊಯೆಂದು ಅನೇಕ ಸ್ತೋತ್ರವ ಮಾಡಲು
ಆ ಕನ್ಯೆರ ಭಕ್ತಿಭಾವಕೆ ಮೆಚ್ಚಿದ ಗೋಕುಲದವರಿಗೆಲ್ಲ
ವೈಕುಂಠವೇ ಫಲ ಮಾಡಿಟ್ಟ ಶ್ರೀಕೃಷ್ಣ ಆಕಳಕಾವ ಚೆಲ್ವ ೮

ಈ ಕೃಷ್ಣಚರಿತ್ರೆ ಏಕಾಂತ ಭಕ್ತಿಲಿ ಲೋಕೇಶ ಪರೀಕ್ಷಿತ
ತಾ ಕೇಳಿದ ಗುರು ಶುಕಮುನೀಶನ ವಾಕ್ಯಾಮೃತ ತತ್ವತ:
ಆ ಕರ್ಣಪುಟದಿಂದುಂಡು ತೇಗಲು ಲೋಕವೆಲ್ಲ ಪಾವನ
ಶ್ರೀಕಾಂತ ಪ್ರಸನ್ವೆಂಕಟೇಶನ ಲೀಲೆಯನೇ ಕೇಳಿದವ ಜಾಣ ೯

೪೯

ರಾಗ :ದೇಸ್ ತಾಳ : ಅಟ್ಟ

ವೇಣುಗೀತ

ಜಾಣೆ ಗೋಪೇರೊಂದುಗೂಡಿ ವೇಣುಗೋಪತಿಯ ದಿವ್ಯ
ವೇಣುಗೀತೆಯ ಹೇಳಿದರೆ ಗಾನರಸದಲಿ ಪ.

ಜ್ಞಾನಚರ್ಯಾನುದನ್ನ ರಾಣಿ ಕೇಳಿದಳೆಂದು ವ್ಯಾಸ
ಸೂನು ಪೇಳ್ದ ಭೂಪತಿಗೆ ಆನಂದದಲಿ ಅ.ಪ.

Rarest Archiver

ನಂದನೋದ್ಯಾನಕಧಿಕಾನಂದವಿದ್ದ ವನಗಳಲ್ಲಿ
ಬಂದು ಕೃಷ್ಣ ಚರಿಸುವ ಗೋವೃಂದದಿ ನಿತ್ಯ
ಇಂದುಮುಖಿಯರು ಪ್ರಿಯನ ನೋಡಿ ಕಂದರ್ಪನ ಸಾಯಕಕ್ಕೆ
ನೊಂದು ವೇಣುವೈಚಿತ್ರ್ಯದ ಚಂದ ಹೊಗಳಂತ ೧

ವಾಮ ಬಾಹ್ವಿಲಿಟ್ಟು ಗೋಣು ವಾಮಕಪೋಲವು ಭೂ
ಭ್ರಮಣ ವಿಲಾಸಾರ್ಪಿತ ಹೇಮವೇಣುವ
ಕೋಮಲಾಂಗುಲಿಲಿ ರಾಗ ನೇಮಿಸೆ ಮಂಜುಳಸ್ವನಾ
ಕಾಮಿನೇರು ಕೇಳುತಲಿ ಕಾಮಬಾಣದಿ ೨

ವ್ಯಾಮೋಹಿಪಂತೆ ಮಾಡಿದ ಶ್ರೀ ಮುಕುಂದಾಂಬರದಲಿಹ
ವೈಮಾನಿಕ ಸಿದ್ಧಪತ್ನೇರ್ ಭ್ರಮೆಗೊಂಡರು
ಕಾಮಬಾಣನಟ್ಟು ಲಜ್ಜೆಯು ಮರೆದು ಜಗುಳಿ ಬಿದ್ದ
ಹೇಮಾಂಬರಾಭರಣಗಳ ನೇಮಗಾಣರು ೩

ಕೇಳಿರಿ ಸ್ತ್ರೀಜನರುಗಳಿರಾ ಮಾಲೆ ಮಿಂಚಿನ ಚೆಲುವ
ನೀಲನೀರದ ಶಾಮಲನ ಲೀಲೆ ವೇಣುಧ್ವನಿ
ಮೇಲು ನಾದ ಕೇಳಿ ಮಾತ್ರ ಬಾಲೇರಿಗೆ ಮೋಕ್ಷಾನಂದ
ಕಾಲ ಕಾಲ ಕಣಿಸುವ ಗೋಪಾಲನಂದನ ೪

ಆವ ವಿಚಿತ್ರ ರಾಗವೋ ಆವ ಮೋಹನ ಕರವೋ
ದೇವ ಗಾಯಕಿಯರೆಲ್ಲ ಕೋವಿದರಾಗಿ
ಗೋವು ಮೃಗಾಳಿಗಳೆಲ್ಲ ಭಾವಶುದ್ಧಿಯಿಂದ ಕೇಳಿ
ದೇವೇಶನ ಪದದಿ ತಮ್ಮ ಜೀವ ನೀಡಲು ೫

ಹಿಂಡು ಗೋವು ಹರಿಯ ಕೃತಿಯ ಕಂಡು ಧ್ಯಾನದಲ್ಲಿ ತಂದು
ತುಂಡ ನೆಗಹಿ ಬಾಲವೆತ್ತಿಕೊಂಡು ನಿಂತವು
ತಂಡ ತಂಡ ಒಟ್ಟಿದವು ಹಂಡೆ ಹವಳಿ ಹುಲ್ಲುಗಚ್ಚಿ
ಕೊಂಡು ನಿಂತವಲ್ಲಿಗಲ್ಲಿ ಮಂಡಲಿದ್ದವು ೬

ಕರ್ಣನಿಲ್ಲಿಸಿ ಎವೆಯನಿಡದೆ ಸ್ವರ್ಣವೇಣುವಿನ ರವ
ಮನ್ನಿಸಿ ಮುಕುಂದನಲ್ಲಿ ಮನವನಿಟ್ಟವು
ಘನ್ನ ನಿದ್ರೆಯಾಯಿತು ಬದಿಯ ತನ್ನ ಕರುವ ನೋಡಲಿಲ್ಲ
ಬಣ್ಣವಿಟ್ಟು ಬರೆದ ಚಿತ್ರವನ್ನು ಹೋಲ್ವವು ೭

Rarest Archiver

ಪೂಗೊಂಚಲು ಬರುಹಿ ಬರ್ಹ ಗೋಗೋಪರ್ಗೆ ಕೊಟ್ಟು ಮುಡಿದು
ತಾ ಗೈರಿಕ ಲೇಖಿಸಿಕೊಂಡಾಗ ಎಲ್ಲರು
ಸೋಗನಾಂತು ಒಪ್ಪಿದರು ಪೂಗಣೇರನಂತತೇಜ
ಯೋಗಿಜನಹೃದಯನಿಲಯಾಮೋಘ ಸುಂದರ ೮

ಪ್ರೇಮದಿಂದ ಕರೆವನಾವ ಗೋಮಕ್ಕಳ ಸಂದೋಹದಿ
ರಾಮನೊಡನೆ ವೇಣುಸ್ವರದಿ ಸ್ವಾಮಿ ಅಚ್ಯುತ
ಹೈಮವಂಶನಾದಸಂಧೆಗೆ ಆ ಮಹಾನದಿಗಳೆಲ್ಲ
ತಾ ಮುಂದಕ್ಕೆ ಪ್ರವಹದೋರವು ವ್ಯಾಮೋಹಿಸುತ ೯

ತಾ ಮತ್ತೆ ಹಿಂದಕ್ಕೆ ಬಂದು ಸೋಮಕುಲಪನಂಘ್ರಿಗಳನು
ಆ ಮಹಾ ಭಂಜೋರ್ಮಿಗಳಲಿ ಕಾಮಿಸ್ಯೊಪ್ಪಿದುವು
ಆ ಮಹಿಮೆ ನೋಡಿ ಸುರರಸ್ತೋಮ ಸಿದ್ಧಗಂಧರ್ವರು
ವ್ಯೋಮ ಮಂಡಲದಿ ನಮೊ ನಮೊ ಎಂದರು ೧೦

ಆದಿಪುರುಷ ಸ್ಥಿರೈಶ್ವರ್ಯನಾದ ದೇಪವನಗಿರಿಯಲಿ
ಊದಿದ ಷಡ್ರಸದ ವೇಣು ಗೋಧನದ ರಕ್ಷ
ವೇದಾನಂತಾವೇದ್ಯ ಕೃಷ್ಣ ಮಾಧವ ಮುಕ್ತಾರ್ಥಿ ತಾ ಶ್ರೀ
ಪಾದಪದ್ಮಾಮೋದ ಪ್ರಮೋದ ಸುಪಕ್ಷ ೧೧

ಅಪವರ್ಗ್ಯರಿಂದ ಸ್ತೋತ್ರ ಶ್ರೀಪತಿ ಮಾಡಿಸಿಕೊಂಬ
ಗೋಪರ ಸ್ತೋತ್ರಕೊಪ್ಪಿದ ಶ್ರೀಪರಬ್ರಹ್ಮ
ಶ್ರೀಪ್ರಕೃತಿ ಇವನ ಗುಣ ರೂಪಲಾವಣ್ಯಕ್ಕೆ ಸೋತ
ಳೀ ಪೆಣ್ಗಳಿಗೆ ವಶವಿಡಂಬನ ತೋರ್ಪನಮ್ಮಮ್ಮ ೧೨

ಈ ವನದ ತರುಲತೆಯು ಶ್ರೀವಿಷ್ಣುವಶವಾದವೆಂಬ
ಭಾವತೋರಿ ನಮಿಸಿದವು ಪೂವು ಫಲದಿಂದ
ತೀವಿದ ತೋಷದಿ ವೇಣುರಾವರಸವನುಂಡು ಕೊಬ್ಬಿ
ದಾವು ತಲೆದೂಗಿದವು ಕೋವಿದರಂತೆ ೧೩

ಪ್ರೇಮ ಹರುಷದಶ್ರುಧಾರ ಆ ಮರಂಗಳ್ವಿಟಪಸಾರ
ಭೂಮಿಗಿಳಿವಾಶ್ಚರ್ಯ ನೋಡಿ ಕಾಮಿನೇರೆಲ್ಲ
ಶ್ರೀಮನೋಹರನ್ನ ಕೀರ್ತಿ ಧೀಮಂತ ಜನರೆ ಸ್ಫೂರ್ತಿ
ಪಾಮರರೇನು ಬಲ್ಲರು ಈ ಮಹಾಲೀಲೆ ೧೪

Rarest Archiver

ಕೆಳದಿ ಕೇಳೆ ಗಂಧ ನಿಲೋತ್ಪಲದಾಮೋದಮಯಂದ ವಕ್ಷಾ
ನಿಲವನುಂಡು ಸೊಕ್ಕಿ ಚರಿಪ ಅಳಿವಿಂಡುಂಗಳು
ಅಲಘುಗಾನ ಕೇಳಿ ಮುಕುಂದ ತಲೆದೂಗಲು ರಂಹಸದಿ
ನಳಿನಾಕ್ಷನ ಬಳಿಗೆ ಬರಲು ಸಾರಸಹಂಸಗಳು ೧೫

ಲಲಿತವೇಣುಸಂಧೆಯುನುಂಡು ಕಲವೇರಿ ಕೂಲದೆ ಮೌನದಿ
ಬಳಿಯಲ್ಲರೆಗಣ್ಣ ಮುಂಚ್ಚಿ ನಳಿನನಯುನನ
ಚೆಲುವಿಕೆ ಧ್ಯಾನೋಪಾಸನೆಗಳಲಿ ಪರಮಹಂಸರಂತೆ
ನಲಿವ ಸಾರಸ ಹಂಸಗಳ ಬಳಗವನುದಿನ ೧೬

ಅಣ್ಣಗೋವರಿಂದ ಕೂಡಿ ಚಿನ್ಮಯಅಧರದಿ ವೇಣು
ವನ್ನೂದುವ ಹೆಸರುಗೊಂಡು ಕನ್ಯೆ ಗೋಪೆಯುರ
ತನ್ನಾನಂದದಿ ತಾ ಪೂರ್ಣ ಜನರ ವಿಡಂಬ ನಟನೆ
ಯನ್ನು ತೋರ್ವ ಅಜ್ಞರ ಮೋಹನ್ನ ಸುಂದರ ೧೭

ಘನ ಮುಂಜುಳ ರವದಿ ಗೋವರ್ಧನ ಗಿರಿಯು ಶಬ್ದಿಸಲು
ಘನಗಂಜಿ ಮೆಲ್ಲ ಮೆಲ್ಲನೆ ಸ್ವನಿವಾಸ್ಯೆದಿದವು
ಘನಶಾಮಲ ನಮಗೆ ಬಂಧು ತನುಮುನದಿ ಅವಗೆ ಸ್ತೋತ್ರ
ವನು ಮಾಡುವೆವೆಂಬ ಭಯದಿ ಹೆಣಗಿ ನಿಂದುವು ೧೮

ಮಹದತಿಕ್ರಮಣಕಂಜಿ ಮಹಪೂಜೆಯುಲಿ ಒಲಿಸುವಂದದಿ
ಅಹಸ್ಸಿನಲ್ಲಿ ಪುಷ್ಪವೃಷ್ಟಿ ಬಹಳಗರೆದುವು
ಮಹಿಯೊಳಗೆ ಹರಿಯ ಆಜ್ಞೆ ವಹಿಸಿದವನಿಗೇವೆ ಮುಕ್ತಿ
ವಹಿಸದವನೆ ದ್ರೋಹಿಯುವಗೆ ಸಹಜಾಂಧಂತಮುವು ೧೯

ಶಶಿವದನೆ ನಿನ್ನ ಸೂನು ಕುಶಲಮರ್ಯ ಗೋವರೊಳು
ಅಸಮುವೇಣುವಿಂದ ಸದ್ರುಸದಿ ಗಾಯುನವ
ಹೊಸ ಹೊಸ ಸುಮುಧುರ ಗೀತ ಎಸೆವ ಬಿಂಬಾಧರದಿ ಇಟ್ಟು
ಶಿಶುಗೆಳೆಯುರ ಶಿಕ್ಷಿಪ ಮುಶಗಾಯುನವ ೨೦

ದಿವಿಯಲಿ ನೆರೆದ ಸರಸಿಜೋದ್ಭವ ಭವೇಂದ್ರ ಮುಖ್ಯರಾದ
ಕವಿಗಳಾನತ ಕಂಧರದಿ ಕಿವಿಯುಗೊಟ್ಟರು
ಕವಿದು ಮೋಹವಿಸ್ಮಿತದಲಿ ಸವೆಯುದ ಶ್ರೀಹರಿಯುಲೀಲೆ
ಸವಿರಸವ ಸವಿದಾನಂದ ಭವನವಿಡಿದರು ೨೦

Rarest Archiver

ಗೋಖುರಾರ್ದಿತ ಗೋಷ್ಠಭೂಮಿ ಶ್ರೀಕಂಜಾಂಕುಶವಜ್ರಧ್ವಜ
ರೇಖಾಂಕಿತ,ಶ್ರೀ ಪಾದಾಬ್ಜ ಸೋಂಕಿ ಒಪ್ಪಲು
ನಾಕದವರು ವ್ರಜದವಾಸ ಬೇಕೆಂದು ಬಯಸಿದರಲ್ಲಿ
ಶ್ರೀಕೃಷ್ಣಾಂಘ್ರಿಯಾಶ್ರಿತರ್ಗೆ ವೈಕುಂಠವ್ಯಾಕೆ ೨೨

ಶ್ರೀರವಣ ಸೌಂದರ್ಯಸಾರನ್ನ ಮಾರ್ಗದಿ ಕಂಡು
ಸಾರಂಗಾಕ್ಷೇರ ವಿಲಾಸಕೆ ಮೇರೆದೋರದು
ಸ್ವರ ವೇಣುರಸಾಯನಕ್ಕೆ ನಾರೇರಿಚ್ಚೆ ಹಬ್ಬಲಾಗೆ
ಮಾರನ ಮಾರ್ಗಣರಾಶಿ ತೂರುತಿದ್ದುವು ೨೩

ತನು ಮನೆಯು ಮರೆದರವರು ಕನಕಭಾದಂಬರ ಜಗುಳಿರೆ
ಇನಿತು ಎಚ್ಚರಿಲ್ಲವರ್ಗೆ ಮುನಿಗಳಂದದಲಿ
ಫಣಿಧರ ಗೋಪು ವೇಸಂತೊಪ್ಪೆ ಗೆಣೆಯಂಸದಿ ಸ್ಕಂಧವಿಟ್ಟು
ಕ್ವಣಿತ ವೇಣು ನುಡಿಸುತ್ತ ಪೋಪ ವನದಿ ವನಮಾಲಿ ೨೪

ಕೃಷ್ಣಸಾರಸತಿಯರ್ತಮ್ಮ ಪುಟ್ಟ ಮರಿಗಳ ಮನೆಯ ಬಿಟ್ಟು
ಕೊಟ್ಟಚ್ಯುತನ ರೂಪವನ್ನು ದಿಟ್ಟಿಸಿದವು
ಕೃಷ್ಣನ್ನ ಲಾವಣ್ಯಾಮೃತವ ಗಂಟ್ಟುಕರಿಸಿ ಕಂಗಳಿಂದ
ಗೋಷ್ಠನಾರಿಯರನ್ನು ಪೋಲ್ದು ತುಷ್ಟಿಸಿದವು ೨೫

ಕುಂದ ಕುಸುಮಮಾಲೆ ತುಳಸಿಗಂಧ ನಿಲೋತ್ಪಲಗಾತ್ರ
ವೃಂದ ಗೋಧನರಕ್ಷಕ ನಂದ ನಿನ್ನ ಪುತ್ರ
ಅಂದು ಮಲಯಜಾನಿಲವ ಹೊಂದಿದ ಯಮುನಾ ತೀರದಲ್ಲಿ
ಮಂದಮಂದ ಗತಿಯ ಮಾಳ್ಪ ಸುಂದರ ನೇತ್ರ ೨೬

ಮಲಯಜಮಾರುತನ ಗಂಧ ಸುಳಿವಲ್ಲಿ ಪಾಲಕರು ಬಂದು
ಲಲಿತಗಾತ್ರದ ಗಾಯಕರು ಚೆಲುವ ನಿಂತಿದ್ದ
ಬಳಿಯಲಿ ನಿಂತು ಭಕ್ತಿಯಿಂದ ಬಲುಸ್ತೋತ್ರವ ಮಾಡುತಿರಲು
ಬಲನ ತಮ್ಮ ಭಜಕರಘವ ಕಳೆದ ಮುಕ್ತಿದಾ ೨೭

ಭಜಕಾಗಾಧ ಪುರುಷಸಾರ ವ್ರಜಕೈಸಾಹ ಸಮಯದಲ್ಲಿ
ಸುಜನರಿಂದ ಸೇವಿತನಾದ ನಿಜಸುಖಾಂಬುಧಿ
ಸ್ವಜನಗೋವಿಪ್ರವತ್ಸಲಾಂಬುಜಸಖನ್ನ ಅಸ್ತಮಯದ್ಯ
ಗ್ರಜನ ಕೂಡಿ ಬಹನು ಗೋರಜದ ಲಗ್ನದಿ ೨೮

Rarest Archiver

ಗೋಖುರೋದ್ಭವದ ಧೂಳಿ ಶ್ರೀಕರಾಂಗದಲ್ಲಿ ತಾಳಿ
ಶ್ರೀಕೃಷ್ಣ ಕೊಳಲನೂದತ ಆಕಳೊಡನೆ
ಗೋಕುಲವ ಹೊಂದಲಾಗಿ ನಾಕಜನರು ಸುಹೃಜ್ಜನವಾ
ನೇಕ ಸ್ತೋತ್ರ ಮಾಡುವರು ಸಾಕಿನ್ನದಲೆ ೨೯

ಗೋವು ಗೋವರ ತಾಪವ ನಿವಾರಿಸುತಿಹ ಜವದಿ
ದೇವಕೀಜಠರಾಬ್ಧಿ ಚಂದ್ರ ದೇವಗಣೇಂದ್ರ
ಭೂವಿಲಾಸಪಾಂಗದಿಂದ ಗೋವಳೇರಿಗಮಿತಾನಂದ
ವೀವುತಿದ್ದ ನಿರುತದಲ್ಲಿ ಪಾವನಗುಣಸಾಂದ್ರ ೩೦

ಬದರಪಾಂಡುರಬಿಂಬವದನ ಕುಂಡಲಕಪೋಲ
ಪದುಮರಾಗ ವಜ್ರನೀಲ ನವರತ್ನಾಭರಣ
ಯದುಪತಿ ಯಾಮಿನಿಯಲ್ಲಿ ವಿಧುವಿನ ಬೆಳದಿಂಗಳಲ್ಲಿ
ಸುದತಿಯರ ಕ್ರೀಡೆಯಲಿಪ್ಪ ಮಂದಗಜಾಭನು ೩೧

ಗೋಮಂತಿ ಗೋವಳರು ದಿವದಿ ವ್ಯೋಮಕ್ರಾಂತನ ತಾಪಹೊಂದೆ
ಸೋಮಕುಲಜ ಪರಿಹರಿಸಿದ ಶ್ಯಾಮಸುಂದರ
ಕಾಮಿನೇರ ಸನ್ಮುಖದಿ ಸ್ವಾಮಿ ತೋರುತಿಹ ಸತತ
ಭಾಮೆಯರ ಭಕ್ತಿಭಾವಕೆ ಮನೋಹರ ೩೨

ವ್ರಜದ ಗೋಪೇರು ಕೃಷ್ಣನ್ನ ತ್ರಿಜಗಾಶ್ಚರ್ಯದ ಲೀಲೆ
ನಿಜಭಕ್ತಿಯಲಿ ಪಾಡಿ ಸುಖಿಸಿ ಭಜಿಸುತ್ತಿದ್ದರು
ಸುಜನರು ತನ್ಮನಸ್ಕೆಯರು ಗಜರಾಜಗಾಮಿನಿಯರು
ದ್ವಿಜರಾಜವದನೆಯರು ದ್ವಿಜದೇವಪ್ರಿಯರು ೩೩

ಈ ವೇಣುಗೀತಾಮೃತವ ದಾವ ಪ್ರಾಣಿಗಳ್ಹೇಳುವರು
ಭಾವಶುದ್ಧಿಲಿ ಕೇಳುವರು ಕೋವಿದರವರು
ಪಾವನ ಕೃಷ್ಣಚರಿತ್ರೆ ಶ್ರೀವ್ಯಾಸ ಮುನೀಂದ್ರತನಯ
ಶ್ರೀವಿಷ್ಣುರಾತಗೆ ಹೇಳಿ ಸೇವಿಸಿದನು ೩೪

ಶ್ರೀವರ ಪ್ರಸನ್ನವೆಂಕಟ ದೇವದೇವನು ನಮಗಿಷ್ಟವ
ನೀವನು ಸಂದೇಹವಿಲ್ಲ ದೇವಸುರತರು
ಆವ ಕಾಲಕಾಲದಲ್ಲಿ ಸತ್ಸೇವಕವತ್ಸಲ ಸತ್ಯ
ಭಾವುಕರು ಹರಿವ್ಯಾಸಂಗದ ಜೀವನ್ಮುಕ್ತರು ೩೫

Rarest Archiver

೫೦

ರಾಗ : [ಜಂಜೂಟಿ] ತಾಳ : [ಆದಿತಾಳ]

ಕೃಷ್ಣನಾಶ್ರಿತ ಶಿಷ್ಟರೆಲ್ಲರು ತುಷ್ಟಿಲಿರಲು ಅರಿಷ್ಟನೆಂಬವ
ದುಷ್ಟಕಂಸನ ಇಷ್ಟಕಾರ್ಯಕೆ ಗೋಷ್ಠಕೈತಂದ
ವಾರ್ಷ್ಣಿಬಲರನು ನಷ್ಟ ಮಾಡುವ ಭ್ರಷ್ಟವೃಷಭನು ಕಷ್ಟಬಡಿಸಿದ
ಪುಷ್ಟ ಕಕುದಿಯಿಂ ಕಂಪಿಸಿದನು ಮಹಿಯನತಿಘೋರ ೧

ಕಾಲ ಕೆದರುತ ಬಾಲ ನಿಗುರಿಸಿ ಸೀಳಿದನು ಮೇಘಗಳ ಕೋಡಿಲಿ
ಮೇಲೆ ಮೇಲ್ ಮಲಮೂತ್ರ ಬಿಡುತಲಿ ಆಲಿ ಕೆಂಪಡರೆ
ಬಾಲಕರ ಬಾಲೆಯರ ಗೋಗಳ ಮೇಳವಂಜಿಸಿ ಡುರುಕಿಹಾಕುತ
ಸ್ಥೂಲ ಭೀಕರ ಗರ್ಭಿಣಿಯರ ಬಸಿರ ಕೆಡಹಿದನು ೨

ಖೂಳನುಪಟಳ ತಾಳಲಾರದೆ ಗೋಳಿಡುತ ಓಡಿದರು ಸಕಲರು
ಪಾಲಿಸೈ ಗೋವಿಂದ ರಾಮಾಯೆನುತ ಮೊರೆಯಿಡುವ
ಬಾಲೆಯರ ಆರ್ತಸ್ವರಂಗಳ ಕೇಳಿ ಅಂಜದಿರೆನುತ ಅಭಯವ
ಹೇಳಿ ಖಳನೊಳು ಮಾತನಾಡಿದ ಶ್ರೀಲಲನೆಯರಸ ೩

ಎಲೆ ದುರಾತ್ಮಾರಿಷ್ಟವೃಷಭನೆ ಎಳೆಯರನು ಗೋವತ್ಸಗೋವರ
ಲಲನೆಯರನಂಜಿಸುವ ವೀರನೆ ಬಾರೊ ನೀ ನಮ್ಮ
ಬಳಿಯೆ ಶೀಘ್ರದಿ ಫಲವನೀವೆವು ಇಳೆಗೆ ಭಾರಕ ದುಷ್ಟಹರ್ತರು
ಬಲಮುರಾರ್ದರು ತಿಳಿಯಲಿಲ್ಲವೆ ಮೃತ್ಯು ನಿನಗೆಂದು ೪

ವೀರಧ್ವನಿಯಿಂ ಕರೆದನಚ್ಯುತ ಕ್ಷೂರಶೃಂಗನು ಗೋಣತೆಗ್ಗಿಸಿ
ಧಾರುಣಿಯ ಕೆದರುತ್ತ ಸುರಪನ ಕರದ ವಜ್ರದೊಲು
ವೀರವೇಗದಿ ಬಂದು ತಗುಲಿದ ಶೌರಿ ಗೆಳೆಯರ ಪೆಗಲಿನಲಿ ನಳಿ
ತೋಳ ಹೇರಿಯೆ ನಗುತ ನೋಡಿದ ದುಷ್ಟಚೇಷ್ಟೆಯನು ೫

ಸಖರನುಳಿದಚ್ಯುತನು ಬರುತಿಹ ಕಕುದಿಯನು ಕೆಡಹಿದನು ಧರೆಯಲಿ
ಪ್ರಖರ ಪುನರಪಿ ಎದ್ದು ಕೋಪದಿ ಕೆಣಕಿದನು ಹರಿಯ
ನಿಖಿಳರೊಡೆಯನವನವಿಷಾಣ[1][ವ][1] ಸುಕರಪಲ್ಲವದ್ಧಿಡಿದುಕೆಡವಿದ
ಕುಖಳನ್ನಿಂಗಾಲ್ವಿಡಿದು ತಿರುಗಿಸಿ ಅಪ್ಪಳಿಸಿದಿಳೆಗೆ ೬

ಮರ್ದಿಸಿದ ಮುಂಗಾಲಿನಿಂದಲಿ ಆರ್ದ್ರವಸ್ತ್ರವ ಹಿಂಡಿದೊಲ್ ಖಳ
ಮರ್ದಕಿತ್ತಿದ ಕೋಡೆರಡರಲಿ ಚೂರ್ಣಿಸಿದ ಬಳಿಕ

---
1 ಡ

Rarest Archiver

ಕಾರ್ದ ರಕ್ತವ ಕಂಗಳೆರಡು ಉದಿರ್ದವವ ಮೃತನಾದ ಯಮಪುರ
ಸಾರ್ದ ಸುರರಂಬರದಿ ತಂತಿಸಿದಪೂರ್ವಳೆಯಂಗರೆದಂ ೭

ಸುರಮುನಿಗಳೊಗ್ಗೂಡಿ ತಂತಿಸಿದರ್ ಹರುಷದಲಿ ಅಗ್ರಜಗೆಳೆಯರಿಂ
ವರಗೋಪಂತಿಗಳ ಹಿಂಡಿನಿಂ ಮುರಹರ ವ್ರಜವ ಪೊಗಲು
ಚಿರಮಹಿಮನದ್ಭುತ ಸುಕರ್ಮವ ಪರಮಂತಿ ಗೋವಳರು ತಂತಿಸಲಂ
ಕರುಣಪೀಯೂಷ ಕರುಣದೃಷ್ಟ್ಯಾನಂದದಲಿ ಹೊರೆದ ೮

ತನ್ನ ನಂಬಿದ ಜೀವರಿಗೆ ಮತ್ತನ್ಯರಿಂ ಬಾಧೆಯು ಲಪಾದರೆ
ತನ್ನ ಬಿರುದಿಗೆ ಹಾನಿಗಾಂಬುವ ದೀನವತ್ಸಲನಂ
ಧನ್ಯರನು ಮಾಡಿದನು ವ್ರಜ ಪಾವನ್ನವನಂ ಮಾಡಿದನು ಯಶೋದೆ ನಂ
ದನ್ನ ಪುಣ್ಯದ ಫಲವು ಶಿರಿಪರಸನ್ನವೆಂಕಟೇಶ ೯

೫೧

ರಾಗ : ಕನ್ನಡ ಕಾಂಬೋಧಿ **ತಾಳ : ಏಕತಾಳ**

ಕೃಷ್ಣನಾಶ್ರಿತರಿಗ್ಯಥೇಷ್ಟ ಜಯವು ಶ್ರೀ ವಿಷ್ಣು ವೈಷ್ಣವದ್ರೋಹಿಗಳಿಗೆ
ಕಷ್ಟದ ತಮಸು ವಿಶಿಷ್ಟ ದುಃಖಾಲಯ ದುಷ್ಟರಿಗಪಜಯವಾಗೆ ಪ.

ಜಾತಃ ಕಂಸವಧಾರ್ಥನು ಹರಿಯೆಂಬ ನೀತಜ್ಞನಂ ಮುನಿಬ್ರಹ್ಮ
ರಾತನಂ ಶ್ರೀತರುಣಿ ಪ್ರೀತಿಗೆ ಬಂದನು ಆತುರದಲ್ಲಿ ಸಂಭ್ರಮ್ಮ
ಪಾತಕಿ ಕಂಸಗೆ ಪಾತಕ ರೀತಿಯ ಬೋಧಿಸಿದ್ದೀಗೆ
ತಾತನಂ ನಂದನಂ ಮಾತೆ ಯಶೋದೆಯಂ ಘಾತಿಸಿಕೊಳದ ಕನ್ಯೆಳಿಗೆ ೧

ದೇವಕಿಜಠರಜನಾ ವಾಸುದೇವನಂ ದೇವಿ ರೋಹಿಣಿಸುತ ಬಲನು
ದೇವಿ ಯಮುನೆ ದಾಟಿ ಗೋಪಪಳ್ಳಿಲಿ ವಸುದೇವನಿಟ್ಟಾ ಕನ್ಯೆಯಳನಂ
ದೇವಕಿಗಿತ್ತನು ಈ ವಿಧ ಕಾರ್ಯ ನೃದೇವ ಎಚ್ಚರವ ಹೇಳುವೆನಂ
ಆ ವೀರರಿಬ್ಬರು ಬೆಳೆದರಂ ವ್ರಜದಲಿ ಕಾವರು ದೇವಕ್ಕಳನ್ನು ೨

ನಂದನು ಶೌರಿಗೆ ಬಂಧುಂ ಸ್ನೇಹಿತ ಬಲು ಕಂದ ವೀರರು ಉಭಯೆತರುಂ
ಕೊಂದರಂ ನಿನ್ನ ಮುಂದಿಯ ಭೋಜಪ ಸಂದೇಹವಿಲ್ಲವಹಿತರುಂ
ಎಂದನೆ ಉಗ್ರದಿ ಬೆಂದನಂ ಸಾಣೆಯು ಹೊಂದಿದ್ದ ಕತ್ತಿಯವಿಡಿದ
ಇಂದೇ ಆನಕದುಂದುಂಭಿ ಸ್ತ್ರೀಸಹ ಕೊಂದೆನೆನುತ ಖಳನುಡಿದ ೩

Rarest Archiver

ನಾರದ ಮುನಿಯು ನಿವಾರಿಸಿದನು ಮುಂದೆ ಕಾರಣ ಉಂಟುಳುಹೆನಲು
ಮೀರದೆ ಆಜ್ಞೆಯ ಶೌರಿಯ ಸತಿ ಸಹ ಕಾರಾಗೃಹದಿ ಬಂಧಿಸಲು
ಕ್ರೂರನು ಲೋಹದ ಕಾರುಕರಿಗೆ ಹೇಳಿ ನಾರಾಯಣ ಸ್ಮರಣೆಯಿಂದ
ಹಾರಿದ ಗಗನಕೆ ಮಾರಕ ಕೇಶಿಗೆ ಧಾರುಣಿಪತಿ ನೇಮಿಸಿದ ೪

ಎಲೆ ಕೇಶಿಯೆ ಗೋವಳರ ಪಳ್ಳಿಗೆ ಹೋಗು ಆಲಸದೆ ಕೃಷ್ಣಬಲರನು
ಕೊಲು ಗಹನರವರ್ ಬೆಳೆದರು ನಂದನ ನಿಲಯದಿ ಮತ್ತವರನ್ನು
ಸಲೆ ಚಾಣೂರ ಕೌಸಲ ಮುಷ್ಟಿಕಾಮಾತ್ಯ ಹಲಹಸ್ತಿಪರನು ಕರೆಸಿದ
ಬಲವಾಸುದೇವರ ಕೊಲುವ ಉಪಾಯವ ಕಲಿಕಂಸನು ನೇಮಿಸಿದ ೫

ಕೇಳಿರೋ ನಮ್ಮಾಪ್ತಾಳುಗಳಿರಾ ನೀವು ಕೇಳಿ ಬಲ್ಲಿರಿ ನಂದವ್ರಜದಿ
ಕಾಲರೂಪರು ಶೌರಿ ಬಾಲಕರಿಬ್ಬರು ಬಾಲ ಅಚ್ಯುತ ಬಲರಿಹರು
ಹೇಳಲೇನೆಮ್ಮಯ ಮೇಲಾಳುಗಳ ಗೋಪಾಲಕರು ಸವರಿದರು
ನಾಳೆಗೆ ಕರೆಸುವೆ ಮೇಲವರರ್ಥವ ಆಲೋಕಿಸಲ್ಯಾದವರು ೬

ರಾಮ ಕೃಷ್ಣರು ಬಲು ಕೋಮಲರೆನ್ನದೆ ನೇಮಿಸಿ ಮಲ್ಲಲೀಲೆಯಲಿ
ಆ ಮಹಾಖಳರ ನಿರ್ನಾಮವ ಮಾಡಿರಿ ಸ್ವಾಮಿದ್ರೋಹಿಗಳ ಶೀಘ್ರದಲಿ
ಹೇಮಮಂಚಗಳ ಮಹಾಮಲ್ಲರ ರಂಗ ಗ್ರಾಮದವರು ನೋಡುವಲಿ
ಹೇ ಮಹಾಮಾತ್ಯನೆ ಧೀಮಂತನು ನೀ ನೇಮಿತ ಕಾರ್ಯ ಮಾಡುವಲಿ ೭

ಕುವಲಯಪೀಡನ ಕವಾಟದಿ ನಿಲಿಸಿರಿ ಅವರಿಬ್ಬರು ಬರಲಾಗೆ
ತವಕದಿ ಕೊಲಿಸುವ ಹವಣದಲಿರಿ ನಿಮ್ಮವರೆಲ್ಲರು ಒಂದಾಗಿ
ಅವನಿಪ ಹೀಗೆನಲವರೆಂದರು ಹೇ ಪ್ರಭೊ ತವ ಭಗಿನೀಸುತರವರು
ಕುವರರ ಕೊಂದರೆ ಭುವಿಯಲಿ ಅಪವಾದವು ಬಹುದೆಂದು ನುಡಿದರು ೮

ಈ ಪರಿ ನುಡಿಯಲು ಭೂಪತಿಯೆಂದನು ನಾ ಪುತ್ರನಲ್ಲುಗ್ರಸೇನಗೆ
ನಾ ಪುಟ್ಟಿದೆ ಗಂಧರ್ವಗೆ ರಾಜನ ರೂಪದಿ ತೋರಿದ ತಾಯ್ಗೆ
ಆ ಪತಿವ್ರತೆ ಋತುರೂಪ್ಯಾಗಿದ್ದಳು ಭೂಪತಿಯೆಂದು ಕೂಡಿದಳು
ಕಾಪಟ್ಯವರಿಯದೆ ತಾ ಪಶ್ಚಾತ್ ಸಂತಾಪದಿ ಬಲು ಬಳಲಿದಳು ೯

ದ್ರುಮಿಳ ಗಂಧರ್ವನ ಕುವರನು ನಾ ಭೋಜ ಚಪಲ ಸಂಬಂಧವಿನ್ನೇನು
ಕುಮತಿ ದುರಾತ್ಮನೆ ಮುಮುಕ್ಷೇತ್ರದಿ ನೀ ಪ್ರಮತ್ತ ಬೀಜಾರೋಪಿಸಿದೆ
ರಮಿಸಿದ ಪಾಪಕೆ ಸುರಮುಣ ಪ್ರಾಯಶ್ಚಿತ್ತ ಅವುಳಕಾಯವ ದೋಷಿಸಿದೆ ೧೦

Rarest Archiver

ಎನೆ ನುಡಿದನು ನಾವನಿಮಿಷರು ನೀ ಮನುಜಳು ನಿಮ್ಮ ಭಾಗ್ಯಕ್ಕೆಣೆಯೆ
ಎನಲು ಕೋಪಿಸಿದಳವನಿಜಲಾನಿಲವಾಯು ಘನ ದಿಕ್ಪತಿಗಳು ಹೊಣೆಯೆ
ಇನಶಶಿಗಳ ಮೀರಿನಿತು ಪಾಪವ ನಾ ಮನಃಪೂರ್ವಕ ಮಾಡಿದರೆ
ಇನಜನು ಶಿಕ್ಷಿಸಲೆನಗೆಂದಳು ನಮ್ಮ ಜನನಿ ರೋದಿಸಿದಳು ಹೆದರೆ ೧೧

ಮದಕರಿ ನಳಿನಿಯ ಕದಡಿ ಕಿಡಿಸಿದಂದದಿ ಕಶ್ಮಲ ನಿನ್ನ ಸ್ಪರುಶ
ಬದುಕೆನ್ನ ಪಾತಿವ್ರತ್ಯ ಕದಲಿತು ನಿನ್ನನು ಮಧುಹರ ಸದೆವ ಸರ್ವೇಶ
ಹೆದರಿದನವ ಶಾಪದ ಭಯವಿಡಿದನು ವದಿಸಿದ ಬಲುವಿನಯದಲಿ
ಮುದಿಯ ಬೀಜದಿ ಸುತನುದಿಸುವ ಬಲವಾರಿಧಿ ಬಲು ಶೂರನೆನುತಲಿ ೧೨

ಅನೃತ ನುಡಿಯೆ ನಾ ವನಜನಯನೆ ಕೇಳೆನಲು ಜನನಿ ಸಂತೈಸಿ
ನಿನ ಬೀಜ ದುಷ್ಟವು ಅನಿಮಿಷಜನರಿಪು ಭಿನ್ನವೃತವು ಹರಿದ್ವೇಷಿ
ಇನಿತು ಕರುಣಶೂನ್ಯನ ನಿರ್ಘೃಣಿ ಕ್ರೂರ ಘನಗುರುಜನದ್ವಿಜದ್ರೋಹಿ
ಅನುದಿನ ಉನ್ಮಾರ್ಗನು ಕಂಟಕನು ಸ್ವಜನಜನರಿಗೆ ಕಾಳಾಹಿ ೧೩

ಜನನಿಯು ನುಡಿಗೇಳ್ದನು ಗಂಧರ್ವನು ಘನಶಾಪಕಂಜ್ಯೋಡಿದನು
ನನಗೆ ಸ್ವಜನವಿಲ್ಲ ಜನನಿ ಬಸಿರಹೊಂದಿ ಜನಿಸಿದ ಮೊದಲಾಗಿನ್ನು ೧೪

ಅನಿಮಿಷಮುನಿ ಪೇಳಿದನು ಉಪದೇಶವ ಘನಗುರುನುಡಿ ಪುಸಿಯಲ್ಲ
ಎನಗಾಪ್ತರು ನೀವು ಮನಸಿನ ಕಾರ್ಯವ ಅನುಮಾನಿಲ್ಲದೆ ಮಾಡಿಯೆಲ್ಲ
ಜನಕುಗ್ರಸೇನನು ಘನದುರ್ಬುದ್ಧ ದೇವಕನು ನನಗಾಪ್ತ ವಿರುದ್ಧ
ಆನಕದುಂದುಭಿ ಕಿತವನು ಮತ್ತೇನು ನನ್ನ ಹಿತ ಗಂಧರ್ವ ಸಿದ್ಧ ೧೫

ಬಲಭದ್ರ ಅಚ್ಯುತರಲಸದೆ ಕೊಲ್ಲಿರಿ ಬಲುಲೇಸಘ ನಿಮಗಿಲ್ಲ
ಕೊಲಲು ಕಲಿಸಿ ಕುವಲಯಪೀಡನಿಗೆ ಎಳೆಯರು ಲಘುತರರಲಾ
ಲಲನೆ ಗೌರೀಶನ ಬಲು ಭಜಿಸಿರಿ ಮುಂದೆ ಗೆಲುವು ಭಾಗ್ಯೋದಯವಕ್ಕು
ಫಲ ಕುಸುಮಾವಳಿಯಲಿ ನರಮೇಧದ ಬಲಿಗವರರ್ಪಿಸಬೇಕು ೧೬

ಕಲಿವಸುದೇವನು ಕುಲೀನೆಯು ದೇವಕಿ ಸಲೆ ಉಗ್ರಸೇನ ಗೋವಳರು
ಬಲು ಯಾದವಜನು ಲಲಿತೋತ್ಸವವನು ಕುಳಿತು ನೋಡಲಿ ನಲಿದವರು
ಎಳೆಮಕ್ಕಳ ವಧೆಗಳ ನೋಡಲಿ ಕಂಗಳ ತುಂಬ ಜರತರು ನೆರೆದು
ಕೆಲವು ಜನಪದವು ಬಿಲುಹಬ್ಬದ ಬಗೆಗಳ ನೋಡುವರಿಗೆ ಅರಿದು ೧೭

ಹೇ ಮಹಾಮಾತ್ಯನೆ ಈ ಮಹಾಕಾರ್ಯವ ನೀ ಮಾಡು ನಿನಗೆ ಮಂಗಳವೆ
ಆ ಮತ್ತ ವಾರಣೋದ್ದಾಮವ ನಿಲ್ಲಿಸು ಹೈಮರಂಗದ್ವಾರ ನಡುವೆ

Rarest Archiver

ರಾಮನ ನೀರದಶಾಮನ ಸೀಳಿಸು ನೇಮಿಸು ಚತುರ್ದಶಿ ದಿವಸ
ಪ್ರೇಮದ ಬಿಲುಹಬ್ಬ ಸೋಮಧರನ ಪ್ರೀತಿ ಈ ಮೇಧ ಪಶುದ್ವಯ ಹಿಂಸೆ ೧೮

ಅಕ್ರೂರ ಮಂತ್ರಿಯ ಕರವಿಡಿದು ಹುಸಿನಕ್ಕು ಹೇಳಿದ ಭೋಜಪನು
ಸೊಕ್ಕಿದ ಶೌರಿಯ ಮಕ್ಕಳ ವ್ರಜದಲಿ ಆ ಕೃಷ್ಣರಾಮರಿಬ್ಬರನು
ಗಕ್ಕನೆ ಧನುರ್ಯಾಗಕ್ಕೆ ಕರೆದು ತಾ ಈ ಕಾರ್ಯಗೌರವ ನಿನಗೆ
ನೀ ಕ್ಷುದ್ರನಲ್ಲೆಮಗೆ ಕೇವಲಾಪ್ತನು ಆ ಕೃಷ್ಣನಿಂದ್ರಗೊಲಿದಂತೆ ೧೯

ನಂದವ್ರಜಕೆ ಪೋಗೊಂದಿಷ್ಟು ಕಾಯದೆ ನಂದನರಿಬ್ಬರ ಕೂಡಿ
ಸ್ಯಂದನವೇರಿಸಿ ಮಂದಮತಿಯೆನಿಪ ನಂದಗೋಪನ ಒಡಗೂಡಿ
ಎಂದಿಗೆ ಕೊಡುವ ಕರತೆಗೆದುಕೊಂಡು ಮಂದಿಯ ಸಹ ಉತ್ಸವಕೆ
ನಿಂದಿರದೆ ಬಾಯೆಂದನು ಮತ್ತೆ ಮಂದಾಂಧನು ನಿಜಮರಣಕ್ಕೆ ೨೦

ಕೇಳಿಲೆ ದಾನವಪತಿ ಲಕ್ಷ್ಮೀಶನ ಆಳುಗಳೆನ್ನ ವೈರಿಗಳು
ಕಾಲಕಲ್ಪೇಭನ ಕೈಲಿ ಕೊಲಿಸುವೆನು ಮೇಲೆ ಚಾಣೂರಮಲ್ಲ ಸಿಡಿಲು
ಬೀಳಲು ಉಳಿವರೆ ಬಾಲಕಕಿತವರು ಖೂಳಕಿತವ ವಸುದೇವ
ಸಾಲು ಯಾದವರು ಹೃಚ್ಛೂಲರು ವೃಷ್ಣಿಭೋಜ ಪಾಳಯು ಕುಕುರ
ದಾಶಾರ್ಹ ೨೧

ನೃಪಭ್ರಾತಾ ಆಹುಕ ಕಪಟಿಯು ದೇವಕಾದ್ಯಪಕಾರಿಗಳ ಕೊಲಿಸುವೆ
ಸುಪೃಥಿವಿಯಾಳುವೆ ನೃಪಮಾಗಧ ಗುರುಕೃಪೆಯುಂಟೆನಗೆ ಒಲಿಸುವೆ
ಆ ಪರಶಿವನು ನಮಗಪರ್ಮಿತ ಮಿತ್ರನು ರಿಪುಹರ ಬಾಣ ಶಂಭರರು
ಕುಪಿತ ವಿವಿಧ ಭೌಮ ಉಪಕಾರಿಗಳು ನಮಗೆ ಪರಮಹಿತರು ಸಮ್ಮತರು ೨೨

ಸುರೆಪಕ್ಷದವರ ತರಿಪೆ ಸಾಮ್ರಾಜ್ಯವ ಪರಮ ಸುಖದಿ ಮಾಡುವೆನು
ಹರಿಬಲರಿಬ್ಬರ ಉರುಶೀಘ್ರದಿ ನೀನು ಕರೆತಂದರೆ ವಧಿಸುವೆನು
ಅರಸನ ನುಡಿಗುತ್ತರವನು ಕೊಟ್ಟನು ಅರಿಯೆ ನಾ ದೈವದ ಗತಿಯು
ಅರಿದೆನು ನಿನ್ನ ಮನದ್ದುರುಷವ ಸಿದ್ಧ್ಯಸಿದ್ಧ್ಯೆರಡು ಸಮಾನದ ಮತಿಯ ೨೩

ಪುರುಷಗೆ ಮಹತ್ಫಲ ಬರೆ ಮಾತೇನೋ ನಿನ್ನ ನಿರೂಪದಿ ವ್ರಜಕೈದುವೆನು
ಪರಮ ಮನೋರಥ ದೊರೆಕೊಂಬುದು ಬಲು ಅರಿದೆನುತಲಿ ತೆರಳಿದನು
ದುರುಳರು ಉಚ್ಚಪದಕೆ ಕಡವಿಕ್ಕಲು ಹರಿಯು ಸಹಾಯನಾಗುವನೆ
ಸುರಸಂಪದ ಸ್ಥಿರಸುರರ ಸಿರಿಯು ಉರಿ ನೆರೆ ಹೊಂದದಿಹುದು ನಿದಾನ ೨೪

Rarest Archiver

ಸಿರಿ ಪ್ರಸನ್ವೆಂಕಟ ಗಿರಿಪತಿಕೃಷ್ಣನ ದರುಶನ ಸುಕೃತದ ಫಲವು
ದೊರಕೆ ನಮ್ಮಯ ಗುರುಹಿರಿಯರ ತಪವೆಂದು ಚಿರವೆಂದು ಗೃಹಕೈದಿಬರಲು
ಹರುಷ ದುಃಖಕ್ಕೆ ಶ್ರೀಹರಿ ಪ್ರೇರಕನೆಂದು ಇರುಳೊಂದು ಹರಿಸ್ಮರಣೆಂದ
ಪರಮಭಾಗವತಕ್ರೂರನಿದ್ದನು ತನ್ನವರ ಮಂದಿರದಲಿ ಚಂದ ೨೫

೫೨

ರಾಗ : ಸಾವೇರಿ **ತಾಳ : ಜಕ್ಕಣಿ ?**

ಹರಿಯು ಪಾದಾಬ್ಜ ಹೊಕ್ಕವರಿಗೆ ದುರಿತದ
ಸ್ಪರುಶವಿಲ್ಲ ಹರಿಬಲರನು ಮರುಳ ಕರೆಸಿದ ಪ.

ದಾನವಪತಿಯು ಕಳಿಸಿ ಕಂಸ ಹೀನಕೇಶಿಗೆ
ತಾ ನಿರೂಪಿಸಿದನು ತನ್ನ ಹಾನಿ ಬಯಕೆಗೆ
ನೀನು ಹೋಗು ವ್ರಜಕೆ ಶೌರಿ ಸೂನು ಯುಗ್ಮರ
ಪ್ರಾಣಹರಣ ಮಾಡಿಲ್ಲಿಗೆ ಬಾ ನೀ ಸತ್ವರ ೧

ಎನಲು ಪತಿತ ವ್ರಜಕೆ ಬಂದಾ ಘೃಣಿ ಹಯಾದನು
ಘನಸಟಾಂಕ ವಿಮಾನಾವಳಿಯಾಕ್ಷಣ ಕೆಡಹಿದನು
ಕೊನೆ ಖುರದಲಿ ಕೆದರಿ ಕೆದರಿ ಅವನಿ ಸೀಳಿ ತಾ
ವಿನಯ ಜಂಗುಳಿ ಹೊಕ್ಕನು ಹಿಂಗಾಲಿನಲ್ಲಿ ಒದೆಯುತ ೨

ಹೇಷಾರವದಿ ಮುಖಕೋಟರದಿ ಘೋಷಿಸಿ ಬೆದರಿಸಿ
ದೋಷಾಗ್ನಿ ನೇತ್ರ ಜ್ವಲಿಸಿ ಹಿಳ್ಳಿಸಿ ನಾಸಿಕದ್ಯಬ್ಬರಿಸಿ
ತ್ರಾಸಿಸಿದಾ ಖಳಘೋಷದಿ ಜೀವರ ಬೀಸಿ ಪುಚ್ಛಾಗ್ರದಲಿ
ಘಾಸಿಸಿ ಮೇಘಂಗಳೋಡಿಸಿದನು ಕೇಶಿ ಭೂಕಂಪಿಸಿ ೩

ಕೊಬ್ಬಿನ ಖಳನು ತನ್ನ ಸಮಾನರನೊಬ್ಬರ ಕಾಣದಾದ
ಅಬ್ಧಿಶಯನ ಹಯನ ತ್ರಾಣದ ಅಬ್ಬರ ನೋಡಿದ
ಹೆಬ್ಬಾಯ್ದೆರೆದು ಆಕಾಶನುಂಗುವ ಕೊಬ್ಬಿಲಿ ಓಡಿಬಂದ
ಅಬ್ಧಿಶಯನಗ ಅಭಿಮುಖನಾಗಿ ಶಬ್ದವ ಮಾಡಿದ ೪

ಹಿಂಗಾಲ ಹಾರಿಸಿ ಹರಿಯನೊದ್ದರೆ ರಂಗ ವಂಚಿಸಿದನು
ಮುಂಗಳಮೂರುತಿ ಮರುಳೆ (ರಳಿ?) ಖಳನ ಅಂಘ್ರಿಯ ಹಿಡಿದನು

Rarest Archiver

ತುಂಗ ವಿಕ್ರಮ ತುರಂಗವ ಭ್ರಮಿಸಿ ವಿಹಂಗಪ ಭುಜಂಗನನು
ಭಂಗಿಸಿದಂತೆ ನೂರುಬಿಲ್ಲ ಪ್ರಮಾಣ ಹಿಂಗದೆ ಒಗೆದನು ೫

ಮತ್ತವನೆದ್ದನು ಲಬ್ಧ ಸಂಜ್ಞದಲಿ ಸತ್ವರ ಕಾದಿ ಬಂದ
ದೈತ್ಯಾರಿ ತನ್ನ ತೋಳೊಂದನು ಖಳನ ವಕ್ತ್ರದಿ ಹೊಗಿಸಿದ
ಹುತ್ತಿನೊಳುರಗ ಹೋಗುವ ತೆರದಿ ಹಸ್ತವ ವರ್ಧಿಸಿದ
ಬಿತ್ತರಿಸ್ಯವನ ಗಾತ್ರವ ಕಾದಂಕ್ಕಿನ ತೆರದಿ ಹಿಸಿದ ೬

ಪದುಮನಾಭನ ಭುಜಸ್ಪರ್ಶಾಗ್ನಿಲಿ ಉದುರೆ ದಂತಗಳು
ಆದೇಹ್ಯ ಆಮಯಂಪೇಕ್ಷಿಸೆ ವರ್ಧಿಸಿದಂತಾಗಿ ಬಾಧಿಸಲು
ಸ್ವೇದಾಂಗನಾಗಿ ತೇಲುಗಣ್ಣಿಲಿ ಬಿಟ್ಟನು ಮೇದಿನಿಲಂಘ್ರಿ ಚಾಚಿ
ಛೇದಿಸಿದ ಕರ್ಕಟಿಕಿ ಫಲದಂತೆ ಆದನು ಮೈಯು ಬಿಚ್ಚಿ ೭

ಯಮಸದನಕ್ಕೆ ಹೋದನು ದುಷ್ಟನು ಅಮರರಂಬರದಿ
ರಮೆಯರಸನ ಸ್ತೋತ್ರದಿ ಪೂಮಳೆಗರೆದರು ಮುದದಿ
ಗೋಮತಿಗೋಮಕ್ಕಳೊಡನೆ ಹೊಕ್ಕನು ಶ್ರೀಮಾಧವಾವ್ರಜವ
ಅಮರಮುನಿ ನಾರದನು ಬಂದನು ಹೇಳಲು ರಹಸ್ಯವ ೮

ಸ್ವಕೀಯ ಕರ್ತವ್ಯ ಮಾಡುವೆನೆನುತ ಅಕ್ಲಿಷ್ಟಕರ್ಮನಿಗೆ
ಏಕಾಂತಸೇವೆಗೆ ಭಾಗವತೋತ್ತಮ ಬೇಕಾಗಿ ಬಂದನಾಗೆ
ಲೋಕೇಶ್ವರೇಶ್ವರ ಬಂದ ನಾರದಗೆ ಬೇಕಾರ್ಹಣ ಮಾಡಿದನು
ಪೋಕ ಕಂಸನ ಕುಚೇಷ್ಟೆಯ ಹೇಳಿದ ತ್ರಿಕಾಲಜ್ಞಾನಿ ತಾನು ೯

ಅಶುಭಹರ ಸದಾ ಶುಭದಾಯಕ ದೋಷದೂರ ಮುಕುಂದ
ವಾಸುದೇವಾಚ್ಯುತಾಶೇಷಕಲ್ಯಾಣ ಗುಣಾಶ್ರಯ ಶ್ರೀ ಗೋವಿಂದ
ಭಾಸುರ ವೈಕುಂಠವಾಸ ಶ್ರೀನಿವಾಸ ಕೇಶವ ವಿಶ್ವಕರ್ತ
ಪ್ರಸನ್ನವೆಂಕಟಾದ್ರೀಶ ಸರ್ವೇಶ್ವರ ಭೂಸತಿಭಾರಹರ ೧೦

೫೩

ರಾಗ : ಕನ್ನಡ ಕಾಂಬೋಧಿ ತಾಳ : ಝಂಪೆ

ಸುಜ್ಞನಾರದ ತ್ರಿಕಾಲಜ್ಞ ಹೇಳಿದನು ಸರ್ವಜ್ಞ ಸರ್ವೋತ್ತಮ ಶ್ರೀಹರಿಗೆ
ಅಜ್ಞ ದೈತ್ಯರ ತರಿವಭಿಜ್ಞ ಬುಧರನು ಹೊರೆವ ಜಿಜ್ಞಾಸೆ ಮುಂದಾಗೆ ಬ್ಯಾಗೆ ಪ.

Rarest Archiver

ಹೇ ಕೃಷ್ಣ ಕೃಷ್ಣ ಭಗವಾನಪ್ರಮೇಯ ತ್ರೈಲೋಕೇಶ ಯೋಗಿಜನಪೂಜ್ಯ
ನಾಕಜನ ನಾಕಪ ಪಿನಾಕಿ ವಿಪ ಫಣಿಪ ವಿಧಿ ಲೋಕಮಾತಾರ್ಚಿತಪದಾಬ್ಜಾ
ಶ್ರೀಕಾಂತ ಸ್ವಸುಖಾರ್ಣಪೂರ್ಣ ಜ್ಞಾನೈಶ್ವರ್ಯದಾಕರನೆ ಸ್ವೇಚ್ಛಲೀಲೆಯಲಿ
ಲೋಕಕೆ ಸೃಷ್ಟಾರ ಪಾತಾರ ಹಂತಾರ ಏಕ ನಿಯಂತಾರ ಬಲಧಿ ೧

ಧರ್ಮರಕ್ಷಣೆಗವತರಿಸಿ ನೀ ಭುವಿಯಲ್ಲ್ಯಧರ್ಮಕುಲನಾಶಕ ಸದ್ದೀಕ್ಷ
ಧರ್ಮವಿದ ಸತ್ಯಸಂಕಲ್ಪ ಗೋಭೂಸುರರ ಧರ್ಮಸಂರಕ್ಷಕ ದಕ್ಷ
ಧರ್ಮಕೆ ವಿರೋಧಿ ದೈತ್ಯರ ಕುಲಕೆ ಎಣೆಕಿಲ್ಲ ಮರ್ಮಜ್ಞದಂಷ್ಟ್ರ ಮಥಿಸುವೆ
ಪರ್ವ ಮಹಾ ಶಂಖಾರಿಧಾರಕಾಚ್ಯುತ ಹರೇ ಕರ್ಮಿಗಳ ವಧಿಸಿ ನಡುಗಿಸುವೆ ೨

ದಿಷ್ಟ್ಯ(ಧೃಷ್ಟ ?)ಹಂತನಾದ ಹಯಕಾಯಮದಸೊಕ್ಕಿ ವೃಷ್ಣಿಪತೆ ನಿನ್ನ
ಕೈಯಿಂದ
ದುಷ್ಟನ ಹೇಷತ್ಕಾರಕೆ ಅಂಜಿ ಸುರರೋಡಿ ಕಷ್ಟಿಸುತಿದ್ದರೆಲ್ಲ ಗೋವಿಂದ
ತುಷ್ಟಿ ಬಡಿಸಿದೆಯವರ ಚಾಣೂರಮಲ್ಲ ಸಲೆ ಮುಷ್ಟಿಕಾಖ್ಯರನು ಮರ್ದಿಸುವೆ
ಭ್ರಷ್ಟ ಹಸ್ತಿಪ ಕಂಸನ ವಧಿಸಿ ಅವನನುಜರಷ್ಟರನು ಬಲಗ್ವೋಳಿ ಕೊಲ್ಲಿಸುವೆ ೩

ನಾಳೆ ನಾಡಿದು ಹೋಗಿ ಸ್ವಾಮಿ ನೀ ಮಧುರೆಗೆ ಖೂಳಕಂಸನ ಬಿಲ್ಲ ಮುರಿವೆ
ಮೇಲೆ ಕಂಸನ ಮಿತ್ರಜಾಲ ಕುಜ ಶಂಖ ಮುರರೇಳಿಗೆ ತರಿವೆ ನಿಜರ ಹೊರೆವೆ
ಬಾಲೆ ಸತ್ಯಾದೇವಿಗಮರ[ತರು]ತರುವೆ ದಂಭೋಳಿಯ ಅಹಂಕಾರ ಖಂಡಿಸುವೆ
ಹೇಳಲೇನ್ ಕಣ್ಣಾರೆ ಕಾಂಬೆ ನಾ ನಿನ್ನ ಶುಭಲೀಲೆಯನು ವೀಣೆವಿಡಿದ್ದೇಳುವೆ ೪

ನೀ ಸತ್ಯಭಾಮೆಯ ಸ್ಯಮಂತಕ ಸಹದಿ ಗೆಲ್ವೆ ಲೇಸಾಗಿ ದ್ವಾರಕೆಯನಾಳುವೆ
ಭೂಸುರಗೆ ಸತ್ತ ಮಗನ್ನಿತ್ತು ಪೌಂಡ್ರಕ ಪಾಪಿ ದ್ವೇಷಿಯನು ಹೊಡೆವ್ಯಶಸು
ಪಡೆವೆ
ಕಾಂತಿಯನು ದೀಪಿಸುವೆ ಡೊಂಕಿದ್ವಲ್ಲನು ಸೀಳ್ವೆ ನೀ ಶೀಘ್ರ ಚೈದ್ಯನ ಮಥಿಸುವೆ
ಲೇಸೀವೆ ಪಾರ್ಥರಿಗೆ ರಾಜಸೂಯಜ್ಞದಲಿ ಏಸೊಂದು ವಿಕ್ರಮ ಪ್ರಕಟಿಸುವೆ ೫

ದ್ವಾರಕೆಯ ನಗರದಲಿ ಭೂರಿ ಅದ್ಭುತ ಕರ್ಮ ತೋರಿಸುವೆ ಯಾದವರಹೊರೆವೆ
ನಾರಾಯಣ ಎಂತು ಕಾಂಬೆ ಕಣ್ಣಾರೆ ತವ ಚಾರು ಚರಿತ್ರೆಯ ಕೀರ್ತಿಸುವೆ
ಶ್ರೀರಮಣ ನಿಮ್ಮಗುಣ ವೈಕುಂಠಪ್ರಿಯಗೆ ಸಾರುವವು ಕವನ ಜ್ಞಾನವನು
ಕ್ರೂರ ದೈತ್ಯರಿಗೆಲ್ಲ ಕಾಲರೂಪನು ಭುವಿಯ ಭಾರಕಾಕ್ಷೋಹಿಣಿಗಳನು ೬

ರಣಮುಖದಿ ಸಂಹರಿಸುವೆ ಅರ್ಜುನನ ರಥವೇರಿ ಅನಿಮಿಷರ ಕಾರ್ಯಕಧ್ಯಕ್ಷ
ಘನಶುದ್ಧ ವಿಜ್ಞಾನ ಸಮೃದ್ಧ ವಿಗ್ರಹ ಗುಣತ್ರಯ ಪ್ರವಾಹಕಾಬ್ಜಾಕ್ಷಾ

Rarest Archiver

ವನಿತೆ ಮಾಯೆಯು ವಶವಾಗಿ ಆಶ್ರಯಿಸಿಹಳು ಗುಣವ್ಯತಿಕರವ ಮಾಡುವಳು
ನಿನ ಪ್ರೇರಣೆಯಲಿ ವರ್ತಿಪಳು ನೀನೆ ಕ್ರೀಡೆಯನು ಮಾಳ್ಪೆ ಮಾನಿಸ
ಜನರೊಳು ೭

ನಮೊ ನಮೋ ಯದು ವೃಷ್ಣಿ ಸಾತ್ವತರ ಧುರ್ಯನೆ ನಮೊ ನಮೋ ವಿಶ್ವಕೆ
ವರ್ಯನೆ
ನಮೊ ನಮೋ ನಿರ್ಜರಕ್ಷೇಮ ಕಾರಣ ಕೃಷ್ಣಾ ನಮೊ ನಮೋ ಎಂದ ಮುನಿ
ಶ್ರೇಷ್ಠ
ರಮೆಯರಸನ ಬಹಳ ತಂತಿಸಿ ವಂದಿಸಿ ನಡೆದ ಅಮರಮುನಿ ಹರಿಯಾಜ್ಞೆಯಿಂದ
ಅಮಿತೋತ್ಸವವು ಹರಿಯ ದರುಶನಲಾಭದಿ ಸುಮಹತಿ ವೀಣೆಯ ನುಡಿಸಿದ ೮

ತಮೋಯೋಗ್ಯ ಮಡಿದ ಸುಖವಾರ್ಧಿಯಲಿ ಬಾಳ ಸಂಭ್ರಮಕೆ ಸರಿಯಿಲ್ಲ
ಗೋಕುಲದಿ
ಕಮಲನಯನ ಮುಕುಂದ ಗೋವಿಂದಕೃಪೆಯಿಂದ ಗೋಮತಿ ಗೋಪರು
ಹರುಷಹೊಂದಿ
ವಿಮಲಚರಿತ ಶ್ರೀ ಪ್ರಸನ್ವೆಂಕಟ ಕೃಷ್ಣ ಕಮನೀಯ ಗುಣಕಥನ ಹೇಳಿ
ಅಮರಾವತಿಯ ಜನರ ಸಮನಾಗಿ ಸುಖಿಪರು ಶ್ರೀಮದ್ದ್ವಾರಿಯ ಭಟರುಕೇಳಿ ೯

೫೪

ರಾಗ : ಶಂಕರಾಭರಣ ತಾಳ : ಏಕತಾಳ

ವಾಸುದೇವನ ಅಡಿದಾವರೆಯ ಆಶ್ರಿತ ಗೋವಳರು
ದ್ವೇಷಿಖಳಾಧಮ ವ್ಯೋಮಾಸುರನ ಗಾಸಿಯ ದಾಟಿದರು ಪ.

ಒಂದಿನ ಗೋವರ್ಧನಗಿರಿ ತಪ್ಪಲ ಹೊಂದಿಲಿ ಗೋಗಳನು
ಇಂದಿರೆಯರಸನು ಚರಿಸುತ ಗೋವರ ವೃಂದಸಹಿತ ತಾನು
ಚಂದದಿಂದಲಿ ನಿಲಯನ ಕ್ರೀಡೆಯ ಸುಂದರರಾಡಿದರು
ಅಂದದಿ ಬಾಲರು ಕೆಲವರು ಚೋರರು ಎಂದು ಸೊಲ್ಲಿಸಿದರು ೧

ಬಾಲಕರನು ಮೇಷಾಯತರ ಮಾಡಿ ಸುಲೀಲೆಯ ಮಂಡಿಸಲಿ
ಖೂಳ ವ್ಯೋಮಾಸುರ ಬಂದನು ಗೂಢ ಗೋಪಾಲರ ವೇಷದಲಿ
ಬಾಲರನೆಲ್ಲರನೊಯ್ದಿಟ್ಟನು ಮಹಚ್ಛೈಲದ ದ್ರೋಣಿಯಲಿ
ತೋಳನ ತೆರನವ ಮಾಡಲು ಅಂಜುತ ನಾಲುವರುಳಿದಿರಲಿ ೨

Rarest Archiver

ಬಿಲದೊಳು ಸಿಕ್ಕಿದ ಗೋವಳೆರೆಲ್ಲರು ಬಲು ಭಯಂಪೈದಿದರು
ನಳಿನನಯನ ಗೋವಿಂದಾಯೆನ್ನುತ ಸಲೆ ದುಃಖ ಹೊಂದಿದರು
ಎಳೆಯರ ಆರ್ತಸ್ವರವನು ಕೇಳಿದ ಖಳನ ಸ್ಥಿತಿಯನರಿದ
ತಿಳಿಯದಂತೆ ಸರ್ವಜ್ಞಶಿಖಾಮಣಿ ಬಳಿಯಲಿ ನಿಂತಿದ್ದ ೩

ಕ್ರೂರಮಯಾತ್ಮನು ವ್ಯೋಮಾಸುರ ಬಲು ದೂರದಿ ನಿಂತಿರಲು
ಶ್ರೀರಮಣನು ಕಂಡನು ಅವನಾಕೃತಿ ಹಾರಿ ಹಿಡಿದ ತೃಟಿಯೊಳು
ವೀರಸಿಂಹನು ತೋಳನೆ ಜಗ್ಗಿದ ಹಾಗ್ಹಾರ್ಯಾಜಿಸಿದನಾತಗೆ
ತೋರಿತು ಅವನಂಗವು ಪರ್ವತದೊಲು ತೋರವು ಅತಿಬ್ಯಾಗೆ ೪

ಅನಂತಬಲಾತ್ಮಕ ಹಿಡಿದುಂಚಲು ಅವ ನಾನಾ ಯಂತ್ನದಲಿ
ದಾನವರಿಗೆ ಶಕ್ತಿಸಾಲದು ಶ್ರೀಹರಿ ಅನಾಯಾಸದಲಿ
ಹೀನನ ಕೊಂದೋಡಾಡಿದ ಸುರರು ಪ್ರಸೂನ ಸುರಿದರಲ್ಲಿ
ಆನಂದದಲಿ ಗುಹಸ್ಥರ ತೆಗೆದನು ಶ್ರೀನಾರಾಯಣನು ೫

ಸುಜನರು ಸುಮುನಿನಿಕರವು ಸ್ತುತಿಸಲೀ ಭಜಕಜನಪ್ರಿಯನು
ವ್ರಜದಲಿ ಗಮಿಸಿದ ನಿತ್ಯಾನಂದನು ಸ್ವಜನಾನಂದನನು
ನಿಜಸುಖದಾಯಕ ನಿರ್ಜರದಾಯಕ ಕುಜನನಿಕರಹರನು
ದ್ವಿಜಗೋರಕ್ಷಕ ದಾಮೋದರ ಕ್ಷೀರಜಲಧಿಮಂದಿರನು ೬

ಪ್ರಸನ್ನಚರಿತ ಸುಪ್ರಸನ್ನಲೋಚನ ನಿತ್ಯ ಪ್ರಸನ್ನವರಾಭಯದ
ಪ್ರಸನ್ನಗುಣಾಕರ ಪ್ರಸನ್ನಸನ್ಮಂದಿರ ಪ್ರಸನ್ನ ಸೌಂದರ್ಯಸಾರ
ಪ್ರಸನ್ನವದನಸ್ಮಿತ ಪ್ರಸನ್ನರದನ ಶ್ರೀಪ್ರಸನ್ನವೆಂಕಟಕೃಷ್ಣ
ಪ್ರಸನ್ನ ಶ್ರೀಪದ ಪ್ರಸನ್ನೀಕರಿಸಿದರಿಗೆ ಪ್ರಸನ್ನ ಜನವರಿಷ್ಠ ೭

೫೫

ರಾಗ : ತೋಡಿ **ತಾಳ : ಏಕತಾಳ**

ಹರಿಭಟರಿಗೆ ಲವ ಭಯವಿಲ್ಲ ಶ್ರೀಹರಿಸ್ಮರಣೆಗೆ ಸಮ ಧರ್ಮವಿಲ್ಲ
ಹರಿಕರುಣೆಗೆ ಪಾತ್ರ[1][ನೆ][1]ಸುಜ್ಞ ಶ್ರೀ ಹರಿಯೊಪ್ಪುದವನೆ ಬುಹು ಪಶುಘ್ನ ಪ.

ವ್ರಜಕೆ ತೆರಳಿದ ಕಂಸನ ಮತದಿ ಒಂದು ರಜನಿಯೊಳಿದ್ದಕ್ರೂರಗೃಹಹೊಂದಿ
ಸುಜನೇಶ್ವರ ಶ್ರೀಕೃಷ್ಣಪಾದ ಸುನಿಜಧ್ಯಾನದಿ ಸ್ಮರಣೆಯಲಿದ್ದ ೧

---

1 ವೆ

Rarest Archiver

ರವಿಗರ್ಘ್ಯದ ಕರ್ಮವ ಮಾಡಿ ಶುಭ ಹವಿರ್ಗಾಹುತಿ ವಿಧಿಯಲಿ ನೀಡಿ
ಜವದಿ ರಥಕೆ ಹಯಗಳ ಹೂಡಿ ಮಾಧವ ದರುಶನಕೆ ಶಕುನ ನೋಡಿ ೨

ಪಂಥವಿಡಿದು ಅಂಬುಜಾಂಬಕನ ಗುಣಚಿಂತನೆಯಲಿ ಮಾಡುತ ಧ್ಯಾನ
ಎಂಥ ಸುಕೃತ ಎನಗುದಿಸಿತೊ ಭೂಕಾಂತ ಕಂಸಗೆ ಬುದ್ಧಿ ಪ್ರಕಟಿಸಿತೊ ೩

ವಿಷಯಾಸಕ್ತಿಯ ಶೂದ್ರನು ಹ್ಯಾಗೆ ಶ್ರುತಿವಿಷಯನಲ್ಲವು ಭುವಿಯಲಿ ಹಾಗೆ
ವಿಷವು ವಿಷಯ ಬಯಸುವ ನನಗೆ ಶ್ರೀ ಬಿಸಜಾಕ್ಷ ಕೃಪೆಯಾಯಿತು ಎನಗೆ ೪

ಗೋಕುಲಕೆ ಹೋಗುವೆ ನಾನಿಂದೆ ಮನೋವ್ಯಾಕುಲವನು ಹರಿಕೃಪೆಯಿಂದೆ
ನೂಕುವ ಭಾಗ್ಯವು ಬಂತೆನಗೆ ಹರಿ ಶ್ರೀಕರಚರಣವಪ್ಪುವೆ ಬ್ಯಾಗೆ ೫

ಎನ್ನ ಜನ್ಮಕೆ ಫಲ ತೋರುತಿದೆ ನಾ ಧನ್ಯನಾಗುವೆ ದರುಶನದಿಂದೆ
ಚಿನ್ಮಯಾತ್ಮನ ಮೂರ್ತಿ ದೂರದಲಿ ಕಂಡು ಸನ್ನಮಿಸುವೆ ಘನಹರುಷದಲಿ ೬

ಕಾಲನದಿಯ ದಾಟುವೆ ಹರಿಯ ಅಂಘ್ರಿ ಮೂಲವನ್ನಾಶ್ರಯಿಸಿ ತ್ವರಿಯಾ
ಪಾಲಗಡಲೊಡೆಯನ ಕೃಪೆಯಿಂದ ಸೃತಿ ಜಾಲಬಲೆಯ ದಾಟುವೆನೆಂದ ೭

ಮುನಿಜನನಂತ ಪಾದಾಂಬುಜವ ವಂದನೆಯ ಮಾಡ್ಯಪ್ಪುವೆ ಘನದೇವ
ಮನಸಿನ ಬಯಕೆ ಪೂರಿಸಿಕೊಂಬೆ ಇಂದು ಅನಿಮಿಷಪೂಜ್ಯನಾಕೃತಿ ಕಾಂಬೆ ೮

ಶ್ರೀ ಭಗವನ್ ಖಳಮಥನ ಹರೆ ಇಂದೆ ಬಂದೆ ಖಳಹಂಸನಟ್ಟಿದರೆ
ಈ ಭಾಗ್ಯ ಮಂದಾಧಿಕಾರಿಗೆ ಆ ಲಾಭವು ಸುಲಭ ದೊರೆಯಿತೆನಗೆ ೯

ಪೂರ್ವೇತರರು ಅಂಬುಜಭವ ವಿಷ ಶರ್ವೇಂದ್ರಾದ್ಯರು ನಖಮಂಡಲವ
ಸರ್ವದಾ ಅರ್ಚಿಸುವರು ಬಿಡದೆ ಕೃಷ್ಣ ಸರ್ವೇಶ್ವರನ ಹೊಂದಿದೆಯಿಂದೆ ೧೦

ಗೋಗಳ ಕಾಯ್ವ ಗೋಪರ ಬೆರಸಿ ಸಲೆ ಈ ಗೋಪೆರ ರಜಗಂಧವ ಧರಿಸಿ
ಈಗೊಪ್ಪುತಿದೆ ತವೋರು ಹರೆ ಬಂದೀಗ ಕಾಂಬೆನು ನಿನ್ನ ಕಣ್ಣಾರೆ ೧೧

ಹೊಳೆವ ಕಪೋಲ ನಾಸ ಭ್ರೂಲತಾ ಶುಭ ಎಳೆನಗೆ ಅರುಣಾಂಬುಜ ನೇತ್ರ
ಲಲಿತ ಗುಡಾಳಕಯುತವಕ್ತ್ರ ಬಲುಚೆಲುವ ನೋಡುವವೆನ್ನಯ ನೇತ್ರ ೧೨

ಮೃಗಗಣ ಪ್ರದಕ್ಷಿಣೆಯಾಗುತಿವೆ ಮುಂದೆ ಬಗೆಬಗೆ ಶಕುನಾಗುತಿವೆ
ಜಗದೊಲ್ಲಭನ ಕಾಂಬುವೆ ಭವ್ಯ ಪದಯುಗಳಧೂಳಿಗಳಲ್ಲಿ ಲುಂಠಿಸುವೆ ೧೩

Rarest Archiver

ವಂದಿಸಿ ಪುನಃ ಪುನಃ ಸ್ತುತಿಸುವೆ ನಾ ವಸುಂಧರೆಲಿ ಮಾನಿಸರೊಳ್ ತೋರುವನ
ವೃಂದಾರಕರಿಪುಕುಲಹರನ ಆನಂದ ಸ್ವೇಚ್ಛೈಕ ಲೀಲಾವತಾರನ ೧೪

ಅನಂತಲಾವಣ್ಯವಾರಿಧಿಯುಂ ಈಗೆ ಮಾನವಪತಿ ತೋರುವ ಬಗೆಯುಂ
ನಾ ನೋಡುವ ಪುಣ್ಯದ ಫಲವು ಇಂದೀನಂದನ ಸುತನ ದರುಶನವು ೧೫

ಕೃಷ್ಣ ಕರುಣಾವಲೋಕನವು ಶೀಘ್ರ ನಷ್ಟಾಗುವದುಗ್ರತರತಮವು
ಕೃಷ್ಣ ಸ್ವತಂತ್ರ ಸ್ವಮಾಯೆಯಲಿ ವಿಶ್ವ ಹುಟ್ಟಿಸಿ ಸಕಲ ತತ್ವಗಳಲ್ಲಿ ೧೬

ಪ್ರಾಣಾದ್ಯಮರರ ಸಹ ಪೋಗುವ ತಾನಾನಂತ ಜಂತು ಜಡದೊಳಿರುವ
ಅನಂತ ವಿಚಿತ್ರ ರೂಪದಲಿರುವ ಹರಿ ತಾನೆ ನಿಯಂತನು ಪೊರೆವ ೧೭

ಪಕ್ಷಿಮೃಗಗಳ ದಿವ್ಯೋಚ್ಚರವು ಕಮಲಾಕ್ಷನ ದರ್ಶನ ಸೂಚಿಪವು
ಈ ಕ್ಷೋಣಿ ಪವಿತ್ರ ಕರ್ಮಗುಣ ನಾಮ ಸಂರಕ್ಷಿಪ ಧರ್ಮಪೂರಣಕಾಮ ೧೮

ದೇವಾದಿ ಜೀವೌಘವು ಹರಿಯು ಚಿದ್ಭಾವದಿ ಕೀರ್ತ್ನೆ ಮಾಡಂತ ತ್ವರಿಯಂ
ಪಾವನವಾಗುವದನವರತ ಆ ದೇವನೆ ಸಾತ್ವ ಪ್ರಾದುರ್ಭೂತ ೧೯

ಈತನೆ ಗೋಷ್ಠವ ಹೊಂದಿಹನು ಮತ್ತೀತನೆ ಧರ್ಮಗೋಪ್ತಾರನಿಹನು
ಈತ ನಿರ್ಜರರಿಗೆ ಸುಖದಾತ ಜಗನ್ನಾಥ ಮಂಗಳ ಗುಣವಿಖ್ಯಾತ ೨೦

ಈತನ ಗುಣ ಸುರರ್ ಪಾಡುವರು ಅಜ ವಾತರುದ್ರೇಂದ್ರಾಧಿಕಬುಧರು
ಈತನ ನಿತ್ಯ ಸ್ಥಾನವು ತ್ರಯವು ಮತ್ತೆ ನಾಥರಿಲ್ಲವು ಶ್ರುತಿಯನುಭವವು ೨೧

ಮಹೋತ್ಸವ ಎನ್ನಕ್ಷಿಗೆ ಇಂದು ಮುಂದೆ ಮಹಚ್ಛ್ರೀಯಿಂದೀಪ್ಸಿತವಾಗಿಹುದು
ಮಹತ್ ಸ್ವಪ್ರಕಾಶಾಂಕಿತ ರೂಪನನೀ ಹೊತ್ತೆ ಕಾಂಬೆ ಭಗವತ್ಸ್ವರೂಪ ೨೨

ಶ್ರೀಪಾದಕಮಲಗಳಿಗೆರಗುವೆನೆ ನಮ್ಮ ಶ್ರೀಪತಿ ಕೈ ತಲೆಮೇಲಿಡುವನೆ
ಬಾ ಪ್ರಿಯನೆಂದೆನ್ನ ಮನ್ನಿಸುವನೆ ಸುತಾಪಸರ್ಗೀವಾಭಯಂಕರವೀವನೆ ೨೩

ಮಾಯಾಶ್ರಿತ ಕಾಲ ರಂಹಸಾಂತಕ ಹರಿ ಸಂಯೋಗಿಜನಕಭಯಂದಾಯಕ
ಶ್ರೀಯಂಬೆಗಿಂಬಾಗಿಹ ತೋಳುಗಳಿಂ ಇತ್ತೆ ಬಾಯೆಂದಪ್ಪುವನೊ
ಮನ್ನಣೆಯಿಂ ೨೪

ಸಮರ್ಹಣಾಂಬರ ಬಲಿಯು ನೀಡುವ ಮನೋರಮವಾಕ್ಯದಿಂದೆನ್ನ ತೋಷಿಸುವ
ರಮೆಯು ಸಂಸ್ಪರ್ಶಸೌರಭ್ಯಭುಜದಿಂದ ನಿತ್ಯ ಮಮ ಸ್ವಾಮಿಯಪ್ಪುವ ಪ್ರೇಮ
ಪುಂಜದಿಂ ೨೫

Rarest Archiver

ಕಂಸನವನೆಂದೆನ್ನುದಾಸಿಪನೆ ಪರಮಹಂಸೇಶ್ವರ ಕೃಪೆಯ ಮಾಡುವನೆ
ತಾಂ ಸರ್ವ ಗೋಪ್ತಾಂತರ್ಬಹಿರ್ವ್ಯಾಪ್ತ ಇಂದು ಸಂಶಯವಿಲ್ಲ ಕಾಂಬೆ
ಯಥಾರ್ಥ ೨೬

ತನ್ನಂಘ್ರಿಕಮಲಕೆ ವಂದಿಸಲು ಇವ ನನ್ನವನೆಂದೊಲಿವ ಕೃಪಾಳು
ತನ್ನಸ್ಮಿತೇಕ್ಷಣದಲಿ ಹೊರೆವ ಸಚ್ಚಿನ್ಮಯಮೂರ್ತಿ ಮುಂದಕೆ ಕರೆವ ೨೭

ಅನಾದಿ ಧ್ವಸ್ತಕಿಲ್ಬಿಷದೇವ ತಾನಾನಂತ ಕೌಟುಂಬಿ ನನ್ನ ಕಾವ
ಅನನ್ಯ ದೈವಾತ್ಮೀಯ ಜನಕೆ ಹರಿತಾನೆ ಸರ್ವೋತ್ತಮೋತ್ತಮ ಸುಖಕೆ ೨೮

ಪೀನ ಭುಜಂಗಳಿಂದಪ್ಪುವನು ಮುನ್ನೇನು ಪುಣ್ಯವನು ಮಾಡಿದೆನು
ಏನುರ್ಜಿತ ಕಾಲ ಸಂಧಿಸಿತೊ ಶ್ರೀ ಮಾನಾಥನ ರೂಪ ದೊರೆಯಿತೊ ೨೯

ಅಂಜಲಿಪುಟದಿ ಸನ್ನಮಿಸುವೆನೆ ಶ್ರೀ ಕಂಜಾಕ್ಷ ಕೃತಾರ್ಥ ಬಾಯೆಂಬುವನೆ
ಅಂಜದ ಅಕೃತಾತ್ಮನು ದುಷ್ಟಖಳಭಂಜಕ ಸ್ವಜನೇಷ್ಟನು ಕೃಷ್ಣ ೩೦

ಪುಣ್ಯಾಮರದೈವ ಪದ್ಮನೇತ್ರ ಇಂದೆನ್ನಪ್ಪಿದರೆ ಗಾತ್ರ ಪವಿತ್ರ
ಇನ್ನು ಸಂಸೃತಿ ಭಯವೆನಗಿಲ್ಲ ಎನ್ನ ಧನ್ಯನ ಮಾಡಿದ ಸಿರಿನಲ್ಲ ೩೧

ಬಂದೆ ಬಾ ಅಕ್ರೂರನೆನೆ ಜನ್ಮ ಹುಟ್ಟಿ ಬಂದುದಕ್ಕೆ ಸಾರ್ಥಕ ಧರ್ಮ
ಇಂದಿರೇಶೋರುಶ್ರವನ ಪಾದ ಮೊರೆ ಹೊಂದಿದ ಮೇಲೆ ಇಲ್ಲವು ಖೇದ ೩೨

ಸ್ನಿಗ್ಧಾಳಕಾಬ್ಜಾಯತ ನೇತ್ರ ವೇದವಾಗ್ದೇವಿಪ್ರಿಯಾಂಬುದಗಾತ್ರ
ಸ್ರಗ್ಗಂಧಲೇಪಿತ ನೋಡದಿಹ ಜನ್ಮ ಧಿಗ್ ಧಿಗ್ ಮಾನಿಸರೊಳವನಧಮ ೩೩

ಸುಹೃತ್ ತಮೋಪೇಕ್ಷೆ ದ್ವೇಷಗಳು ಇಲ್ಲ ಶ್ರೀಹರಿಗೆ ಕಲ್ಪತರುವಿನೊಲು
ಸುರ ನೃಪ ನರ ಯೋಗ್ಯತೆಯೊಳು ಫಲಗರೆವುದು ಹಾಗೆ ಅದರೊಲು ೩೪

ಔಷಧಿ ವನಸ್ಪತಿಗಳ ಚಂದ್ರ ನಿತ್ಯ ತೋಷಿಪಂತೆ ಯದುಕುಲಚಂದ್ರ
ತೋಷಿಪನೋ ತೋಷಿಸನೋ ಶ್ರೀಬಾಲ ಉದಾಸೀನ ಮಾಡನು ಜ್ಞಾನಕುಶಲ ೩೫

ತನ್ನಹಸ್ತದಿಂದೆನ್ನ ಕೈವಿಡಿದು ಹರಿಮನ್ನಿಸಿ ಮನೆಹೊಗುವನೆ ಇಂದು
ಉನ್ಮತ್ತ ಕಂಸನ ಕರ್ಮವನು ಕೃಷ್ಣ ಚೆನ್ನಾಗಿ ಕೇಳ್ವನೆ ಪ್ರಶ್ನೆಯನು ೩೬

ಶ್ರೀಕಾಂತನಂಘ್ರಿಯ ರೇಣುಗಳು ಸರ್ವ ಲೋಕೇಶಮೌಳಿಗಾಭರಣಗಳು
ಈ ಕೌತುಕ ನೋಡಿ ಭೂಸತಿಗೆ ಅನೇಕಾಭರಣ ಹೆಜ್ಜೆಗಳಿಗೆ ೩೭

Rarest Archiver

ಅಂಕುಶಾಂಬುಜಯವಧ್ವಜ ವಜ್ರರೇಖಾಂಕಿತವಾಗಿಹ ಭೂಮಿ ವ್ರಜ
ಪಂಕಜಸಂಭವಭವರ ಶಿರಗಳಂ ಸೋಂಕಿದವೆಂದನಕ್ರೂರ ೩೮

ಅಹೋ ಮುಕುಂದಾಂಘ್ರಿ ಪಾಂಸುವೆಂದು ತಾ ಮುಹಿಗೆ ಬಿದ್ದಾನಂದಾಶ್ರುಬಿಂದು
ಬಹುಪ್ರೇಮಭರಿತ ದಾನಪತಿ ಬಿದ್ದು ಹೊರಳಿದ ಭಕ್ತಿಯಲಿ ಸುಮತಿ ೩೯

ಮಹಾತ್ಮಾ ರಾಮಾಚ್ಯುತರ ಕಂಡ ಗೋದೋಹನ ಕಾಲದಿ ಭಕ್ತ ಶೌಂಡ
ಸುಹೇಮಾಂಬರ ನೀಲಾಂಬರರ ಸ್ಮಿತ ಸ್ನೇಹಾಪಾಂಗಾಂಬುಜಾಂಬಕರ ೪೦

ಅಪಿಚ ಶ್ಯಾಮಲ ಶ್ವೇತಾಂಗರ ಯುಗ್ಮ ಸುಪೀನ ಭುಜವುಳ್ಳ ಸುಂದರರ
ದೀಪಿತಾಮೋಘ ಚಂದ್ರೋಪಮರ ಬಾಲ [1]ದ್ವಿಪಭಾ[1] ಪೂರ್ಣಕಳಾಯುತರ ೪೧

ಸೌಗಂಧಮಾಲ್ಯೋರುರಾಜಿತರ ಸರ್ವ ಭೋಗಗನಕೆ ಸುಂದರವರರ
ಯೋಗೈಶ್ವರ್ಯ ಲೀಲಾಪರರ ಅಮೋಘೌದಾರ್ಯ ಗುಣಾಕರರ ೪೨

ವಜ್ರಾಂಕುಶಾಂಬುಜಧ್ವಜಚಿಹ್ನಿತ ಶುಭ ಹೆಜ್ಜೆಯಿಟ್ಟು ಭೂಪಾವನವ ಮಾಡುತ
ಸಜ್ಜೀವಿಗಳ ಪ್ರತಿಪಾಲರನು ಖಳದುರ್ಜೀವದೈತ್ಯರ ವಧಿಪರನು ೪೩

ದಯಾರ್ದ್ರನೇತ್ರ ಸ್ಮಿತವದನರನು ಲೇಶ ಭಯಾತಿರಿಕ್ತರ ಚಿದಾತ್ಮರನು
ಶ್ರೀಯಾಂಚಿತ ವನಸ್ರಗ್ಧರರ ಸರ್ವ ಪ್ರಿಯತಮೋತ್ತಮ ಹರಿಬಲರ ೪೪

ಸ್ನಾತರ ಶುಚಿವಸ್ತ್ರಾಭರಣಾಂಕರ ನಿತ್ಯ ಭೂತ ಪ್ರಧಾನ ಪುರುಷೋತ್ತಮರ
ಈ ತ್ರಿಜಗದ್ಧೇತುಗಳ ಹರ ಅತಿಪ್ರೀತಿಲಿ ಕಂಡನಕ್ರೂರ ಚತುರ ೪೫

ಆನಂದಬಾಷ್ಪದೊಳೀಕ್ಷಿಸಿದ ಸಹಸ್ರಾನನ ಶುಕ್ಲ ಕೇಶಾವೇಶ[2] [ಸ][2]
ಆನಕದುಂದುಭಿಯ ಜೇಷ್ಠ ಸುತ ಶ್ರೀ ವೇಣುಗೋಪಾಲ ಸಾಕ್ಷಾದಚ್ಯುತ ೪೬

ನೀಲ ಶ್ವೇತ ಗಿರಿಯುತೊಪ್ಪುತಿಹರ ಕಂಡ ಮೇಲೆ ಹಾರಿದ ತ್ಯಜಿಸುತ ತೇರ
ಶ್ರೀಲೋಲಬಲರಿಗೆ ಪ್ರಣಾಮವನು ಮಾಡಿ ಏಳಲೊಲ್ಲನು ಅಶ್ರುತುಂಬಿ
ಅವನು ೪೭

ನೀಲಾಂಗಬಲರಿಗೆ ದಂಡಪ್ರಣಾಮಮಾಡಿ ಕಾಲಮೇಲಿಟ್ಟ ತನ್ನ ಮಸ್ತಕವ ಪ್ರೇಮ
ಆಲಂಗಿಸಿ ಚುಂಬಿಸಿದನು ಪದವ ತಾನೇಳಲೊಲ್ಲನು ಪ್ರೇಮ ತುಂಬಿದವ ೪೮

---

[1] ದ್ವಿಪೇಭ [2] ದ

ಮೇಲಕ್ಕೆ ಏಳಲಾರನು ಮುಖವ ತನ್ನ ನಾಲಿಗೆಳೆದು ಗದ್ಗದಾಗಿರುವ
ಹೇಳುತಾನಂದಬಾಷ್ಪವು ತುಂಬಿ ಕಣ್ಣಾಲಿಗಳೊರತೆಯಿಟ್ಟವು ಉಬ್ಬಿ ೪೯

ನೀನು ನನ್ನದೆಂಬೆಚ್ಚರ ಮರೆದ ನೈಜಾನಂದವನು ಮನದಲಿ ಕರೆದ
ಜ್ಞಾನಾಂಗರುಹ ಉಬ್ಬಿದವಾಗ ತಾನೇನಂತ್ತರ ಕೊಡೆದ್ಯೋದಾಗ ೫೦

ಅಕ್ರೂರನ ಭಕ್ತಿಗೊಪ್ಪಿದನು ಶ್ರೀ ಚಕ್ರಧರಕರನಪ್ಪಿದನು
ಆಕ್ರಂದಿಸಿದೆ ಅಕ್ರೂರ ಬಾಯೆಂದ ಸ್ಮರ ಶಕ್ರೇಶಾರ್ಚಿತ ಶ್ರೀಪಾದ ೫೧

ಕೈಯಿಂದ ಕೈವಿಡಿದು ಮುಕ್ಕುಂದ ತನ್ನ ಗೇಹಕಗ್ರಜನ ಕೂಡಿ ಬಂದ
ಪ್ರಿಯೋಕ್ತಿ ಪೀಯೂಷವನುಣಿಸಿದ ಬಾ ನೀಯೆನ್ನ ತಾತನ ಸರಿಯೆಂದ ೫೨

ಆಸನವಿತ್ತನು ಸ್ವಾಗತವ ಕೇಳಿ ವಾಸುದೇವ ಸರ್ವಜ್ಞದೇವ
ಮೂಸಲಜಲದೊಳುಂಘ್ರಿಯು ತೊಳೆದ ಆರ್ಯಾ ಸಂಕರುಷಣ ಸಹಾರ್ಚಿಸಿದ ೫೩

ಬಹುಗುಣೋಪೇತಾನ್ನವ ರಚಿಸಿ ಅತಿಮಹಿಮ್ನು ಪ್ರಿಯೋಕ್ತಿಯಿಂದಲಿ ಉಣಿಸಿ
ಬಹುಕೃತಾರ್ಥನಾದನಕ್ರೂರನು ಶ್ರೀ ಅಹಿಶಯನನ್ನ ಹೊಗಳಿದನು ೫೪

ಸ್ರಗ್ಗಂಧ ಮಾಲ್ಯಾಂಬರಾಸ್ಯವಾಸದ ದಿವ್ಯ ನಾಗವಲ್ಲಿದಳವ ಸೇವಿಸಿದ
ಶ್ರೀ ಗೋವಿಂದ ಸೋಂಕಿದ ಪವಿತ್ರಗಾತ್ರ ಭಾಗವತೋತ್ತಮ ಅಕ್ರೂರ
ಪಾತ್ರ ೫೫

ಸಕಲ ಭೋಗವ ಸತ್ಯಮತಗಳ ಹರೆ ಶ್ರೀ ಕೃಷ್ಣಾರ್ಪಣವೆಂದನಾ ಕುಶಲ
ಶುಕಮುನಿ ಪೇಳಿದ ನೃಪತಿಗೆ ಈ ಶ್ರೀ ಕೃಷ್ಣನ ಕಥಾಮೃತವ ಆವಗೆ ೫೬

ಭಕುತಿಲಿ ಹೇಳಿ ಕೇಳಿದರಿಗೆ ಭುಕ್ತಿ ಮುಕುತಿ ಕೊಡುವ ಹರಿ ಬ್ಯಾಗೆ
ಭಕುತವತ್ಸಲ ಪ್ರಸನ್ವೆಂಕಟಪತಿ ಭಕುತಿಯುಳ್ಳವನೆ ಧನ್ಯನು ನಿತ್ಯ ೫೭

೫೬

ರಾಗ : ವಸಂತ **ತಾಳ : ಝಂಪೆ**

ಶ್ರೀಯುರಮಣ ಶ್ರೀ ಕೃಷ್ಣಪ್ರಿಯನಾದ ದಾನಪತಿ
ಜಯವು ಹರಿದಾಸರಿಗೆ ಭಯ ದ್ವೇಷಿಗಳಿಗೆ ಪ.

Rarest Archiver

ಜಗದ ಆದ್ಯಂತವೆಲ್ಲ ಬಲ್ಲ ಲಕ್ಷ್ಮೀಕಾಂತ
ಮಗುಳೆ ಕೇಳಿದನು ಭೋಜಪನ ವೃತ್ತಾಂತ
ವಿಗಡ ಕೃತ್ಯವ ಹೇಳ್ದನಕ್ರೂರ ವಿಸ್ತೃತ
ಮುಗುಳುನಗೆಯಲಿ ಕೇಳ್ದ ಜಗದೇಕ ಶಾಸ್ತ ೧

ಸುಖದಿ ಮಲಗಿದ ದಾಂತಮಂಚದಲಿ ಅಕ್ರೂರ
ಸಕಲ ಲಭ್ಯವು ಹರಿಯ ಪಾದಾಶ್ರಿತರಿಗೆ
ಭಕುತಿ ಭಾಗ್ಯವು ಒಂದು ಬೇಡರಿನ್ನೊಂದರ್ಥ
ಮುಕುತಿಗಧಿಕೆಂಬ ಹರಿಭಕುತನಿಕುರುಂಬ ೨

ವೈರಾನುಬಂಧ ಯದುವಂಶವಲ್ಲಿದ್ದವನ
ಶೌರಿಯನು ಕೊಲ್ಲುವ ವಿಚಾರದಲ್ಲಿದ್ದವನ
ನಾರದನ ಮುಖದಿ ತನ್ನ ಜನ್ಮವನು ಕೇಳ್ದವನೆ
ಶೌರ್ಯೋಕ್ತಿಗಳನು ಕೇಳ್ದನು ಸುಪ್ರಸನ್ನ ೩

ರಾಜಾಜ್ಞೆ ಹೇಳಿದನು ನಂದನಿಗೆ ಅಕ್ರೂರ
ಗೋಜೀವನಾಥ ಘೃತಪಾಲುದಧಿ ಭಾಂಡಗಳ
ರಾಜಿಸುವ ಶಕಟಗಳ ತುಂಬಿ ಹೇರಿಸಿದನು
ರಾಜೀವಸಖನುದಯಕೆ ಗೋಪವರಿಂದ ೪

ನಾವೀಗುಪಾಯನವನೊಯ್ದು ಭೋಜೇಶ್ವರಗೆ
ಈವ ಮಥುರೆಯಲಿ ಉತ್ಸವವನೀಕ್ಷಿಸುವ
ಆವಾವ ದೇಶದಿಂ ಪ್ರೇಕ್ಷಕರು ಬಂದಿಹರು
ನಾವು ಭೋಜಪನಾಪ್ತಬಂಧುಗಳು ಎಂದ ೫

ಏವಂವಿಧ ಘೋಷಿಸಲು ಗೋಕುಲದಿ ಶೀಘ್ರದಲಿ
ಗೋಪಿಯರು ವ್ಯಥಿಸಿದರು ಚಿತ್ತವ್ಯಗ್ರದಲಿ
ಗೋವಿಂದರಾಮರನು ಮಥುರೆಗೊಯ್ಯುವನೆಂದು
ದಾವ ಅಕ್ರೂರ ಗೋಷ್ಠಕೆ ಬಂದನೆಂದು ೬

ಎದೆಗೆ ವ್ಯಥೆ ತಾಗಿ ಮುಖಕಾಂತಿ ಆ ಕ್ಷಣ ಹೋಗಿ
ಸದನ ದುಕೂಲವ ನೀಗಿ ಸಾಗಿ ದುಶ್ಚಿತರಾಗಿ
ಬದಿಯ ಜನರನು ಕಾಣದೆ ಬಿಚ್ಚಿದ ತುರುಬು ನೋಡದೆ
ಸುದತೇರಖಿಳರೆಲ್ಲ ಸೊಲ್ಮರೆದರೆಲ್ಲ ೭

Rarest Archiver

ವಿಷಯ ಬಯಕೆಯ ಬಿಟ್ಟು ಕೃಷ್ಣಧ್ಯಾನವು ನಟ್ಟು
ಬಿಸಜನಯನನ ಆಸ್ಯ ಸ್ನೇಹಸ್ಮಿತಹಾಸ್ಯ
ಶಶಿಮುಖಿಯರ್ ನೆನೆನೆನೆದು ನೇತ್ರಬಾಷ್ಪವ ತಂದು
ಅಸವು ವಿರಹಾಗ್ನಿಯಲಿ ಬೆಂದು ಭ್ರಾಂತರುದು ೮

ಹರಿಯ ನರ್ಮೋಕ್ತಿ ಸೌಂದರ್ಯ ಸಖ್ಯವು ಪ್ರೀತಿ
ವರೋದ್ದಾಮ ಚರಿತೆಯನು ಸಲೆ ಸ್ಮರಿಸಿ ಸ್ಮರಿಸಿ
ಸರಸಾಕ್ಷಿಯೊಳಶ್ರುಗರೆದು ಮೃಗಶಾವಾಕ್ಷೆರ್
ಮರೆದು ತನುವನ್ನು ಶೋಚಿಸಿ ಅಂದು ನೊಂದು ೯

ಎಲೆ ವಿಧಿಯೆ ಇದು ಸಲ್ಲ ನಿನ್ನಲ್ಲಿ ಕರುಣೆಲ್ಲ
ಗೆಳೆಯ ಹರಿ ಸಂಯೋಗ ಮಾಡಿಸಿ ವಿಯೋಗ
ಇಳೆಯೆಳೆಯರ ತೆರದಿ ಚೇಷ್ಟಿಸುವೆ ನೀನಿಂತೆ
ಸಲೆ ನಿನಗೆ ಉಚಿತೆ ನಮ್ಮ ಶೋಕ ನಿನಗೊಳಿತೆ ೧೦

ಕುರುಳು ಕುಟಿಲಾವೃತದ ವಕ್ತ್ರ ಅಂಬುಜನೇತ್ರ
ತರುಣಿಯರ ಹೃತ್ತಾಪ ಪರಿಹರಿಪ ಶ್ರೀಪಾ
ಪುರುಷೋತ್ತಮನು ಹೋಗೆ ಪ್ರಾಣ ನೀಗುವೆವೀಗೆ
ಸರಸಿರುಹಭವ ನಿನಗೆ ಪುಣ್ಯಾಗ್ರಗಣ್ಯ ೧೧

ಅಕಟ ಕ್ರೂರಹೃದಯ ನಿನಗಕ್ರೂರಾಭಿಧವೇಕೆ
ಸುಖಿದಿ ನಮ್ಮಯ ಕಣ್ಗೆ ಗೋಚರನ ನಂದಜನ
ಅಕರುಣಿಯೆ ನೀನೊಯ್ವೆ ಪ್ರಾಣನಾಥನ ಸೇವೆ
ನಿಖಿಳ ಸಖಿಯರಿಗೆಲ್ಲ ದುರ್ಲಭಾಯ್ತಲ್ಲ ೧೨

ಸ್ವಜನ ಸದನವನು ಗಂಡರು ಮಕ್ಕಳಾರ್ಯರನು
ತ್ಯಜಿಸಿ ಮಧುಹರನ ದಾಸಿಯರಾಗಿ ಇಹೆವು
ವ್ರಜಪನಣುಗನ ಆಸ್ಯ ಲೇಶ ಸೌಂದರ್ಯಹಾಸ
ರಜನಿಯಲಿ ಸಖಿಯರಿಗೆ ತುಷ್ಟಿಯಹುದಾಗೆ ೧೩

ಹರಿಯ ಸುಹೃದ್ಭಂಗ ಕ್ಷಣಮಾತ್ರ ತಾಳದಿಹ
ತರುಣಿಯರು ಬಳಲುತಿರೆ ತೋರುವ ಮುರಾರಿ
ಪರಮಕರುಣಾಪಾಂಗ ನೋಟದೆಮ್ಮಂತರಂಗ
ಹರುಷಸುಧೆಯೊಳಗದ್ದಿ ಹೊರೆವನು ದಯಾಬ್ಧಿ ೧೪

Rarest Archiver

ನಗರದಬಲೆಯರು ಹಾಸಾಸ್ಯಲಜ್ಜಾಂಕಿತರು
ಜಗತ್ಪತಿಯ ಕಂಡು ಸೌಂದರ್ಯಸುಧೆಯುಂಡು
ಮಿಗಿಲು ಹಸಿದಿಹ ನೇತ್ರಕ್ಕಬ್ಬವಪ್ಪುದು ಸತ್ಯ
ಸಂಗುಣೇರಿಗೆ ಮುಕುಂದಾಪಾಂಗದಿಂದೊಲಿದ ೧೫

ಮಡದಿಯರ ಭ್ರೂವಿಲಾಸಕೆ ಮೆಚ್ಚಿ ನೋಟದ ಹಾಸ
ಕಡಲೊಡೆಯ ಕಾಂಬ ವಶವನು ಮಾಡಿಕೊಂಬ
ಬಿಡರು ಮೃಗನೇತ್ರೆಯರು ಕೃಷ್ಣ ಭಾವುಕೆಯರು
ಬಡವರು ನಮ್ಮೆಡೆಗೇಕೆ ಬಹನೆಂಬ ಬಯಕೆ ೧೬

ಮಹೋತ್ಸವವಾಗಿಹುದು ಮಧುರಾಪುರದ ಮಾರ್ಗದಲಿ
ಬಹನು ಮುನಿಜನಧ್ಯೇಯ ಬ್ರಹ್ಮಸ್ಮರರಯ್ಯ
ಬಹುಜನರು ನೋಡುವರು ಪುಣ್ಯಫಲಕೆಣೆಯಿಲ್ಲ
ಶ್ರೀಹರಿಯು ನಮಗೆ ದೂರಾದ ಸಿರಿನಲ್ಲ ೧೭

ದಾಶಾರ್ಹ ವೃಷ್ಣಿ ಸಾತ್ವತಾಂಧಕ ಭೋಜಜಾತಿಯರು
ಏಸೇಸು ಜನ್ಮಜನ್ಮಗಳ ಪುಣ್ಯಫಲಗೂಡಿ
ಈಶನನು ಕಾಂಬುವರು ಇಂದು ನಿಜ ಸ್ನೇಹದಲಿ
ಈ ಸಚಿವನೇಕೆ ನಮಗ್ವೈರ್ಯಾದ ಸುಖಕೆ ೧೮

ಈ ಕ್ರೂರ ಕರ್ಮವನು ಮಾಡಿದನು ಗಡ ನಮ್ಮ
ಚಕ್ರಿಯ ವಿಯೋಗಿಸಿದನೀಗ ಅತ್ಯಧರ್ಮ
ಆಕ್ರಂದಿಸಿದವನಿಗೆ ಅಜ್ಞಲೋಕವು ಕರೆವು
ದಕ್ರೂರನೆಂಬ ವಾಕು ಸಾಕು ಬಲು ಪೋಕು ೧೯

ಪ್ರಿಯಾತ್ ಪ್ರಿಯನ ಅಗಲಿಸಿದವನಿಗತಿ ಪಾಪ
ದಯಾರ್ದ್ರ ಹೃದಯ ಶೂನ್ಯನಿಗೆ ಪಾಪ
ಸ್ತ್ರೀಯರ ಸುದುಃಖವನು ನೋಡುವವನಿಗೆ ಪಾಪ
ಆಯಾಸಬಡಿಸೆ ಬಾಹೋದವಗೆ ಪಾಪ ೨೦

ಬಂಡಿಯನು ಹೂಡುವರು ಗೋವಳರು ದುರ್ಮದರು
ಉಂಡುಂಟ್ಟು ಸೊಕ್ಕಿಹರು ಸಚಿವನಿಲ್ಲಿ ಬರಲು
ಹಿಂಡು ಹಿರಿಯರು ಉಪೇಕ್ಷಿಪರು ದೈವಪ್ರತಿಕೂಲ
ಪುಂಡರೀಕಾಕ್ಷನ ಒಲುಮೆ ಕೊರತೆಯನರಿತು ೨೧

Rarest Archiver

ನಡೆಯಿರಸಿಯರಿರ ನಿವಾರಿಸುವ ಅಚ್ಯುತನ
ಸಡಿಯೇನು ಜನದಂಜಿಕೇಕೆ ವೃದ್ಧರದು
ಕಡಲೊಡೆಯನಡಿಗಳಲಿ ದೃಢಭಕ್ತಿಯರಕವಿರೆ
ಬಿಡನು ವೇಣುಗೋಪಾಲ ಮಡದಿಯರನೆಲ್ಲ ೨೨

ನಿಮಿಷ ಕೃಷ್ಣಾಚ್ಯುತನ ವಿಯೋಗ ಸ್ಮರವೇಗ
ರಮೆಯರಸನನುಗ್ರಹವು ಕುಂದಾಯಿತೆಮಗೆ
ತಮೋವೈರಿ ಅಸ್ತಂಗಿರಿಗೆ ಸಾಗೆ ಗೋಪಾಲ
ಚಮುಗೂಡಿ ಗೋಧೂಳಿಲಿಪ್ತಕುಂತಳನು ೨೩

ಕಮನೀಯವಕ್ತ್ರ ಧೇನುಗಳ ಮಧ್ಯದಿ ತೋರ್ವ
ಕಮಲಲೋಚನ ವೇಣುವನ್ನು ನಾದಿಸುವ
ರಮಣೀಯಪಾಂಗದಿಂ ರುಚಿರಸ್ಮಿತಹಾಸದಿಂ
ರಮಣಿಯರ ಮನೋರಥವ ಪೂರೈಪ ಯದುಪ ೨೪

ಚಿತ್ತಜನಯ್ಯನ ಮುಗುಳುನಗೆ ಸುಕಟಾಕ್ಷ
ನೇತ್ರಾಮೃತವನುಣದೆ ಇಹುದಾವ ಪಕ್ಷ
ಹೆತ್ತವರ ಮರೆದೆವಾತನ ಸ್ನೇಹದಿಂಬಿನಲಿ
ನಿತ್ಯಕ್ಷಣಗಳ ನಾವು ಕಳೆವ ಬಗೆ ಹೇಗೆ ೨೫

ಹೀಗೆಂದು ಗೋಪಿಯರು ವಿರಹದಲಿ ಕಾತರರು
ಯೋಗೇಶ್ವರೀಶ್ವರಂಘ್ರಿಕಮಲಮಧುಪರು
ನೀಗಿದರು ಲಜ್ಜೆಯನು ಮೌನಿನಿಕರದವೋಲು
ಶ್ರೀಗೋಪತಿ ಭುವನನಾಥನ ಸತಿಯರು ೨೬

ರೋದಿಸಿದರ್ ದೀನಸ್ವರರಸದಲರ್ದಿತರಾಗಿ
ಮಾಧುರಿಗೆ ಪ್ರಿಯತಮನು ಪೋಗಲಾಗಿ
ಶ್ರೀಧಾಮ ದಾಮಸಖ ಕೃಷ್ಣ ಗೋಪತಿಯೆಂದು
ಈದೇಹ ಪ್ರಾಣೇಂದ್ರಿಯವು ನಿನ್ನದೆಂದು ೨೭

ಕೆಲದೆಯರಿಗೆ ದುಃಖರಾತ್ರಿ ಹೋಯಿತು ಅನಕ
ನಳಿನಸಖನುದಯ ಕ್ರಿಯೆಯಕ್ರೂರ ಮುಗಿಸಿ
ಅಲಸದೆ ರಥಕೆ ತೇಜಿಯ ಹೂಡೆ ನಂದ ಬಂಡಿ
ಗಳಿಗೆ ಅನಡುಹ(ದ್ವ?)ಗಳನು ಹೂಡಿ ಹೊರಿಸಿ ೨೮

Rarest Archiver

ಅರಸಗೆ ಉಪಾಯನವ ಕೊಡುವ ಗವ್ಯಾಮೃತವ
ತರಿಸಿ ಕೊಡಗಳನು ತುಂಬಿಸಿದ ಶಕಟಗಳ
ಹರುಷ ಮಿಗಿಲಾಗಿ ಗೋಪಳೆರು ಹೇರಿದರು ಸಲೆ
ಪಿರಿದು ದುಃಖಿತರಾದರಬಲೇರವಿಸ್ಮಿತರು ೨೯

ಮುಖದ ಕಳೆಗುಂದ್ಯೈದಿ ಬಂದು ನಿಂತರು ಪ್ರಾಣ
ಸಖ ನಮ್ಮ ಕರೆದೊಯ್ವನೆಂಬಾಸೆವಿಡಿದು
ಸಖಿಯರತಿ ರೋದಿಸಲು ಸಂತೈಸಿದನು ವಾರ್ಷ್ಣಿ
ದುಃಖಿಸದಿರಿ ಶೀಘ್ರ ಬಹೆನೆಂದನು ಮುಕುಂದ ೩೦

ರಥಧ್ವಜವು ಕಣ್ಗೆ ತೋರ್ಪನಕಬಲೆಯರು ಮತ್ತೆ
ರಥರಜವು ಕಾಂಬನಕ ಹೋಗಿ ಹಿಂದಿರುಗಿ
ರತಿಪತಿಯುಪಿತನಾಶೆ ನೈರಾಶ್ಯ ನಮಗೆಂದು
ಅತಿಕ್ಲೇಶದಲಿ ಅಂದು ಬಂದರ್ ಮನನೊಂದು ೩೧

ರಥಚರಣಧರನ ಲಾವಣ್ಯರೂಪ ಧ್ಯಾನ
ಮತಿಗೆ ನಿಲುಕಿಸುತ ಕಣ್ಣೀರ ಮಳೆಗರೆವುತ
ವ್ಯಥಿತ ಹೃದಯರು ತಿರುಗಿ ಬಂದರು ವ್ರಜಕ್ಕಾಗಿ
ಸತತ ಪ್ರಿಯನ ಚೇಷ್ಟೆ ಸಲೆ ಸುಗುಣ ಗೋಷ್ಠಿ ೩೨

ಅತಿ ಮಂಜುಳ ಸ್ವರದಿ ಪಾಡುವರು ನೋಡುವರು
ಸತಿಯರು ತಮ್ಮ ಹೃದಯಕಮಲದಲ್ಲಿಟ್ಟು
ಇತರ ವಿಷಯ ಮರೆದು ಜರಿದು ಅಹಂಭಾವ
ಅತಿಕ್ರಮಿಸಿ ಮುಕುತರ ಸ್ವಭಾವದಬಲೆಯರು ೩೩

ಒಪ್ಪಿದರು ಜೀವನ್ಮುಕ್ತ ಹರಿಭಕ್ತರು
ಇಪ್ಪರಲ್ಲ್ಯನವರತ ಹರಿಯಗುಣ ಚಿಂತನೆಯ
ತಪ್ಪರರೆಗಳಿಗೆ ಭಗವಜ್ಜನರು ಸಜ್ಜನರು
ಶ್ರೀಪ್ರಿಯನ ಪ್ರಿಯರು ನೆನೆವರಘಹರರು ೩೪

ರಥವ ದೂವಾಳಿಸಿದ ವಾಯುವೇಗದ್ಯಕ್ರೂರ
ಮತಿವಂತ ಹರಿಬಲರ ಸಹ ಯಮುನೆಗೈದಿ
ರಥ ನಿಲಿಸಿ ತರುಮೂಲದಿಳಿದರಚ್ಯುತ ಬಲರು
ಅತುಳ ನಿರ್ಮಲಜಲ ಸೇವಿಸಿ ಕುಳಿತರು ೩೫

Rarest Archiver

ರಥದಿ ಉಭಯಂತರಿರಲು ಸ್ನಾನಕೈದಿದ ಬೇಗ
ಅತಿ ಅಘವಂರ್ಷಣ ಮಾಡೆಲದುಂಭಂತವ
ಸತತ ನೋಡುವ ಬ್ರಹ್ಮ ಸನಾತನಭ್ಯಾಸದಲಿ
ವಂತಿಗೆ ಹರಿ ಹಲಿ ತೋರ್ದರಾಶ್ಚರ್ಯದಲಿ ೩೭

ಹೊರಗೆ ರಥದಲ್ಲಿದ್ದರೆಂತು ತೋರಿದರಿಲ್ಲಿ
ಪರಮ ಕೌತುಕವೆಂದು ಮೇಲೆ ನೋಡಿದನು
ಹರಿಬಲರ್ಯಥಾಸ್ಥಿತಿಯ ಕಂಡು ಸಲೆ ಮುಳುಗೆ ಅಘ
ಮರಷಣದಿ ತೋರಿದರು ಪರಮ ಪಾವನರು ೩೭

ಸುರೋರಗರು ಸಿದ್ಧಚಾರಣರು ಕೈ ಮುಗಿದು ತಮ್ಮ
ಶಿರವ ಬಾಗಿಸಿ ಬಹಳ ಸ್ತೋತ್ರ ಮಾಳ್ಪದನು
ಶಿರಸಫಣಸಹಸ್ರ ಶ್ವೇತಶೃಂಗಾಭಮಣಿ
ಕಿರೀಟ ಕುಂಡಲ ಕರ್ಣ ನೀಲಾಂಬರನ್ನ ೩೮

ಶರೀರದಾಸನದಲ್ಲಿ ಕುಳಿತಿರ್ದ ಶ್ಯಾಮಲನ
ವರಪೀತಾಂಬರ ಚತುರ್ಭುಜ ಅಬ್ಜಾಂಬಕನ
ಚಿರರುಚಿರ ನಗೆಮೊಗನ ಪ್ರಸನ್ನಾವಲೋಕನನ
ಅರುಣಾಧರ ಸುಕಪೋಲ ಸತ್ಕರ್ಣಯುಗನ ೩೯

ವರಭ್ರೂವಿಲಾಸನ್ನ ಕಂಬುಕಂಠಾನ್ವಿತನ
ಶಿರಿ ತ್ರಿವಳಿನಾಭಿಯು ಗಭೀರ ಬೃಹದ್ಭುಜನ
ಭರಿತಭುವನೋದರ ವಿಸ್ತರವಕ್ಷ ಸುನಿತಂಬ
ಕರಭೋರು ದ್ವಯಜಾನುಜಂಘಾನ್ವಿತನ ೪೦

ಅರುಣನಖಾಂಗುಲಿ ದೀಪ್ತ ಚರಣವಾರಿಜಯುಗಳ
ಸರಸಿಜಾಂಕುಶವಜ್ರಧ್ವಜಯವಾಂಕಿತದ
ಪರಮಪದತಳನ ಪಾವನಕರ ಜಗತ್ರಯುನ
ಸುರಮೌನಿ ಹೃದಯಪೀಠದಲಿ ರಾಜಿಪನ ೪೧

ಕಿರೀಟ ಕುಂಡಲ ಕಟಕ ವರಕೇಯೂರಾಮೋಘ ಪದಕ
ಚಿರರತ್ನಕಟಿಸೂತ್ರ ಕೌಸ್ತುಭ ಬ್ರಹ್ಮಸೂತ್ರ
ಸಿರಿವತ್ಸ ವೈಜಯಂತಿಹಾರ ನೂಪುರ ಮಾಲಾ
ಧರನ ಅರೆಶಂಖಗದಾಂಬುಜಕರ ಸ್ವಸುಂದರನ ೪೨

Rarest Archiver

ಅಜವಿಪಾಹಿಪಸುರಪ ಪೂಜಿಪ ಪದಾಬ್ಜ ಜಯ
ವಿಜಯಂ ನಂದಸುನಂದ ಪಾರ್ಷದಾನ್ವಿತನ
ದ್ವಿಜ ಮುನಿಸುರಾದ್ಯ ಪ್ರಹ್ಲಾದ ನಾರದರಾದಿ
ಸುಜನಮೋಹರ ಸೇವ್ಯನಹನ ಗುಣಗಹನ ೪೩

ಸ್ವಯಶೋವಚನ ಕೀರ್ತ್ನೆ ಮಾಡುವನ ಮನ್ನಿಸುವ
ಶ್ರೀಯು ಪುಷ್ಟಿ ಶಾಂತಿ ಮೊದಲಾದ ಶಕ್ತಿಯರು
ಭಯ ಭಕ್ತಿಯಿಂದಿಹರು ಆಪನ್ನ ಭಾವುಕರಂ
ಶ್ರೀಯಪತಿಯ ಮಹಿಮೆಯನು ಕಂಡನಕ್ರೂರ ೪೪

ಅಪರಿಮಿತ ಮಹಿಮೆಯನು ನೋಡಿ ವಿಸ್ಮಿತನಾದ
ಸುಪ್ರೇಮಲೋಚನದಿ ಬಾಷ್ಪವನು ತಂದ
ತಾ ಪರವಶದಿ ಅಂಗರುಹಪುಳಕಿತನಾಗಿ
ಶ್ರೀಪರಬ್ರಹ್ಮನ ಮಹತ್ವವನು ತಿಳಿದ ೪೫

ಅತ್ಯಂತ ಭಕ್ತಿಯಲಿ ಗದ್ಗದೋಚ್ಚಾರದಲಿ
ವ್ಯಕ್ತವಾಗದು ಸ್ತೋತ್ರ ಮಾಡುವೆನೆನ್ನಲು
ಚಿತ್ತದ್ರವದಲಿ ನಮಿಸಿ ಧೈರ್ಯವನು ಮಾಡಿ ಹರಿ
ಸ್ತೋತ್ರ ಮಾಡಿದ ಅಂಜಲಿಪುಟದಿ ನಿಂದು ೪೬

ದಿನದಿನದ ಸ್ನಾನದಲಿ ಅಹಿಪತಿಯ ಕಾಂಬನಿಂ
ದಿನದಿನದಿ ಅನಂತಆಸನನ ಕಂಡಾ
ಘನಹರುಷದಲಿ ಸ್ತೋತ್ರ ಮಾಡಲನುವಾದ ಚಿದ್
ಗುಣವಾರ್ಧಿ ಆಶ್ರಿತರ ಸುರಭೂರುಹನ್ನ ೪೭

ಪರದೇವತೆಯು ಕೊಲ್ಲಿಸುವೆನೆಂದು ಕರೆಸಿದನು
ಪರಮಪಾಪಾತ್ಮ ಭೋಜಪ ಸಚಿವನಟ್ಟಿ
ಪರಮ ಭಾಗವತರಿಗಧರ್ಮವೇ ಧರ್ಮವಹುದು
ವರ ದಾನಪತಿಗೊಲಿದು ಹರಿತೋರ್ದನಂ ತನ್ನ ೪೮

ಪ್ರಸನ್ನವೆಂಕಟಪತಿಯ ಪಾದಾಶ್ರಿತಾಕ್ರೂರ
ವಿಷಮ ಪ್ರತಿಕಂಸನ ಆಜ್ಞೆಯಲಿ ವ್ರಜಕೆ
ಬಿಸಜನಾಭನ ದರುಶನಕೆ ಬಂದು ಕಂಡ ಗಡ
ಅಸಮಮಹಿಮೆಯನು ಭಾಗವತ ಶಿರೋರತ್ನ ೪೯

Rarest Archiver

೫೭

ರಾಗ : ಸುರಟಿ **ತಾಳ : ಝಂಪೆ**

ಪಿರಿದುಸುಖ ಪೊಗಳೆ ಹರಿಯ ಮಹಿಮೆ ನರ
ಹರಿಯ ದಾಸರಿಗೆ ಹರಿಯ ಒಲುಮೆ
ಪರಮಭಾಗವತನಕ್ರೂರ ಅಘ
ಮರಷಣದಿ ಸ್ತುತಿಮಾಳ್ಪ ವಿವರ ಪ.

ಕಂಡನಾಶ್ಚರ್ಯ[1]ವ[1] ನೀರಿನಲಿ ಭಕ್ತ
ಶೌಂಡ ಕರವೆರಡಂಜಲಿಯಲಿ
ಮಂಡೆಯನು ಬಾಗಿ ಭಕ್ತಿಯಲಿ ಶ್ರೀ
ಪುಂಡರೀಕಾಕ್ಷನಿದಿರಿನಲಿ ೧

ಹೇಯಂಬುಜಾಕ್ಷ ನಮೋ ನಮಸ್ತೇ ನಮೊ
ಈ ಎರಡೇಳುಭುವನ ಪ್ರಭೊ ತೆ
ಶ್ರೀಯಾದಿ ಲಕ್ಷ್ಮೀನಾರಾಯಣ ತವನಾ
ಭಿಯ ಪದ್ಮದಲಿ ಪೆತ್ತ್ಯಜನ ೨

ನೀನೀಗ ಬೊಮ್ಮನೊಳು ಪೊಗುವೆ ನಾ
ನಾನಂತ ಜಗವ ಪುಟ್ಟಿಸುವೆ
ಅನಾದಿ ಜೀವರ ಕರ್ಮವನು ನೋಡಿ
ನೀನೆ ಗುಣತ್ರಯದಿ ಬಂಧಿಸುವೆ ೩

ಸರ್ವೇಂದ್ರಿಯಾರ್ಥದಧಿಕಾರ ಕೊಟ್ಟೆ
ಓರ್ವಮುಖ್ಯ ಪ್ರಾಣನಿಗೆ
ಸರ್ವ ಸುರರ ತನ್ನಿಚ್ಛೆಯಲಿ ಇಟ್ಟೆ
ಸರ್ವೇಶ್ವರ ನಿನ್ನ ಆಜ್ಞೆಯಲಿ ೪

ನೀ ನಿಯಾಮಕ ಲಕುಮಿಯ ನಲ್ಲ ನಿನ್ನಾ
ಜ್ಞಾನಸಾರ ಪ್ರವರ್ತಕರು ಎಲ್ಲ
ಏನೇನು ಸ್ವಾತಂತ್ರ್ಯ ಸುರರಿಗಿಲ್ಲ ಜ್ಞಾ
ನಾನಂದ ಸ್ವೇಚ್ಛೈಕಲೀಲ ೫

---
1 ಫ

Rarest Archiver

ನೀನೆಲ್ಲರ ಹೃದ್ಗುಹದಲ್ಲಿರುವೆ ನಿನ್ನ
ಕಾಣದೆಲ್ಲರು ಜಗದ್ಗುರುವೆ
ನೀ ನಿನ್ನ ಮಾಯದಿ ಮೋಹಿಸುವೆ ಹರಿ
ನೀನೆ ಅಜ್ಞಾನ ಕವಿಸುವೆ ೬

ಶುದ್ಧಾತ್ಮಯೋಗಿಗಳ್ ಯೋಗದಲಿ ಅನಿ
ರುದ್ಧ ಕಾಂಬರು ಪ್ರಸಾದದಲಿ
ಅಧ್ಯಾತ್ಮ ಭೂತ ದೈವದಲಿ ಕೆಲರು
ವಿದ್ಯೋನ್ನತಿ ವಿವಿಧ ಯಜ್ಞದಲಿ ೭

ಇದ್ಧ ನಿನ್ನನು ಪೂಜಿಸುವರು ನಿನ
ಗಾದ್ಯಂತ ಕರ್ಮವನರ್ಪಿಪರು
ಶುದ್ಧಜ್ಞಾನಿಗಳು ಜ್ಞಾನದಲಿ ಯಜ್ಞ
ಪದ್ಧತಿ ವಿಧಿಯಲರ್ಚಿಪರು ೮

ನೀನೇಕರೂಪ ಬಹುರೂಪ ತಿಳಿದು
ನಾನಾಪ್ರಾಕಾರದಿ ಭಜಿಪ
ಜ್ಞಾನಿಗಳು ಭೇದಾಭೇದದಲಿ ಅರ್ಚಿಪರು
ನಾನಾಚಾರ ಮಾರ್ಗದಲಿ ೯

ವಾಚಾದಿ ಕರ್ಮಗಳಿಂದ ವೇದ
ವಾಚ್ಯನು ಪರಾತ್ಪರ ಮುಕುಂದ
ಯೋಚನೆಗೆ ನಿಲುಕದಾನಂದ ಎಂದು
ಸೂಚಿಪವು ಉಪನಿಷದ್ವೃಂದ ೧೦

ಹರಿ ನಿನ್ನ ಪೆಸರ ಸುರರಿಟ್ಟೆ ಸರ್ವ
ಸುರರ ಯೋಗ್ಯತೆ ಪದವಿ ಕೊಟ್ಟೆ
ಗಿರಿಜ ನದಿಗಳಂಬುಧಿ ಬೆರೆವ ಪರಿ
ಸುರಋಷಿ ಪಿತೃಗಳ್ ತರ್ಪಣವ ೧೧

ನಿನಗೋಸುಗ ಜ್ಞಾನಿಗಳರ್ಪಿಪರು ನಿನ್ನ
ವಿನಾ ಅರ್ಚನೆ ಅವಿಧಿಯೆಂಬುವರು
ಅನಿಮಿಷರು ನಿನ್ನ ಸೇವಕರು ತಮ್ಮ
ಘನತೆಯೊಲ್ಲರು ಭಯಾನ್ವಿತರು ೧೨

Rarest Archiver

ಸತ್ವ ರಜಸ್ತಮಂ ಮೂರುಂ ಗುಣವು ಜಗವ
ವಿಸ್ತರಿಸಿ ಒತ್ತ್ಯಾಳುತಿಹವು
ಎತ್ತೆತ್ತಲೋತಪ್ರೋತಾಗಿ ಆ ಬ್ರ
ಹ್ಮಸ್ತಂಭ ಪರಿಯಂತವಾಗಿ ೧೩

ನೀ ನಿಯಂತಾರ ಜಗಕೆಲ್ಲ ಇಲ್ಲ
ದೇನು ಕಾರಣ ವಿಶ್ವಕಿಲ್ಲ
ನೀನಂತರ್ಬಾಹ್ಯ ಸ್ವತಂತ್ರ ಆ
ಧೀನವು ನಿನ್ನದೇ ತಂತ್ರ ೧೪

ನೀನಗ್ನಿ ಮುಖದಿಂದ ಪಡೆದೆ ನೀ ಪೃಥ್ವಿ
ಯನು ಅಂಘ್ರಿಯಿಂದ ಪಡೆದೆ
ನೀನಿನನ ನೇತ್ರದಿಂ ಪೆತ್ತೆ ನಾಭಿ
ಯಿಂದ ಅಂತರಿಕ್ಷ ಹೊತ್ತೆ ೧೫

ರಕ್ಷಿಸಿದೆ ದಿವಿ ತಲೆಲಿಟ್ಟು ಸಹ
ಸ್ರಾಕ್ಷಾದ್ಯರ ತೋಳಿಂಬಿಗಿಟ್ಟು
ದಿ(ಕ್ಕು?)ಗಳ ಶ್ರೋತ್ರದಿ ಸೃಜಿಸಿದೆ ನಿನ್ನ
ಕುಕ್ಷಿಯೊಳಬ್ಧಿಗಳ ತಾಳ್ದೆ ೧೬

ಹೇ ಮಾರುತನ ಪ್ರಾಣದಿಂದ ಅಂಗ
ರೋಮಂಗಳಲಿ ವೃಕ್ಷವೃಂದ
ನೀಮಂತ್ತಮಾಂಗರುಹಗಳಲಿ ಘನ
ಸ್ತೋಮವನು ಪಡೆದೆ ಕರುಣದಲಿ ೧೭

ನಖಪಂಕ್ತಿಯಿಂದದ್ರಿಗಳನು ಪಕ್ಷ್ಮ
ನಿಕರದಿಂದಹಸ್ಸು ರಾತ್ರಿಗಳನು
ಪ್ರಕಟಿಸಿ ದಕ್ಷಾದ್ಯರ ಶಿಶ್ನದಲಿ ವೃಷ್ಣಿ
ವ್ಯಕುತ ಮಾಡಿದೆ ವೀರ್ಯದಲಿ ೧೮

ಮರ್ತ್ಯ ಜನಕಾಪ್ಯಾಯನವೆಂದು ಏವಂ
ರೀತ್ಯಾ ಸೃಜಿಸಿದಾಪ್ತ ಬಂಧೊ
ನಿತ್ಯಾವ್ಯಯಾತ್ಮ ಪುರುಷೋತ್ಮ ಜೀವ
ರುತ್ಪತ್ತಿ ಪಾಲನ ಪರಾತ್ಮ ೧೯

Rarest Archiver

ಜಲಜಂತುಗಳ ಲಯವು ಜಲದಿ ಅತ್ತಿ
ಫಲದ್ವುಳಕೆ ಲಯವದೇ ಫಲದಿ
ನಳಿನಾಕ್ಷ ನಿನ್ನಲಿ ಹುಟ್ಟಿ ಮ
ತ್ತಳಿದು ಹೋಹುದು ಸರ್ವಸೃಷ್ಟಿ ೨೦

ಅನಂತ ಬೊಮ್ಮರನು ಪಡೆವೆ ಮ
ತ್ತಾನಂತಾಬಾಂಡವ ಹುಟ್ಟಿಸುವೆ
ನೀನೆ ಪಾಲಿಪೆ ಸಂಹರಿಸುವೆ ನಿನ
ಗಾನಂದದಾಟವಿದು ಪ್ರಭುವೆ ೨೧

ಅನಂತ ಜಡಚೇತನಕ್ಕಿಲ್ಲ ಮಖ್ಯ
ನೀನಲ್ಲದನ್ಯಾಶ್ರಯಿಲ್ಲ
ನೀನೇಕ ಅನಂತರೂಪ ಜೀ
ವಾನೀಕಕೆ ದೂರನು ಸವಿಶಾಪ ೨೨

ನಿನ್ನರ್ಚಕರಿಗಿತ್ತೆ ಮುಕ್ತಿ ಸಲೆ
ನಿನ್ನ ದ್ವೇಷಿಗಳಿಗೆ ತಮವಿತ್ತೆ
ನಿನ್ನಮೋಘ ಗುಣಕೀರ್ತ್ನೆ ಸುರರು ಹೊಗಳಿ
ಧನ್ಯರಹರು ಮಹಾತ್ಮರು ೨೩

ಲಯಜಲಧಿಗಾಮೋಘ ಮಿನ ಶ್ರೀ
ಹಯವದನ ಮಧುಕೈಟಭಮಥನ
ಪಯೋನಿಧಿ ಮಂಥಕಕೂಪಾರ ಸುರನಿ
ಚಯಸುಖದ ಮಂದರೋದ್ಧಾರ ೨೪

ಸುಯಜ್ಞ ಭವ್ಯ ವರಹಾತ್ಮ ಹೇಮ
ನಯನಹರ ಧೃತಭೂತಳಾತ್ಮ
ಭಯದೂರ ನರಮೃಗಸ್ವರೂಪ ಲೋಕ
ತ್ರಯ ಕೀರ್ತಿತ ಸಂಪ್ರತಾಪ ೨೫

ವ್ಯಾಪ್ತ ಲೋಕದ್ವಯ ಸಚ್ಚರಣ ಬಲಿ
ಗೋಪ್ತಯಾಚಿತಸದ್ವಿತರಣ
ದೀಪ್ತಕರ ಪರಶು ಧನುರ್ಧಾರ ಮದ
ದೃಪ್ತನೃಪಕುಲಕುಜಕುಠಾರ ೨೬

Rarest Archiver

ದಶರಥಾತ್ಮಜ ಸೀತಾರಮಣ ಮತ್ತ
ದಶಶಿರಾರ್ದ ಹನುಮಂದಂಸಗಮನ
ಪ್ರಸೀದ ನಮೋ ನಮೋ ವಾಸುದೇವ ಸಂಕ
ರುಶಣ ಶ್ರೀ ಪ್ರದ್ಯುಮ್ನ ದೇವ ೨೭

ಪ್ರಸೀದ ನಮೋ ನಮೋ ಅನಿರುದ್ಧ ಸು
ಪ್ರಸೀದ ಸಾತ್ವತ ಕುಲಸುವೃದ್ಧ
ಪ್ರಸೀದ ಶಶಿವಂಶ ಸಂಪವಿತ್ರ ಸು
ಪ್ರಸೀದ ಸಚ್ಚಿದಾನಂದ ಗಾತ್ರ ೨೮

ನಮೊ ನಮೊ ಸತ್ಸುಬುದ್ಧಿ ಬುದ್ಧ
ನಮೊ ನಮೊ ದನುಜಮೋಹನ ಪ್ರಸಿದ್ಧ
ನಮೊ ನಮೊ ದುಷ್ಟಕುಲದಹನ ಪುನ
ರ್ನಮೊ ನಮೊ ಗಹನಾತ್ಮಗಹನ ೨೯

ನೈಜೇಚ್ಛೆಲಾಳ್ವಿ ಸುರವೃಂದ ನಾ
ನಾ ಜೀವರ ತಪ ನಾಮದಿಂದ
ತಾ ಜೀವಿಸಿ ಮೋಹಿಸಿ ವರ್ತಿಪುದು ಮಹಾ
ಸೋಜಿಗದ ಲೀಲೆ ದೀನಬಂಧು ೩೦

ಸತಿಸುತರು ಗೃಹ ಸ್ವಜನ ಕ್ಷೇತ್ರ ಅರ್ಥ
ದತಿಭ್ರಾಂತಿ ಬಿಡದಿಹೆ ಅಸ್ವತಂತ್ರ
ಮತಿಹೀನನಾಗಿ ಸ್ವಪ್ನಸಮ ಈ
ಸೃತಿಯೆಂದು ತಿಳಿಯೆ ನಾನಧಮ ೩೧

ನೀನಿತ್ತ ಸುಖದುಃಖವಿನ್ನು ತಿಳಿಯದೆ
ನಾನು ಕಾರಣನೆಂಬುವೆನು
ನಾನಾಗಿ ಸುತ್ತಿ ಬಹೆ ಭವವ ಹರಿ
ನೀನೇವೆ ಮಾಡನುಗ್ರಹವ ೩೨

ದುಃಖಾನ್ವಯೆಂವನು ಸುಖಿಕಂಡೆ ಭ್ರಾಂತಿ
ಲಕ್ಕದೋರದು ಮರೆಹುಗೊಂಡೆ
ಮೂರ್ಖ ವಿಪರೀತಮತಿ ಬೆರೆವೆ ತವ
ಸಖ್ಯವನು ಮರೆವೆ ಜಗದ್ಗುರುವೆ ೩೩

Rarest Archiver

ನಿನ್ನಾಶ್ರಯದಿ ಬದಿಯಲಿರುವೆ ನಾ
ನನ್ಯರಾರಾಧನೆಯ ಮಾಡುವೆ
ಸನ್ನೀರ ಜರಿದು ಬಿಸಿಲದೊರೆಗೆ ಓಡಿ
ಬನ್ನ ಬಡುವೆ ಭವಾಟವಿಯೊಳಗೆ ೩೪

ಕಾಮ್ಯಕರ್ಮದಲಿ ಉತ್ಸಾಹವು ವಿಷ್ಣು
ಧರ್ಮದಲಿ ನನಗಿನ್ನು ಮರೆವು
ಗ್ರಾಮ್ಯ ಸುಖದನುಭವಗಳಿಂದ ನಿತ್ಯ
ನಿಮ್ಮಂಘ್ರಿಯನು ಮರೆದೆ ಮುಕುಂದ ೩೫

ಕೃಪಣ ಬುದ್ಧಿಯಲಿ ನಾ ಕೆಟ್ಟೆ ಭವ
ವಿಪಿನಾಟಣೆಗೆ ಒಡಂಬಟ್ಟೆ
ಕಪಟ ಗೃಹಕ್ಷೇತ್ರ ಹೊಂದಿಹೆನು ನಿತ್ಯ
ತೃಪುತ ತವಜನಕೆ ದೂರಹೆನು ೩೬

ಇಂದ್ರಿಯಗಳಿಗೆ ಸಹಾಯವಾಗಿ ಮನ
ನಿಂದಿರದು ತವ ಚರಣಕೆರಗಿ
ದಂದುಗಬಡಿಸುವ ದುರ್ವಿಷಯ ದೂ
ರ್ವಂದದಿ ಕಡೆಹಾಯಿಸು ಜೀಯ ೩೭

ನನ್ನ ಪ್ರಯತ್ನದಿ ನಿನ್ನ ಕಾಣೆ ಹರಿಯೆ
ನಿನ್ನಾನುಗ್ರಹವಾದರಿನ್ನೆ
ಧನ್ಯ ನಾನಹೆನು ಸುಪ್ರಸನ್ನ ಸಿರಿ
ಸನ್ನುತ ಸುಜನರ ಜೀವನ್ನ ೩೮

ಮಹಾನುಭಾವರ್ಗೆ ಶ್ರೀಚರಣ ಸಾಧ್ಯ
ವಹುದು ದುರ್ಲಭವು ಕರುಣಾರ್ಣ
ಈ ಹೊತ್ತು ಅನುಗ್ರಹ ಪ್ರಸಾದವಾಗಿ
ಬಾಹ್ಯಾಂತರ ಕಂಡೆನು ಮುಕುಂದ ೩೯

ಆರೊಡೆಯರಿಲ್ಲ ನಿನ್ನ ಬಿಟ್ಟು ಪಾ
ದಾರವಿಂದ ಪತ್ರದ್ಯನ್ನಿಟ್ಟು
ತಾರಿಸು ಭವಾಬ್ಧಿಯನು ಕೃಷ್ಣ ನಿನ್ನ
ಸಾರಿದೆನು ವೃಷ್ಣಿಜವರಿಷ್ಟ ೪೦

Rarest Archiver

ನಮೊ ನಮೊ ಅನಂತ ಶಕ್ತ ನಮೊ
ನಮೊ ವಿಜ್ಞಾನಂದಗಾತ್ರ
ನಮೊ ಪ್ರಧಾನ ಪುಂಸೇಶ ಶ್ರೀಶ ನಮೊ
ನಮೊ ವಾಸುದೇವ ಪರೇಶ ೪೧

ನಮೊ ನಮೊ ಭೂಭಾರಹರಣ ನಮೊ
ನಮೊ ಪ್ರಸನ್ನ ಜನರಿಗಾಭರಣ
ನಮೊ ನಮೊ ಪ್ರಮತ್ತ ಖಳಮಂಥನ
ನಮೊ ನಮೊ ಪುಣ್ಯಾನಂತ ಗುಣಕಥನ ೪೨

ಅಘಮಂರಷಣದಲಿ ಅಕ್ರೂರ ಕಂಡ
ನಿಗಮಂನಂತಾನಂತನ ಧೀರ
ಜಗದೇಕ ಪ್ರಸನ್ನವೆಂಕಟಪನ ಲೀಲೆ
ಸೊಗಸಾಗಿ ಪೇಳುವದೇ ಪುಣ್ಯ ೪೩

೫೮

ರಾಗ : ಕಲ್ಯಾಣಿ **ತಾಳ : ಏಕ**

ಶ್ರೀಕೃಷ್ಣಪಾದ ಸರೋರುಹ ಹೊಂದಿದ
ಏಕಾಂತಜನ ವಿಷಯಂಗಳ
ಬೇಕೆನರು ಭಕ್ತಿ ಸಾಕೆನರು ಜ್ಞಾ
ನಾಕರರ್ಭವವಿರಹಿತರು ಪ.

ದಾನೇಶ್ವರನಿಗೆ ನೀರಿನೊಳಗೆ ಭಗವಾನ್ನಿಜದರುಶನವಿತ್ತು
ಮಾನದಲ್ಯವನ ಸ್ತುತಿಯಂ ಕೇಳ್ಯೊಲಿದಂತರ್ಧಾನವನ್ನೈದಿದ ಕರ್ತು ೧

ತೀರದಿ ಕುಳಿತು ನಿತ್ಯ ಸತ್ಕ್ರಿಯೆಂ ಮುಗಿಸಿದ ಶ್ರೀಹೃಷಿಕೇಶ ಕೃಷ್ಣಪ್ರಿಯಂ
ನೀರನುಳಿದು ನಡೆತಂದನು ತನ್ನಯ ತೇರಿನೆಡೆಗೆ ಗಾಂದಿನೇಯ ೨

ನಾರಾಯಣರಿಬ್ಬರಿಗೆ ನಮಸ್ಕಾರ ಮಾಡಿದ ಸಾಷ್ಟಾಂಗ
ಭೂರಿ ಪ್ರೇಮದಿ ನಯನದಿ ಸುಖಬಾಷ್ಪದ ವಾರಿಯು ರೋಮಂಪುಳಕಾಂಗ ೩

ಕರವೆರಡು ಮುಗಿದು ನಿಂತಿರೆ ಕೇಳಿದನೊಂದುಪರಿದೋರುವುದು ನಿನ್ನವದನ
ಅರಿದೇನ ನೀ ಕಂಡೆ ಅದ್ಭುತವನ್ನು ನೀರಿನೊಳಗ ಪೇಳ್ವದನ ೪

Rarest Archiver

ಧರೆಯಲಿ ಕಂಡಂತಾಶ್ಚರ್ಯಬಡುವೆ ವಿಸ್ತರಿಸೆನೆ ನುಡಿದನಾ ಸಚಿವ
ಹರಿ ನಿನ್ನ ಮಹಿಮೆಯಗಾಧವು ವಿಶ್ವಾಂತರಿಯು ನಮೊ ನಮೊ ದೇವಾ ೫

ಸ್ವಾಮಿ ಕೃಪಾನಿಧೆ ಅಘಮರ್ಷಣದಿ ಮಹಾಮಹಿಮೆಯ ತೋರಿಸಿದೆ
ಭೂಮಿಲಿ ಕಂಡಂತೆ ಜ್ಞಾನಾನಂದಮಯ ಶ್ರೀಮೂರ್ತಿಯ ಪ್ರಕಟಿಸಿದೆ ೬

ಶ್ರೀಮಾಯಾಸತಿ ಅಜಭವಸುರಮುನಿಸ್ತೋಮಸನ್ನುತ ವಿಶ್ವಾತ್ಮ
ನಾ ಮನುಜನು ಕಣ್ಮನದಣಿ ಕಂಡೆನು ಭಕ್ತಕಾಮಧೇನುವೆ ಅಂತರಾತ್ಮ ೭

ಹೀಗೆಂದು ನಡೆಸಿದ ರಥವನು ಮಧುರೆಗೆ ಬೇಗಚ್ಯುತ ಹಲಿಯೊಡನೆ
ಆ ಗುಣನಿಧಿ ವಸುದೇವನ ತನಯನ ಆಗಮನವನು ಕಂಡೊಡನೆ ೮

ಆಗತರು ಗ್ರಾಮಗ್ರಾಮದವರು ಬಂದು ಬಾಗಿ ತಲೆಯ ಸ್ತೋತ್ರಮಾಡಿ
ಸಾಗಿದರ್ನಗರಕೆ ಉಪವನದಲಿ ನಿಲ್ಲಲಾಗಿ ಜನರ ಪರಾಣ್ಣ ನೋಡಿ ೯

ನಂದಾದ್ಯರ ನಿಲಿಸಿದನು ಮುಕುಂದನು ಗಾಂದಿನೇಯನ ಕೈಯಪಿಡಿದ
ಮಂದಹಾಸದಿ ನುಡಿದನು ಘನಪ್ರೇಮದಿ ಇಂದಿರೆಯರಸ ಗೋವಿಂದ ೧೦

ಮುಂದೆ ನೀ ಮನೆಗೈದು ರಥಸಹ ಪಟ್ಟಣದ ಚೆಂದವ ನೋಡುತ್ತ ಬಹೆವು
ಎಂದ ಮಾತಿಗೆ ನುಡಿದನು ಅಕ್ರೂರನು ತಂದೆ ಅಧೋಕ್ಷಜಾ ನೀವು ೧೧

ಇಂದೆನ್ನ ಬಿಡದಿರಿ ನಿಮ್ಮ ಪದಾಬ್ಜವ ಹೊಂದಿದೆ ಎನ್ನ ಜೀವನ್ನ
ಮುಂದೆ ನಾ ನಗರಕೆ ಮನೆಗೈದಿ ಮಾಡುವ ದಂದುಗವೇನು ಪ್ರಸನ್ನ ೧೨

ಬಂದು ನನ್ನಾಲಯ ಪವಿತ್ರಮಾಡು ಗೋಪವೃಂದದೊಡನೆ ಭಕ್ತಬಂಧೊ
ವೃಂದಾರಕ ಋಷಿ ಪಿತೃ ನೃಪಕುಲಕಂಘ್ರಿದ್ವಂದ್ವ ದುರ್ಲಭ ಗುಣಸಿಂಧೊ ೧೩

ನಿನ್ನಂಘ್ರಿರಜ ಗೃಹಮೇಧಿಗಳ್ಗೆ ದುರ್ಲಭ ನಿನ್ನಂಘ್ರಿ ಶೌರಿ ಪಿತೃ ಸುರರ
ಧನ್ಯರ ಮಾಳ್ಪುದು ಬಲಿಯುವನಿಯು ಎಲ್ಲ ನಿನ್ನಂಘ್ರಿ ಶ್ಲಾಘಿಸಿತು ಧೀರ ೧೪

ನಿನ್ನಂಘ್ರಿ ಸೋಂಕಿದ ಬಲಿಗುನ್ನತ ಭಾಗ್ಯ ನಿನ್ನಂಘ್ರಿಯಂಗುಷ್ಟಜಲ
ಪನ್ನಗಭೂಷಣ ಧರಿಸಿದ ಮೂಜಗವನ್ನು ಪಾವನ್ನ ಮಾಳ್ಪವಳ ೧೫

ಶ್ರೀ ದೇವದೇವ ಜಗತ್ಪತೆ ಪುಣ್ಯಕೀರ್ತೆ ಯಾದವಕುಲಮೌಳಿರತ್ನ
ಆದಿ ನಾರಾಯಣ ಲಕ್ಷ್ಮೀರಮಣ ನಿನ್ನ ಪಾದಾಂಭೋರುಹದಾಶ್ರಿತನ್ನ ೧೬

Rarest Archiver

ಆದರಿಸದಿರಲನಾಥ ನನಗೆ ದಾರು ಆಧಾರವಿಲ್ಲ ದಯಾಬ್ಧೀ
ನಾ ಧನ್ಯನಹೆನು ಬಾ ಮನೆಗೆನ್ನುತ ಪಾದಕೊಂದಿಸೆ ಸ್ತುತಿಯಿಂದ ೧೭

ಗಾಂದಿನೇಯನ ಸ್ತೋತ್ರವ ಕೇಳಿ ಯದುಪತಿ ಮಂದಹಾಸದಿ ಸುರವಾಳಿ
ಎಂದನು ತ್ವದ್ಗೃಹದಲಿ ಪೂಜೆಯಕೊಂಬೆ ಕೊಂದು ಕಂಸನ ನಾಳಿನಲಿ ೧೮

ಬಂದು ನಿಮ್ಮಲುಂಬೆ ಯಾದವಾನ್ವಯದ್ರೋಹಿಯೆಂದ್ಯಮಪುರಕಟ್ಟುವೆನು
ಇಂದುವಂಶದ ಸುಹೃದ್ಬಂಧುನಿಕರಕಾನಂದಾಮೃತವನುಣಿಸುವೆನು ೧೯

ದಿವಿಜ ಭೂದಿವಿಜರ ಕಂಟಕ ತೆಗೆವೆನು ಭುವಿಯ ಭಾರವ ಕಳೆಯುವೆನು
ಸವೆಯದ ಸುಖದಲಿ ಸಜ್ಜನರಿರಲೆಂದು ಭುವನ ಆಧಾರ ನುಡಿದನು ೨೦

ಪ್ರವಚನ ಕೇಳಿ ಶ್ವಫಲ್ಕಿಯು ಕಿಂಚಿತ್ತು ಅವಿಮನೋಪಮ ತೆರಳಿದನು
ತವಕದಿ ನಮಿಸಿ ಪುರವ ಪೊಕ್ಕು ಕಂಸಗೆ ವಿವರಿಸಿ ಸ್ವಗೃಹಕೈದಿದನು ೨೧

ಹಿಂದಾಗಿ ರಾಮ ಮುಕುಂದರು ನಗರಕೆ ಬಂಧರು ಗೋಪಮೇಳದಲಿ
ನಂದಗೋಪನ ಮಕ್ಕಳು ಕೃಷ್ಣರಾಮರು ಬಂದಿಹ ವಾರ್ತೆ ಪುರದಲಿ ೨೨

ಸಂದಣಿಸಿತು ಚತುರ್ವೀಥಿಲಿ ಜನಪದ ಕಂದಂಗೊರಳನ ಧನುರ್ಯಾಗ
ಹೊಂದಿರಲರ್ಥಿಯು ನೋಡುತಲಿದ್ದರು ಮಂದರಧರ ಬಲರಾಗ ೨೩

ಈ ಭಾಗವತ ದಶಮಸ್ಕಂಧದ ಕಥೆ ಶೋಭಿತ ಪ್ರಾಕೃತ ಪದವ
ಶ್ರೀ ಭಗವಜ್ಜನ ಪೊಗಳಲು ಇಹಪರ ಭೋಗ ಬಯಕೆ ಕೃಷ್ಣನೀವ ೨೪

ತ್ರೈಭುವನೇಶ್ವರ ಪ್ರಸನ್ನವೆಂಕಟ ಪದ್ಮನಾಭನ ಜ್ಞಾನವೈರಾಗ್ಯ
ಲಾಭವು ಭಕುತಿಯ ಭಾಗ್ಯವು ಬರುವುದು ಶೋಭನ ಆಯುರಾರೋಗ್ಯ ೨೫

೫೯

ರಾಗ : ಸಾರಂಗ **ತಾಳ : ಏಕ**

ಬಿಲ್ಲಹಬ್ಬವ ನೋಡುತ್ತೈದಲು ರಾಮಕೃಷ್ಣರುಲ್ಲಾಸದಿ ಮಥುರೆಯೊಳು ಪ.

ಗೊಲ್ಲಗೆಳೆಯರ ಮೇಳದಲ್ಲಿ ಚೆಲ್ವ ಅಪರಾಹ್ನದಲ್ಲಿ
ಎಲ್ಲ ಜನರು ಸಂದಣಿಸೆ ಮೆಲ್ಲನೆ ನಿವಾರಿಸೆ ಅ. ಪ.

Rarest Archiver

ಸ್ಫಾಟಿಕ ಸದ್ಗೋಪುರಾವಳಿ ಹೇಮಕವಾಟ ಆರುಪುಟ ತಾಮ್ರದಲಿ
ಪಾಟಿಸಿ ಗಭೀರ ಪರಿಖ ಕೋಟೆ ಕೊತ್ತಳಂಗಳಿಂದ
ನೋಟಕರ್ಗೆ ಆಶ್ಚರ್ಯ ವಿಟಪ ಉಪವನಗಳ ೧

ಪಾಠಿಪ ದ್ವಿಜಾಳಿರವಗಳು ಅಲ್ಲಿಗಲ್ಲಿ ಹಾಟಕ ತೋರಣ ಸಾಲುಗಳು
ನೀಟಾದ ಹರ್ಮ್ಯಗಳಂ ಶೃಂಗಾಟಕ ಭವನ ಭಿತ್ತಿ
ಕೋಟಿ ಕೃತ್ರಿಮ ವಿಹಂಗ ನಾಟ್ಯಗಳಿಂದೊಪ್ಪುವ ೨

ಪ್ರಭೆಯುಲಿಪ್ಪ ವಜ್ರ ವೈಢೂರ್ಯ ನೀಲರತ್ನ ನಿಬಿಡಾರುಣ ವಿದ್ರುಮಾವಳಿಯಂ
ಸುಬರುಹಿ ಶುಕಪಿಕೌಘ ಶುಭರವ ಶ್ರವಣಗಳ್ಗೆ
ವಿಭವ ಸೌಖ್ಯ ಬೀರುತಿಪ್ಪ ಸಭೆಗಳಿಂದ ರಾಜಿಪ ೩

ನರ್ತಿಪ ಮರಾಳಕುಲವು ಅವಿರಳ ಸುಚಿತ್ರ ಪತಾಕಾಕೇತುಗಳು
ಛತ್ರ ಮೆರೆವ ಸೀಗುರಿ ಒತ್ತಿಡಿದ ವೀಥಿ ಗಂಧ
ಸಿಕ್ತ ಆಪಣಂಗಳಲಿ ಮೊತ್ತಕುಸುಮರಾಶಿಯು ೪

ಅಂಕುರ ಶ್ರಾವಿಗಳು ದಧಿ ಜಲ ಕದಡು ಪೂರ್ಣಾಂಕ ಕುಂಭ ತೆಂಗು ತಂಡುಲ
ಝೇಂಕರಿಪ ಮಧುಪದಾಮಾಲಂಕೃತದ ರಂಭಾಪೂಗಾ
ದ್ಯಂಕಿತ ಚತ್ವಾರಿಗಳ ಶಂಖ ಸೀರ ಪಾಣಿಗಳು ೫

ಆಮೋದಮಯಾಗರು ಧೂಪವು ಗಂಧ ಕುಸುಮಂ ದಾಮ ಅಪರಿಮಿತ ದೀಪವು
ಹೇಮ ಮಣಿಮಂದಿರ ಸೌಧಾಟ್ಟದ ಸಿಂಗರದ ದ್ವಾರ
ಸುಮನೋಹರವಾಗಿರೆ ರಾಮಾಚ್ಯುತರು ತೋಪದಿ ೬

ವಸುದೇವ ಕುಮಾರರಿಬ್ಬರು ಬಂದರೆಂದು ಶಶಿಮುಖಿಕೇಳಿ ಮನೆಯೊಳು
ಅಶನವ ಬಿಟ್ಟು ಕೃಷ್ಣನೆಸೆವ ಸೌಂದರ್ಯಕ್ಕೆ ಮೆಚ್ಚಿ
ಮಿಸುನಿ ಪ್ರಾಸಾದಾಗ್ರದಿ ಸಂತಸದಿ ನೋಡುತಿದ್ದರು ೭

ಗೃಹಪತ್ಯ ಬಿಟ್ಟು ಬಂದರು ಭೂಷಣಗಳ ದೇಹಕೆ ಹೊಂದದೆ ಬಂದರು
ಬಾಹುಬಂದಿಯೊಂದೆವಲಯ ಸುಹೇಮಕುಂಡಲವೊಂದೆ
ಆ ಹೆಂಗಳು ಧರಿಸಿ ಕೃಷ್ಣ ಸ್ನೇಹಕೊದಗಿ ಬಂದರು ೮

ಒಂದೆ ಕಣ್ಗೆ ಕಜ್ಜಲಿಟ್ಟರು ಹಾರ ಪದಕ ಬಂಧಿಸಿ ಮಧ್ಯಕ್ಕೆ ಬಂದರು
ಹೊಂದಾಪುಗಳಂಘ್ರಿಗಿಟ್ಟು ಒಂದೆ ಶ್ರುತಿಗೆ ಮುಗುತಿಟ್ಟು
ಇಂದುಮುಖಿಯರೆರೆಕೊಳುತ ನಿಂದು ನಗುತ ಬಂದರು ೯

Rarest Archiver

ಶಿಶುಗಳ್ಗಮೃತವನೀಯದೆ ತೊಟ್ಟಿಲೊಳು ರೋದಿಸುವ ಮಕ್ಕಳನು ತೂಗದೆ
ಬಿಸಜನೇತ್ರನ ಚಿತ್ತವಪಹಾರಿಸಲು ಓಡಿಬಂದರು
ಕುಸುಮಶರನಟ್ಟುಳಿಯ ಸೈರಿಸದೆ ಸಾರಂಗಾಕ್ಷಿಯರು ೧೦

ಭ್ರಮಿಸಿ ಕಾಮಿನಿಯರ ತಂಡವಸು ವಾಸುದೇವ ಕಮನೀಯರೂಪ ತೋರ್ದನು
ರಮಣಿಯರು ಹರ್ಮ್ಯಾಗ್ರದಲ್ಲಿ ರಮೆಯರಸನ ಕೃತಿಗೆ ಮೆಚ್ಚಿ
ಸುಮನನಾನನ ನಟ್ಟು ಮೌನಿ ಚಮುದೊಲು ಮೈ ಮರೆದರು ೧೧

ಹಸಿತವದನಾಪಾಂಗದಿಂದಲಿ ನೋಡಿದನು ಶಶಿಮುಖೀರ ಮದನನಯ್ಯನು
ಕುಸುಮಬಾಣನಂಬುಗಳು ಆಸಿಯರೆದೆಗೆ ನಾಂಟುತಿರಲು
ನಸುನಗೆಯ ಸುಧೆಯನೂಡಿ ಅಸಮಸುಖವನಿತ್ತನು ೧೨

ದರ್ಪಕನ ದರ್ಪನಿಲ್ಲಿಸಿ ಹರ್ಮ್ಯಾಗ್ರದೊಳಿಪ್ಪ ನಾರಿಯರ ಮನ್ನಿಸಿ
ಒಪ್ಪಿದ ದ್ವಿಪೇಂದ್ರನಂತೆ ಸರ್ಪತಲ್ಪ ಸಂಕರ್ಷಣರು
ಸರ್ಪವೇಣಿಯರ್ಗಾನಂದಾನಲ್ಪವಾರ್ಧಿಲಿಟ್ಟರು ೧೩

ಕುಸುಮನೇತ್ರೆಯರ್ಹರಿಬಲರ ಮೇಲೆ ಮಳೆಗರೆದರು ಕುಸುಮ
ಲಾಜಾಕ್ಷತೆಗಳಿಂದಲೆ
ವಸುಧೆಸುರರು ಗಂಧಾಕ್ಷತೆ ವಸನ ಸ್ರಗ್ಗಂಧೋಪಾಯನದಿ
ಅಸುರಹರನ ಪೂಜಿಸಿದರು ಅಸಮ ಭಕ್ತಿಯಿಂದಲಿ ೧೪

ಸುದತಿಗೋಪಿಯರ್ಮುನ್ನ ಮಾಡಿದ ತಪದ ಫಲವು ಪದುಮನಾಭನ
ವದನಾಮೃತವನು
ಉದಯಾಸ್ತದಲಿ ಸೇವಿಪರೆಂದ್ವದಿಪನಕ್ಕಾ ರಾಮಕೃಷ್ಣರ
ಇದಿರಿಗೆ ಬಂದಹಂಕಾರ ಮದಸೊಕ್ಕಿದ ರಜಕನು ೧೫

ಮಧುರೆಯರಸು ತೊಡುವ ಅಂಬರವ ಹೇರಿಕೊಂಡು ಬದಿಗೆ ಬಂದಿರೆ ಬೇಡಿದ
ಕೃಷ್ಣ
ಹೊದಿಕೆ ತಾರೈ ಉತ್ತಮೋತ್ತಮ ಮೃದುಂತರದವೆನ್ನಲವನು
ಮದಿಸಿದನು ಗದಿಗಗ್ರಜನಿಗೆ ಮದವೇರಿದ ಮೂಢನು ೧೬

ಬಣಗುಭೃತ್ಯರಿಗೆ ನೃಪತಿಯ ಉಡುವ ವಸ್ತ್ರ ಕನಸಿನೊಳಗರೆ ಸಲ್ಲವೆ
ವನಚರರು ಸೊಕ್ಕಿದಿರಿ ಅಣುಬಾಲಿಶರ್ಮರಣ ಬಯಸಿ
ನೆನೆದಿರೀ ಮಾತನ್ನು ರಾಜನನುಗರ್ನಿಮ್ಮ ಕೊಲ್ಲುವರು ೧೭

Rarest Archiver

ದೃಪ್ತನುಡಿಯನಾಡಬೇಡಿರೋ ಬದುಕಿ ಹೋಗಿ ಗೋಪ್ತರಿಲ್ಲ ನಿಮಗೆ ಎಂದನು
ಸಪ್ತದ್ವಯ ಭುವನೇಶ್ವರನು ಮತ್ತವನ ತಲೆಯಿಳುಹಿದನು
ಹಸ್ತದಿಂದ ಕ್ಷಿಪ್ರದ್ಯವನ ಭೃತ್ಯರೋಡಿ ಹೋದರು ೧೮

ಅವನಿಪನ ವಸ್ತ್ರವಷ್ಟನೂ ಗೃಹಿತರು ಸುವಸನವನುಟ್ಟು ತೊಟ್ಟರು
ಸವೆಯದಷ್ಟು ಸೂರೆಬಿಟ್ಟು ಗೋವರಿಗೆಲ್ಲ ಕೊಟ್ಟರು
ಅವನಿಗ್ಹಾಸಿ ಬಿಟ್ಟು ನಗುತ ಭುವನೇಶ್ವರರು ನಡೆದರು ೧೯

ಮುಂದೆ ಬರಲು ವೇಷಕಾರನು ಯಾವಕನೊಬ್ಬ ಬಂದು ಅಂಘ್ರಿದ್ವಯಕೆರಗಿದನು
ಇಂದಿರೇಶ ರಾಮರಿಗೆ ಸುಂದರಾವರಣ ಹೊದಿಸೆ
ಕಂದರ್ಪ ಕೋಟಿಲಾವಣ್ಯರು ಹೊಂದಿದರು ಚಿತ್ರವ ೨೦

ಅವರಂಗದ ಸೇವೆ ಮಾಡಿದ ಯಾವಕನು ಸವೆಯದಿಹಾನಂದ ಗಳಿಸಿದ
ಇವರ ಪ್ರಭೆಯು ತುಂಬಿತಲ್ಲಿ ಯುವ ಬಾಲೇಭದಂತಿದ್ದರು
ನವನೀಲ ಶ್ವೇತಾದ್ರಿಯಂತೆ ಅವನಿಯಲ್ಲಿ ತೋರ್ದರು ೨೧

ಮುಂದೆ ದಾಮಕರ್ತ ಸುದಾಮ ರಾಮಕೃಷ್ಣರಿಗ್ವಂದಿಸಿದ ಸಾಷ್ಟಾಂಗಪ್ರಣಾಮ
ಒಂದೆ ನಿಷ್ಠೆಯಿಂದ ಸ್ತೋತ್ರನಂದದಿಂದ ಮಾಳ್ಪನ
ಸನ್ಮಂದಿರದಿ ಪೂಜೆಗೊಂಡು ಸುಂದರರು ಒಪ್ಪಿದರು ೨೨

ಇಂದೆನ್ನ ಜನ್ಮವೆ ಸಫಲವು ಶ್ರೀನಾಥ ನೀವು ಬಂದಿರಿ ನೂರೊಂದು ಕುಲವು
ಹೊಂದಿದರು ಮುಕ್ತಿನಗರ ಸಂದೇಹವಿಲ್ಲವು ಪಾಂಸು
ಹೊಂದಲಾಗಿ ಗೃಹಪವಿತ್ರ ಮದಾಂಧಕರ್ಗಿಲ್ಲವು ೨೩

ನೀವಿಬ್ಬರು ವಿಶ್ವಕಾರಣರು ಪ್ರಭುಗಳು ಜಗತ್ಪಾವನರು ಅವತಾರಿಕರು
ದೇವದ್ವಿಜಗೋವು ರಕ್ಷಿಸುವ ಧರ್ಮದೀಕ್ಷೆಯಿಂದ
ದೇವಾರಿಗಳನ್ನು ಸವರಿ ಭೂವಿಭಾರ ಕಳೆದಿರಿ ೨೪

ನಿಮ್ಮಿಂದೆ ಧರ್ಮಕೆ ಕ್ಷೇಮವು ಸರ್ವರಿಗೆ ಕರ್ಮಾನುಸಾರದ ಫಲವು
ನಿಮಗೆ ಶತ್ರು ಮಿತ್ರರು ಸಮಾನರು ಭುವನ ಜೀವರ್
ತಮ ತಮ್ಮ ಯೋಗ್ಯತೆಯಂತೆ ಕರ್ಮವ ಮಾಡ್ಯುಂಬರು ೨೫

ನಿಮ್ಮ ಭೃತ್ಯ ಭೃತ್ಯ ಭೃತ್ಯರ ಪರಿಚಾರಕ ನಾ ಸನ್ಮಾರ್ಗದಿ ಸಿಕ್ಕಿಸೆನ್ನನು
ನಿಮ್ಮ ವೈಷ್ಣವಜನರ ಶುದ್ಧೋತ್ತಮರ ಸೇವೆಯಲೆನ್ನಿಟ್ಟು
ದುರ್ಮತಿಯ ಬಿಡಿಸಯ್ಯ ಶ್ರೀ ರಮ್ಮೆಯಳ ರಮಣನೆ ೨೬

Rarest Archiver

ಪಾಹಿ ಪಾಹಿ ಪ್ರಸನ್ನೇಶ್ವರ ವಂಕಸ್ತ್ರಾಮುಕ್ತ ದೇಹಿಗಳಿಗೆ ನೀ ನಿಯಂತಾರ
ಪಾಹಿ ಪಾಹಿ ನಿರ್ಜರರ ಸಮೂಹವಂದ್ಯಾನಂದಸಿಂಧೊ
ಪಾಹಿ ಪಾಹಿ ದೇಹಿಕ ಸಂದೋಹಾಮರಭೂರುಹ ೨೭

ರಾಮಾಚ್ಯುತರ ಸ್ತೋತ್ರ ಮಾಡಿದ ಭಕ್ತಿಯಲಿ ಸುದಾಮ ಗಂಧಾಕ್ಷತೆ ವಸ್ತ್ರಾದಿ
ಪೂಮಾಲೆಯಿಂ ಪೂಜಿಸಿದ ಶ್ರೀಮದ್ರಮಾರಮಣ ಮುಂಕ್ತಿ
ಧಾಮಂದಲ್ಲಿ ಅವನ ತನ್ನ ದಾಮಂಕರ್ತನ ಮಾಡಿದ ೨೮

ಪ್ರಸನ್ನವೆಂಕಟಕೃಷ್ಣಭಕ್ತರು ಸಂಸ್ಕೃತಿಯ ಗಸಣೆಗಂಜದಿಹ ಧೀರರು
ದಶಪ್ರಮತಿಯ ಮಂತವರ್ತಿಗಳು ದಶಮಸ್ಕಂಧಾಮೃತವಾರ್ಧಿಲಿ
ನಿಶಿದಿನ ಸ್ನಾನಪಾನಮಾಡಿ ಎಸೆವ ಮುಂಕ್ತಿಗೈದುಂವರು ೨೯

೬೦

ರಾಗ : ಮಧ್ಯಮಾವತಿ **ತಾಳ : ಜಕ್ಕಣಿ ?**

ಭಾಗ್ಯವನೆಣಿಸಿದರೆಣಿಕಿಲ್ಲ ಕುಬ್ಜೆ ಯೋಗ್ಯತೆ ವಾಸುದೇವ ತಾನೇ ಬಲ್ಲ ಪ.

ಭೋಜೇಂದ್ರನಂಗಲೇಪ ಸೌರಭಿಗಂಧ ಭಾಜನದೊಳು ತುಂಬಿಕೊಂಡು ಬಂದು
ರಾಜಮಾರ್ಗದಿ ನಿಂತ ತ್ರಿವಕ್ರೆಯಳ ನೋಡಿ ರಾಜೀವಲೋಚನ ನಗುತ ಕೇಳಿ
ದನು ೧

ಆರು ನೀ ನಿನ್ನ ಪತಿಯಾರು ಈ ದಿವ್ಯ ಸೌರಭಿಗಂಧ ಯಾರಿಗೆ ಒಯ್ಯುವೆ
ತಾರೆ ನಮ್ಮಂಗಕುತ್ತಮಗಂಧ ಇದರಿಂದ ಮೇರೆಯಿಲ್ಲದ ಸುಖಬಡುವೆ
ನೀಯೆಂದ ೨

ಸೌಂದರ್ಯಸಾರ ತವಸಮ್ಮತ ದಾಸಿ ನಾ ಇಂದೆನ್ನ ನಾಮ ತ್ರಿವಕ್ರೆಯೆಂದು
ಗಂಧಾನುಲೇಪಕರ್ತ್ರಿಯು ನಾನು ಕಂಸಗೆ ಕಂದರ್ಪ ನಿನ್ನಿಂದಾರು ಪ್ರಿಯ
ರೆಂದಳು ೩

ಚಿದ್ರೂಪ ಮಧುರ ಪೈಶಲ ಉಕ್ತಿಯಿಂ ಬಲಭದ್ರಗೆ ತನಗೆ ಬೇಡಲು ಬ್ಯಾಗೆ
ಭದ್ರಾಂಗೆಯಿತ್ತಳು ಭಕ್ತಿಭರಿತೆಯಾಗಿ ಸದ್ರೂಪ ಲೇಪನದೆಸೆವ ಗೋವಿಂದ ೪

ಕುಂಕುಮ ಕೇಶರ ಕಸ್ತೂರಿ ಗಂಧವ ಸಂಕರುಷಣ ತಾನು ಕೊಡ್ಯಂಗಕ್ಕೆ
ಅಂಕಿತರಾಗಿ ಒಪ್ಪಿದರು ಕುಬ್ಜೆಯ ಮೂರಂಡೊಂಕ ತಿದ್ದಿದನು ಮುರಾರ್ದ
ಮುಕುಂದ ೫

Rarest Archiver

ಪಂಕಜನಾಭನ ಪ್ರಸನ್ನತೆ ಯಾರಿಗೆ ಶಂಕೆಯಿಲ್ಲದೆ ಸೌಖ್ಯವವರಿಗೆ
ಡೊಂಕ ತಿದ್ದಿದುದೇನಚ್ಚರಿಯಲ್ಲಾವಿದ್ಯೆಯ ಶಂಕೆ ನೀಗಿಸುವ ಸರ್ವೇಶ
ಸರ್ವೇಶ ೬

ಸಂದರುಶನ ಸ್ಪರ್ಶನ ದಾರಿಗುಂಟವರೆಂದಿಗೆ ಮುಕುತಿಗೈದುವರು ಸತ್ಯ
ಇಂದಿರೆಯರಸನ ಪಾದಾಬ್ಜಾಶ್ರಿತರಿಗೆ ದಂದುಗದ ಭಯವೇಕೆ ಚಿಂತ್ಯಾಕೆ ೭

ತ್ರಿವಕ್ರೆ ರಂಚಿರವಕ್ರೆಯ ಕಾಲ್ಗಳಲ್ಲಿ ಶ್ರೀ ತ್ರಿವಿಕ್ರಮ ಪದವನೊತ್ತಿ ಇಟ್ಟು
ದೇವೇಶ ದ್ವ್ಯಂಗುಲಿ ಪರಿಮಿತವೆತ್ತಿದ ದೇವಿಯ ಚುಬುಕವೆತ್ತಿದ ಕೈಲಿ ೮

ವಕ್ರವು ರುಜುವಾಯಿತಬಲೆಗೆ ಆಕ್ಷಣ ಶಕ್ರಾಂಗನೆಯಂತೆ ತೋರ್ದಳಾಗೆ
ಕಕ್ಕಸಕುಚಭಾರ ಕೃಶಮಧ್ಯದಿಂದೊಪ್ಪಿ ಚಕ್ರಿಯ ಬಳಿಯೆ ನಿಂತಳು ಲಜ್ಜೆ
ಯಿಂದೆ ೯

ಶ್ರೀ ಕೃಷ್ಣಸ್ಪರ್ಶದಿ ಹೃಚ್ಛ್ರೀಯ ವರ್ಧಿಸೆ ಆ ಕಾಂತೆ ಹರಿಯ ಉತ್ತರೀಯ
ವಸ್ತ್ರವ
ಆಕಾಂಕ್ಷೆಯಿಂದ ಜಗ್ಗಿದಳ್ ಮಾತಾಡಿದಳ್ ಹೇ ಕಾಂತ ವೀರದೊರೆಯೆ ಬಾ
ಮನೆಗೆಂದು ೧೦

ಗುಣರೂಪಪೂರ್ಣ ನೀ ಕೇಳು ಪ್ರಾರ್ಥನೆ ದೀನಜನದಯಾನಿಧೆಯೆನ್ನ ಮನೆಗೆ
ಬಂದು
ಇನಿಗೋಲನಂಬ ಪ್ರೇರಿಸಿದೆ ನೀ ಪರಿಹಾರವನು ಮಾಡು ಬಿಟ್ಟಿರಲಾರೆ
ನಿನ್ನೆಂದಳಂ ೧೧

ಮಾನಿನಿ ಹೀಗೆಂದರಣ್ಣನ ಮುಖನೋಡಿ ಸಾನುಗ ಗೋವರ ನಗುತ ನೋಡಿ
ಆ ನಾರಿಗೆಂದ ಮಂದಸ್ಮಿತೇಕ್ಷಣದಿ ಚಂದ್ರಾನನೆ ಪೃಥುಶ್ರೋಣಿ ಮಾತ
ಕೇಳೆಂದ ೧೨

ವೃಂದಾರಕರ ಮನೋವ್ಯಥೆಯ ಬಿಡಿಸಿ ನಿನ್ನ ಮಂದಿರಕೆ ಬಹೆ ನಡೆಯೆನ್ನುತ
ಪೊಂದಿದವ್ಯೃತವಾಕ್ಯದಿಂದ ಮನ್ನಿಸಿ ಗೋಪವೃಂದ ಸಹಿತ ಅಣ್ಣ
ನೊಡನೈದೆ ಮುಂದದಿ ೧೩

ದೇವೇಶ್ವರರ ಪೂಜಿಸಿದರು ಸುಜನರು ಭಾವಜ್ಞರು ಸ್ತೋತ್ರವಂದನೆಯಿಂ
ಪವುರಜನರಿಗೆ ಕೇಳಿದನು ಧನುಷಸ್ಥಳ ದಾವುದೆನ್ನುತ ಸರ್ವಜ್ಞರು ನರರಂತೆ ೧೪

Rarest Archiver

ಇವರ ಲಾವಣ್ಯಾಮೃತಪುಂಡಂ ಬುಧರಕ್ಷಿಪವೆಯಿಕ್ಕದಲೆ ಕವಿದು ನೋಡುತ
ಸವೆಯೆಂದ ಸಂಖಬಡುತ್ತಿದ್ದರು ಪ್ರಸನ್ವೆಂಕಟ [1][ರೌಹಿಣೇಯರು ಕಂಡರು ಭವನ
ಧನುವ][1] ೧೫

೬೧

ರಾಗ : ಪಹಡಿ **ತಾಳ : ಅಟ್ಟ**

ಮಂಕ್ಕಣ್ಣನ ವರಧನುವನು ಕಂಸನು ಸೊಕ್ಕಿನ ಭಕ್ತಿಲಿ ಪೂಜೆಗಿಟ್ಟು
ರಕ್ಕಸಾಂತಕ ಕೃಷ್ಣರಾಮರ ಕರೆಸಿರೆ ಲೆಕ್ಕವೆ ಹುಲ್ಲು ಬಿಲ್ಲನು ಮುರಿವಾಟ ಪ.

ಇಂದ್ರಚಾಪೋಪಮ ವಿಚಿತ್ರಧನುವನು ಬಂದು ಕಂಡರು ರಾಮಕೃಷ್ಣರಾಗೆ
ಗಂಧ ಮಾಲ್ಯಾಂಬರ ಧೂಪದೀಪ ಬಲಿಯಿಂದರ್ಚನೆಗೊಂಡು ರಂಜಿಸಲು ೧

ತ್ವರಿಯದಿ ಬರುತಿರೆ ಹರಿರಾಮರಿಬ್ಬರನು ತರುಬಿದರ್ ಮಾರ್ಗದಿ ಪರಿಚಾರರು
ನೊರಜಂಗಳಿಗೆ ಅಂಜಿ ಉರಿ ಹಿಂದಕಾಗ್ವದೆ ಹರಿ ಹಿಡಿದನು ಎಡಗೈಯಲಿ ಬಿಲ್ಲ ೨

ಹೆದೆಯೇರಿಸಿದನು ವಿಶ್ವೈಕ ಶಾಸ್ತ್ರಾರ ಮದಗಜೇಕ್ಷುದಂಡವ ಪಿಡಿದಂತೆ
ಬದಿಯ ಕಾವಲಿನವರ್ಬೆದರಿ ಬೇಡೆನುತಿರೆ ಪದುಮಾಕ್ಷ ಮಕ್ಕಳ ಲೀಲೆಯಂತೆ ೩

ಸಜ್ಜಿಸಿದನು ಸಕಲರು ಈಕ್ಷಿಸುತಿರೆ ಭಜ್ಜಿಸಿದನು ಎರಡು ತುಂಡುಮಾಡಿ
ಗರ್ಜಿಸಿತಂ ಛಟ್‌ಛಟ್ ಸಿಡಿಲುಗಳವೋಲು ನಿರ್ಜೀವರಂತೆ ಜನರಕಾಂತಿಹೋಗೆ ೪

ಗರ್ಜನೆಯಾಕಾಶ ಮಂಡಲ ತುಂಬಿತು ದಿಗ್‌ಜಾಲವೆಲ್ಲವ ವ್ಯಾಪಿಸಿತು
ಬೆಜ್ಜರವಡೆದನು ಕಂಸನ ಮೂರ್ಛೆಯೊಳ್ ಜರ್ಝರಿತಾದನು ಧೈರ್ಯಗುಂದಿ ೫

ಕಾವಲಿದ್ದವರು ಕೋಪದಿ ರಾಮಕೃಷ್ಣರ ನೀವು ಕಟ್ಟಿ ತಾವು ಕಟ್ಟಿಯೆಂಬ
ಸೇವಕ ದುರ್ಮತಿಗಳನು ಧನುಶ್ಶಕಲದ್ವಯುವನ್ಹಿಡಿದು ಕುಟ್ಟಿದರ್ ಲೀಲೆಯಲಿ ೬

ಒರಳಿಗಿಕ್ಕಿದ ಧಾನ್ಯದಂತೆ ಹಿಟ್ಟು ಹಿಟ್ಟು ಘರಟ್ಟದ್ಹಾಗೆ ಮಾಡಿದರಾಕ್ಷಣ
ದಂರಂಳ ಕಂಸನು ಮತ್ತೆ ಕಳುಹಿದ ಬಲವನು ತರಿದುತಿರುಗುತಿದ್ದರ್ ಪುರದೊಳಗೆ ೭

ರಾಜಿಸುತ್ತಿದ್ದರು ಪುರದ ಸಂಪದ ನೋಡಿ ರಾಜವೀಥಿಲಿ ಗೋವಳರೊಳು ನಗುತ
ಭ್ರಾಜತ್ಪರಾಕ್ರಮವನು ಕಂಡು ಸುಜನರು ಈ ಜಗತ್ಪಾವನರಿವರೆಂದರು ೮

---

1 ಭವನ ರೌಹಿಣೆಯರು ಕಂಡರು ಧನುವ

Rarest Archiver

ಮೂಜಗದೊಳ್ ದೇವದನುಜರೊಳ್ ಕಾಣೆವೀ ಸೋಜಿಗದ ಪರಾಕ್ರಮರ ಸಮ
ನೈಜಮಾನವರಲ್ಲ ಅಜಭವಸುರವಂದ್ಯ ಈ ಜಗದಲಿ ಒಪ್ಪುತಿಹರೆಂದು ೯

ಗೋವಕ್ಕಳ ಸುಕೃತವ ನೋಡಿ ಆವಾಗ ಜೀವನ್ಮುಕ್ತರಂತೆ ಸುಖಿಗಳಾಗಿ
ಶ್ರೀವಾಸುದೇವನ ಸಮಾಶ್ರಿತರಾದರು ದೇವಾಂಶರ್ ನರರಲ್ಲ ಇವರೆಂದರು ೧೦

ಆವೇಳೆಯಲಿ ಭಾನು ಅಸ್ತಮಯುವ ನೋಡಿ ಶ್ರೀವಾಸುದೇವ ಬಲಗೋವಳರು
ತಾವು ಹೋದರು ತಮ್ಮ ಶಕಟವಿದ್ದಲ್ಲಿ ಜಯವಂತರ್ ಧಾರ್ಮಿಕರ್
ದಯವಂತರು ೧೧

ತೊಳೆದು ಪಾದಾಬ್ಜವನುಂಡು ಕ್ಷೀರೋದನ ಕಳೆದನಿಭವನು ಕಂಸನವಂತಿಯ
ತಿಳಿದು ಬಲಮುರಹರರು ಸೌಖ್ಯದಲಾರಾತ್ರಿ ಲಲಿತ ಸ್ವಾಪವ ಮಾಡಿದರು
ರಾಮಾಚ್ಯುತರು ೧೨

ಸತ್ಯಸಂಕಲ್ಪ ಶ್ರೀಕೃಷ್ಣಾಶ್ರಿತ ಭೃತ್ಯಜನಾರ್ಥಪೂರಣ ಕಾರಣ
ನಿತ್ಯ ನಿರ್ದೋಷ ಸಚ್ಚಾರಿತ್ರಾಂಬುಜನೇತ್ರ ದೈತ್ಯಾಂತಕ ಪ್ರಸನ್ವೆಂಕಟಾದ್ರೀಶ
೧೩

೬೨

ರಾಗ : ಪಂತುವರಾಳಿ **ತಾಳ : ಅಟ್ಟ**

ರಾಮಕೃಷ್ಣರ ದ್ರೋಹದಫಲ ತತ್ಕಾಲ ಒದಗಿತು
ತಾಮಸಾತ್ಮ ಕಂಸನಿಗುತ್ಪಾತ ತೋರಿತು ಪ.

ಮನದಿ ಯೋಚಿಸಿದನು ಬಿಡದ್ಯಾಮಿನಿ ಸಮಗ್ರವ
ಧನುವು ಮುರಿದ ಕ್ಲೇಶ ತನ್ನ ಜನರ ಹಿಂಸೆಯ
ನೆನೆದು ನೆನೆದು ರಾಮಕೃಷ್ಣರ ಘನವಿಕ್ರಮವನು
ಎಣಿಸಿ ದುರ್ಮತಿ ಭೀತಿವಿಡಿದು ಅನಿಮಿಷನವನು ೧

ತನುವಿನಲ್ಲಿ ತಲೆಯುದೋರದು ಕನ್ನಡಿಯೊಳಗೆ
ದಿನಪಮಂಡಲವೆರಡು ತೋರಿದವನಿತರೊಳಗೆ
ಮನಸಿನಲ್ಲಿ ನೊಂದು ಕುಳಿತು ನೋಡುತಿರಲಿಕ್ಕೆ
ಘನ ದುರ್ನಿಮಿತ್ತ ಕಂಡಂಜುತಿದ್ದನು ಕ್ಷಣಕೆ ಕ್ಷಣಕ್ಕೆ ೨

Rarest Archiver

ದೇಹದ ನೆಳಲು ಛಿದ್ರ ಛಿದ್ರಾಗಿರೆ ಅಹರ್ನಿಶ ಕಿವಿಯಲಿ
ಇಹಂಥ ಪ್ರಾಣಘೋಷವಡಗಿ ಬಹಳ ಭಯದಲಿ
ಮಹಿಜವೆಲ್ಲ ಸುವರ್ಣವಾಗಿ ಇಹುದು ಕಂಡನು
ಮಹಾಮಂದಾಂಧ ತನ್ನ ಹೆಜ್ಜೆಗಳ ಮಹಿಯಲಿ ಕಾಣನು ೩

ಬವಣೆಗಂಜಿ ಬೆದರ್‍ವ ಭ್ರಾಂತವಿವಶನಾಗುವ
ಜವನ ದಿಕ್ಕಿಗೆ ಕನಸಿನಲ್ಲಿ ಖರವನೇರ್‍ಯೈದುವ
ಶವವನಪ್ಪುತ ಹೋಗುವ ಕಣಗಿಲ್ ಹೂವಿನ ಮಾಲೆಯನು
ಗ್ರೀವದೊಳಾಂತು ಹೂಸಿ ದಿಗಂಬರ ಸವಿವ ಬಿಸವನು ೪

ಈವಿಧವುತ್ಪಾತ ಜಾಗ್ರತೆ ಸ್ವಪ್ನವಿವರ ಕಂಡನು
ಕಾವಲಿಲ್ಲದ ಮೃತ್ಯುವ ನಿಶ್ಚಯಿಸಿ ಅವನು ಅಂಜಿದನು
ಲವಯುಗಾಗಿ ರಾತ್ರಿಯ ನೂಕಿದ ಸವೆಯದ ಕಷ್ಟದಲಿ
ರವಿಯು ಉದಿತನಾದ ಬಳಿಕುತ್ಸವವು ಮನದಲಿ ೫

ಹವಣಿಸಿದನು ಮಲ್ಲರ ಕ್ರೀಡೆಗೆ ಲವಲವಿಕೆಯಲಿ
ಅವನಿಪತಿಯು ರಂಗವ ಮಂಡಿಸಿ ನವಮಂಚಗಳಲಿ
ಠೀವಿಯರಚಿಸಿ ತುತೂರಿ ಭೇರಿ ವಾದ್ಯವ ಘೋಷಿಸಿದ
ಟವಟವಿಸುವ ತುಂಗಮಂಟಪ ಸಿಂಗರಿಸಿದ ೬

ಸುತ್ತಲು ಪೂಮಾಲೆ ಪತಾಕೆ ತೋರಣ ಚಿತ್ರ ವಿಚಿತ್ರಗಳು
ಅತ್ಯಂತಾಲಂಕರಿಸಿದ ಮಂಚಗಳು ಎತ್ತೆತ್ತ ರಾಜಿಸಲು
ಅರ್ಥಿಲಿ ದಿದೃಕ್ಷುಗಳು ಪೌರಜನ ಪೃಥ್ವೀಸುರರ್ ಸಮೂಹ
ಸತ್ವರ್ ಬಂದು ಬಂದು ತಮ್ಮ ಆಸನ ಹತ್ತಿ ನೋಡುತಲಿಹ ೭

ದೇದೀಪ್ಯ ತುಂಗ ಮಂಚದಲಿ ಭೋಜೇಂದ್ರನೈದಿ ಕುಳಿತ ಹೊಂದಿ
ಪ್ರಧಾನರಮಾತ್ಯರೊಡನೆ ಒಪ್ಪಿದ ಭೂಧರ ಮಂಡಲದಿ
ಹೋದ ತೇಜಾಗ್ನಿಯಂತಿದ್ದನು ರಾಜೇಂದ್ರ ಶ್ರೀಧರನ ದ್ರೋಹದಿ
ಕೈದು ತಗಲಿದಂದದೆದೆದಿಗಿಲಿನಲಿ ನಾದಿದ ದುಶ್ಚಿತ್ತದಿ ೮

ರಂಗಕೈತಂದರು ದೃಪ್ತದಿ ಮಲ್ಲರು ಸಿಂಗರಿಸಿ ತಮ್ಮನು
ಸಂಗರದನುಗರು ಆಪ್ತರುಪಾಧ್ಯೇರು ಜಂಗುಳಿಗಟ್ಟೆಲ್ಲರು
ಸಂಗೀತ ತುತ್ತೂರಿ ತಾಳ ಜಾಗಟೆ ಬಿರುದಂಗಳ ಚಾಣೂರ ಮುಷ್ಟಿಕ
ಹಿಂಗದೆ ಶಲ ತೋಸಲ ಕೂಟಾದ್ಯರ ಸಂಗಡಿಸಿ ಬಳಿಕ ೯

Rarest Archiver

ಬಂದಿರೆ ವಾದ್ಯದ ಘೋಷದಲಿ ದುಷ್ಟಸಂದೋಹ ಒಪ್ಪಿತಲ್ಲಿ
ನಂದಗೋಪಾದ್ಯರುಪಾಯನವ ತಕ್ಕೊಂಡು ಬಂದರು ರಾಜನಲ್ಲಿ
ಮುಂದೆ ತಂದಿಟ್ಟರು ನೃಪಗೆ ನಮಿಸಿ ತಾವು ಹೊಂದಿದರ್ ಮಂಚಗಳ
ಚಂದದಿಂದುತ್ಸವವ ನೋಡುತ ಕುಳಿತರು ಬಂದು ಗೋವಳವರ್ಮೇಳ- ೧೦

ಶ್ರೀಕೃಷ್ಣ ಕೃಷ್ಣ ಸುಖಾರ್ಣವ ನಿರ್ಜರಾನೀಕಪ್ರತಿಪಾಲಕ
ಗೋಕುಲರಕ್ಷ ಗೋವಿಂದ ನಿರ್ದೋಷ ಗುಣಾಕರ ದುಷ್ಟಾರ್ದಕ
ವೈಕುಂಠಮಂದಿರ ಸುಂದರ ವರ ಭುವನೈಕ ವ್ಯಾಪಕ ಮುರಾರೆ
ಶ್ರೀಕಾಂತ ಭೂಕಾಂತ ಏಕಾಂತಭಕ್ತಕೃಪಾಕರಾನಂತ ಹರೆ ೧೧

ಭೂಭಾರಹರಣ ನಿರ್ಜರಕ್ಷೇಮಕಾರಣ ಶೋಭನ ಸದ್ಗುಣಾರ್ಣವ
ತ್ರೈಭುವನಾಧಾರ ಪರಮ ಧರ್ಮೋದ್ಧರ ಲಾಭರಹಿತ ಉದಾರ
ಗೋಭೂಸುರಾರ್ತಿಹನ್ಗೋಪವೇಷಧರ ಶ್ರೀಭೃತ ಸಕಲಾರ್ಥದ
ಭೂಭುಜಾರ್ಚಿತಪಾದ ಭಕ್ತವತ್ಸಲ ಹರೆ ಶ್ರೀ ಭಗವಜ್ಞಾನ ದಾತಾರ ೧೨

ಈ ಕಥಾಮೃತವನುಂಬುವ ಜಾಣಭಾಗ್ಯವು ಬೇಕೆಂದು ಬಯಸುವರು
ನಾಕಜನರ್ ಮುನಿಗಳು ನಿತ್ಯವಿರಕ್ತರು ಲೌಕಿಕೇಷಣರಿಕ್ತರು
ಶ್ರೀಕರ ಪ್ರಸನ್ವೆಂಕಟ ಕೃಷ್ಣನೊಲುಮೆಯಲಿ ವೈಕುಂಠಲಾಭವಕ್ಕು
ಏಕಾಂತಜನರೊಳು ವಾಸಬೇಕಾದರೆ ಅನೇಕ ಸಾಧನವಿನ್ಯಾಕೆ ೧೩

೬೩

ರಾಗ : ಸಾರಂಗ **ತಾಳ : ಝಂಪೆ**

ಗಜಪಾಲ ಅಷ್ಟದಿಗ್ಗಜಪಾಲ ಗಜವದನಜನಕಪಾಲ
ಗಜರಿಪುವದನ ಹರಿಗೆ ಕುವಲಯಪೀಡಕನೊಬ್ಬ
ಗಜದಮನ ಘನವೆಯವಗೆ ಪ.

ಬಾಹ್ಯೋಪವನದಿ ಶಕಟಗಳ ಬಳಿ ಹರಿಬಲರು ಆಹಸ್ಕರೋದಯದಲೆದ್ದು
ಸುಹಸ್ತ ಶೌಚ ಮಾಳ್ಪನಕ ಕೇಳಿದರು ಮತ್ತಮಲ್ಲರ ಬಹಳ ದುಂದುಭಿಘೋಷವ
ಅಹನ್ನಿೀಕ ಮುಗಿಸಿ ನಡೆದರು ಶೀಘ್ರ ಭೋಜಪನ ಗೇಹ ರಂಗದ್ವಾರದೆಡೆಗೆ
ಮಹಾಶೈಲದಂತೆ ತಮ್ಮ ನಿವೇಶಕೆ ಅಡ್ಡ ನಿಂತಿಹುದಂ ಅಂಬಷ್ಟನಿಲಿಸೆ ೧

ಕಂಡು ಶ್ರೀ ಕೃಷ್ಣ ಪರಿಕರವ ಮಧ್ಯಕೆ ಸುತ್ತಿಕೊಂಡು ಅಳಕವ ಕಟ್ಟಿದ
ಶುಂಡಾಲವಂ ತೆಗೆಯೆ ಶೀಘ್ರ ಅಲಸದಲೆ ಉದ್ದಂಡತನವನು ತೋರಿದೆ

Rarest Archiver

ದಿಂಡುಗೆಡಹುವ ನಿನ್ನ ಹಸ್ತಿ ಸಹ ಕಳುಹುವೆನು ದಂಡಪಾಣಿಯ ನಗರಕೆ
ಲೆಂಡತನ ಬೇಡ ನಿನ್ನಯ ಪಕ್ಷಪಾತ ಬಹ ಹಿಂಡುವೀರರ ಸದೆವೆನು ೨

ಹೀಗೆನಲು ಕೋಪದಲಿ ಮಾವಟಿಗ ಗಜವನ್ನು ಯೋಗಿಸಿದ ಕೃಷ್ಣೋಪರಿ
ವೇಗದೈದಿತು ಪ್ರಳಯಕಾಲ ಕಾಲನರೂಪ ಹೋಗಿ ಶುಂಡಿಲಲಿ ಜಗ್ಗಿ
ಯೋಗೇಶ್ವರಾಚ್ಯುತನ ಹಿಡಿದರೆ ಜಗುಳಿ ಬೇಗ ಅಧಮನ ವಂಚಿಸಿ
ಆಗಡಗುತಿರಲಂಘ್ರಿ ಮೆಟ್ಟುಗಳ ತಪ್ಪಿಸಲು ಮೂಗಿಲಾಘ್ರಾಣಿಸಿ ಗಜ ೩

ಮೇಗುಮೇಗ್ಯತ್ನಮಾಡಲು ದುಷ್ಟಶಾಸ್ತಾರ ಬೇಗ ಪುಷ್ಕರ ತಪ್ಪಿಸಿ
ಆಗ ಪುಚ್ಛವ ಹಿಡಿದು ಜಗ್ಗೆಳೆದ ಭೂಮಿಮೇಲ್ ಲಾಘವದಿಪ್ಪತ್ತೈದು ಧನುವ
ನಾಗಾರಿ ಅಹಿಯ ಲೀಲೆಯಲೊಯ್ದು ತಿರು ತಿರುಹಿದ್ದಾಗೆ ಅಪ್ರತಿಮಲ್ಲನು ಅ
ಮೋಘವಿಕ್ರಮ ಸವ್ಯದಕ್ಷಿಣಕೆ ಬಿಗಿದಾಡೆ ನಾಗ ಭ್ರಾಂತಿಯನೈದಿತು ೪

ಭ್ರಾಮಣವ ಮಾಡಿದನು ಬಾಲಕರು ವತ್ಸವನು ಭೂಮಿಯಲಿ ವಂಚಿಪಂತೆ
ಶ್ರೀ ಮನೋಹರ ಹಸ್ತಿ ಮುಖದಿದಿರು ನಿಂತನು ಮಹಾಮೃಗಾಧಿಪನ ತೆರದಿ
ಆ ಮತ್ತಗಜವ ಬಡಿದನು ಕೈಲಿ ಭುವನ ನಿಯಾಮಕನು ಚೆನ್ನಾಟದಿ
ತಾ ಮತ್ತೆ ಮುಟ್ಟಿ ಮುಟ್ಟ್ಯೋಡಿದನು ಹಿಂದೆ ಗಜ ಮುಂದೆ ಮುಂದಾಗೆ ಕೃಷ್ಣ ೫

ನಿಂತು ನಿಂತೋಡುವನು ತೋರ್ವನಡಗುವನೊಮ್ಮೆ ದಂತಿಕರಕೆ ಸಿಲುಕಿದೋಲ್
ಭ್ರಾಂತಿ ಬಡಿಸುವ ಹಸ್ತಿ ಹಸ್ತಿಪಗೆ ಕ್ಷಣ ಕ್ಷಣಾ ಚಿಂತ್ಯಾದ್ಭುತಕರ್ಮನು
ಸಂತರ ಮನಕೆ ಖೇದ ತೋರುವುದು ಹರಿಗೆ ಜಯ ಚಿಂತಿಪರು ಭಕ್ತರಾಗ
ನಂತಶಕ್ತ್ಯಾತ್ಮನ ಲೀಲೆಯಂ ಕಂಡು ಸುರತಿಂತಿಣಿಯು ಜಯ ಜಯವೆನೆ ೬

ಆಯಾಸಾದಂತೆ ಬಿದ್ದೆದ್ದು ಓಡಿ ದೇವಮಾಯವು ತನಗೆ ತಿಳಿಯದೆ
ತಾಯ್ದೈದಿತಾಗಜವು ದಂತದಲಿ ಇಳೆಗಿರಿದು ಹೋಯಿತೆಲ್ಲ ವಿಕ್ರಮವು
ಶ್ರೀಯೀಶನ ಕಾಣದೆ ಮಹಾಮಾತ್ರ ಕ್ರೋಧಾಯಮಾನದಿ ಬೆಂಬತ್ತಿ
ನೋಯಿಸುವೆನೆಂದು ಓಡಿಸಿದ ಹರಿ ಬೆನ್ನತ್ತಿ ವಾಯುವೇಗದಿ ಹಸ್ತಿಪ ೭

ಶ್ರೀ ಮದ್ರವಾರಣ ನಿಂತನು ಕರಿಯು ಮುಂದೆ ಬಾ ಮುಂದಕೆಂದು ಹಿಡಿದು
ಭ್ರಾಮಿಸುತ ಶುಂಡಾಲವಿಡಿದಪ್ಪಳಿಸೆ ತೀವ್ರ ಭೂಮಿತಳದಲ್ಲಿ ನಗುತ
ವೈಮಾನಿಕರು ಜಯಜಯ ಎನೆ ಕರಿಯ ಮೆಟ್ಟಿ ಶ್ರೀ ಮನ್ನೃಸಿಂಹನಂತೆ
ಆ ಮತ್ತಗಜದ ದಂತಗಳೆರಡು ಕಿತ್ತಿ ಮಹಾಮಾತ್ರನ ಜಡಿದನು ೮

ದಂತಿ ದಂತಿಪರಳಿದು ಬಿಸುಟು ನಡೆದನು ಒಂದು ದಂತವಂಸದಲಿ ಧರಿಸಿ
ದಂತವೊಂದನು ಅಗ್ರಜಗೆ ಕೊಟ್ಟು ದುಷ್ಟಹರಾನಂತಶಕ್ತ್ಯಾತ್ಮಕೃಷ್ಣ

Rarest Archiver

ಕಾಂತಿಯಿಂದೊಪ್ಪಿದರು ರಾಮಾಚ್ಯುತರು ಮದದ ದಂತಿ ರಕ್ತಬಿಂದಂ ಸಿಡಿದಂ
ಎಂತು ನೀಲಾದ್ರಿ ರಜತಾದ್ರಿ ರಾಜಿಸಂತಿಹವು ಅಂತೆ ತೋರಿದರುಂ ಕಣ್ಗೆ ೯

ಸ್ವೇದಾಂಕಿತಾಸ್ಯಾಬ್ಜದತ್ಯಂತ ಸುಂದರರುಂ ಮೋದಸ್ಮಿತೇಕ್ಷಣದವರುಂ
ಐದಿದರುಂ ರಂಗವನುಂ ಆರಾರ ಯೋಗ್ಯತೆಯು ಭೇದದಂತಲಿ ತೋರ್ದರುಂ
ಕಾದುರಿವ ಸಿಡಿಲಂತೆ ಮಲ್ಲರಿಗೆ ತೋರಿದರು ಮೇದಿನಿಪರಂತೆ ನರರ್ಗೆ
ಐದೆಂಬ ಸ್ತ್ರೀಯರಿಗೆ ಆಪ್ತ ಗೋಪಾಲರಿಗೆ ಭೂಧರರ್ಗೆ ಶಾಸ್ತ್ರರನೋಲ್ ೧೦

ಜನನಿಜನಕರ್ಗೆ ಅರ್ಭಕರ್ಳಾಗೆ ಮೃತ್ಯು ಕಂಸನಿಗೆ ವೃಷ್ಣಿಗಳ ಕಣ್ಗೆ
ಘನವರ್ಯರಂತೆ ಪರಾತ್ಪರರಂತೆ ತೋರಿದರು ಮುನಿಜನಕೆ ರಂಗದಲ್ಲಿ ೧೧

ಸಮೆಯದಹಂಕಾರವನು ಬಾಹ್ಯದಲಿ ತೋರುತಿಹ ಬವಣೆಗಾಣನುಂ ಮುಂದಣ
ಲವಲವಿಕೆ ಮಾಡುತಿಹ ವ್ಯರ್ಥ ಉನ್ಮತ್ತ ನೀಗಿವರ ಸಾಹಸಕೆ ಕುದಿದನು
ಪೀವರಭುಜಬಲಾಢ್ಯರು ವಿಚಿತ್ರವೇಷ ಸುವಸನದಾಭರಣರುಂ
ದೇವೋತ್ತಮರುಂ ರಂಗದಲಿ ಸಂಚರಿಸುತಿಹರು ಪಾವನ ದೃಢಾಕೃತಿಯಲಿ ೧೨

ನೋಡುವರ ಕಣ್ಮನಕೆ ಸುಧೆಯು ರಸ ತುಂಬಿ ಸುಪ್ರೌಢಜನ ಹರಿಯ ಸೌಂದರ್ಯ
ನೋಡಿ ಚಕ್ಷುಪುಟಗಳಿಂ ಪೀಯೂಷಪಾನವನು ಮಾಡುವರು ಮನದಣಿಯದೆ
ನೀಡಿ ನಾಲಿಗೆಯಿಂದ ಲಾವಣ್ಯಲೇಹನವ ಮಾಡುವಂತಿಹ ಸುಜನರು
ಗಾಢ ಘ್ರಾಣಿಸುತಿಹರು ಘ್ರಾಣದಿಂದಾಮೋದ ಗಾಢಾಲಿಂಗಿಪರ್ ಬಾಹುಗಳಿಂ ೧೩

ಬಾಹ್ಯಾಂತರ ಪೂರ್ಣಾನನಾಬ್ಜವನು ನೋಡಿ ಜನ ಮಹದಾಶ್ಚರ್ಯಬಡುತಲಿ
ಸ್ನೇಹದಲಿ ಮಾತಾಡಿದರು ತಮ್ಮ ತಮ್ಮೊಳಗೆ ಇಹ ಮಂಚದ ತಾಣದಿ
ಬಹಳ ವಿಕ್ರಮವನ್ನು ಕಂಡರು ಪ್ರತ್ಯಕ್ಷದಲಿ ಆ ಹಿಂದೆ ಕೇಳಿದಂತೆ
ರೂಪ ಚಾತುರ್ಯ ಔದಾರ್ಯ ಮಾಧುರ್ಯ ಸಲೆ ಗಹನ ಗಾಂಭೀರ್ಯ
ಮಂದು ೧೪

ಆದಿ ನಾರಾಯಣನಂಶರು ಈಗಲೀ ಯಾದವ ಕುಲದಲಿ ಜನಿಸಿ
ಈ ದೇವಕಿ ಶೌರಿ ಪೂರ್ವದಲಿ ಮಾಡಿದ ಪುಣ್ಯೋದಯವು ಮಕ್ಕಳೆನಿಸಿ
ಮೇದಿನಿಯ ಭಾರಿಳುಹಬೇಕೆಂದು ವ್ರಜದಲಿ ದಿನೇ ದಿನೇ ಕ್ರೀಡೆಯಾಡಿ
ಮೋದವಿತ್ತರು ಜನಕೆ ಚಾರು ಚಾರಿತ್ರ್ಯರಿವರಾದರದಿ ಸುರರಿಗೆ ಜಯ ೧೫

ಗೂಢಾತ್ಮರಿವರು ನಂದನ ಗೇಹದಲಿ ಬೆಳೆದು ಮಾಡಿದರುಂ ದುಷ್ಟಹರಣ
ಪೀಡೆ ಪೂತನಿ ಚಕ್ರವಾತ ಕೇಶಿಯುಂ ಗುಹ್ಯಕ ಜೋಡಾರ್ಜುನಾದ್ಯರನ್ನು

Rarest Archiver

ಕಾಡಿನೊಳು ಕೆಚ್ಚಿಸೆಂಗಿದ ಕೃಷ್ಣ ಅಹಿಮಂದ ವಿಭಾಡಿಸಿದ ಸುತ್ರಾಮನ
ಕೇಡಿನ ಮಳೆಗೆ ಗಿರಿಯಸೇಳು ದಿನ ಕೈಲಿ ಎತ್ತ್ಯಾಡಿದಂಳುಹಿದ ವ್ರಜವನು ೧೬

ಕೃಷ್ಣವದನಾಬ್ಜ ಸುಧಪಾನವನು ಇರುಳ್ಹಗಲು ದೃಷ್ಟಿಂದ ಮಾಳ್ಪಬಲೆರ
ನಿಷ್ಟೆ ಜ್ಞಾನವನು ಕವಿಗಳು ಜಿಹ್ವೆಯಿಂದೆ ಇನ್ನೆಷ್ಟು ಹೇಳಲು ತೀರದು
ಶಿಷ್ಟರ ಶ್ರವಣಕಮೃತಸಾರ ಮುಂದಕೆ ಸಂವಿಶಿಷ್ಟ ಸುಖಭೋಜನ ಗಡ
ಕೃಷ್ಣಚಾರಿತ್ರ್ಯದ ವಿಚಿತ್ರವನು ಪೇಳ್ವ ಪರಮೇಷ್ಠ್ಯಾದಿ ವಿಬುಧ ಸಮೂಹ ೧೭

ಗೋಪಾಲರೊಡಗೂಡಿ ಗೋವುಗಳ ಚರಿಸುವ ಶ್ರೀಪತಿಯು ಗಿರಿವನದಲಿ
ಗೋಪಿಯರ ಮನ್ನಿಸುವ ವೇಣುನಾದದ ರಸದಿ ವ್ಯಾಪಿಸುವ ಸುರರ ಶ್ರುತಿಗೆ
ಈ ಪರಬ್ರಹ್ಮ ಹರಿರಾಮ ಸಾಮಾನ್ಯರೇ ಗೋಪರೇ ಲೋಕೇಶರು
ಆ ಪ್ರಲಂಬನ ಮರ್ದಿಸಿದ ರಾಮ ತಡೆಯದೆ ಮಹಾಪರಾಕ್ರಮಿ ದಂಷ್ಟ್ರ ೧೮

ಈ ವಿಧದ ಕೀರ್ತನೆಯನು ಮಾಡುವರು ಸುರರೆಲ್ಲ ನಾವೇನು ಬಲ್ಲೆವೆನುತ
ಈ ವಾಕ್ಯ ನುಡಿವನಕ ಭೇರಿ ತುತ್ತೂರಿ ಘೋಷ ತೀವಿತು ಬಿರಿದು ಮಲ್ಲರ
ಶ್ರೀವರ ಪ್ರಸನ್ನ ವೆಂಕಟಕೃಷ್ಣ ಬಲರಾಮ ರಾಜೀವನೇತ್ರರು ವೀರರು
ಕೋವಿದರು ಒಪ್ಪಿದರು ಜಗಜಟ್ಟಿಗಳ ಕಂಡು ಭಾವುಕರಿಗಾಹ್ಲಾದವು ೧೯

೭೪

ರಾಗ : ಮುಖಾರಿ **ತಾಳ : ಜಕ್ಕಣಿ ?**

ಮಧುಕೈಟಭಮರ್ದಕನೊಳು ಚಾಣೂರ ಮದಸೊಕ್ಕಿ ಕಾದುವೆನೆಂದು
ವದಿಸಿದ ರಂಗದಿ ರಂಗನೊಡನೆ ತಾ ಬದುಕಬಲ್ಲನೆ ಹೇಳೆಂದು ಪ.

ಎಲೆ ಬಲರಾಮಾಚ್ಯುತ ನಂದಗೋಪನ ಎಳೆಯರಿರಾ ನೀವಿಂದು
ಇಳೆಯೊಳು ವೀರಸಮ್ಮತರುದ್ಭಟರು ಬಲು ಯುದ್ಧಕೌಶಲರೆಂದು
ಘಳಿಗಘಳಿಗೆಗೆ ಕೇಳುತಲಿದ್ದ ಭೋಜಪ ಲಲಿತ ಉತ್ಸವನೋಳ್ಪ ವ್ಯಾಜೆ
ಯಲಿ ಕರೆಸಿದನು ಇಬ್ಬರನೆಂದನು ಖಳ ಕಲಿ ಚಾಣೂರ ಪಾಪಭಾಜ ೧

ದೇಶಸ್ಥರೆಲ್ಲರು ನೆರೆದಿಹರಿಲ್ಲ್ಯವನೀಶರು ನೃಪಪ್ರೀತಿಗಾಗಿ
ಲೇಸು ಶ್ರೇಯಸು ಉಂಟು ನಿಮಗಿನ್ನು ನೃಪತಿಯ ತೋಷಬಡಿಸಿ ಸುಖಿಯಾಗಿ
ಪೋಸುತಲಿರುತಿಹ ವತ್ಸವ ವನದಲಿ ಆ ಸಖ ಗೋವರ ಕೂಡಿ ಸ
ದಾ ಸರ್ವದಾ ಮಲ್ಲಯುದ್ಧವ ಮಾಡಿದಿರೀ ಸಮಯಕೆ ಅಂಜಬೇಡಿ ೨

Rarest Archiver

ಪ್ರೀತಿಪಡಿಸಿ ರಾಜೇಂದ್ರನ ಸಭೆಯೊಳು ನೀತಿಯುದ್ಧವ ಮಾಡಿ ತೋರಿ
ಖ್ಯಾತರಾಗಿರಿ ಕೋವಿದತೆ ನೋಡಲೆಲ್ಲರು ಚಾತುರ್ಯ ತೋರ್ಪವು ವಿಹಾರಿ
ಭೂತ ಪ್ರಸಾದಿಸುತ್ತೇವೆ ಭೋಜಪದಾತನ ಆಜ್ಞೆಯಂವಹಿಸಿ
ಭೂತಪ್ರಭು ಪೃಥ್ವೀನಾಥನು ಎಂದನು ತಳಾತಿಲಿ ಚಾಣೂರ ಕಥಿಸಿ ೩

ಚಾಣೂರನ ಕಥನವ ಕೇಳುತ ಕೃಷ್ಣ ತಾ ನುಡಿದನು ಸ್ಮಿತವದನ
ಧೇನುಚಾರಕರು ನಾವೇನು ಬಲ್ಲೆವು ವ್ರಜಕಾನನಚರಬಾಲರ್ಕದನ
ನೀನನುಗ್ರಹವ ಮಾಡಿದರೇವೆ ಯುದ್ಧ ಪ್ರಮಾಣದಿ ಮಾಡಿ ನಿನ್ನೊಳು
ಭೂನಾಥನ ಪ್ರೀತಿಯು ಪಡೆವೆವು ಬಲಹೀನರು ಅತಿಬಾಲರುಂಗಳು ೪

ಬಲವಂತರ್ ನೀವು ಯಥೋಚಿತ ಯುದ್ಧವ ಇಳೆಯರಸಗೆ ತೋರ್ಪವಾವು
ಸಲೆ ಅತಿಕ್ರಮಿಸಿದರೇವೆ ಅಧರ್ಮವು ತಿಳಿಯೈ ನಾವು ಹೇಳುವೆವು
ಬಲನನುಜನು ಹೀಗೆಂದರೆ ಚಾಣೂರ ನಳಿನಾಕ್ಷಗೆ ತಾನೆಂದ
ಎಲೆ ಬಲರಾಮಾಚ್ಯುತರಿರಾ ನೀವಿನ್ನೆಳೆಕಿಶೋರರು ಹ್ಯಾಗೆಂದ ೫

ನಲುವಿಂದ ಲೀಲೆಯಲಿ ಕುವಲಯಪೀಡನ ಅಳಿದಿರಿ ಮಂದಸೊಕ್ಕಿಯಿಹಂದು
ಗೆಲವುಂಟೆ ಕಾದಿದವರಿಗೆಂದಿಗೆ ಕೇಳಿ ಇಳೆದಿವಿಯಲಿ ಸಟೆಯೆಂದ
ಬಲನಿಗೆ ಮುಷ್ಟಿಕನೊಡನೀಗ ಯುದ್ಧವು ಸಲೆ ಸಮರ್ಪಕ ನಿನ್ನೊಳೆನಗೆ
ಬಲವಂತ ಮಲ್ಲರನೇಕರು ನೀನೇಕ ಗೆಲಬೇಕೆಂದ ಖಳನಾಗೆ ೬

ಈ ನೇಮವ ಚಾಣೂರ ಮಾಡಲು ಬಲ ಬಾ ನೀನೆಂದು ಮುಷ್ಟಿಕನ
ಪಾಣಿಗೆ ಪಾಣಿ ಪಾದಕೆ ಪಾದ ಹಚ್ಚುತ ತಾನೊತ್ತ್ಯಾಡಿದ ಜಾಣ
ಜಾನುವಿಗೆ ಜಾನು ನೆತ್ತಿಗೆ ನೆತ್ತಿ ಅರಾತ್ನಿಗೆ ಅನ್ಯೋನ್ಯ ಗೆಲುವ ಇಚ್ಛೆಯಲಿ
ಮಾನ ಪರಿಭ್ರಮಣವು ವಿಕ್ಷೇಪಣ ನಾನಾ ಪರಿರಂಭದಲ್ಲಿ ೭

ಒಮ್ಮೊಮ್ಮೆ ಬೀಳಗೆಡಹ್ಯಾಡುವ ಸೌರಂಭ ಒಮ್ಮುತ್ಸರ್ಪಣಾಪಸರ್ಪಣ
ಒಮ್ಮುತ್ಥಾಪನ ಸ್ಥಾಪನ ಚಾಲನವ ಮಾಡಿ ಹಮ್ಮಲಿ ಗೆಲುವೆವೆಂಬ್ಹುವಣ
ತಮ್ಮೊಳು ಗೆಲುವಿಚ್ಛೆಯಲಿ ಪರಸ್ಪರ ಹಿಮ್ಮೆಟ್ಟದಲೆ ಒತ್ತ್ಯಾಡಿದ್ದರು
ಹೆಮ್ಮದ್ದಾನೆಯ ತೆರದಲಿ ಯುದ್ಧದೆ ಸೊಮ್ಮಿನ ಬಲ್ಲಿದರವರು ೮

ಜನರೆಂದರು ಬಾಲಕರಿಗೆ ಬಲ್ಲಿದರನು ಸರಿ ನೋಡುವ ಕರ್ಮ
ಘನ ಅನ್ಯಾಯವು ಎಂದರು ಸ್ನೇಹದೀ ಜನಪತಿಗಿದು ಈಗಧರ್ಮ
ನೆನೆವರೆ ಪಾಪದ ಸಭೆಯಿಂದು ಇಲ್ಲಿ ಸಜ್ಜನರಿಗೆ ಸಲ್ಲ ನಿವಾಸ
ತನುಗಿರಿಗೋಲುವ ಮಲ್ಲರು ವಜ್ರರು ಅಣು ಕೈಶೋರರು ದೋಷ ೯

Rarest Archiver

ಅಪ್ರಾಪ್ತದ ಯೌವನರಿವರ್ ನೃಪತಿಯು ಅಪ್ರಜ್ಞನತಿಘಾತುಕನು
ಈ ಪ್ರಕಾರ್ ಕಿಲ್ಬಿಷ ಹೊಂದಿದ ಸಭೆಯನು ಸುಪ್ರಜ್ಞರ್ ಬಿಡಬೇಕಿದನು
ಸುಪ್ರಮತ್ತ ಮಲ್ಲರು ಹರಿಬಲರ್ ಬಾಲರು ಸುಪ್ರೇಕ್ಷಜನಕೆ ಮೋಕ್ಷದರು
ಈ ಪ್ರತ್ಯಕ್ಷದಿ ನೋಡುವರ್ ಕಣ್ಗಳಿಗೆ ಅಪ್ರೌಢ ಕಂಸಗೆ ಹಿತರು ೧೦

ಕೃಷ್ಣಾಸ್ಯಾಬ್ಜವ ನೋಡುವರಕ್ಷಿಗೆ ಹೃಷ್ಟವು ಪಾಪಕೆ ಲಯವು
ಸಿಟ್ಟಿಲಿ ಚಾಣೂರನ ಕೃಷ್ಣ ಯುದ್ಧಕೆ ಕರೆವಷ್ಟರೊಳು ಬಲನಿಗೆ ಗೆಲುವು
ಹೃಷ್ಟವಿಲ್ಲದ ಹಾಸ್ಯವದನದಿ ಈ ಬಲ ಮುಷ್ಟಿಕನೊಳು ಕಾದುತಿಹ
ಜಟ್ಟಿಗರರಸನ ದೃಷ್ಟಿ ತಾಮ್ರಾಗಿವೆ ಶಿಷ್ಟರು ನೋಡಿಯೆನುತಿಹ ೧೧

ರಾಮಾಚ್ಯುತರ ವಸತಿ ಗೋಕುಲದ ಭೂಮಿಯು ಪುಣ್ಯವು ಮೊತ್ತ
ಗೋಮತಿಗಳ ಸಹಚರಿಪರು ವನವನ ಸ್ವಾಮಿ ಭುವನತ್ರಯನಾಥ
ಈ ಮನುಷ್ಯಾಕೃತಿ ಗೂಢರು ಈಶ್ವರರು ಮನುಜರ ಮೋಹಿಪರು
ಶ್ರೀಮಂತರು ಸಕಲ ಭುವನವ್ಯಾಪ್ತರು ವೈಮಾನಿಕರ ಪಾಲಕರು ೧೨

ಪೌರಾಣಪುರುಷರು ಶ್ರೀವನಮಾಲಾರಾಜಿಪರು ಸುಂದರರು
ನಾರಾಯಣ ನರರಿವರು ಯಮುನೆಯ ತೀರವನಾಂತದಲಿಹರು
ಗೋರಕ್ಷಕರೊಡನೆ ಗೋಗಳ ಸಂಚಾರಿಸುವರು ದಿನದಿನದಿ
ಸೌರಭ ಕುಂಜದಿ ವೇಣುನಾದಿಸುವರು ನಾರಿಗೋಪಿಯರ ಸಖ್ಯದಿ ೧೩

ಗೋಪೀಜನರ್ತಪವೆಂತೊ ಪೂರ್ವದ ಗೋಪವೇಷದ ಶ್ರೀವರನ
ಆಪಾದನಖದ ಸೌಂದರ್ಯಾಮೃತವ ಪಾನ ಮಾಡುವರ್ ನಿಸಿದಿನ
ಅಪವರ್ಗದ ಸುಖವನುಂಬರು ಮೌನಿಜನೋಪಮರು ಶುಚಿವ್ರತರು ೧೪

ವೈಕುಂಠಧಾಮನ ಕೀರ್ತಿಯ ವಿಸ್ತಾರ ವಿಖ್ಯಾತಿಯ ಹೇಳುವರು
ಆಕಳಕರೆಸುತ ತೂಗುತ ತೊಟ್ಟಿಲ ತೋಕರ ನಿದ್ರೆಯಗೈಸುವರು
ಗೋಕನ್ನಿಕೆಯರ ಸುಕೃತವಿನ್ನೆಂತೊ ಸಕಾಲದಧಿಮಥನದಲ್ಲಿ
ಶ್ರೀಕೃಷ್ಣನ ಗುಣಕರ್ಮನಾಮಂಗಳನೇಕಸ್ವರದಿ ಪಾಡುತಲಿ ೧೫

ನೈಕೇತನ ಸಮ್ಮಾರ್ಜನ ಕಾಲದಿ ತ್ರೈಕಾಲ ಮಜ್ಜನದಲ್ಲಿ
ಏಕಾಂತ ಜನಪ್ರಿಯನಂಘ್ರಿಕಮಲಗಳಾಲೌಕಿಕ ಕೀರ್ತ್ನೆ ಹೇಳುವರು
ಶ್ರೀಕರ ಪುಣ್ಯವ್ರಜದ ಸ್ತ್ರೀಯರ ಸುಖವು ಕವಿಗಳ ಕವನಕ್ಕೆ
ಸಾಕೆನ್ನದು ಮತಿ ನಿಲುಕದು ಸ್ತೋತ್ರಕ್ಕೆ ಶ್ರೀಕೃಷ್ಣನ ಶುಭಲೀಲೆ ೧೬

Rarest Archiver

ಧನ್ಯರು ಪೆಣ್ಗಳು ಕ್ರಮವಿಕ್ರಮನ ಚಿನ್ಮಯ ಗುಣಚಿಂತನೆಯ
ಕಣ್ಣಿವೆಯಿಕ್ಕದೆ ಕಡಲದ ಭಕ್ತಿಯಿಂ ತನ್ಮನಸ್ಕೆಯರು ಸತಿಯರು
ಇನ್ನೊಂದವರಿಗೆ ಸಾಧನವೇತಕೆ ಮಾನ್ಯರು ಸುರಲೋಕಕ್ಕೆ
ಚಿನ್ನರ ಚೆಲುವೆ ಯಶೋದೆಯ ಮೊಲೆಯುಂಡ ಚಿನ್ನನ ದಯವಿರಲಿಕ್ಕೆ ೧೭

ಗಾಯತ್ರಿಗಳ ಬೆರಸಿ ಪ್ರಾತಃಕಾಲದಿ ಶ್ರೀಯದುಪತಿ ಹೋಗುವನು
ಸಾಯಂತನಿಯಲಿ ವೇಣುನಾದಿಸುತಲಿ ಪ್ರಿಯಾತ್ಪ್ರಿಯನೈದಿ ಬಹನು
ಸ್ತ್ರೀಯರು ನಾದಕೆ ಮೋಹಿಸಿ ಬಹರು ಶ್ರೀಯರಸನ ತುತಿಸಲಿಕ್ಕೆ
ದಯಾರ್ದ್ರ ದೃಷ್ಟಿಯಲಿ ನೋಡುವ ಹರಿ ಮಾಯಾತೀತನು ಜಗಕೆ ೧೮

ಪ್ರೀಯೋಕ್ತಿಯನಾಡುವನು ಮುಗುಳುನಗೆ ಪೀಯೂಷವನುಣಿಸುವನು
ತೋಯಜನೇತ್ರ ವಿಬುಧ ನಾರಿಯರಿಗಚ್ಚರಿಯ ತೋರಿಸಿ ಮೋಹಿಪನು
ಈಯನುಸಂಧಾನದಿ ಸಭೆಯಲಿ ಸಾಧ್ವಿಯರು ಭಾಷಿಸಲಾಗೆ
ಶ್ರೀಯದುಪತಿ ಖಳನನು ಸಂಹರಿಪ ಉಪಾಯ ಮಾಡಿದನಾಗ ೧೯

ಆಗಚ್ಯುತನಿಗೆ ಕಲಿ ಚಾಣೂರನೊಳು ಯೋಗಿಸಿತು ಮಹಾಯುದ್ಧ
ನೇಗಿಲಗೈಯಗೆ ಮುಷ್ಟಿಕಗೆ ಯುದ್ಧಾಗಲು ರಂಗದ ಮಧ್ಯ
ಭೋಗಗನಸ್ಥರಿಗಚ್ಚರಿಯಂ ಮದನಾಗಂಗಳ ಯುದ್ಧದಂತೆ
ಯೋಗೇಶೇಶ್ವರ ಚಾಣೂರನ ಮೈ ತಾಗಿದನು ಸಿಡಿಲಂತೆ ೨೦

ವಜ್ರೋಪಮಶ್ರೀಯಚ್ಯುತಗಾತ್ರದಿ ಜಜ್ಜಿಸಿಕೊಂಡ ಚಾಣೂರ
ಗರ್ಜಿಸಿ ಕೋಪದಿ ಗಗನಕೆ ಹಾರಿ ಬಂದಬ್ಜಾಕ್ಷನೈದಿದನಿದಿರ
ದುರ್ಜಯಸೇನನ ತೆರದಲಿ ಮುಷ್ಟಿಯಿಂ ಭಜ್ಜಿಸೆ ರೋಷದಿ ಖಳನು
ನಿರ್ಜರರೊಡೆಯಗೆ ನೋವಾಗುವದುಂಟೆ ನಿರ್ಜೀವಖುಲ್ಲನು ಅವನು ೨೧

ಹರಿಯು ಸೃಜಾಹತ ಕರಿಯಂತೊಪ್ಪುತ ದುರುಳನ ತೋಳ್ಗಳ ಹಿಡಿದ
ಗಿರಿಗಿರಿ ತಿರುಗಿಸಿ ಧರೆಗಪ್ಪಳಿಸಿದ ಸುರರಿಪುಹರ ಗೋವಿಂದ
ಸುರವರ ಚಾಪದೊಲ್ ಕೆಡೆದನು ಚಾಣೂರ ತ್ವರಿಯದಿ ಸೊಕ್ಕಿದ ಮಂದ
ಎರಡನೆ ಮುಷ್ಟಿಕ ಮೊದಲೆ ಬಲನ ಗಟ್ಟಿಸಿರಲು ಬಲನು ಕೋಪದಿಂದ ೨೨

ಕರದಲಿ ಬಡಿದನು ಕೋಪದಿಂ ಮುಷ್ಟಿಕ ಅರುಣಜಲವ ಕಾರುತಲಿ
ಹರಣವ ನೀಗಿದ ಉರುಳಿದ ಭುವಿಹೊಂದಿ ತರುಗಾಳಿ ಬಡಿದಂದದಲಿ
ಮುರಳಿ ಕೂಟಾಖ್ಯನು ಬರಲು ಬಡಿದ ವಾಮಕರದಿಂದ ಬಾಲಲೀಲೆಯಲಿ
ಉರುಬಲ ತೋಸಲ ಕಾಸಲ ಥಲರನು ಚರಣದಿ ಕೆಡಹಿ ಶಿರಗಳ ೨೩

Rarest Archiver

ತರಿದ ಕತ್ತರಿಸಿದ ಕರಬಲಿ ತ್ರುಟಿಯೊಳು ಮುರ ಪೀತಾಂತಕ ಶೌರಿ
ಒರಗಲು ನಾಲ್ವರುಂ ಪ್ರಮುಖರುಂ ಮಲ್ಲರು ನೂರಜಂಮಲ್ಲರುಂ ಓಡಿದರುಂ
ಹರಿ ಗೋವಳರೊಳುತ್ಸವದಲಿ ಕ್ರೀಡಿಸೆ ಚರಣನೂಪುರ ಝಣತ್ಕರಿಸೆ
ಉರೆ ನಟಿಸಿದ ತುಂತ್ತುರಿ ತಾಳದ ರವಪರಿ ಲಯಂವನಂ ಅನುಕರಿಸಿ ೨೪

ಶಿಷ್ಟರುಂ ಕಂಡರಕ್ಲಿಷ್ಟರ ಕರ್ಮಕೆ ತುಷ್ಟಿಸಿ ಸಾಧುಂ ಸಾಧುಂ ಎನಂತ
ದುಷ್ಟಕಂಸನ ಸಂಬಂಧಿಗಳೆಲ್ಲರು ಕಷ್ಟಿಸಿದರುಂ ಬಳಲಂತ
ದೃಷ್ಟಿಯಲಿ ನೋಡಿದ ಭೋಜಪ ಮಲ್ಲರ ನಷ್ಟರಾದರುಂ ಓಡಿದರುಂ
ಹೃಷ್ಟಿಗಳೆದು ನಿಲ್ಲಿಸಿದ ವಾದ್ಯಂಗಳನಷ್ಟು ಖೇದಿಸಿ ಚಿತ್ತಭೀರುಂ ೨೫

ನರಕಹರಿದ್ವೇಷಿಗಳಿಗೆ ಜಯು ಸ್ವಪ್ನವು ದುರುಂಭೃತ್ಯನುಂ ಭೋಜಪನುಂ
ಹರಿದ್ವೇಷದ ಫಲವೊದಗಿತುಂ ಎದೆ ಧಿಗಿಲ್‌ಗರೆದುಂ ನಿಟ್ಟುಸಿರ ಬಿಡುವನುಂ
ಒರೆ ದಿಟ್ಟತನದಲಿ ದುರ್ಬುದ್ಧಿಯಲ್ಲಿಕ ಸರಿದು ಹೋಗಿಹುದಾಯುಷ್ಯವು
ನೆರೆ ಉದ್ಧಟತನ ಬಿಡನು ಪಾಪಾತ್ಮನುಂ ಮರುಳಿಟ್ಟು ಮರುಗುತ ಮನವು ೨೬

ಈ ದಿವ್ಯಾಮೃತ ಭಾಗವತ ದಶಮ ಬಾದರಾಯಣಿ ಪೇಳಿದನುಂ
ಆದರದಲಿ ಸಮಿತ್ ಪಾಣಿಯುಂ ಪರೀಕ್ಷಿತ ಬೋಧಕೆ ತಲೆದೂಗಿದನುಂ
ಶ್ರೀಧವ ಪರಸನ್ನವೆಂಕಟಕೃಷ್ಣನಗಾಧ ಲೀಲಾನ್ವಯಂ ಶ್ರವಣ
ಬೋಧಕರಿಗೆ ಬೋಧಿಸಿಕೊಂಡವರಿಗೆ ಮೋದಾಬ್ಧಿ ಸ್ನಾನ ಪಾನ ೨೭

೬೫

ರಾಗ : ಸೌರಾಷ್ಟ್ರ **ತಾಳ : ಏಕತಾಳ**

ಜಾತಃ ಕಂಸವಧಾರ್ಥನುಂ ಪಾತಕಹರ ಸಮರ್ಥ
ಪೂತ ಚಾರಿತ್ರ ಲಕ್ಷ್ಮಿಯನಾಥ
ಘಾತಿಸಿದ ಕೌತುಕದಿ ಮಾತುಳನ ಭ್ರಾತರೊಡನೆ
ಆತತಾಯಿಯುಂ ಭ್ರಾತೃಸಹನಾಥ ೧

ಭೋಜಪತಿ ತನ್ನ ಸೇವಕಜನಕೆ ಆಜ್ಞೆಯಿತ್ತ
ಗೋಜಂಗುಳಿಯ ಕಾವ ಅರ್ಭಕರೀ
ರಾಜಧಾನಿಯಿಂದ ನೂಕಿರೋ ಸತ್ವರೆ ೨

Rarest Archiver

ನಂದಗೋಪನ ಗಟ್ಟಿ ಬಂಧಿಸಿರಿ ದುರ್ಮತಿಯನು
ಎಂದ ಕಂಸ ಪಾಪಿಯು ದುರಾತ್ಮ
ತಂದೆ ಉಗ್ರಸೇನನವನ ಬಂಧು ಸಹ ಗೋಪಾಲ ಪಕ್ಷ
ಹೊಂದಿದವರನೆಂದನು ಪಾಪಾತ್ಮ ೩

ಕೊಂದು ಬಿಸುಟಿ(ಡಿ?) ಅಹಿತರನು ಎಂದು ಕಂಸ ಕತ್ತಿಸೆ
ಇಂದಿರೇಶ ಕೇಳಿದವ್ಯಯಾತ್ಮ
ನಿಂದ ರಂಗವ ಬಿಟ್ಟು ಹಾರ್ದ ಮಂದಮತಿ ಭೋಜಪನು
ಹೊಂದಿದ ಮಂಚಕೆ ಪರಮಾತ್ಮ ೪

ಮೃತ್ಯು ಬಳಿಗೆ ಬಂದಿತೆಂದು ಕತ್ತಿವಿಡಿದು ಚರ್ಮಸಹ
ಸತ್ವರದಿ ಕಾದಲನುವಾದ
ಅತ್ತ ಇತ್ತ ಎಡಬಲಕೆ ಸಂತ್ರಾಡಿದ ಗಿಡಗನಂತು
ನೃತ್ತನ ತೆಕ್ಕೆಯಲಿ ಹರಿ ಹಿಡಿದ ೫

ನಾಗನ್ನ ಕೊಂಡೋಡುವ ಗರುಡನ್ಹಾಗೆ ಕೇಶವನ ಲೀಲೆ
ಆಗೆ ಕೈಲಿ ಅವಚಿ ಅವನಿಯ ಮೇಲೆ
ಬೇಗುರುಳಿಂಗೆಡಹಿದನು ಯೋಗಿನಾಥ ಅವನ ಮುಗುಟ
ನೀಗಿಸಿದನು ಕಬರಿವಿಡಿದನು ಕೃಷ್ಣ ೬

ಮಂಚದಿಂದ ರಂಗಭೂಮಿಗಿಂಚಿದ ಕೇಸರಿಯು ಮದ
ಅಂಚಿತ ಕರಿಯನು ಕೆಡಹಿದಂತೆ
ಮುಂಚಿಸಿದ ಕಂಸನಸುವ ಪಂಚಬಾಣನಯ್ಯ ಕೃಷ್ಣ
ಪಂಚಮಹಾಪಾತಕಿಯಂತೆ ೭

ಅಸುರಹರನ ಭಾರವವಗೆ ವಿಶ್ವದಷ್ಟು ಭಾರವಾಗೆ
ಅಸುವ ನೀಗಿದನು ಶಿಕ್ಷೆಹೊಂದಿ
ವಸುಂಧೆಯಲ್ಲಿ ಬಿದ್ದವನ ಬಿಸಜನೇತ್ರ ಕಟ್ಟಿ ಎಳೆಸಿ
ಬಿಸುಡಿಸಿದ ಲೋಕವರ್ಯ ಜವದಿ ೮

ಖಳನು ಕೆಡೆದ ಬಳಿಕ ಜನದ ಕಳಕಳವು ಹೆಚ್ಚಿ ಹಾಹಾ
ಇಳೆಯ ಕಂಟಕವು ಹೋಯಿತೆಂದು
ಗೆಲುವಮುಖವು ಸುಜನರಿಗೆ ಅಳುಮುಖವು ದುರ್ಜನರಿಗೆ
ಖಳಕಂಸಗೆ ಹರಿಭಯ ಹೀಗೆಂದು ೯

Rarest Archiver

ನಳಿನಾಕ್ಷನ ಭಯದ ಧ್ಯಾಸ ಬಲಿದಿಹುದು ಇರುಳು ಹಗಲು
ಜಲಪಾನದಿ ಉಣುತ ಉಡುತ ನಿಲುತ
ಮಲಗಿ ಸ್ವಪ್ನದಲ್ಲಿ ಮಾತುಗಳನು ಆಡುವಲ್ಲಿ ಚಕ್ರ
ಜಲಜಧರನ ಮುಂದೆ ಕಾಂಬ ನಿರುತ ೧೦

ಬಲು ಪಟುತರಾಭ್ಯಾಸದ ಬಲದಿಂದ ಭೃಗುಮುನೀಂದ್ರ
ಲಲಿತಗತಿಗೈದಿದ ಮಹಾತ್ಮಾ
ಸಲೆ ಹರಿಯ ವೈರಭಾವ ಬಲಿದ ಪಾಪಿ ಕಾಲನೇಮಿ
ನಿಲದೆ ತಮಸಕೈದಿದ ದುರಾತ್ಮ ೧೧

ಅವನಿಪತಿ ಬೀಳಲಿಕ್ಕೆ ಅವನ ಬಂಧುಗಳೆಂಟು ಮಂದಿ
ಜವದಿ ಬರಲು ಬಲನು ಕೈಯಿಂದ
ಜವನ ಮನೆಗೆ ಕೊಂದಟ್ಟಿದ ಲವದೊಳಗೆ ಪರಿಘದಿಂದ
ಸವರಿಸಿದ ಉಳಿದ ಖಳರವೃಂದ ೧೨

ಪಶುಗಳನು ಸಿಂಹ ಕೊಂದು ಎಸೆವಂತೆ ನ್ಯಗ್ರೋಧಕಂಕ
ರಸುವ ಕಳೆಯೆ ಸುರರು ಅಂಬರದಿ
ಕುಸುಮವೃಷ್ಟಿ ಕರೆದರಾಗ ಅಸಮಾನ ತುಷ್ಟಿಯಹೊಂದಿ
ಲಸದ ದುಂದುಭಿ ಘೋಷಿಸಿದರ್ ಮುದದಿ ೧೩

ಅಜಭವೇಂದ್ರಾದ್ಯಖಿಳರು ಅಂಬುಜನಾಭನ ಸ್ತೋತ್ರ ಮಾಡಿ
ಸಂಜನರು ತೋಷಾಬ್ಧಿಯಲೋಲಾಡೆ
ತ್ರಿಜಗಾಧಾರ ಮುರಾರಿ ಕುಂಜನ ಕಾಂತಾರ ಕುಠಾರಿ
ಭಜಕರಭೀಷ್ಟೆಯ ಪೂರಣ ಮಾಡೆ ೧೪

ಕಂಸನಂಗನೇರು ಮತ್ತೆ ಧ್ವಂಸಿತ ಖಳಾಂಗನೇರು
ಹಿಂಸಿತ ಪತಿಗಳ ಬಳಿಗೆ ಬಂದು
ಪಾಂಸುಗಳ ತಮ್ಮ ತಲೆಗೆ ಪೂಸಿ ಹೊಯ್ದುಕೊಂಡು ಮರುಗಿ
ಶಂಸಕರ ಮೇಲೆ ಹೊರಳಿ ನೊಂದು ೧೫

ನೆತ್ತಿಗಳ ಭುವಿಗೆ ಗಟ್ಟಿಸುತ್ತ ಬಹುಶೋಕದಿಂದ
ಸತ್ತವರನು ಅಪ್ಪಿ ಗೋಳಿಡುತ
ಅತ್ತರು ಸಮಯದಶ್ರು ಒತ್ತಿಬರುತ ಕಂಗಳಿಂದ
ಸತ್ತೆವು ಕೆಟ್ಟೆವೆಂದು ಹೊರಳಾಡುತ ೧೬

Rarest Archiver

ಪಿರಿದಾಗಿ ಸತಿಯರೆಲ್ಲ ಉರವ ಜಠರ ಬಡಿದುಕೊಂಡು
ದೊರೆಯೆ ಮರಳಿ ಮರಳಿ ದುಃಖರವ ಮರಳಿ
ಕರುಣವಿಲ್ಲವೆ ನಮ್ಮಲ್ಲಿ ಅರಸೆ ಸುಮ್ಮನೇಕಿರುವೆ
ತೆರೆದು ಕಣ್ಣ ಮಾತನಾಡು ತ್ವರಿಯ ೧೭

ಹಾ ಪತೆ ಪ್ರಿಯೋತ್ತಮನೆ ಕೋಪವೇಕೆ ತವ ವಿಯೋಗ
ದೀಪರಾವು ಭರ್ತೃಹೀನರಾಗಿ
ದೀಪಿಸುತಿದೆ ಅವನಿಪತೆ ಧರ್ಮಜ್ಞಪ್ರಭೊ
ಈ ಪರಿಯವಜ್ಞೆ ನಮಗೇಕೆ ೧೮

ಅಪರಾಧವಿಲ್ಲದರ್ಗೆ ತಾಪವಿತ್ತು ಬಾಧಿಸಿದುದಕೆ
ಈ ಫಲವನುಂಡೆ ಕೈಯಮೇಲೆ
ಪಾಪಬುದ್ಧಿಯಿಂದ ಕಾಲನ ಪಟ್ಟಣಕೆ ಐದಿಹೋದೆ
ಭೂಪನಾಗಿ ಪ್ರಾಣಿಗಳ ಮೇಲೆ ೧೯

ದಯವಿರಲು ಬೇಕು ನೀ ನಿರ್ದಯನಾಗಿ ಮಡಿದೆಯಲಾ ನಿ
ಶ್ಚಯವೈ ಜನನ ಮರಣ ದೇಹಿಗಳ್ಗೆ
ಅಯ್ಯೋ ವ್ಯರ್ಥ ಸತ್ತೆಯಲಾ ತ್ವದೀಯ ಜನ್ಮಭೂತದ್ರೋಹ
ವ್ಯೈಯುಂಡು ಹೋದೆಯೆಲೊ ನರಕಕೀಗ ೨೦

ಜನಕಗೆ ದುಃಖವಿತ್ತ ನೃಪಗೆ ಕನಸಿನಲಿ ತೋರದು ಸುಖ
ವೆನುತ ರೋದಿಸಲು ಶ್ರೀಕೃಷ್ಣ
ಘನ ಕೃಪೆಯ ನುಡಿಗಳಿಂದ ವನಿತೆಯರ್ ಶೋಕ ನಿಲಿಸಿದನು
ಜನಕಜನನಿಯರ್ ಬಂಧ ಮೋಚಿಸಿದ ೨೧

ದಿನಕೆ ಹಿರಿಯರಿಗೆ ನಮಿಸಿ ವಿನಯವಾಕ್ಯಾಮೃತವನುಣಿಸೆ
ಜನನಿ ಜನಕ ಜನರೆಲ್ಲ ತಿಳಿದರು
ತನಯರಿವರು ಭುವನೇಶರು ಮನುಜರಲ್ಲ ನಮ್ಮ ಮಕ್ಕ
ಳೆನುವ ಸ್ನೇಹವನ್ನೆ ಮರೆದರು ೨೨

ತನಯರನ್ನು ಅಪ್ಪಿದರು ಮನದಿ ಭಯವ ಹಿಡಿದು ಜಗ
ಜ್ಜನಕರೆಂದು ತಿಳಿದು ಮಾತನಾಡೆ
ಸನಕಾದೀಡ್ಯ ತನ್ನ ಮಾಯವನು ತಳೆದು ಮೋಹಿಸಿದ
ವಿನಯಮತಿಯು ವಾಕ್ಯದಲ್ಲಿ ಹುಚ್ಚುಮಾಡಿ ೨೩

Rarest Archiver

ಜನವಿಡಂಬ ವಿಶ್ವಬಿಂಬ ತನಯರೆಂಬ ಹಂಬಲಿತ್ತ
ಘನಸ್ನೇಹವ ತೋರ್ದನು ಮುರಾರ್ದ
ಜನಕ ಜನನಿಯ ಧ್ಯಾನವು ಜನಿಸೆ ನೀವು ನೊಂದಿರಲ್ಲ
ಜನಿಸಿದಂದಿಗಿಂದಿಗೆಂದ ದಯಾರ್ದ್ರ ೨೪

ವಂದಿಸಿದ ಬಲನ ಕೂಡಿ ತಂದೆ ತಾಯಿಗಳಡಿಗಳಿಗೆ
ಹೊಂದಿ ವಿನಯವಾಂತ ಸಾತ್ವತೇಶ
ನಂದಜೋದ್ಭವೇಂದುವರೌಳಿವೀಂದ್ರಾಹೀಂದ್ರ ಇಂದ್ರಸ್ಮರ
ರಿಂದ ವಂಕ್ತಾಮುಕ್ತಗಿರೀಶ ೨೫

ಅಂಬ ತಾತ ಎಂದು ತನ್ನ ಹಂಬಲವ ಹಚ್ಚಿ ಕೃಷ್ಣ
ಕುಂಭಿನಿಯ ಲೋಕಕ್ಕೆಲ್ಲ ದೇವ
ಲಂಬಿಸಿದ ಸುಜ್ಞನಿಕುರುಂಬಕೆ ತೋರಿತು ಈ ವಿ
ಡಂಬು ಅಂಬುಜನೇತ್ರನ ಭಾವ ೨೬

ಕಷ್ಟಿಸಿದಿರಲ್ಲ ನಾವು ಹುಟ್ಟಿದಂದಿಂದೀಗೆ ನೀವು
ದಂಷ್ಟ್ರಕಂಸ ನಷ್ಟವಾಗಿ ಹೋದ
ಕಷ್ಟಬಡಿಸಿದನು ನಿಮ್ಮದಿಷ್ಟ ಹತನಾದ ನಮ್ಮ
ಪುಟ್ಟ ಪೌಗಂಡ ಕೈಶೋರತನದಿ ೨೭

ಲೀಲೆಯ ನೋಡುವ ಭಾಗ್ಯ ವೇಳೆ ವೇಳೆ ತಂದೆತಾಯಿಗೆ
ಮೂಲ ಸುಕೃತದ ಫಲವೆಲ್ಲ
ಬಾಲರ್ನಾವು ಪರಾಧೀನದಿ ಕಾಲಗಳೆದೆವು ಮನದಲ್ಲಿ
ಲಾಲಿಸಿಕೊಂಬುವ ಭಾಗ್ಯವಿಲ್ಲ ೨೮

ಸ್ವರ್ಗಸುಖವು ಜನನಿಜನಕರ್ಗೆ ಮಕ್ಕಳಾಟ ನೋಡಿ
ಹಿಗ್ಗುವುದು ಪೂರ್ವಪುಣ್ಯಫಲವು
ಅಗ್ರಜನ್ನ ಕೂಡಿ ವನದಿ ಅನರ್ಘ್ಯಆಟವಾಡಿದೆವು
ದೃಗ್ಗಳಿಂದ ಕಾಣಲಿಲ್ಲ ನೀವು ೨೯

ಪಾಲು ಬೆಣ್ಣೆ ಇಕ್ಕಿ ಆಭರಣಗಳನ್ನಿಟ್ಟು ಬರುವಂತಾಡಿಸೆ
ಗಾಲಿಕ್ಕಿಸಿ ವಲ್ಗುವಾಕ್ಯ ಕೇಳಿ
ಲಾಲಾಂಕಿತ ವದನರದನಸಾಲು ನೋಡಿ ಮುದ್ದುಗೊಡುವ
ಬಾಲೆ ಧನ್ಯಳು ಪುಣ್ಯಸುಶೀಲೆ ೩೦

Rarest Archiver

ಇಂಥ ತಾಯಿತಂದೆಗಳಿಗೆ ಅಂತ್ಯಕಾಲ ವಾರ್ಧಕ್ಯದಿ
ಸಂತೋಷದಲಿಟ್ಟವನೆ ಪುತ್ರ
ಸಂತವಂಘಂತರೊಳತ್ಯಂತ ಪೂಜ್ಯನಹನವನಂ
ಚಿಂತಿಸಿದರ್ ನಾವು ಹುಟ್ಟಿ ವ್ಯರ್ಥ ೩೧

ಪೆತ್ತವರ್ಗೆ ಬಹು ಸುಖವಿತ್ತವನೆ ಜೀವನ್ಮುಕ್ತ
ಚಿತ್ತ ಖೇದ ಮಾಳ್ಪ ಜೀವತ್ಪ್ರೇತ
ಹತ್ತೆಂಟು ಸಾವಿರವರುಷ ತುತ್ತಿಟ್ಟು ಸ್ವಮಾಂಸವನುಂಬ
ಒತ್ತೇಳಂತ ನಿರಯದಲ್ಲಿ ದಂಭ ೩೨

ವೃದ್ಧಾಪ್ಯಕಾಲದಿ ಪೆತ್ತ ವೃದ್ಧರನ್ನು ಗುರುಗಳನ್ನು
ಸಾಧ್ವಿಪತ್ನಿ ಶಿಶುಗಳ ವಿಪ್ರರನ್ನು
ಇದ್ದಷ್ಟು ಪ್ರಪನ್ನರನ್ನು ಹೊದ್ದಿದವರ ಸಾಕದಿಪ್ಪ
ಬುದ್ಧಿಹೀನ ಸೇರುವನು ನರಕವನು ೩೩

ಭೋಜಪನುಪದ್ರವಕೆ ಪೂಜಿಸಲಿಲ್ಲ ನಿಮ್ಮನು
ಈ ಜನ್ಮ ವ್ಯರ್ಥವಾಯಿತಯ್ಯ
ಆ ಜನನಿ ಜನಕರಿಗೆ ತೇಜೋಮಯ ಕ್ಷಮಿಸಿರೆಂದು
ರಾಜೀವಜಜನಕ ಮುಗಿದ ಕೈಯ ೩೪

ನಿಮ್ಮ ಶುಶ್ರೂಷಣವ ಮಾಡಿ ಒಮ್ಮೆ ತುಷ್ಟಿಬಡಿಸಲಿಲ್ಲ
ನಮ್ಮ ಸ್ವಾತಂತ್ರ್ಯವಿಲ್ಲದೆ ಅಂದು
ನಮ್ಮಘವರ್ಗ ಕ್ಷಮಿಸಿರೆಂದು ಅಮ್ಮ ದೇವಕಿ ವಸುದೇವನಿಗೆ
ನಮ್ಮಿಸಿದ ಕೃಷ್ಣ ಅಗ್ರಜನಿಂದ ೩೫

ವಿಧಿಭವೇಶ ವಿಶ್ವಾಂತರ್ಯ ವದಿಸಿದ ಮನುಷ್ಯಜನರು
ವದಿಸಿದಂತೆ ತಾಯಿತಂದೆಗಳಿಗೆ
ಸದಮಲ ಮಾಯದುಳಿದರು ಮೋಹಿಸಿದ ದೇವಕಿಗೆ
ವರದವಿತ್ತಂಕದಲ್ಲಿ ಕುಳಿತ ಬ್ಯಾಗೆ ೩೬

ತ್ರೈಲೋಕ್ಯಸ್ವಾಮಿಯಲಿ ಮುಳುಗಿದರು ಶೈಶುಲೀಲೆಯ ಮಕ್ಕಳಿಪ್ಪ
ಮೂಸಿನೋಡಿದರು ಮಸ್ತಕವನು
ಸೂಸಿದ್ದರು ಅಶ್ರು ಸ್ನೇಹಪಾಶದಿಂದ ಬಾಷ್ಪಕಂಠ
ಭಾಷೆ ಗದ್ಗದದಂತೆ ಮೋಹಿಸಿದರು ೩೭

Rarest Archiver

ಅಶ್ರುಧಾರೆ ಸಿಂಚಿಸುತ್ತ ಆ ಶೌರಿ ದೇವಕಿದೇವಿ
ಶಾಶ್ವತ ಮಕ್ಕಳೆಂದು ತಿಳಿದರು
ವಾಸುದೇವ ಬಲರಾಮರ ಕೂಸುಗಳಂತೊಂದಿಸಿದರು
ವಿಶ್ವವಂದ್ಯರ್ ವಿಶ್ವಕೆ ಮೋಹಕರು ೩೮

ದುಷ್ಟಮಥನ ಪುಣ್ಯಕಥನ ಶಿಷ್ಟಪಾಲ ಶ್ರೀಭೂಲೋಲ
ಕೃಷ್ಣಬಲರು ಉಗ್ರಸೇನನಿಗೆ
ತುಷ್ಟಿಯಿಂದ ವಂದಿಸಲು ಅಷ್ಟು ಜನಕಾಶ್ಚರ್ಯ
ದೃಷ್ಟಿಗಾಗೆ ಸೃಷ್ಟಿಕರ್ತರಾಗೆ ೩೯

ಈ ಸತ್ಕಥೆಯ ಪೇಳಿದನು ವ್ಯಾಸಸೂನು ನೃಪವರಗೆ
ಶ್ರೀಶನೊಲುಮೆ ಆಶುಲಾಭವಾಗೆ
ಪ್ರಸನ್ವೆಂಕಟದಾಸರಿಗೆ ಲೇಸು ಲೇಸು ಲೇಸು ಸರ್ವ
ದಾ ಸುಖವು ಹೇಳಿ ಕೇಳಿದವರಿಗೆ ೪೦

೩೩

ರಾಗ : ಶಂಕರಾಭರಣ **ತಾಳ : ಅಟ್ಟ**

ಅಮ್ಮಮ್ಮಚ್ಚರಿಯ ವಿಚಿತ್ರ ಚರಿತ್ರ
ಧರ್ಮರಕ್ಷಕ ಭಕ್ತಸಮೂಹಮಿತ್ರ ಪ.

ಬ್ರಹ್ಮರುದ್ರೇಂದ್ರಾದಿ ಸುಮನಸರಿಗೆಲ್ಲ ಉಮ್ಮಯ ಪದವೀವ ರಮೇಶನು
ತಮ್ಮ ಮುತ್ತಯ್ಯಗೆ ಹೆಮ್ಮೆಯನಿತ್ತನು ತಾ ಮತ್ತೆ ದೌತ್ಯದ ಕರ್ಮ ವಹಿಸಿದ ೧

ಉರ್ವಿಮಂಡಲಕರಸನ ಮಾಡಿ ಪಟ್ಟವಿತ್ತೂರ್ವಿಪಾಲಕರು ಕಪ್ಪವನೀವಂತೆ
ಸರ್ವೇಶ್ವರ ಕೃಷ್ಣ ಸರ್ವರಿಗಾಜ್ಞಾಪಿಸಿದ ಗರ್ವ ಖಂಡಿಸಿದನು ಗರ್ವದ ಖಳರ ೨

ಪೂರ್ವದಿ ಯಯಾತಿಯ ಶಾಪದಿಂ ಯದುವಂಶಕರ್ಹತೆಯಿಲ್ಲರಸುತನಕೆಂದು
ಸರ್ವಜ್ಞತ್ವ ವ್ಯಕ್ತ ಮಾಡಿದ ಮುರಹರ ನಿರ್ವಚನೀಯ ಸಮರ್ಥ ಪರಾರ್ಥ ೩

ಹೀಗೆ ನೇಮಿಸಿ ಪವನಂಗೆ ಯೋಗಿಸಿ ಶತಯಾಗಗೆ ಆಜ್ಞೆ ನಿರೂಪಿಸುತ
ಬೇಗನೆ ತರಿಸಿದ ಸುಧರ್ಮ ಸಭೆಯ ನಿಯೋಗಿಸಿ ನೃಪಶಾಸನವಿತ್ತಜ್ಜನಿಗೆ ೪

ಪಾತಕಿ ಕಂಸನ ಭಯದಿಂದೋಡಿಹೋದ ಪ್ರೀತಜೀವರ ಯಾದವರನ್ನೆಲ್ಲ
ಆತುರದಿ ಕರೆಸಿದ ದೀನವತ್ಸಲ ಕೃಷ್ಣ ಪ್ರೀತಿಯಲಿ ಸ್ವಸ್ಥಾನದಲ್ಲಿಟ್ಟನವರ ೫

Rarest Archiver

ದಾಶಾರ್ಹ ವೃಷ್ಣಿ ಅಂಧಕ ಮಧು ಕುಕ್ಕುರರು ಸಾತ್ವತರು ಕುಲಬಂಧುಗಳು
ದೇಶಾಂತರದಿ ಬಳಲಿ ಕರೆಸಿ ತಂದವರ ವಾಸುದೇವ ಸೌಖ್ಯದಲ್ಲಿಟ್ಟ ಬಹಳ ೬

ಶ್ರೀಶನ ನೇಮದಿ ಸೌಖ್ಯವ ಕಂಡು ಶಯ್ಯಾಸನ ವ್ಯಾಪ್ಯಾನ್ನಪಾನದಲಿ
ಈಶನಾಸ್ಯಾಬ್ಜ ಪೀಯೂಷವ ದಾವಾಗ ಆಸ್ವಾದಿಸಿದರು ಜೀವನ್ಮುಕ್ತರವರು ೭

ಸಂಸೃತಿ ಭಯವೇಕೆ ದ್ವೇಷಿಗಳಾತಂಕ ಲೇಶ ಕಾಣಲಿಲ್ಲ ಸ್ವಪ್ನದಲ್ಲಿ
ತೋಷವೆಗ್ಗಳ ದಿನದಿನದಲಿ ಕೃಷ್ಣ ಸಂಭಾಷಣೆ ಸಹವಾಸ ಅಪವರ್ಗವಾಸ ೮

ಅನಂತಗುಣನಾಮ ಪೂರ್ಣನು ಮುಕ್ತೇಶ ತಾ ನಾಲಿಗೆಯಲಿ ನಿಂತು ನುಡಿಸಿದನು
ಪ್ರಾಣೇಶ ಪ್ರೇರಣೆಯು ಪ್ರಾಕೃತಪದ ಜ್ಞಾನಿಗಳಿಗೆ ಸಮ್ಮತ ಖಳರಿಗಲ್ಲ ೯

ಈ ದಶಮಸ್ಕಂಧ ಭಾಗವತ ಪೂರ್ವಾರ್ಧವು ಮೇದಿನಿಯಲಿ ಹೇಳಿಕೇಳಿದರ್ಗೆ
ಯಾದವಕುಲರತ್ನ ಸರ್ವಪ್ರುರುಷಾರ್ಥವ ಸಾಧಿಸಿಕೊಡುವ ಸತ್ಯವು ನಿತ್ಯ ೧೦

ಪ್ರಸನ್ನಚಾರಿತ್ರ ಪ್ರಸನ್ನಶೋಭನವಕ್ತ್ರ ಪ್ರಸನ್ನಾಪಾಂಗನೇತ್ರ ಪ್ರಸನ್ನಗಾತ್ರ
ಪ್ರಸನ್ನವೆಂಕಟಕೃಷ್ಣಪ್ರಸನ್ನನಾದರೆನಿತ್ಯಪ್ರಸನ್ನತರೋಕ್ತಿಬಾಹವು ಭಕ್ತ
ಜನಕೆ ೧೧

೬೭

ರಾಗ : ಮಾಳವ ಶ್ರೀ **ತಾಳ : ಅಟ್ಟ**

ಜಯ ಜಯ ರಂಗಗೆ ಜಯ ದೇವೋತ್ತುಂಗಗೆ
ಜಯ ಯದುಪುಂಗವಗೆ ಜಯ ಶ್ರೀಸಂಗಗೆ ಪ.

ಹೊದ್ದಿ ಯದುಕುಲ ಸಾರ್ದು ಗೋಕುಲ ಶುದ್ಧತಾಯಿವೊಲೆ ಮೆದ್ದ
ಪೀರ್ದ ಬಕಿಯನು ಬಿದ್ದ ಶಕಟನ ಉದ್ಧಟನಿಲನ ಮರ್ದ
ಮುದ್ದುವದನದಿ ತೋರ್ದ ಭುವನವ ಸಿದ್ಧ ಗೋರಸ ಕದ್ದ
ವರ್ಧಿಸಿದ ಬಲಭದ್ರನೊಡನೆ ಅಲ್ಲಿದ್ದ ನಿತ್ಯ ಪ್ರವೃದ್ಧ ೧

ಗೋಪಿಯಶೋದೆಗೆ ಗೋಪನಂದಗೆ ಮಹಾಪರಮಲೀಲೆ ತೋರ್ಪ
ಗೋಪಜನರಿಗೆ ಗೋಪಿಕೆಯರಿಗೆ ಶ್ರೀಪತಿ ಸಖನು ಅಪ್ಪ
ಶಾಪದಲಿ ತರುರೂಪರಾದ ಧನದಪುತ್ರರ ಉದ್ಧರಿಪ
ಸುಪವಿತ್ರ ರೋಮಕೂಪದಿ ವೃಕ್ಷಚಟೂಪವ ಪೆತ್ತಾಧಿಪ ೨

Rarest Archiver

ವೃಂದಾವನದಲಿ ನಂದರಾಜನ ಬಂಧುಗಳ ಸಹ ನಿಂದ
ಚಂದದಲಿ ವತ್ಸವೃಂದ ಕಾಯಿದ ಬಂದ ವತ್ಸಬಕ[ರ] ಕೊಂದ
ಮಂದ ಧೇನುಕನ ಛಿಂಡಿಸಿದ ಸಖರಿಂದ ತಾಳ್‌ಪಣ್ಣು ತಿಂದ
ಆಂದದಲಿ ಗೋವರ್ ತಂದ ಬರ್ಹಪೂಗಳಿಂದ ಪೂಜಿತಗಂಧ ೩

ಶ್ರೀಶ ನಟನಟವೇಷ ಗೋಗಣಪೋಷಕಾನಂದಕೋಶ
ಆಶಿವಿಷನಶಿಕ್ಲೇಶಬಡಿಸಿ ಸಂತೋಷವಿತ್ತ ಗತಾಯುಸ
ವೇಶನಾದಂಡದಿ ಯೋಷಿಜ್ಜನರ ಮೋಹಿಸಿ ಕಾಮಜ್ವರನಾಶ
ಗ್ರಾಸಪೂಡಿ ಹುತಾಶನನ ಗೋಪಗೋಸಮೂಹ ರಕ್ಷಕೇಶ ೪

ಲಂಡ ಪ್ರಲಂಬನ ದಂಡಿಸಿದ ಪುರ ಮಂಡಲೇಡ್ಯ ಯದುಶೌಂಡ
ಹಿಂಡು ಗೋವರ್ಸಹ ಉಂಡು ಯಾಜಿಗಳ ಹೆಂಡಿರನು ತಂಡ ತಂಡ
ಚಂಡಿಕಾರ್ಚಕ ಮಿಂಡೆರ್ ವಸನೆತ್ತಿಕೊಂಡು ಮರವೇರ್ದ ಪುಂಡ
ಖಂಡಲನ ಮದ ಖಂಡಿಸಿದ ಗಿರಿಚಂಡು ಮಾಡಿದ ಪ್ರಚಂಡ ೫

ಇಂದಿರೇಶ ಸುಧಾಸಾಂದ್ರ ವೇಣುಸ್ವನದಿಂದ ಗೋಪೇರೆಲ್ಲರ ತಂದ
ಚಂದ್ರನಂದಯುದಿ ಚಂದ್ರಮುಖಿಯರು ಕಂದರ್ಪನ ಶರದಿಂದ
ನೊಂದು ಮೋಹಿಸಲಂದು ರಾಸಕ್ರೀಡೆ ಹೊಂದಿಸಿದ ಪೂರ್ಣಾನಂದ
ಎಂದಿಗೆಂದಿಗೆ ಹೊಂದ ಸ್ಪೃಹ ಶ್ರೀಪುಷ್ಪಕುಂದ ಸಚ್ಚಿದಾನಂದ ೬

ತಂದೆಯನು ನುಂಗಬಂದಜಗರಗೆ ನಂದವಿತ್ತ ಗೋವಿಂದ
ಚಂದ್ರಿಕೆಯೊಳು ಮದಾಂಧ ಶಂಖಚೂಡ ಇಂದುಮುಖಿಯರೊಯ್ಯಂಥ
ಅಂದವ ಸೀಳಿ ಮಂದಗಮನೆರ ಚಂದದ ವೇಣುಗೀತೆಯಿಂದ
ನಂದಿಸಿದ ಚಿದಾನಂದ ಕೇಶಿವ್ಯೋಮರ್ ಛಿಂದಿಸಿದ ಸುಖಸಾಂದ್ರ ೭

ನಾರದೇಡ್ಯನಕ್ರೂರ ರಥದಲಿ ತೇರನೇರಿ ಮಧುರಾ
ಪುರಕ್ಕೈದಿದ ಧೀರ ದಾಸ್ಯರ್ ಮನೋಹರ ತ್ರಿವಕ್ರೋದ್ಧಾರ
ಘೋರ ಧನುಷವಿದಾರ ಗಜಚಾಣೂರಮಲ್ಲಸಂಹಾರ
ಕ್ರೂರ ಕಂಸಕುದಾರ ವಸುಧಾಭಾರಹರ ಯದುಪ್ರೀತ ೮

ಹೆತ್ತವರ ಆಪತ್ತುಹರ ತನ್ನ ಮುತ್ತನಿಗೆ ಪದವಿತ್ತ
ಮತ್ತೆ ಯಾದವ ಘೊತ್ತಕತಿಸುಖದಾತ ಘನಸಮರ್ಥ
ಇತ್ತ ನಂದನ ಹಟ್ಟಿಗಟ್ಟಿದ ಉತ್ತಮೋದ್ಧವಕರ್ತ
ಪಾರ್ಥ ಕುಶಲಗೆ ಹಸ್ತಿನಗರಕೆ ಅತ್ತೆಕ್ರೂರಗಾಜ್ಞೆಯನಿತ್ತ ೯

Rarest Archiver

ಕ್ರೂರಯವನಸಂಹಾರ ಮುಚುಕುಂದೋದ್ಧಾರ ದ್ವಾರಕಮಂದಿರ
ಧಾರುಣಿಯ ನೃಪವೀರರನಂ ಗೆದ್ದು ಭೂರಿದ್ರವ್ಯಾಪಹಾರ
ನಾರಕ ಮುರಾದಿ ಚೋರರ ಬಡಿದ್ಯೊಂತಕಾರಿ ನಿಜಗುರ್ವುಪಕಾರಿ
ವಿಹಾರಿದ್ವ್ಯಷ್ಟ ಸಾಸಿರ ನೂರೆಂಟು ನಾರೇರಾಳ್ದ ಗಂಭೀರ ೧೦

ಪಾರಿಜಾತ ಸತ್ಯಾರಮಣಿಗಿತ್ತು ಭೂರಿನೇತ್ರಮಂದಹರ
ಘೋರ ನೃಗಪಾಪಹಾರ ಸ್ಯಮಂತವ ಕ್ರೂರಗಿತ್ತ ಉದಾರ
ಹಾರುವರಿಗೆ ಕುಮಾರರನು ಕೊಟ್ಟ ಕಾರುಣಿಕ ಸುಖಸಾರ
ವಾರಿಜೋದ್ಭವ ಕೌರವರಹರ ಪೂರಾದ್ಯಖಿಳಾಧಾರ ೧೧

ದಂತವಕ್ರ ಪೌಂಡ್ರಕಾಂತಕ ಖಳಧ್ವಾಂತ ಭಾನು ಪ್ರಕಾಶಾಂತ
ಕುಂತಿಪುತ್ರರತ್ಯಂತ ಸಂರಕ್ಷಕಚಿಂತ್ಯ ಶಕ್ತ್ಯಾನಂತ
ಕಾಂತ ರಾಜಸೂಯಾಂತಪೂಜ್ಯ ಸ್ವತಂತ್ರ ಮೋಕ್ಷ ಸುಪಂಥ
ಭ್ರಾಂತ ಚೈದ್ಯ ನಿಕೃಂತ ಸಂತತದಾಂತ ವಿಶ್ವನಿಯಂತ ೧೨

ಹೀನಕೌರವ ಕ್ಷೀಣಕಾರಣ ಕ್ಷೋಣಿಭಾರಘ್ನ ಪ್ರವೀಣ
ಜ್ಞಾನಾನಂದ ಬಲಾನ್ಯೂನ ಅಸಾಧ್ಯಸಮಾನವರ್ಧಿತ ದೀನ
ಮೌನಿಜನಪ್ರಿಯ ಧ್ಯಾನಪ್ರಿಯ ಸತ್‌ಗಾನಪ್ರಿಯ ಪೂರಣ
ಧೇನುಗಿರಿಪತಿ ವೇಣುಗೋಪ ಪ್ರಸನ್ನವೆಂಕಟ ಕಾರಣ ೧೩

Rarest Archiver

Rarest Archiver

ಅನುಬಂಧ ೧

ಪೂರ್ವಕಥೆಗಳು ಮತ್ತು ಟಿಪ್ಪಣಿಗಳು

ದಾಶಾರ್ಹ : (ಕೀ. ೧, ನು. ೩)

ದಾಶಾರ್ಹವೆಂಬ ಯಾದವ ವಂಶದಲ್ಲಿ ಹುಟ್ಟಿದವನು, ಕೃಷ್ಣ.

ಗೃಹತ್ರಯ : (ಕೀ. ೨, ನು. ೪)

ವೈಕುಂಠ, ಅನಂತಾಸನ, ಶ್ವೇತದ್ವೀಪಗಳೆಂಬ ಮೂರು ಮನೆಗಳುಳ್ಳವನು ವಿಷ್ಣು.
(ಕೀ. ೨೬, ನು. ೧)

ನ್ಯಗ್ರೋಧ ಪತ್ರಾಸನ : (ಕೀ. ೩, ನು. ೧)

ಪ್ರಳಯ ಕಾಲದಲ್ಲಿ ವಿಷ್ಣು ತನ್ನ ಸೃಷ್ಟಿಯೆಲ್ಲವನ್ನು ತಾನೇ ನುಂಗಿ ಮುಂದೆ ಸೃಷ್ಟಿ ಕಾಲದವರೆಗೂ ಅವರನ್ನು ತನ್ನ ಹೊಟ್ಟೆಯಲ್ಲಿ ನಿದ್ರಾವಸ್ಥೆಯಲ್ಲಿಟ್ಟಿರುತ್ತಾನೆ. ಲಕ್ಷ್ಮೀದೇವಿ ವಟಪತ್ರರೂಪಿಯಾಗಿ ಅವನನ್ನು ಸೇವಿಸುತ್ತಿರುತ್ತಾಳೆ. ಆ ಎಲೆಯಲ್ಲಿ ಬಾಲರೂಪಿ ವಿಷ್ಣು ತನ್ನ ಕಾಲ ಹೆಬ್ಬೆರಳನ್ನು ಚೀಪುತ್ತ ಮಲಗಿರುತ್ತಾನೆಂಬ ಕಲ್ಪನೆ. (ಹ. ಭೀ. ಹಾ, ಪು. ೬೧೦)
(ಕೀ. ೧೩, ನು. ೧೪)

ಪಂಚಾತ್ಮ : (ಕೀ. ೩, ನು. ೨)

ಪ್ರದ್ಯುಮ್ನ, ಅನಿರುದ್ಧ, ಸಂಕರ್ಷಣ, ವಾಸುದೇವ, ನಾರಾಯಣ-ಈ ಐದು ರೂಪಗಳುಳ್ಳ ವಿಷ್ಣು.

ದ್ವಿಷಡಾತ್ಮ : (ಕೀ. ೩, ನು. ೨)

ಕೇಶವಾದಿ ೧೨ ರೂಪಗಳುಳ್ಳ ವಿಷ್ಣು. (ಮು. ೫೨, ಕೀ. ೩ರ ಟಿಪ್ಪಣಿ)

ದಶಶತಸಹಸ್ರಾಂಶದಿ : (ಕೀ. ೩, ನು. ೨)

ಮತ್ಸ್ಯ, ಕೂರ್ಮ, ವರಾಹಾದಿ ಹತ್ತು ರೂಪಗಳಿಂದ, ನಾರಾಯಣಾದಿ ನೂರು ರೂಪಗಳಿಂದ ವಿಶ್ವ, ವಿಷ್ಣು ಮೊದಲಾದ ಸಾವಿರ ರೂಪಗಳಿಂದ ಇರುವವನು.

(ವಿವರಗಳಿಗೆ ನೋಡಿ : ಶ್ರೀ ವಿಷ್ಣು ಸಹಸ್ರನಾಮ)

ಘನಶ್ರುತಿಹರನೊದ್ದ : (ಕೀ. ೩, ನು. ೪)

ಬ್ರಹ್ಮನು ನಿದ್ದೆಯಲ್ಲಿದ್ದಾಗ ಆತನ ನಾಲ್ಕು ಬಾಯಿಗಳಿಂದ ಹೊರಬರುತ್ತಿದ್ದ ವೇದರಾಶಿಯನ್ನು ಹಯಗ್ರೀವನೆಂಬ ರಾಕ್ಷಸನು ಅಪಹರಿಸಿ ಪ್ರಳಯಜಲದಲ್ಲಿ ಅಡಗಿದ್ದಾಗ ಹರಿಯು ಮತ್ಸ್ಯರೂಪದಿಂದ ಬಂದು ಅವನನ್ನು ಕೊಂದು ವೇದಗಳನ್ನು ಮರಳಿ ತಂದನು. ಹರಿಯ ದಶಾವತಾರಗಳಲ್ಲಿ ಇದು ಮೊದಲನೆಯ ಅವತಾರ. (ಭಾ. ಸ್ಕಂ. ೮, ಅ. ೨೪)
(ಕೀ. ೮, ನು. ೫) (ಕೀ. ೧೯, ನು. ೪) (ಕೀ. ೫೭, ನು. ೨೩)

Rarest Archiver

ಗಹನಾಬ್ಧಿ ಮಥಿಸಿದ : (ಕೀ. ೩, ನು. ೪)

ಹರಿಯು ಕೂರ್ಮಾವತಾರವನ್ನು ಕುರಿತು ಈ ಮಾತು ಬಂದಿದೆ. ಅಮೃತಕ್ಕಾಗಿ ದೇವಾಸುರರು ಕ್ಷೀರಸಮುದ್ರವನ್ನು ಕಡೆಯುತ್ತಿದ್ದಾಗ, ಕಡೆಗೋಲಾಗಿದ್ದ ಮಂದರಪರ್ವತ ಭಾರದಿಂದ ಮುಳುಗಲಾರಂಭಿಸಿತು. ಆಗ ಹರಿ ಕೂರ್ಮಾವತಾರಿಯಾಗಿ ಬಂದು ಮಂದರಪರ್ವತವನ್ನು ತನ್ನ ಬೆನ್ನ ಮೇಲೆತ್ತಿಕೊಂಡು ನಿಂತು ಸಮುದ್ರಮಥನಕ್ಕೆ ಸಹಾಯಕನಾದನು. (ಭಾ. ಸ್ಕಂ. ೮, ಅ. ೭)

(ಕೀ. ೮, ನು. ೫) (ಕೀ. ೧೯, ನು. ೪) (ಕೀ. ೫೭, ನು. ೨೪)

ಅವನಿಯ ಕದ್ದನ ಸೀಳ್ದ : (ಕೀ. ೩, ನು. ೪)

ಇದು ಹರಿಯ ಮೂರನೆಯ ಅವತಾರವನ್ನು ಕುರಿತ ಮಾತಾಗಿದೆ. ಹಿರಣ್ಯಾಕ್ಷನೆಂಬ ರಾಕ್ಷಸ ಭೂಮಿಯನ್ನು ಚಾಪೆಯಂತೆ ಸುತ್ತಿಕೊಂಡು ಸಮುದ್ರದ ತಳಕ್ಕೆ ಒಯ್ದಾಗ ಹರಿ ವರಾಹರೂಪದಿಂದ ಬಂದು, ಅವನನ್ನು ಕೊಂದು ಭೂಮಿಯನ್ನು ತನ್ನ ಕೋರೆದಾಡೆಗಳಿಂದ ಎತ್ತಿ ತಂದನು.

(ಭಾ. ಸ್ಕಂ. ೩, ಅ. ೧೩)

(ಕೀ. ೮, ನು. ೫) (ಕೀ. ೧೯, ನು. ೪) (ಕೀ. ೫೭, ನು. ೨೫)

ಅಮರರಿಪುಮರ್ದ : (ಕೀ. ೩, ನು. ೪)

ಹರಿದ್ವೇಷಿಯಾಗಿದ್ದ ಹಿರಣ್ಯಕಶಿಪುವಿನ ಮಗನಾದ ಪ್ರಹ್ಲಾದ ಹರಿಭಕ್ತನಾಗಿದ್ದ. ಹಿರಣ್ಯಕಶಿಪು ಹೇಗಾದರೂ ಮಗನನ್ನು ತನ್ನ ದಾರಿಗೆ ತರಬೇಕೆಂದು ಹಠದಿಂದ ಎಷ್ಟೇ ಪ್ರಯತ್ನಪಟ್ಟರೂ ಸಾಧ್ಯವಾಗಲಿಲ್ಲ. ಆಗ ಅವನನ್ನು ಕೊಂದಲ್ಲದೆ ತನಗೆ ಸುಖವಿಲ್ಲವೆಂದು ಭಾವಿಸಿ ಖಡ್ಗವನ್ನೆತ್ತಿದಾಗ, ಮುಂದಿದ್ದ ಸಭಾಸ್ತಂಭದಿಂದ ಹರಿಯು ನರಸಿಂಹಾವತಾರಿಯಾಗಿ ಹೊರಬಂದು ಹಿರಣ್ಯಕಶಿಪುವನ್ನು ಕೊಲ್ಲುತ್ತಾನೆ. (ಭಾ. ಸ್ಕಂ. ೭. ಅ. ೮)

(ಕೀ. ೮, ನು. ೫) (ಕೀ. ೧೯, ನು. ೪) (ಕೀ. ೫೭. ನು. ೨೫)

ಮುನಿಕಶ್ಯಪನ ಕಂದ : (ಕೀ. ೩, ನು. ೫)

ಬಲಿಚಕ್ರವರ್ತಿಯ ಸೊಕ್ಕನ್ನು ಮುರಿಯುವುದಕ್ಕಾಗಿ ಹರಿಯು ಅದಿತಿ ಕಶ್ಯಪರಲ್ಲಿ ವಾಮನ ರೂಪದಿಂದ ಅವತರಿಸುತ್ತಾನೆ. ಬಲಿಚಕ್ರವರ್ತಿ ನರ್ಮದಾ ತೀರದಲ್ಲಿ ಅಶ್ವಮೇಧಯಾಗ ಮಾಡತೊಡಗಿದಾಗ, ವಾಮನ ವಟುವೇಷದಿಂದ ಅವನಲ್ಲಿಗೆ ಬಂದು ಮೂರು ಹೆಜ್ಜೆ ಭೂಮಿಯನ್ನು ದಾನವಾಗಿ ಬೇಡಿ ಆ ನೆವದಿಂದ ಅವನನ್ನು ಸುತಳಕ್ಕೆ ಮೆಟ್ಟಿದನು. (ಭಾ. ಸ್ಕಂ. ೮, ಅ. ೧೮-೨೨)

(ಕೀ. ೮, ನು. ೬) (ಕೀ. ೧೯, ನು. ೪) (ಕೀ. ೫೭, ನು. ೨೬)

ಮತ್ತನೃಪರಕೊಂದ : (ಕೀ. ೩, ನು. ೪)

ಉನ್ಮತ್ತರಾದ ಕ್ಷತ್ರಿಯರ ಕುಲವನ್ನೇ ನಾಶಗೊಳಿಸುವ ಉದ್ದೇಶದಿಂದ ವಿಷ್ಣುವು ಜಮದಗ್ನಿ ರೇಣುಕೆಯರ ಪುತ್ರ ಪರಶುರಾಮನಾಗಿ ಜನಿಸಿ, ಇಪ್ಪತ್ತೊಂದು ಸಾರಿ ಕ್ಷತ್ರಿಯರನ್ನು ಕೊಂದು ಅವರ ರಕ್ತದಿಂದ ಪಿತೃಗಳಿಗೆ ತರ್ಪಣ ಕೊಟ್ಟನು. (ಪುನಾಚೊ, ಪು. ೩೯೩, ೩೯೪)

(ಕೀ. ೮, ನು. ೬) (ಕೀ. ೧೯, ನು. ೪) (ಕೀ. ೫೭, ನು. ೨೬)

Rarest Archiver

ಅನಿಮಿಷಾಪದ್ಧರ : (ಕೀ. ೩, ನು. ೪)

ರಾವಣನೇ ಮೊದಲಾದ ರಾಕ್ಷಸರನ್ನು ಸಂಹರಿಸಲು ವಿಷ್ಣುವು ಇಕ್ಷ್ವಾಕು ವಂಶದಲ್ಲಿ ರಾಮನಾಗಿ ಅವತರಿಸಿದನು. (ಭಾ. ಸ್ಕಂ. ೨, ಅ. ೭)

(ಕೀ. ೮, ನು. ೬) (ಕೀ. ೧೯, ನು. ೪) (ಕೀ. ೫೭, ನು. ೨೭)

ಅರ್ಜುನಹಿತಕರ : (ಕೀ. ೩, ನು. ೪)

ದುಷ್ಟ ಕ್ಷತ್ರಿಯರ ಮದೋನ್ಮತ್ತತೆಯಿಂದ ಹೆಚ್ಚಿದ ಭೂಭಾರವನ್ನು ಪರಿಹರಿಸಲು ವಿಷ್ಣುವು ಯಾದವಕುಲದಲ್ಲಿ ಕೃಷ್ಣನಾಗಿ ಅವತರಿಸುತ್ತಾನೆ. (ಭಾ. ಸ್ಕಂ. ೧೦, ಅ. ೩) ಪಾಂಡವರಿಗೆ ಅವರಲ್ಲಿಯೂ ಅರ್ಜುನನಿಗೆ ಆತ್ಮೀಯ ಸ್ನೇಹಿತನಾಗಿದ್ದು ಅನೇಕ ಸಂದರ್ಭಗಳಲ್ಲಿ ಅವನಿಗೆ ಸಹಾಯಕನಾಗಿ ನಿಲ್ಲುತ್ತಾನೆ. (ಮಹಾಭಾರತ)

(ಕೀ. ೮, ನು. ೬) (ಕೀ. ೧೯, ನು. ೪) (ಕೀ. ೫೭, ನು. ೨೭)

ದನುಜಪಮೋಹನಕರ : (ಕೀ. ೩, ನು. ೪)

ವೈದಿಕಮಾರ್ಗದಲ್ಲಿ ಬಹಳ ಶ್ರದ್ಧೆಯಿಂದ ಇದ್ದ ತ್ರಿಪುರಾಸುರರನ್ನು ಮೋಸಗೊಳಿಸಲೆಂದು ವಿಷ್ಣುವು ಪಾಷಂಡವೇಷಿಯಾಗಿ, ಅವರಿಗೆ ಪಾಷಂಡಧರ್ಮವನ್ನು ಉಪದೇಶಿಸುತ್ತಾನೆ.

(ಭಾ. ಸ್ಕಂ. ೨, ಅ. ೭)

(ಕೀ. ೮, ನು. ೭) (ಕೀ. ೧೯, ನು. ೪) (ಕೀ. ೫೭, ನು. ೨೯)

ದುರುಳಕಲಿಮಲಹರ : (ಕೀ. ೩, ನು. ೪)

ಕಲಿಯುಗದಲ್ಲಿ ಅನಾಚಾರಗಳು ಮೇರೆ ಮೀರಿದಾಗ ಕರ್ಮಭ್ರಷ್ಟರನ್ನು ಶಿಕ್ಷಿಸಲು ವಿಷ್ಣುವು ಕಲ್ಕಿಯ ರೂಪದಿಂದ ಕುದುರೆಯೇರಿ ಬರುತ್ತಾನೆ. ಇದು ಹರಿಯ ಹತ್ತನೆಯ ಅವತಾರ.

(ಭಾ. ಸ್ಕಂ. ೨, ಅ. ೭)

(ಕೀ. ೮, ನು. ೭) (ಕೀ. ೧೯, ನು. ೪) (ಕೀ. ೫೭, ನು. ೨೯)

ಕಾಲನೇಮಿ : (ಕೀ. ೪, ನು. ೪)

ನೂರು ತಲೆಗಳುಳ್ಳ ಈ ರಾಕ್ಷಸ ಇಂದ್ರಪದವಿಯನ್ನೇರಿ ಮೆರೆಯುತ್ತಿದ್ದ. ಅವನನ್ನು ವಿಷ್ಣು ತನ್ನ ಚಕ್ರಾಯುಧದಿಂದ ಸಂಹರಿಸುತ್ತಾನೆ. (ಪುನಾಚೂ, ಪು. ೧೦೭) ಇವನೇ ಮತ್ತೆ ಕಂಸನಾಗಿ ಜನಿಸಿದನೆಂಬ ವಿಚಾರ ಇಲ್ಲಿ ಬಂದಿದೆ.

(ಕೀ. ೬೫, ನು. ೧೧)

ಶ್ರೀವತ್ಸ, ಕೌಸ್ತುಭ : (ಕೀ. ೪, ನು. ೮)

ಶ್ರೀವತ್ಸ ಎನ್ನುವುದು ಭೃಗುಮಹರ್ಷಿ ವಿಷ್ಣುವಿನ ಎದೆಯ ಮೇಲೆ ಒದ್ದಾಗ ಉಂಟಾದ ಗುರುತು. ದೇವದಾನವರು ಕ್ಷೀರಸಮುದ್ರವನ್ನು ಮಥಿಸಿದಾಗ ಹುಟ್ಟಿದ ಒಂದು ರತ್ನ ಕೌಸ್ತುಭ. ಇದನ್ನು ವಿಷ್ಣು ತನ್ನ ಎದೆಯಲ್ಲಿ ಧರಿಸಿದನು. (ಪುನಾಚೂ, ಪು. ೧೬೭)

ಆನಕದುಂದುಭಿ : (ಕೀ. ೪, ನು. ೯)

ಕೃಷ್ಣನ ತಂದೆಯಾದ ವಸುದೇವನ ಜನನಕಾಲದಲ್ಲಿ ಆನಕದುಂದುಭಿಗಳೆಂಬ ದೇವವಾದ್ಯ

Rarest Archiver

ಗಳು ಮೊಳಗಿದ್ದರಿಂದ ಆತನಿಗೆ ಆನಕದುಂದುಭಿ ಎಂಬ ಹೆಸರು ಬಂದಿತು.

(ಮು. ೫೨, ಕೀ. ೪ರ ಟಿಪ್ಪಣಿ)

ವನಜಭವಾಂಡ ನುಂಗುವನ : (ಕೀ. ೭, ನು. ೧)

ಮಹಾಪ್ರಳಯದ ಪ್ರಾರಂಭದಲ್ಲಿ ಮನುಷ್ಯಮಾನದ ೪೦೦ ವರ್ಷಗಳ ಕಾಲ ಕ್ರಮವಾಗಿ ದುರ್ಭಿಕ್ಷೆ, ಪ್ರಚಂಡ ಮಾರುತ, ಅಖಂಡವೃಷ್ಟಿ, ಸಂಕರ್ಷಣನಿಂದ ಹೊರಟ ಮಹಾಜ್ವಾಲೆಗಳಿಂದ ಲೋಕಗಳ ನಾಶ ಆಗುವುದು. ನಂತರ ೨೪ ತತ್ತ್ವಗಳು ಒಂದರಲ್ಲೊಂದರಂತೆ ಲಯವಾಗುತ್ತವೆ. ಎಲ್ಲವನ್ನು ಹರಿಯು ತನ್ನುದರದಲ್ಲಿಟ್ಟುಕೊಂಡು ಏಳುಕೋಟಿ ಗಾವುದ ಪರಿಮಿತ ಶಿಶುವಾಗಿ ಮಲಗುವನು. ಆಗ ಶ್ರೀದೇವಿಯು ನೀರಾಗಿಯೂ, ಭೂದೇವಿಯು ವಟಪತ್ರವಾಗಿಯೂ, ದುರ್ಗೆಯು ಕತ್ತಲಾಗಿಯೂ ಪರಿಣಮಿಸುವರು. (ವಿವರಗಳಿಗೆ ನೋಡಿ : ದಾಸಸಾಹಿತ್ಯದಲ್ಲಿ ಸೃಷ್ಟಿ ಪ್ರಕರಣ, ವಿ. ಬಾದರಾಯಣಮೂರ್ತಿ, ಪು. ೬೧–೮೬)

ಎಂಟನೆಯ ರಸಂಗೆ : (ಕೀ. ೨, ನು. ೮)

ಉಪನಿಷತ್‌ಭಾಷ್ಯಗಳಲ್ಲಿ ಬ್ರಹ್ಮನು ಆರನೆಯ ರಸ, ಲಕ್ಷ್ಮೀದೇವಿಯು ಏಳನೆಯ ರಸ, ನಾರಾಯಣನು ಎಂಟನೆಯ ರಸ ಎಂದು ಹೇಳಿ ಇದಕ್ಕಿಂತ ಹೆಚ್ಚಿನ ರಸವಿಲ್ಲದ್ದರಿಂದ ನಾರಾಯಣನೇ ಸರ್ವೋತ್ತಮನೆಂದು ಪ್ರತಿಪಾದಿಸಲಾಗಿದೆ. ಆದ್ದರಿಂದ ಎಂಟನೆಯ ರಸಂಗೆ ಎಂದರೆ ನಾರಾಯಣನಿಗೆ ಎಂದರ್ಥ. (ಮು. ೫೨, ಕೀ. ೮ರ ಟಿಪ್ಪಣಿ)

ಶುಕ್ಲಕೇಶಾವೇಶ : (ಕೀ. ೧೦, ನು. ೪)

ಶುಕ್ಲಕೇಶನೆನಿಸಿದ ಬಲರಾಮನು ಪರಮಾತ್ಮನ ಅಂಶಾವತಾರಿ ಹಾಗೂ ಆದಿಶೇಷನ ಪೂರ್ಣಾವತಾರಿ ಎಂದು ಹೇಳಲಾಗಿದೆ.

ತನ್ನುದರದಿಂದಜನ ಪೆತ್ತಾತ : (ಕೀ. ೧೩, ನು. ೯)

ಸೃಷ್ಟಿ ಕಾಲದಲ್ಲಿ, ಬ್ರಹ್ಮಾಂಡದ ಗರ್ಭೋದಕದಲ್ಲಿ ಮಲಗಿದ್ದ ಪದ್ಮನಾಭನು ತನ್ನ ನಾಭಿಯಿಂದ ಹೊರಟ ಹದಿನಾಲ್ಕು ದಳಗಳುಳ್ಳ ಕಮಲದಲ್ಲಿ ಬ್ರಹ್ಮನನ್ನು ಸೃಷ್ಟಿಸಿದನು.

ನಿಗಮಾನಂತಸುವೇದ್ಯ : (ಕೀ. ೧೪, ನು. ೧)

ಹರಿಯು ಅನಂತ ವೇದಗಳಿಂದ ಚೆನ್ನಾಗಿ ಪ್ರತಿಪಾದ್ಯನು. ಆದರೂ ಆತ ಅಗಮ್ಯನೆಂದೂ ಹರಿದಾಸರು ಅನೇಕ ಕಡೆಗಳಲ್ಲಿ ವರ್ಣಿಸುತ್ತಾರೆ.

ಭುವನೈಕಾದ್ಯ : (ಕೀ. ೧೪, ನು. ೧)

ಚತುರ್ದಶ ಭುವನಗಳಲ್ಲಿ ಎಲ್ಲರಿಗಿಂತ ಮೊದಲಿಗೆ ಇದ್ದವನು,. ವಿಷ್ಣು.

ಕ್ಷೀರಾಂಬುಧಿಧಾಮ : (ಕೀ. ೧೪, ನು. ೩)

ಕ್ಷೀರಸಾಗರದ ಮಧ್ಯದಲ್ಲಿ ಹರಿಯ ವಾಸಸ್ಥಾನವಾದ ಶ್ವೇತದ್ವೀಪವಿದೆಯೆಂಬ ಕಲ್ಪನೆ ಇದೆ.

(ಶ್ರೀವಾದಿರಾಜರ ಕೃತಿಗಳು, ಪು. ೬೫೩)

(ಕೀ. ೫೪, ನು. ೬)

Rarest Archiver

ಸುಪ್ರತೀಕ : (ಕೀ. ೧೮, ನು. ೧)

ಅಷ್ಟದಿಗ್ಗಜಗಳಲ್ಲಿ ಒಂದು. ಈಶಾನ್ಯ ದಿಕ್ಕಿನಲ್ಲಿರುವುದು. (ಪುನಾಚೂ, ಪು. ೬೫೭)

ಸುರಋಷಿಶಾಪದಿ ನಳಕೂಬರರನ್ನು : (ಕೀ. ೨೧, ನು. ೩)

ಕುಬೇರನ ಮಕ್ಕಳಾದ ಮಣಿಗ್ರೀವ ನಳಕೂಬರರು ಒಮ್ಮೆ ಗಂಗೆಯಲ್ಲಿ ಯಕ್ಷಿಯರೊಂದಿಗೆ ಜಲಕೇಳಿಯಾಡುತ್ತಿದ್ದಾಗ, ನಾರದಮುನಿ ಅಲ್ಲಿಗೆ ಬರುತ್ತಾನೆ. ಮದ್ಯಪಾನದಿಂದ ಮತ್ತರಾಗಿದ್ದ ಅವರಿಬ್ಬರು ಮುನಿಯನ್ನು ಲಕ್ಷಿಸದಿದ್ದಾಗ, ಕುಪಿತನಾದ ನಾರದಮುನಿ ಅವರಿಬ್ಬರಿಗೂ ಮತ್ತಿ ಮರಗಳಾಗಿ ಜನಿಸುವಂತೆ ಶಾಪಕೊಡುತ್ತಾನೆ. ತಕ್ಷಣ ಆ ಇಬ್ಬರೂ ಎಚ್ಚೆತ್ತು ಮುನಿಯ ಮರೆ ಹೊಕ್ಕಾಗ 'ನೂರು ವರ್ಷ ಮತ್ತಿ ಮರಗಳಾಗಿದ್ದು ಕೃಷ್ಣನ ಮೂಲಕ ಶಾಪವಿಮೋಚನೆ ಪಡೆಯುವಿರಿ' ಎಂದು ಅನುಗ್ರಹಿಸುತ್ತಾನೆ. ನಂತರ ಅವರಿಬ್ಬರೂ ಗೋಕುಲದಲ್ಲಿ ನಂದನ ಮನೆಯ ಅಂಗಳದಲ್ಲಿ ಮತ್ತಿಯ ಮರಗಳಾಗಿ ಜನಿಸುತ್ತಾರೆ. ಒಂದು ದಿನ ಯಶೋದೆ ಸಣ್ಣ ಬಾಲಕನಾದ ಕೃಷ್ಣನನ್ನು ಒರಳಿಗೆ ಕಟ್ಟಿದ್ದಾಗ, ಕೃಷ್ಣ ಆ ಒರಳನ್ನು ಎಳೆದುಕೊಂಡು ಈ ಮರಗಳ ಮಧ್ಯೆ ನುಗ್ಗಿದಾಗ ಆ ಮರಗಳು ಉರುಳಿ ಬಿದ್ದು, ಧನದಪುತ್ರರು ಶಾಪ ವಿಮೋಚನೆ ಪಡೆಯುತ್ತಾರೆ. ಮೂಲದಲ್ಲಿ ವಿವರವಾಗಿ ಬರುವ ಈ ಶಾಪ ಕೊಡುವ ಭಾಗದ ಸೂಚನೆಯನ್ನು ಮಾತ್ರ ಇಲ್ಲಿ ಕೊಡಲಾಗಿದೆ.

(ಭಾ. ಸ್ಕಂ. ೧೦, ಅ. ೧೦)

ಸನಕ : (ಕೀ. ೨೬, ನು. ೧೩)

ಸೃಷ್ಟಿಯ ಆದಿಯಲ್ಲಿ ಬ್ರಹ್ಮನ ಮಾನಸಪುತ್ರ. ಯಾವಾಗಲೂ ಕೌಮಾರಾವಸ್ಥೆಯಲ್ಲೇ ಇರುವ ಈ ಮುನಿ ಮಹಾತಪಸ್ವಿ ಹಾಗೂ ಜ್ಞಾನಸಂಪನ್ನನು. (ಪುನಾಚೂ, ಪು. ೬೨೮)

ಸುರಧೇನು (ಕಾಮಧೇನು) : (ಕೀ. ೨೬. ನು. ೧೫)

ಇಂದ್ರನ ಆಕಳು. ಅಮೃತಮಥನ ಕಾಲದಲ್ಲಿ ಕ್ಷೀರಸಮುದ್ರದಲ್ಲಿ ಹುಟ್ಟಿತು. ಬೇಡಿದುದನ್ನೆಲ್ಲ ಕೊಡುವ ಸಾಮರ್ಥ್ಯವುಳ್ಳದ್ದು. (ಪುನಾಚೂ, ಪು. ೧೦೧)

(ಕೀ. ೨೭, ನು. ೧, ನು. ೬) (ಕೀ. ೫೮, ನು. ೭)

ವೀರಗರುಡನಮ್ಮಿರಿತದ ಕುಂಭ ಹೇರಿ........ : (ಕೀ. ೨೮, ನು. ೨)

'ಕಾಳಿಯ ಮದಹರಣ' ಪ್ರಸಂಗದಲ್ಲಿ ಈ ಮಾತುಗಳು ಬಂದಿವೆ. ಕಾಳಿಯನ ವಿಷದಿಂದ ಕಾಳಿಂದಿ ಮಡುವಿನ ನೀರೆಲ್ಲ ವಿಷಮಯವಾಗಿ, ತೀರದ ಹುಲ್ಲು ಪೊದೆ ಮರಗಳೆಲ್ಲ ಆ ವಿಷದ ಝಳಕ್ಕೆ ಸುಟ್ಟು ಹೋದರೂ ಒಂದು ಕದಂಬ ವೃಕ್ಷ ಮಾತ್ರ ಹಾಗೆಯೇ ಉಳಿದಿತ್ತಂತೆ. ಇದಕ್ಕೆ ಕಾರಣ, ಹಿಂದೊಮ್ಮೆ ಗರುಡನು ಅಮೃತ ಕುಂಭವನ್ನು ಒಯ್ಯುತ್ತಿರುವಾಗ ಅದನ್ನು ಈ ಕದಂಬ ವೃಕ್ಷದ ಮೇಲೆ ಕೆಲಕಾಲ ಇಟ್ಟಿದ್ದನಂತೆ. ಈ ವಿಚಾರ ಮೂಲ ಸಂಸ್ಕೃತ ಭಾಗವತದಲ್ಲಿಲ್ಲ.

ಮುರಮಥನ : (ಕೀ. ೩೦, ನು. ೧೭)

ಮುರ ಎನ್ನುವವನು ನರಕಾಸುರನ ಪರಿವಾರದ ಒಬ್ಬ ರಾಕ್ಷಸ. ನರಕಾಸುರವಧೆಯ ಸಂದರ್ಭದಲ್ಲಿ ಕೃಷ್ಣ ಈತನನ್ನು ಕೊಲ್ಲುತ್ತಾನೆ. ಹೀಗಾಗಿ ಕೃಷ್ಣನಿಗೆ ಮುರಹರ, ಮುರಮಥನ, ಮುರಾರಿ ಎಂಬ ಹೆಸರುಗಳು ಬಂದಿವೆ. (ಭಾ. ಸ್ಕಂ. ೧೦, ಅ. ೫೯)

(ಕೀ. ೬೫, ನು. ೨೪) (ಕೀ. ೬೬, ನು. ೩)

Rarest Archiver

ವಾಸವನ್ವಜ್ರದಿ ಗಿರಿ ಕೆಡೆದೋಲ್ : (ಕೀ. ೩೦, ನು. ೨೩)

ಕೃತಯುಗದಲ್ಲಿ ಪರ್ವತಗಳಿಗೆ ರೆಕ್ಕೆಗಳಿದ್ದದ್ದರಿಂದ ಅವು ವಾಯುವಿನಂತೆ ಗರುಡನಂತೆ ವೇಗವಾಗಿ ಎಲ್ಲ ದಿಕ್ಕುಗಳಿಗೂ ಹಾರಿಹೋಗುತ್ತಿದ್ದವು. ಅವು ಹಾಗೆ ಹಾರಾಡುತ್ತಿದ್ದಾಗ ದೇವತೆಗಳಿಗೂ, ಋಷಿಗಳಿಗೂ, ಎಲ್ಲ ಪ್ರಾಣಿಗಳಿಗೂ ಅವು ಎಲ್ಲಿ ತಮ್ಮ ಮೇಲೆ ಬೀಳುವುವೋ ಎಂದು ಭೀತಿಯುಂಟಾಯಿತು. ಆಗ ಇಂದ್ರನು ತನ್ನ ವಜ್ರಾಯುಧದಿಂದ ಹಾರುತ್ತಿದ್ದ ಅವುಗಳ ರೆಕ್ಕೆಗಳನ್ನು ಕತ್ತರಿಸಿ ಅವು ಚಲಿಸದಂತೆ ಮಾಡಿದನು. (ರಾಮಾಯಣ, ಸುಂದರಕಾಂಡ, ಸರ್ಗ ೧)

ಭಾಂಡೀರವನ : (ಕೀ. ೩೦, ನು. ೧೭)

ಒಂದು ವನದ ಹೆಸರು.

ಸುಬಲವಿಶಾಲ....ಋಕ್ಷಾ : (ಕೀ. ೩೪, ನು. ೨)

ಇವೆಲ್ಲವೂ ಗೋಪಾಲಕರ ಹೆಸರುಗಳು.

ಅವಸ್ಥಾತ್ರಯ : (ಕೀ. ೩೭, ನು. ೧)

ಸ್ವಪ್ನ, ಜಾಗ್ರತಿ, ಸುಷುಪ್ತಿ ಎಂಬ ಮೂರು ಅವಸ್ಥೆಗಳು.

ಕರಣತ್ರಯ : (ಕೀ. ೩೭, ನು. ೨)

ಮನ, ಕಾಯ, ವಾಕ್ ಎಂಬ ಮೂರು ಕರಣಗಳು.

ಸತ್ತಾತ್ರಯ : (ಕೀ. ೩೭, ನು. ೨)

ಸ್ವರೂಪ ಸತ್ತಾ, ಪ್ರವೃತ್ತಿ ಸತ್ತಾ ಮತ್ತು ಪ್ರಮಿತಿ ಸತ್ತಾ.

ಹಿಂದೆ ವಿದ್ಯಾಧರ ತಾನು ಮುನಿಯ ಶಾಪದಿಂದಹಿಯಾಗಿರಲು : (ಕೀ. ೪೭, ನು. ೩)

ಸುದರ್ಶನನೆಂಬ ವಿದ್ಯಾಧರ ಸಕಲೈಶ್ವರ್ಯಗಳಿಂದ ಕೂಡಿ ವಿಮಾನದಿಂದಲೇ ದಿಕ್ಕುಗಳನ್ನೆಲ್ಲ ಸಂಚರಿಸುತ್ತ ಸೌಂದರ್ಯದಿಂದ ಗರ್ವಿತನಾಗಿ, ಒಮ್ಮೆ ಕುರೂಪಿಗಳಾಗಿದ್ದ ಅಂಗಿರಸ ಋಷಿಯನ್ನು ಕಂಡು ಪರಿಹಾಸಮಾಡಿ ನಗುತ್ತಾನೆ. ಆಗ ಆ ಋಷಿ ಕೊಟ್ಟ ಶಾಪದ ಫಲವಾಗಿ ಹೆಬ್ಬಾವಾಗಿ ಹುಟ್ಟುತ್ತಾನೆ. ಕೃಷ್ಣಪಾದ ಸ್ಪರ್ಶದಿಂದ ಶಾಪವಿಮೋಚನೆಯಾಗುತ್ತದೆ. ಸಂಸ್ಕೃತ ಭಾಗವತದ ದಶಮಸ್ಕಂಧ, ಅಧ್ಯಾಯ ೩೪ರಲ್ಲಿ ಬರುವ ಈ ಪ್ರಸಂಗವನ್ನು ದಾಸರು ಇಲ್ಲಿ ಸಂಗ್ರಹಿಸಿ ಹೇಳಿದ್ದಾರೆ.

ಮಧುಹರ : (ಕೀ. ೫೧, ನು. ೧೨)

ಕಲ್ಪಾದಿಯಲ್ಲಿ ವಿಷ್ಣು ವಟಪತ್ರಶಾಯಿಯಾಗಿ ಮಲಗಿದ್ದಾಗ ಆತನ ಕಿವಿಯ ಮಲದಿಂದ ಮಧು ಕೈಟಭರೆಂಬ ಇಬ್ಬರು ರಾಕ್ಷಸರು ಜನಿಸಿ, ನಾಭಿಕಮಲದಲ್ಲಿದ್ದ ಬ್ರಹ್ಮನನ್ನು ಪೀಡಿಸತೊಡಗಿದಾಗ, ಬ್ರಹ್ಮ ವಿಷ್ಣುವಿನ ಮರೆಹೊಗಲು, ವಿಷ್ಣು ಉಪಾಯದಿಂದ ಅವರನ್ನು ತನ್ನ ತೊಡೆಯ ಮೇಲೆಯೇ ಕೊಲ್ಲುತ್ತಾನೆ. ಹೀಗೆ ಅವರಿಬ್ಬರನ್ನು ಕೊಂದದ್ದರಿಂದ ಅವನಿಗೆ ಮಧುಹರ, ಕೈಟಭಾರಿ ಇತ್ಯಾದಿ ಹೆಸರುಗಳು ಬಂದವು. (ಪ್ರನಾಚೂ, ಪು. ೧೬೨)

(ಕೀ. ೫೭, ನು. ೨೪) (ಕೀ. ೬೪, ಪ.)

Rarest Archiver

ಮಾಗಧ : (ಕೀ. ೫೧, ನು. ೨೨)

ಮಗಧ ದೇಶಾಧಿಪತಿಯಾದ ಬೃಹದ್ರಥ ರಾಜನ ಮಗ. ಈತ ಅರಸನಾದ ನಂತರ ದಿಗ್ವಿಜಯ ಮಾಡಿ ಶತ್ರುಗಳನ್ನೆಲ್ಲ ಗೆದ್ದು ಅನೇಕ ಮಂದಿ ರಾಜಪುತ್ರರನ್ನು ಸೆರೆಯಲ್ಲಿರಿಸಿ ನಿರ್ಭೀತನಾಗಿದ್ದ. ಆ ರಾಜಪುತ್ರರೆಲ್ಲ ರಹಸ್ಯವಾಗಿ ಕೃಷ್ಣನಿಗೆ ತಮ್ಮನ್ನು ರಕ್ಷಿಸುವಂತೆ ಹೇಳಿಕಳುಹಿಸಿದಾಗ ಕೃಷ್ಣನು ಭೀಮನಿಂದ ಇವನನ್ನು ಕೊಲ್ಲಿಸುತ್ತಾನೆ. (ಭಾ. ಸ್ಕಂ. ೧೦, ಅ. ೭೨)

ಬಾಣ : (ಕೀ. ೫೧, ನು. ೨೨)

ಬಾಣ ಶಿವಭಕ್ತಿಸಂಪನ್ನನಾದ ಒಬ್ಬ ರಾಕ್ಷಸ. ಶಿವನನ್ನು ತಾಂಡವದಿಂದ ಮೆಚ್ಚಿಸಿ, ಶಿವನ ರುದ್ರಗಣಗಳಲ್ಲಿ ಒಬ್ಬ ತನ್ನ ಪಟ್ಟಣವನ್ನು ಕಾಪಾಡುವಂತೆಯೂ, ತನಗೆ ಸಾವಿರ ತೋಳುಗಳನ್ನು ಅನುಗ್ರಹಿಸುವಂತೆಯೂ ವರವನ್ನು ಪಡೆದು ಮಹಾಮಹಿಮಸಂಪನ್ನನಾಗಿದ್ದ. ಅನಂತರದಲ್ಲಿ ಇವನ ಮಗಳು ಉಷೆಯನ್ನು ಕೃಷ್ಣನ ಮೊಮ್ಮಗ ಅನಿರುದ್ಧ ಕದ್ದು ಮದುವೆಯಾಗುತ್ತಾನೆ. (ಪುನಾಚೂ, ಪು. ೪೩೮)

ಶಂಬರ : (ಕೀ. ೫೧, ನು. ೨೨)

ದಕ್ಷಪುತ್ರನಾದ ಈತ ಪಾತಾಳವಾಸಿಯಾಗಿದ್ದ. ಮಹಾಮಾಯಾವಿ. ಕೃಷ್ಣನ ಮಗನಾದ ಪ್ರದ್ಯುಮ್ನನಿಂದ ತಾನು ಸಾಯುವೆನೆಂದು ತಿಳಿದು ಆತನನ್ನು ಕೊಲ್ಲಲು ಪ್ರಯತ್ನಿಸಿ ತಾನೇ ಆತನಿಂದ ಹತನಾಗುತ್ತಾನೆ. (ಭಾ.ಸ್ಕಂ. ೧೦, ಅ. ೫೫)

ಶಂಖ : (ಕೀ. ೫೩, ನು. ೪)

ಶಂಖರೂಪದಲ್ಲಿದ್ದ ಪಂಚಜನನೆಂಬ ರಾಕ್ಷಸ. ಪ್ರಹ್ಲಾದನ ತಮ್ಮನಾದ ಸಂಹ್ಲಾದನ ಮಗ. ಕೃಷ್ಣ ತನ್ನ ಗುರುವಾದ ಸಾಂದೀಪನಿಗೆ ಗುರುಕಾಣಿಕೆಯನ್ನು ಕೊಡುವ ಸಂದರ್ಭದಲ್ಲಿ ಈತನನ್ನು ಕೊಲ್ಲುತ್ತಾನೆ. (ಭಾ. ಸ್ಕಂ. ೧೦, ಅ. ೪೫)

ಸತ್ಯಾದೇವಿಗಮರತರು ತರುವೆ : (ಕೀ. ೫೩, ನು. ೪)

ಒಮ್ಮೆ ನಾರದ ಒಂದು ಪಾರಿಜಾತದ ಹೂವನ್ನು ತಂದು ಕೃಷ್ಣನಿಗೆ ಕೊಡಲಾಗಿ, ಆತ ಅದನ್ನು ರುಕ್ಮಿಣಿಗೆ ಕೊಟ್ಟ. ಇದರಿಂದ ಸಿಟ್ಟುಗೊಂಡ ಸತ್ಯಭಾಮೆ ಕ್ರೋಧಾಗಾರವನ್ನು ಹೊಕ್ಕಳು. ಕೃಷ್ಣ ಆಕೆಯನ್ನು ಸಮಾಧಾನಪಡಿಸಿ ಸ್ವರ್ಗದಿಂದ ಪಾರಿಜಾತ ವೃಕ್ಷವನ್ನು ಕಿತ್ತುತಂದು ಸತ್ಯಭಾಮೆಯ ಮನೆಯೆದುರು ಇರಿಸಿದ. (ಪುನಾಚೂ, ಪು. ೭೫೫)

(ಕೀ. ೬೭, ನು. ೧೧)

ಸ್ಯಮಂತಕ : (ಕೀ. ೫೩, ನು. ೫)

ಯದುವಂಶದ ನಿಮ್ನನ ಮಗನಾದ ಸತ್ರಾಜಿತ ಸೂರ್ಯನ ಭಕ್ತನೂ ಮಿತ್ರನೂ ಆಗಿದ್ದು ಸೂರ್ಯನಿಂದ ಸ್ಯಮಂತಕವೆಂಬ ರತ್ನವನ್ನು ಪಡೆದ. ಕೃಷ್ಣ ಇದರ ಮಹಿಮೆಗೆ ಮರುಳಾಗಿ ಅದನ್ನು ತನಗೆ ಕೊಡುವಂತೆ ಸತ್ರಾಜಿತನನ್ನು ಕೇಳಿದ. ಆದರೆ ಅವನು ಕೊಡಲಿಲ್ಲ. ಒಂದುದಿನ ಸತ್ರಾಜಿತನ ತಮ್ಮನಾದ ಪ್ರಸೇನ ಆ ರತ್ನವನ್ನು ಧರಿಸಿ ಕೃಷ್ಣನ ಜೊತೆಯಲ್ಲಿ ಬೇಟೆಗೆ ಹೋಗಿದ್ದಾಗ ಒಂದು ಸಿಂಹ ಪ್ರಸೇನನನ್ನು ಕೊಂದಿತು. ಕೃಷ್ಣನ ಮೇಲೆ ಅಪವಾದ ಬರಲು ಆತ ಅರಣ್ಯಕ್ಕೆ ಹೋಗಿ ಪ್ರಸೇನನ ಶವವನ್ನು ಗುರುತಿಸಿ ಮುಂದೆ ನಡೆದು ಜಾಂಬವಂತನ ಸಂಗಡ ಯುದ್ಧಮಾಡಿ ಆ ರತ್ನವನ್ನು ತಂದು ಸತ್ರಾಜಿತನಿಗೆ

Rarest Archiver

ಕೊಟ್ಟು ಸತ್ಯಭಾಮೆಯನ್ನು ಮದುವೆಯಾಗುತ್ತಾನೆ. (ಭಾ. ಸ್ಕಂ. ೧೦, ಅ. ೫೬)
(ಕೀ. ೬೭, ನು. ೧೧)

ಭೂಸುರಗೆ ಸತ್ತ ಮಗನ್ನಿತ್ತು : (ಕೀ. ೫೩, ನು. ೪)

ಅವಂತಿ ನಗರದಲ್ಲಿ ವಾಸವಾಗಿದ್ದ ಸಾಂದೀಪನಿ ಮಹರ್ಷಿಯ ಬಳಿಯಲ್ಲಿ ಬಲರಾಮ ಕೃಷ್ಣರು ವಿದ್ಯಾಭ್ಯಾಸ ಮಾಡಿದರು. ಗುರುಗಳು ಗುರುದಕ್ಷಿಣೆಯಾಗಿ ತಮ್ಮ ಸತ್ತ ಮಗನನ್ನು ಬದುಕಿಸಿ ತಂದು ಕೊಡುವಂತೆ ಹೇಳಿದಾಗ, ಕೃಷ್ಣ ಯಮಲೋಕಕ್ಕೆ ಹೋಗಿ, ಅವರ ಮೃತನಾಗಿದ್ದ ಮಗನನ್ನು ಮರಳಿ ಕರೆತಂದು ಒಪ್ಪಿಸುತ್ತಾನೆ. (ಭಾ. ಸ್ಕಂ. ೧೦, ಅ. ೪೫) ಮೂಲದಲ್ಲಿ ವಿವರವಾಗಿ ಬರುವ ಈ ಪ್ರಸಂಗ ವನ್ನು ಇಲ್ಲಿ ಒಂದೇ ಮಾತಿನಲ್ಲಿ ಸೂಚಿಸಿ ಕೈ ಬಿಡಲಾಗಿದೆ.

ಪೌಂಡ್ರಕ : (ಕೀ. ೫೩, ನು. ೫)

ಪುಂಡ್ರವಂಶದ ವಸುದೇವನೆಂಬ ರಾಜನ ಮಗ. ಕೃಷ್ಣನಂತೆಯೇ ಕೀರ್ತಿವಂತನಾಗುವ ದುರಾಸೆ ಯಿಂದ ಅವನಂತೆಯೇ ಶಂಖ, ಚಕ್ರಗಳನ್ನು ಧರಿಸಿ ಕೃಷ್ಣನ ಮೇಲೆ ಯುದ್ಧಕ್ಕೆ ಹೋಗಿ ಸೋತು, ಶಿವನಿಂದ ಪಡೆದ ಶಸ್ತ್ರಾಸ್ತ್ರಗಳೂ ವ್ಯರ್ಥವಾಗಲು ಕೊನೆಗೆ ಕಾಶಿರಾಜನನ್ನು ಮರೆಹೊಕ್ಕು ಆತ ನೊಂದಿಗೆ ತಾನೂ ಕೃಷ್ಣನಿಂದ ಹತನಾದ. (ಪುನಾಚೂ, ಪು. ೪೨೧)
(ಕೀ. ೬೭, ನು. ೧೨)

ಕಾ[ಶಿ]ಯನು ದೀಪಿಸುವೆ : (ಕೀ. ೫೩, ನು. ೫)

ಹರಿದ್ವೇಷಿಯಾದ ಪೌಂಡ್ರಕನ ಜೊತೆಗೆ ಆತನಿಗೆ ಬೆಂಬಲ ವ್ಯಕ್ತಪಡಿಸಿ ಕೃಷ್ಣನ ವಿರುದ್ಧ ಯುದ್ಧಕ್ಕೆ ಬಂದ ಕಾಶೀರಾಜನೂ ಯುದ್ಧದಲ್ಲಿ ಕೃಷ್ಣನಿಂದ ಹತನಾಗುತ್ತಾನೆ. ಆಗ ಕಾಶೀರಾಜನ ಮಗನಾದ ಸುದಕ್ಷಿಣ ಕೃಷ್ಣನ ಮೇಲೆ ಹಗೆ ತೀರಿಸಿಕೊಳ್ಳುವ ಉದ್ದೇಶದಿಂದ ರುದ್ರನನ್ನು ಆರಾಧಿಸಿ, ಆತನ ಸೂಚನೆಯಂತೆ ಅಭಿಚಾರ ಹೋಮವನ್ನು ನಡೆಸುತ್ತಾನೆ. ಅಗ್ನಿಕುಂಡದಿಂದ ಎದ್ದ ಅಭಿಚಾರಾಗ್ನಿ ದ್ವಾರಕೆಯನ್ನು ಸುಟ್ಟುಹಾಕುವಂತೆ ಬಂದಾಗ ಕೃಷ್ಣ ಸುದರ್ಶನ ಚಕ್ರದಿಂದ ಅದನ್ನು ನಿಗ್ರಹಿಸುತ್ತಾನೆ. ಸುದರ್ಶನ ಚಕ್ರ ಆ ಅಗ್ನಿಯನ್ನು ಬೆನ್ನಟ್ಟುತ್ತ ಹೋಗಿ ಇಡೀ ಕಾಶೀನಗರವನ್ನು ಸುಟ್ಟು ಹಾಕಿದ ನಂತರ ಕೃಷ್ಣನ ಬಳಿಗೆ ಹಿಂದಿರುಗುತ್ತದೆ. (ಭಾ. ಸ್ಕಂ. ೧೦, ಅ. ೬೬)

ಚೈದ್ಯನ ಮಥಿಸುವೆ : (ಕೀ. ೫೩, ನು. ೫)

ಚೇದಿ ದೇಶದ ಅರಸನಾದ ಶಿಶುಪಾಲನಿಗೆ ಚೈದ್ಯನೆಂಬ ಹೆಸರೂ ಇದೆ. ರಾಜಸೂಯಯಾಗದ ಸಂದರ್ಭದಲ್ಲಿ ಭೀಷ್ಮ ಕೃಷ್ಣನಿಗೆ ಅಗ್ರಪೂಜೆ ಮಾಡಿಸಿದ್ದರಿಂದ ರೋಷಭರಿತನಾಗಿ ಭೀಷ್ಮನನ್ನೂ ಕೃಷ್ಣನನ್ನೂ ನಿಂದಿಸುತ್ತಾನೆ. ಕೃಷ್ಣ ಶಿಶುಪಾಲನ ತಾಯಿಗೆ ಭಾಷೆಕೊಟ್ಟಂತೆ ಆತನ ನೂರು ತಪ್ಪು ಗಳನ್ನು ಕ್ಷಮಿಸುತ್ತಾನಾದರೂ ಶಿಶುಪಾಲ ಮತ್ತೂ ಉದ್ಧಟತನವನ್ನೇ ತೋರಿದಾಗ ಆತನನ್ನು ಕೊಲ್ಲು ತ್ತಾನೆ. (ಮಹಾಭಾರತ, ಸಭಾಪರ್ವ)
(ಕೀ. ೬೭, ನು. ೧೨)

ಜಯವಿಜಯ : (ಕೀ. ೫೬, ನು. ೪೩)

ವಿಷ್ಣುವಿನ ವೈಕುಂಠದ ದ್ವಾರಪಾಲಕರು. ಒಮ್ಮೆ ವಿಷ್ಣುವನ್ನು ನೋಡುವುದಕ್ಕೆ ಬಂದ ಸನ

Rarest Archiver

ಕಾದಿ ಮುನಿಗಳನ್ನು ಅಡ್ಡಗಿಸಿ, ಭೂಲೋಕದಲ್ಲಿ ರಾಕ್ಷಸರಾಗಿ ಜನಿಸುವಂತೆ ಶಾಪವನ್ನು ಪಡೆದು, ಮೊದಲನೆಯ ಜನ್ಮದಲ್ಲಿ ಹಿರಣ್ಯಾಕ್ಷ, ಹಿರಣ್ಯಕಶಿಪುಗಳೆಂಬ ಹೆಸರಿನಿಂದ ಹುಟ್ಟಿ ವರಾಹ, ನರಸಿಂಹ ರಿಂದ ಹತರಾಗಿ, ಎರಡನೆಯ ಬಾರಿ ರಾವಣ ಕುಂಭಕರ್ಣರಾಗಿ ಜನಿಸಿ ಶ್ರೀರಾಮನಿಂದ ಮಡಿದು, ಮೂರನೆಯ ಸಲ ಶಿಶುಪಾಲ, ದಂತವಕ್ತ್ರರಾಗಿ ಜನ್ಮವೆತ್ತಿ ಕೃಷ್ಣನಿಂದ ಹತರಾದರು.

(ಭಾ.ಸ್ಕಂ. ೩, ಅ. ೧೬).

ನಂದ ಸುನಂದ : (ಕೀ. ೫೬, ನು. ೪೩)

ವಿಷ್ಣುಕಿಂಕರರು. (ಭಾ. ಸ್ಕಂ. ೮, ಅ. ೨೧)

ಹಯವದನ : (ಕೀ. ೫೭, ನು. ೨೪)

ಮಧುಕೈಟಭರೆಂಬ ದಾನವರನ್ನು ವಿಷ್ಣು ಹಯವದನಾವತಾರಿಯಾಗಿ ಸಂಹರಿಸುತ್ತಾನೆ.

(ಭಾ. ಸ್ಕಂ. ೧೦, ಅ. ೪೦)

ಹನುಮದಂಸಗಮನ : (ಕೀ. ೫೭, ನು. ೨೭)

ರಾಮರಾವಣರ ಯುದ್ಧದ ಸಂದರ್ಭದಲ್ಲಿ ರಾವಣನು ರಥದಲ್ಲಿಯೂ, ರಾಮನು ನೆಲದ ಮೇಲೂ ನಿಂತಿದ್ದಾಗ, ಹನುಮಂತನು ರಾಮನನ್ನು ಹೆಗಲಲ್ಲಿ ಹೊತ್ತುಕೊಂಡು ಆ ಮೂಲಕ ಅವನ ವಾಹನವಾಗಿ ತನ್ನ ಭಕ್ತಿಯನ್ನು ವ್ಯಕ್ತಪಡಿಸಿದ. (ಆನಂದ ರಾಮಾಯಣ, ಸಾರ ಕಾಂಡ, ಸರ್ಗ ೧೧)

ಗಜಪಾಲ : (ಕೀ. ೬೩, ಪ.)

ಪಾಂಡ್ಯದೇಶದ ಅರಸನಾದ ಇಂದ್ರದ್ಯುಮ್ನ ವಿಷ್ಣುಭಕ್ತ. ಒಮ್ಮೆ ಈತನು ನಿಷ್ಠೆಯಲ್ಲಿದ್ದಾಗ ತನ್ನಲ್ಲಿಗೆ ಬಂದ ಅಗಸ್ತ್ಯಮಹರ್ಷಿಯನ್ನು ಗೌರವಿಸದ ಕಾರಣ, ಆನೆಯ ಜನ್ಮವನ್ನು ಪಡೆಯುವಂತೆ ಶಾಪಗ್ರಸ್ತನಾಗಿ ಆನೆಯಾಗುತ್ತಾನೆ. ಒಂದು ದಿನ ಪದ್ಮಸರೋವರದಲ್ಲಿ ನೀರು ಕುಡಿಯುತ್ತಿದ್ದಾಗ ಒಂದು ಮೊಸಳೆ ಆನೆಯ ಕಾಲನ್ನು ಹಿಡಿಯಿತು. ಆಗ ಆನೆ ವಿಷ್ಣುವನ್ನು ಪ್ರಾರ್ಥಿಸಲು ಅವನು ಓಡಿ ಬಂದು ಚಕ್ರಾಯುಧದಿಂದ ಮೊಸಳೆಯನ್ನು ಕೊಂದು ಆನೆಯನ್ನು ರಕ್ಷಿಸುತ್ತಾನೆ.

(ಭಾ. ಸ್ಕಂ. ೮, ಅ. ೩)

ಅಷ್ಟದಿಗ್ಗಜಗಳು : (ಕೀ. ೬೩, ಪ.)

ಐರಾವತ, ಪುಂಡರೀಕ, ವಾಮನ, ಕುಮುದ, ಅಂಜನ, ಪುಷ್ಪದಂತ, ಸಾರ್ವಭೌಮ, ಸುಪ್ರತೀಕ.

ಗಜವದನಜನಕಪಾಲ : (ಕೀ. ೬೩, ಪ.)

ಶಿವನ ವರದಿಂದಾಗಿ ಭಸ್ಮಾಸುರನು ಯಾರ ತಲೆಯ ಮೇಲೆ ಕೈ ಇಟ್ಟರೂ ಅವರು ಸುಟ್ಟು ಭಸ್ಮವಾಗುತ್ತಿದ್ದರು. ಹೀಗೆ ವರವನ್ನು ಪಡೆದ ಆ ರಾಕ್ಷಸ ಶಿವನಿಗೇ ಮೃತ್ಯುಪ್ರಾಯನಾದಾಗ ಶಿವನು ವಿಷ್ಣುವನ್ನು ಪ್ರಾರ್ಥಿಸುತ್ತಾನೆ. ಆಗ ವಿಷ್ಣು ಮೋಹಿನಿಯ ರೂಪ ಧರಿಸಿ, ಭಸ್ಮಾಸುರನ ಮನಸ್ಸನ್ನಾಕರ್ಷಿಸಿ, ಆಚಮನ ಸಂಕಲ್ಪದ ನೆವದಿಂದ ಭಸ್ಮಾಸುರನು ಹಿಂದೆ ಮುಂದೆ ಆಲೋಚಿಸದೆ ತನ್ನ ಕೈಯನ್ನು ತಲೆಯ ಮೇಲಿಟ್ಟುಕೊಂಡು ಸುಟ್ಟು ಬೂದಿಯಾಗುವಂತೆ ಮಾಡಿದನು.

(ಶ್ವೇತಾದ್ರಿ ಸಂದೇಶ, ಶ್ವೇತಾಚಲ ಮಹಾತ್ಮೆ, ೪-೫ನೆಯ ಅಧ್ಯಾಯಗಳು)

Rarest Archiver

ಯಯಾತಿಯ ಶಾಪದಿಂ ಯದುವಂಶಕರ್ಹತೆಯಿಲ್ಲರಸುತನಕೆಂದು : (ಕೀ. ೬೭, ನು. ೩)

ಯಯಾತಿ ರಾಜನ ಮಗ ಯದು. ಯದುವಿನ ತಾಯಿ ಶುಕ್ರಾಚಾರ್ಯನ ಮಗಳಾದ ದೇವಯಾನಿ. ಶುಕ್ರಾಚಾರ್ಯನ ಶಾಪದಿಂದ ಯಯಾತಿಗೆ ವೃದ್ಧಾಪ್ಯ ಬಂದಾಗ, ಯದುವು ಅವನ ಒಡಹುಟ್ಟಿದವನಾದ ತುರ್ವಸುವೂ ಯಯಾತಿಯ ವೃದ್ಧಾಪ್ಯವನ್ನು ಸ್ವೀಕರಿಸಲು ಒಪ್ಪದಿದ್ದುದರಿಂದ ರಾಜ್ಯಾಧಿಕಾರವನ್ನು ಕಳೆದುಕೊಳ್ಳುತ್ತಾರೆ. ಈ ಕಾರಣದಿಂದಲೇ ಯದುವಂಶದಲ್ಲಿ ಜನಿಸಿದ ಕೃಷ್ಣ, ಕಂಸನನ್ನು ಕೊಂದ ಬಳಿಕ ತಾನು ಸಿಂಹಾಸನವನ್ನೇರದೆ ಕಂಸನ ತಂದೆಯಾದ ಉಗ್ರಸೇನನಿಗೆ ಪಟ್ಟ ಕಟ್ಟುತ್ತಾನೆ. (ಪುನಾಚೂ. ಪು. ೫೦೭)

ಕ್ರೂರಯವನಸಂಹಾರ ಮುಚುಕುಂದೋದ್ಧಾರ : (ಕೀ. ೬೭. ನು, ೧೦)

ಕಾಲಯವನ ಗರ್ಗಮಹರ್ಷಿಯ ಮಗ, ಮುಚುಕುಂದ ಸೂರ್ಯವಂಶದ ಮಾಂಧಾತನ ಮಗ. ಕೃಷ್ಣನನ್ನು ಕೊಲ್ಲಲು ಬೆನ್ನಟ್ಟಿಬಂದ ಕಾಲಯವನ ಮುಚುಕುಂದನಿಂದ ಭಸ್ಮವಾದ. ಮುಚುಕುಂದ ಕೃಷ್ಣನ ಅನುಗ್ರಹಕ್ಕೆ ಪಾತ್ರನಾದ, (ಪುನಾಚೂ. ಪು. ೧೦೭, ೧೦೮)

ನಾರಕ........ಬಡಿದ್ಠೊಂತಕಾರಿ : (ಕೀ, ೬೭, ನು. ೧೦)

ವಿಷ್ಣು ವರಾಹಾವತಾರಿಯಾಗಿದ್ದಾಗ ಆತನ ದೇಹದಿಂದ ಒಂದು ತೊಟ್ಟು ಬೆವರು ನೆಲದ ಮೇಲೆ ಬೀಳಲಾಗಿ ಭೂದೇವಿಯಲ್ಲಿ ನರಕಾಸುರ ಜನಿಸಿದ. ಭೂದೇವಿ ವಿಷ್ಣುವನ್ನು ಪ್ರಾರ್ಥಿಸಿ ಇವನಿಗೆ ವೈಷ್ಣವಾಸ್ತ್ರವನ್ನು ಕೊಡಿಸಿದಳು. ಇದರಿಂದ ದುರ್ಜಯನಾದ ನರಕಾಸುರ ಲೋಕಕಂಟಕ ನಾದಾಗ ಕೃಷ್ಣ ಅವನನ್ನು ಕೊಂದು ಅವನ ಅಂತಃಪುರದಲ್ಲಿದ್ದ ಹದಿನಾರುಸಾವಿರ ಮಂದಿ ಸ್ತ್ರೀಯ ರನ್ನೂ ವಿವಾಹವಾದನು. (ಭಾ. ಸ್ಕಂ. ೧೦, ಅ. ೫೯)

ನೃಗಪಾಪಹಾರ : (ಕೀ. ೬೭, ನು. ೧೧)

ಸೂರ್ಯವಂಶದ ಅರಸು. ಒಂದುಬಾರಿ ಒಬ್ಬ ಬ್ರಾಹ್ಮಣನಿಗೆ ದಾನಮಾಡಿದ್ದ ಆಕಳು ಹೇಗೊ ತಪ್ಪಿಸಿಕೊಂಡು ಮತ್ತೆ ಇವನ ಆಕಳುಗಳ ಮಂದೆಯನ್ನೇ ಸೇರಿತು. ನೃಗ ಅರಿಯದೆ ಅದನ್ನು ಬೇರೊಬ್ಬ ಬ್ರಾಹ್ಮಣನಿಗೆ ದಾನ ಕೊಡುತ್ತಾನೆ. ಮೊದಲ ಬಾರಿ ದಾನ ಪಡೆದವ ಅದನ್ನು ಗುರುತಿಸಿ, ಆ ಇಬ್ಬರು ಬ್ರಾಹ್ಮಣರೂ ಅರಸನ ಬಳಿಗೆ ಹೋಗಿ ಬಹಳ ಕಾಲ ಕಾದಿದ್ದರೂ ಅರಸನ ದರ್ಶನ ದೊರೆಯದಿದ್ದಾಗ, ಅರಸನಿಗೆ ಓತಿಯ ಜನ್ಮ ಬರಲೆಂದು ಶಾಪಕೊಡುತ್ತಾರೆ. ನೃಗ ಬ್ರಾಹ್ಮಣರ ಶಾಪ ಕೇಳಿ ಮರೆಹೊಕ್ಕಾಗ ಕೃಷ್ಣನಿಂದ ಶಾಪವಿಮೋಚನೆಯಾಗುವುದೆಂದು ಹೇಳುತ್ತಾರೆ. ಓತಿಯಾಗಿ ತನ್ನ ಉದ್ಯಾನದ ಬಿಲವೊಂದರಲ್ಲಿದ್ದ ಈ ಅರಸ, ಕೃಷ್ಣ ಅಲ್ಲಿಗೆ ಬಂದಾಗ ತನ್ನ ಪೂರ್ವಜನ್ಮದ ಕಥೆಯನ್ನು ಹೇಳಿ ಶಾಪವಿಮುಕ್ತನಾಗುತ್ತಾನೆ. (ಪುನಾಚೂ, ಪು. ೩೮೭)

ಹಾರುವರಿಗೆ ಕುಮಾರರನು ಕೊಟ್ಟ : (ಕೀ. ೬೭, ನು. ೧೧)

ಅರ್ಜುನನ ಪ್ರತಿಜ್ಞೆಯ ಪೂರೈಕೆಗಾಗಿ ಶ್ರೀಕೃಷ್ಣನು ಪುತ್ರಶೋಕದಿಂದ ಮರುಗುತ್ತಿದ್ದ ಬ್ರಾಹ್ಮಣನಿಂದ ಕೂಡಿ ಅನಂತಾಸನಕ್ಕೆ ಹೋಗಿ ಅಲ್ಲಿದ್ದ ಆ ಬ್ರಾಹ್ಮಣನ ನಾಲ್ವರು ಮಕ್ಕಳನ್ನು ತಂದು ಅವನಿಗೆ ಒಪ್ಪಿಸಿದನು, (ಶ್ರೀಜ, ಪು. ೨೦೦)

Rarest Archiver

ದಂತವಕ್ರ(ಕ್ತ್ರ) : (ಕೀ. ೬೭, ನು. ೧೨)

ಇವನು ವೃದ್ಧಶರ್ಮ-ಶ್ರುತದೇವಿಯರ ಮಗ. ಶಿಶುಪಾಲ, ಸಾಳ್ವ, ಪೌಂಡ್ರಕರ ಆಪ್ತಮಿತ್ರ. ಕೃಷ್ಣನಿಂದ ಶಿಶುಪಾಲ ವಧೆಯಾದುದನ್ನು ಕೇಳಿ, ದ್ವಾರಕೆಯ ಮೇಲೆ ದಂಡೆತ್ತಿ ಬರುತ್ತಾನೆ. ಕೃಷ್ಣನನ್ನು ಎದುರಿಸಿ ಆತನ ಕೌಮೋದಕಿಯೆಂಬ ಗದೆಗೆ ಆಹುತಿಯಾಗುತ್ತಾನೆ.

(ಭಾ. ಸ್ಕಂ. ೧೦; ಅ. ೭೮)

Rarest Archiver

ಅನುಬಂಧ ೨

ಕಠಿಣ ಶಬ್ದಗಳ ಅರ್ಥ

ಅಂಕ—ತೊಡೆ

ಅಂಕುರ—ಮೊಳಕೆ, ನೀರು

ಅಂಚಲು—ಕೆಡಹಿ ಕೆಳಗೆ ಒತ್ತಲು

ಅಂಚಿತ—ಹೊಳೆಯುವ

ಅಂತಶ್ಚಕ್ಷು—ಅಂತಃಕರಣಕ್ಕೆ ಹಚ್ಚಿಕೊಂಡು

ಅಂಬಕ—ಕಣ್ಣು

ಅಂಬರ—ವಸ್ತ್ರ

ಅಂಬಷ್ಟ—ಮಾವುತ

ಅಂಸ—ಹೆಗಲು

ಅಕೂಪಾರ—ಆಮೆ

ಅಗ್ಗರಜ, ಅಗ್ರಜ—ಅಣ್ಣ

ಅಘಮರ್ಷಣ—ಪಾಪನಾಶಕವಾದ ಋಗ್ವೇದದ ಒಂದು ಸೂಕ್ತ

ಅಜಾತ—ವಿಷ್ಣು, ಹುಟ್ಟು ಇಲ್ಲದ

ಅಟಣೆ—ತಿರುಗಾಟ

ಅಟ್ಟುಳಿ—ಕಾಟ

ಅಣುಗ—ಮಗ

ಅಧೋಕ್ಷಜ—ಕೃಷ್ಣ

ಅನಡುಹ < ಅನಡ್ವ?—ಎತ್ತು

ಅನಭಿಜ್ಞರು—ಅರಿಯದವರು

ಅನ್ನಕ್ಕೆ ಮೊದಲೆ—ಊಟಕ್ಕೆ ಮೊದಲೆ

ಅನ್ವಯ—ವಂಶ

ಅಪತ್ಯ—ಮಕ್ಕಳು

ಅಪವರ್ಗ—ಮೋಕ್ಷ

ಅಪಸರ್ಪಣ—ಹಿಂದಕ್ಕೆ ಹೋಗುವುದು

ಅಪಾಂಗ—ಕಡೆಗಣ್ಣನೋಟ

ಅಬ್ದ—ವರ್ಷ, ಮೋಡ

ಅಭ್ರ—ಮೋಡ

ಅಭಿಜ್ಞ—ಚೆನ್ನಾಗಿ ತಿಳಿದವನು

ಅಮರ್ದು—ಆಕ್ರಮಿಸಿ

ಅಮರೋತ್ತಂಸ—ಅಮರ ಶ್ರೇಷ್ಠ

ಅರ್ದಿತರಾಗಿ—ನೆನೆದು

ಅರ್ಭಕ—ಎಳೆಯ ಮಗು

ಅರಾತ್ನಿ < ಅರತ್ನಿ—ಮೊಳಕೈ

ಅರೆ—ಚಕ್ರ

ಅವಜ್ಞ—ಅಲಕ್ಷ್ಯ

ಅಶನ—ಆಹಾರ

ಅಸಂಪ್ರಜ್ಞಾತರು—ಕೇವಲ ಪರಮಾತ್ಮನ ಧ್ಯಾನದಲ್ಲಿ ರತರಾಗಿ ಹೊರಗಿನ ಅರಿವಿಲ್ಲದವರು

ಅಸಿಯರು—ಚೆಲುವೆಯರು

ಅಹಸ್ಸು—ಹಗಲು

ಅಹಿಪ—ಆದಿಶೇಷ

ಅಳಕ—ಮುಂಗುರುಳು

ಆಜ್ಯ—ತುಪ್ಪ

ಆತತಾಯಿ—ಕೊಲೆಪಾತಕಿ, ದುಷ್ಟ

ಆತಪತ್ರ—ಕೊಡೆ

ಆಪಣ—ಅಂಗಡಿ

ಆಮಯ—ರೋಗ

ಆಮೋದ—ಸುವಾಸನೆ

ಆರ್ತಿ, ಆರ್ತ—ಸಂಕಟ

ಆವು—ಹಸು

ಆಶಿವಿಷ—ಹಲ್ಲಿನಲ್ಲಿ ವಿಷವುಳ್ಳದ್ದು, ಹಾವು

Rarest Archiver

ಆಸ್ಯ—ಮುಖ
ಇಂಚಿದ—ಕೆಳಕ್ಕೆ ಹಾರಿದ
ಇಂದ್ರಚಾಪ—ಕಾಮನಬಿಲ್ಲು
ಇಟ್ಟೆಡೆ—ಇಕ್ಕಟ್ಟು
ಇಭ—ಆನೆ
ಇರಸಲ್ಮಳೆ—ಎರಚಲು ಮಳೆ
ಇರುಕಳು < ಇರಿಕುಳಿ—ಹೋರಿ ಮುಂತಾದ ಕೊಂಬಿನ ಪ್ರಾಣಿ
ಇಸು—ಬಾಣ ಪ್ರಯೋಗ ಮಾಡು
ಈಡ್ಯ—ಹೊಗಳಲ್ಪಟ್ಟ
ಈಪ್ಸಿತ—ಇಚ್ಛಿತ
ಉಕ್ಕು—ಸೊಕ್ಕು
ಉಗ್ಗಡ—ಶ್ರೇಷ್ಠ
ಉಚ್ಛಿಲೀಂದ್ರ—ನಾಯಿಕೊಡೆ
ಉತ್ತಮಾಂಗರುಹ—ತಲೆಕೂದಲು
ಉತ್ಪಲ—ಕನ್ನೈದಿಲೆ
ಉತ್ಸರ್ಪಣ—ಮೇಲಕ್ಕೆ ಹೋಗುವುದು
ಉತ್ಥಾಪನ—ಏಳುವುದು
ಉತ್ಪಾತ—ಅಪಶಕುನ
ಉದ್ದಂಡ—ಪರಾಕ್ರಮಿ
ಉಪಾಯನ—ಕಾಣಿಕೆ
ಉಪೇತ—ಕೂಡಿದ
ಉಮ್ಮಯ—ಶ್ರೇಷ್ಠ, ಆನಂದ
ಉರ—ಎದೆ
ಉರೋಜ—ಸ್ತನ
ಊಡು—ಉಣಿಸು
ಊರ್ಮಿ—ದೊಡ್ಡ ಅಲೆ
ಊರು—ತೊಡೆ
ಋಕ್ಷ—ನಕ್ಷತ್ರ
ಎರಳೆ—ಜಿಂಕೆ
ಎಲರ್—ಗಾಳಿ
ಏಕಾಂತಿಗಳು—ವಿಷ್ಣುವಿನ ಹೊರತಾಗಿ ಅನ್ಯರನ್ನು ಭಜಿಸದವರು
ಏತತ್ಪೂರ್ವದಿ—ಆ ಪೂರ್ವದಲ್ಲಿ
ಐದಿರಿ—ಹೋಗಿರಿ
ಐದೆತನ—ಮುತ್ತೈದೆತನ
ಒಕ್ಕಲು—ಪ್ರಜೆಗಳು
ಓತಪ್ರೋತ—ಎಲ್ಲ ಕಡೆಗೆ ಹಬ್ಬು
ಓಷ್ಠ—ತುಟಿ
ಓಕಸ—ಮನೆ, ವಾಸಸ್ಥಳ
ಔದುಂಬರ—ಅತ್ತಿಮರ
ಕಂಧರ—ಕುತ್ತಿಗೆ
ಕಕ್ಷಾಶನ—ಅಗ್ನಿ
ಕಕುದಿ—ಗೂಳಿ
ಕಟಕ—ಬಳೆ
ಕಟಿ—ನಡು
ಕಣ್ಣಿ—ಹಗ್ಗ
ಕದನಚೌಪಟ < ಕದನ ಚೌಪಟಮಲ್ಲ ?—ಮಹಾ ಪರಾಕ್ರಮಿ
ಕಪಿಪ್ಲವನ—ಮರಕೋತಿಯಾಟ
ಕಬರಿ—ಹೆರಳು
ಕಮನೀಯ—ಮನೋಹರ
ಕರ್ಕಟಿಕಿ ಫಲ—ಕರಬೂಜದ ಹಣ್ಣು
ಕರಜ—ಬೆರಳು
ಕರಿಕರ(ರಾ)ಭ—ಆನೆಯ ಸೊಂಡಿಲಿನಂತಿರುವ
ಕರಿಶಾವಕ—ಆನೆಯಮರಿ
ಕಲತ್ರ—ಹೆಂಡತಿ
ಕಲಧೌತಾಂಬರ—ಪೀತಾಂಬರ
ಕಲವಿಂಕ—ಗುಬ್ಬಚ್ಚಿ
ಕಲಿಹರ್ತ—ಕಲಿಯನ್ನು ಕೊಂದವನು, ಕಲ್ಕಿ
ಕಲೋಚ್ಚಾರ—ಮಧುರ ಧ್ವನಿ
ಕವೇರಕುವರೆ—ಕಾವೇರಿ
ಕಸೆಪು—ಹಾಸಿಗೆ

Rarest Archiver

ಕಾಂಚೀದಾಮ—ಚಿನ್ನದ ಡಾಬು
ಕಾಕಪಕ್ಷ—ಚಂಡಿಕೆ
ಕಾಮ್ಯಕರ್ಮ-ಫಲಾಪೇಕ್ಷೆಯಿಂದ ಮಾಡುವ ಕರ್ಮ
ಕಾರಂಡ—ಒಂದು ಬಗೆಯ ನೀರುಹಕ್ಕಿ
ಕಾರಣಿಕ—ಅವತಾರ ಪುರುಷ
ಕಾರುಕ—ಶಿಲ್ಪಿ
ಕಾಶ—ಕಾಂತಿ
ಕಾಳಿಂದಿ—ಯಮುನಾ ನದಿ
ಕಿಂಕಿಣಿ—ಕಿರುಗೆಜ್ಜೆ
ಕಿಂಶುಕ—ಮುತ್ತುಗದ ಮರ
ಕಿತವ—ಸುಳ್ಳುಗಾರ
ಕೀರ—ಗಿಳಿ
ಕುಂದ—ಕೋಲು ಮಲ್ಲಿಗೆ ಹೂ
ಕುಕ್ಷಿ>ಕುಕ್ಕಿ—ಹೊಟ್ಟೆ
ಕುಕ್ಕುರ—ನಾಯಿ
ಕುಠಾರ—ಕೊಡಲಿ
ಕುಣಪ—ಮರಿ
ಕುದಾರ<ಕುದ್ದಾರ—ಗುದ್ದಲಿ
ಕುರಂಗ—ಜಿಂಕೆ
ಕುರರಿ—ಹೆಣ್ಣು ಮರಕುಟಿಕವಕ್ಕಿ
ಕುರವಕ—ಗೋರಂಟಿಮರ
ಕ್ಷುಧೆ—ಹಸಿವು
ಕೂಲ—ದಡ
ಕ್ಷುರಶೃಂಗ—ಚೂಪಾದ ಕೋಡುಳ್ಳವನು
ಕೃಷ್ಣಸಾರ—ಚಿಗರೆ
ಕೆಲದಿ—ಗೆಳತಿ
ಕೇತು—ಬಾವುಟ
ಕೇಯೂರ—ತೋಳುಬಂದಿ
ಕೇಶರ—ಕುಂಕುಮ ಕೇಸರಿ
ಕೈತವ—ವಂಚನೆ
ಕೋಟರ—ಡೊಗರು
ಕೋಲ—ಹಂದಿ
ಕೋವಿದರು—ಪಂಡಿತರು
ಕೋವಿದಾರ—ಮದ್ದುಗುಣಿಕೆಯ ಗಿಡ
ಕೌಮುದಿ—ಬೆಳದಿಂಗಳು
ಕೌಸ್ತುಭ—ವಿಷ್ಣುವಿನ ಎದೆಯಲ್ಲಿರುವ ಒಂದು ರತ್ನ.
ಖರ—ಕತ್ತೆ
ಖಳವಿದಾರಣ—ದುಷ್ಟನಾಶಕ
ಗಂಡ—ಕೆನ್ನೆ
ಗವ್ಯಾಮೃತ—ಹಾಲು
ಗಸಣೆ—ತೊಂದರೆ
ಗಳ—ಕೊರಳು
ಗಾಥಾ>ಗಾಥೆ—ಹಾಡು
ಗ್ರೀವ—ಕುತ್ತಿಗೆ
ಗುಂಡಿಗೆ—ಎದೆ
ಗುಡಾಳಕ—ಗುಂಗುರು ಗುಂಗುರಾದ ಮುಂಗುರುಳು
ಗೃಹಮೇಧಿ—ಗೃಹಸ್ಥಾಶ್ರಮಿ
ಗೇಹ—ಮನೆ
ಗೈರಿಕ—ಕಾವಿಕಲ್ಲು
ಗೊಂದಣ—ಗುಂಪು
ಗೋಖುರ—ಗೋವಿನ ಕಾಲಿನ ಗೊರಸು
ಗೋದೋಹನ—ಆಕಳು ಕರೆಯುವುದು
ಗೋಪ್ತ—ರಕ್ಷಿಸುವವನು
ಗೋರಸ—ಹಾಲು
ಗೋವೆರು—ಗೊಲ್ಲಸ್ತ್ರೀಯರು
ಗೋಷ್ಠ—ಗೋಕುಲ
ಘರಟ್ಟ—ಬೀಸುವ ಕಲ್ಲು
ಚಂಚುಪುಟ—ಹಕ್ಕಿಯ ಕೊಕ್ಕು
ಚಕ್ಷುಪುಟ—ಕಣ್ಣು
ಚತ್ವಾರಿ<ಚತ್ವರ ?—ಯಜ್ಞಕ್ಕಾಗಿ ಚೌಕವಾಗಿ ಸಮತಟ್ಟು ಮಾಡಿದ ನೆಲ
ಚತುರ್ದಶ—ಹದಿನಾಲ್ಕು
ಚರ್ಮ—ಗುರಾಣಿ
ಚಷಕ—ಪಾನ ಪಾತ್ರೆ

Rarest Archiver

ಚುನ್ನ—ನಿಂದೆ
ಚುಬುಕ—ಗದ್ದ
ಚೂರ್ಣಿಸು—ನಾಶಮಾಡು
ಚೈದ್ಯ—ಶಿಶುಪಾಲ
ಛಂದಸ್ಸು—ವೇದ
ಜಂಘೆ—ಕಿರುದೊಡೆ
ಜಂಬು—ನೇರಳೆ ಹಣ್ಣು
ಜಗತಿ—ಜಗಲಿ
ಜಗುಳಿಸಿ—ಜಾರಿಸಿ
ಜರಠ—ವೃದ್ಧ
ಜವ—ಯಮ, ಬೇಗ
ಜಾತ—ಹುಟ್ಟಿದ
ಜಾತಿ—ಜಾಜಿ ಮಲ್ಲಿಗೆ
ಜಾನು—ಮೊಳಕಾಲು
ಜೀಮೂತ—ಮೋಡ
ಝಷ—ಮೀನು
ಟವಟವಿಸು—ಮಿಂಚು
ಡೆಂಡಣಿಸು—ಬೆದರಿಕೆಯಿಂದ ನಡುಗು
ತಟಿತ್—ಮಿಂಚು
ತಣಿರು, ತಳಿಲು, ತಳಿರು—ಚಿಗುರು
ತಮಸು—ಕತ್ತಲೆ
ತವ—ನಿನ್ನ
ತ್ವಚೆ—ತೊಗಟೆ
ತ್ವರಿಯ—ವೇಗವಾಗಿ
ತಾಂಡವ—ನೃತ್ಯದ ಒಂದು ಪ್ರಭೇದ
ತಾಮ್ರ—ಕೆಂಪುಬಣ್ಣ
ತಾಳಹಸ್ತ—ತಾಳೆ ವೃಕ್ಷವನ್ನು ಹಿಡಿದ ಕೈ
ತ್ರಾಸ—ಕಷ್ಟ
ತ್ರಾಹಿ—ರಕ್ಷಿಸು
ತಿಗ್ಮ—ತೀಕ್ಷ್ಣವಾದ
ತಿತ್ತಿರಿ—ಒಂದು ಜಾತಿಯ ಹಕ್ಕಿ
ತಿರ್ಯಕ್‌ಜಾತಿ—ಪಶುಪಕ್ಷಿ ಮುಂತಾದ ಪ್ರಾಣಿವರ್ಗ
ತ್ರಿವಳಿ—ಹೊಟ್ಟೆಯ ಮೇಲಿನ ಮೂರು ಗೆರೆಗಳು
ತೀವಿದ—ತುಂಬಿದ
ತುಂಡ—ಮುಖ
ತುಡುಗಲಿ—ತುಂಟತನದಿಂದ, ಕಳ್ಳತನದಿಂದ
ತುಪ್ಪಿರಿ, ತೂಪಿರಿ—ಧ್ವನಿಮಾಡು
ತುಷ್ಟಿ—ಆನಂದ
ತ್ರುಟಿ—ಕ್ಷಣ
ತೋಕರು—ಮಕ್ಕಳು
ದಂಭ—ಮೋಸ, ಮೋಸಗಾರ
ದಂಭೋಳಿ—ಇಂದ್ರನ ವಜ್ರಾಯುಧ, ಇಂದ್ರ?
ದಟ್ಟಡಿ, ದಟ್ಟಸಾಲು—ತಪ್ಪುಹೆಜ್ಜೆ
ದಧಿಮಥನ—ಮೊಸರು ಕಡೆಯುವುದು
ದಧ್ಯೋದನ—ಮೊಸರನ್ನ
ದಶಪ್ರಮತಿ—ಮಧ್ವಾಚಾರ್ಯರು
ದಾಂತ—ಉದಾರ
ದಾಂತ—ಒಂದು ಮರದ ಹೆಸರು
ದಾಡಿಮ—ದಾಳಿಂಬೆ
ದಾಮ—ಡಾಬು, ಹಾರ
ದಾಮಕರ್ತ—ಮಾಲೆಗಾರ
ದಿಕ್ಷು—ದಿಕ್ಕು
ದಿಷ್ಟ್ಯ—ಶತ್ರು?
ದ್ವಿಜ—ಹಕ್ಕಿ, ಬ್ರಾಹ್ಮಣ, ನಕ್ಷತ್ರ
ದ್ವಿಪ—ಆನೆ
ದುಗ್ಧಾಬ್ಧಿ—ಹಾಲಿನ ಸಮುದ್ರ
ದುಷ್ಟಜನಾರ್ದಕ—ದುಷ್ಟಜನರನ್ನು ನಾಶ ಮಾಡುವವನು
ದ್ಯುಗರು—ದೇವತೆಗಳು
ದ್ರುಮ—ಮರ
ದೂವಾಳಿಸು—ಮುಂದಕ್ಕೆ ಹೊಡೆ
ದೃಕ್ಕು—ಕಣ್ಣು
ದೃಪ್ತ—ಸೊಕ್ಕಿದ
ದೇದೀಪ್ಯ—ಪ್ರಕಾಶಮಾನ

Rarest Archiver

ದೇಹಿಕರು—ಬೇಡುವವರು

ದೈವಜ್ಞ—ಜ್ಯೋತಿಷಿ

ದೋರ್ದಂಡ—ತೋಳು

ದ್ರೋಣಿ—ಕಣವೆ, ಗುಹೆ

ಧರ್ಮಾನುಜಾ– ಯಮುನೆ

ಧವ—ಗಂಡ

ಧ್ವಸ್ತ—ನಾಶ

ಧಾತ್ರಿ—ದಾಸಿ

ಧ್ವಾಂತ—ಕತ್ತಲೆ

ಧೂರ್ಯ < ಧುರ್ಯ—ಮುಂದಾಳು

ಧೇನುಕ—ಕತ್ತೆ

ಧೇನುಪಳ್ಳಿ—ಗೋಕುಲ

ನತಿಸು—ಬಾಗು

ನಪ್ತೃ—ಮೊಮ್ಮಗ

ನರ್ಮ—ಚೇಷ್ಟೆ

ನ್ಯಗ್ರೋಧ ಪತ್ರ—ಆಲದ ಎಲೆ

ನಾಗ—ಆನೆ, ಲವಂಗದ ಗಿಡ

ನಾಗವಲ್ಲಿ—ವೀಳ್ಯದೆಲೆ

ನಿಕೃಂತ < ನಿಕೃತ ?—ತೆಗೆದುಹಾಕಿದ

ನಿಭ—ಸದೃಶ, ಕಪಟ

ನಿರ್ಘೃಣಿ—ಕ್ರೂರಿ

ನಿರ್ವಾಣ—ಮುಕ್ತಿ

ನಿರಯ—ನರಕ

ನಿರಸ್ತ—ಚದುರಿಸಲ್ಪಟ್ಟ

ನಿಸ್ಸೃತ—ಹೊರಬಿದ್ದ

ನೀಕರಿಸು—ನಿರಾಕರಿಸು

ನೀಪ—ಕಡಡದ ಮರ

ನೀರಾಜಿಸು—ಆರತಿಯನ್ನು ಎತ್ತು

ನೀಲಾಂಬುದ—ಕರಿಮೋಡ

ನೀವಿ—ನೆರಿಗೆಕಚ್ಚು

ನೃಶಂಸ—ಕ್ರೂರಿ

ನೊರಜು—ಸಣ್ಣ ಜಾತಿಯ ಸೊಳ್ಳೆ

ಪಕ್ಷ್ಮ—ಕಣ್ಣಿನ ರೆಪ್ಪೆ

ಪಡಗ—ಮಣ್ಣಿನ ಪಾತ್ರೆ

ಪಪ್ಪಡ—ಹಪ್ಪಳ

ಪಯೋದ—ಮೋಡ

ಪಯೋಧರ—ಸ್ತನ

ಪರಲಾಪಿಸೆ—ಪ್ರಲಾಪಿಸೆ

ಪರಾಣ್ಣ < ಪರಾಯಣ?—ಆಸಕ್ತಿ

ಪರಾಮೃಶ—ಉಪಚಾರ

ಪರಿಖ < ಪರಿಖಾ—ಕಂದಕ

ಪರಿಘ—ಗದೆ

ಪರಿರಂಭ—ಅಪ್ಪುಗೆ

ಪರಿವೇಷಣ—ಸುತ್ತು

ಪಶ್ಚಾತ್—ಅನಂತರ

ಪ್ರವಣರು—ಭಕ್ತರು

ಪ್ರವಾಳ—ಚಿಗುರು

ಪ್ರಸೂನ—ಹೂ

ಪಾಂಡುರ—ಹಳದಿ ಮಿಶ್ರಿತ ಬಿಳಿ ಬಣ್ಣ

ಪಾಂಸು—ಧೂಳು

ಪಾಟಲ—ಪಾದರಿಯ ಹೂ

ಪಾಣಿ—ಕೈ

ಪಾದಸಂಹನ—ಪಾದವನ್ನು ತೊಳೆಯುವುದು

ಪಾರ್ಷದ—ಸೇವಕ

ಪಾರಾವತ—ಪಾರಿವಾಳ

ಪಾಳಯ—ಬೀಡು

ಪ್ರಾಕ್—ಪೂರ್ವಕಾಲ

ಪ್ರಾವೃಟ್—ಮಳೆಗಾಲ

ಪ್ರಾವೃತರು—(ಸಂಸಾರದಿಂದ) ಮುತ್ತಲ್ಪಟ್ಟವರು

ಪಿಕ—ಕೋಗಿಲೆ

ಪಿಪ್ಪಲ—ಅರಳಿಮರ

ಪೀನ—ತುಂಬಿದ

ಪೀವರ—ದೊಡ್ಡ, ಪುಷ್ಟ

ಪುಂಡರೀಕ—ಬಿಳಿಯ ತಾವರೆ

Rarest Archiver

ಪುಂಸ–ಪುರುಷ
ಪುನ್ನಾಗ-ಬಿಳಿಯ ಕಮಲ, ಸುರಹೊನ್ನೆ
ಪುಷ್ಕರಿಣಿ-ಸರೋವರ
ಪುಳಿಂದೆ–ಬೇಡತಿ
ಪುಳಿನ ಸ್ಥಳ–ಮರಳಿನ ದಡ
ಪೂತ–ಗರಿಗೆದರಿದ, ಪವಿತ್ರ
ಪೂವಳೆ–ಹೂವಿನ ಮಳೆ
ಪೃಥಕ್–ಬೇರೆ
ಪೃಥು–ದೊಡ್ಡ
ಪೇಶಲ, ಪೈಶಲ–ಸುಂದರವಾದ, ಪವಿತ್ರವಾದ
ಪ್ರೇಷ್ಠ–ಪ್ರಿಯತಮೆ
ಪೋಕ–ನೀಚ
ಪೌಗಂಡ, ಪೋಗಂಡ-ವಯಸ್ಸಿಗೆ ಬರದ ಬಾಲಕ
ಬಕ್ಕೆ-ಒಂದು ಜಾತಿಯ ಹಲಸಿನ ಹಣ್ಣು
ಬದರ–ಹತ್ತಿಗಿಡ
ಬರ್ಹ–ನವಿಲುಗರಿ
ಬರ್ಹಿ–ನವಿಲು
ಬಭ್ರ್, ಬಭ್ರು–ಗುಮ್ಮ
ಬಾಹನ್ನಕ–ಬರುವವರೆಗೆ
ಬಿತ್ತರಿಸಿ–ವಿಸ್ತರಿಸಿ
ಬಿಸ–ತಾವರೆಯ ದೇಟು
ಬಿಸಳಿಗೆ–ಗಡಿಗೆ
ಬಿಸಿಲದೊರೆ–ಬಿಸಿಲ್ಗುದುರೆ
ಬೆಜ್ಜರ–ಕಕ್ಕಾಬಿಕ್ಕಿ
ಬೇಕಾರ್ಹಣ–ಬೇಕಾದ ಪೂಜೆ
ಬೇಟ–ಪ್ರಣಯ
ಬೊಗರೆ–ಬುಗುರಿ
ಭಜಿಸು, ಭಜ್ಜಿಸು–ಭಾಗಮಾಡು
ಭಾಗದೇಯ–ದೈವ
ಭಾಜನ–ಯೋಗ್ಯ
ಭಾನುಭಾ–ಸೂರ್ಯನಂತೆ ಹೊಳೆಯುವವನು
ಭಾಲ–ಹಣೆ
ಭಾವಕಿಯರು–ಸದಭಿರುಚಿಯುಳ್ಳವರು
ಭಾಸುರ–ಚೆಲುವಾದ
ಭಾಳ–ಬಹಳ
ಭ್ರಾಜತ್–ಹೊಳೆಯುವ
ಭೀರುನೇತ್ರೆ–ಬೆದರುಗಣ್ಣಿನವಳು
ಭುಕ್ತಿ–ಊಟ
ಭೂತ–ಪ್ರಾಣಿ
ಭೂಭುಜ–ಅರಸು
ಭೂರುಹ–ಭೂಮಿಯಲ್ಲಿ ಬೆಳೆಯುವುದು. ಮರ, ಗಿಡ ಇತ್ಯಾದಿ
ಭ್ರೂ, ಭ್ರುಕುಟಿ–ಹುಬ್ಬು
ಭೇಕ–ಕಪ್ಪೆ
ಮಂಡನ–ಆಭರಣ
ಮಚ್ಚು–ಪ್ರೀತಿ
ಮಡುಹು–ಕೊಲ್ಲು
ಮತ್–ನನ್ನ
ಮದ್ದಿಕಾಯಿ–ಮಕ್ಕಳಿಗೆ ಹಾಕುವ ಮತ್ತಿಕಾಯಿಯ ಆಕಾರದ ಒಂದು ಆಭರಣ
ಮನಸ್ವಿಯರು–ಮನಸ್ಸುಳ್ಳವರು
ಮನ್ಯರು–ಮಾನ್ಯರು
ಮರ್ದಿಸು–ಒತ್ತು, ನಾಶಮಾಡು
ಮುರ್ಜ್ಜಣ < ಮರ್ಜನಂ–ತೊಳೆಯುವುದು
ಮರಾಳ–ಹಂಸ
ಮಲಯಜ–ಶ್ರೀಗಂಧ
ಮಹಿಜ, ಮಹೀಜ–ಭೂಮಿಯಲ್ಲಿ ಹುಟ್ಟಿದುದು. ಮರ, ಗಿಡ ಇತ್ಯಾದಿ
ಮಹೀಧ್ರ–ಪರ್ವತ
ಮಾ–ಲಕ್ಷ್ಮಿ
ಮಾಂಶಾವೇಶರು–ಲಕ್ಷ್ಮಿಯ ಅಂಶಾವೇಶವುಳ್ಳವರು
ಮಾತುಳ–ಸೋದರ ಮಾವ
ಮಾರ್ಗಣ–ಬಾಣ

Rarest Archiver

ಮಿಸುನಿ, ಹಾಟಕ—ಚಿನ್ನ
ಮಿಸುಳಿಸಿ—ಸೇರಿಸಿ
ಮುಂಗೈ ಮುರಿಗೆ—ಕೈಗೆ ಧರಿಸುವ ಒಂದು ಆಭರಣ
ಮುಕ್ತಾಮುಕ್ತರು—ಮುಕ್ತರು ಮತ್ತು ನಿತ್ಯ ಸಂಸಾರಿಗಳು
ಮುಖವಾಸ—ಬಾಯಿಯನ್ನು ಸುಗಂಧಗೊಳಿಸುವ ಒಂದು ಬಗೆಯ ಸುಗಂಧ ದ್ರವ್ಯ
ಮುಟ್ಟಿಗೆ—ಹಿಡಿ
ಮುತ್ತೆ—ಅಜ್ಜ
ಮುನಿಕುಲಗೇಯ—ಮುನಿಗಳಿಂದ ಹಾಡಲ್ಪಡುವವನು
ಮೃಗಶಾವ—ಜಿಂಕೆಯ ಮರಿ
ಮೃತ್ತಿಕೆ—ಮಣ್ಣು
ಮೃಷ್ಟ—ಸವಿಯಾದ
ಮೇಗೆ—ಮೇಲೆ
ಮೇಧ—ಯಜ್ಞ
ಮೇಷ-ಕುರಿ
ಮೊಗುವ—ನೀರು ಹಾಕಿಕೊಳ್ಳುವ
ಮೌಳಿ-ಕಿರೀಟ
ಯಜ್ಞೇಶ್ವರ—ವಿಷ್ಣು
ಯವ—ಕೈಯಲ್ಲಿರುವ ಅನ್ನಸೂಚಕವಾದ ಒಂದು ರೇಖೆಯ ಹೆಸರು
ಯಾಜಿ—ಯಜ್ಞ ಮಾಡುವವನು
ಯಾಮಿನಿ, ನಿಶಿ, ನಿಶೀಥ—ರಾತ್ರಿ
ಯಾವಕ—ನೇಕಾರ
ಯಾವಸ < ಯವಸಂ—ಹುಲ್ಲು
ರಂಭಾ—ಬಾಳೆಯಗಿಡ
ರಂಹಸ—ವೇಗ
ರಜ—ಧೂಳು
ರಜತ—ನಿರ್ಮಲವಾದ
ರಥಚರಣ—ಚಕ್ರ
ರದನ—ಹಲ್ಲು
ರಾಕಾಚಂದ್ರ—ಹುಣ್ಣಿಮೆಚಂದ್ರ
ರಾಮೆ—ಲಕ್ಷ್ಮಿ
ರುಮೆಯರು—ಸುಂದರಿಯರು
ರಾಸಭ—ಕತ್ತೆ
ರುಕ್ಷ—ಕ್ರೂರ
ರೇಣು—ಧೂಳಿನ ಕಣ
ರೋಚಿ—ಕಾಂತಿ
ಲಬ್ಧಸಂಜ್ಞದಲಿ—ಎಚ್ಚರಹೊಂದಿ
ಲವ—ವೇಳೆಯ ಕಿರಿಯಳತೆ
ಲಸತ್—ಪ್ರಕಾಶವುಳ್ಳ (ಶ್ರೇಷ್ಠ)
ಲಾಂಗೂಲ—ಬಾಲ
ಲಾಜ—ಬತ್ತದ ಅರಳು
ಲುಂಠಿಸು—ಉರುಳು
ಲೇಹನ—ನೆಕ್ಕುವುದು
ಲೋಲನೇತ್ರೆ—ಚಂಚಲನೇತ್ರೆ
ಲೋಲೈಸು—ಚಮಕಿಸು
ಲೌಕಿಕೇಷಣರಿಕ್ತರು—ಐಹಿಕ ಇಚ್ಛೆಯನ್ನು ತೊರೆದವರು
ವಂಶ—ಕೊಳಲು
ವಕ್ತ್ರ—ಮುಖ
ವಟಪತ್ರ—ಆಲದೆಲೆ
ವತ್ಸ—ಕರು
ವದಕಳಿ—ಕಾಲಿನಿಂದಾಡುವ ಒಂದು ಆಟ
ವದಿಸು—ಮಾತನಾಡು
ವನ—ನೀರು
ವನಸ್ರಕ್—ವನಮಾಲೆ
ವರ್ಯ, ವರಿಷ್ಠ—ಶ್ರೇಷ್ಠ
ವಲ್ಗು—ಮನೋಹರ
ವಹಿಲ—ವೇಗ
ವ್ಯಂಜನ—ನಂಜಿಕೊಳ್ಳುವ ಪದಾರ್ಥ
ವ್ಯಜನ—ಬೀಸಣಿಕೆ

Rarest Archiver

ವ್ಯತಿಕರ–ಜೋಡಣೆ
ವ್ಯಸ್ತ–ಚೆಲ್ಲಿದ
ವಾಟ–ದಾರಿ
ವಾಮದೃಶಾ–ಸುಂದರವಾದ ಕಣ್ಣು
ವಾರ್ಷ್ಣಿ, ವಾರ್ಷ್ಣೇಯ–ಕೃಷ್ಣ
ವಾರಣ–ಆನೆ
ವಾರಿ–ನೀರು
ವ್ಯಾಜೆ, ವ್ಯಾಜ–ನೆವ
ವ್ಯಾಸಸೂನು–ಶುಕಮುನಿ
ವಿಕ್ಷೇಪಣ–ಎಸೆಯುವಿಕೆ
ವಿಗಡ–ಕೆಟ್ಟ
ವಿಟಪ–ಪೊದೆ
ವಿತರಣ–ದಾನ
ವಿತ್ತ–ಐಶ್ವರ್ಯ
ವಿದ್ರುಮ–ಹವಳ
ವಿಷಾಣ–ಕೋಡು
ವಿಷ್ಟೆ–ಅಮೇಧ್ಯ
ವಿಷ್ಣುರಾತ < ವಿಷ್ಣುರತ–ವಿಷ್ಣುಭಕ್ತ
ವಿಹಂಗ–ಪಕ್ಷಿ
ವಿಹಂಗಪ,ವಿಪ–ಗರುಡ
ವೀಥಿ–ಬೀದಿ
ವೀರುಧ–ಬಳ್ಳಿ
ವೃಂದಾರಕರು–ದೇವತೆಗಳು
ವೃಜಿನ–ಪಾಪ
ವೃಷ, ವೃಷಭ–ಗೂಳಿ
ವೇಷ್ಟಿತ–ಸುತ್ತಲ್ಪಟ್ಟ
ಶಂಸನ–ಹೊಗಳುವಿಕೆ
ಶಕಟ–ಗಾಡಿ
ಶಕಲ–ತುಂಡು
ಶಕುಂತ–ಹಾಲಕ್ಕಿ
ಶರಚರ–ಮತ್ಸ್ಯಾವತಾರಿಯಾದ ಹರಿ
ಶರಧಿಜಾತ–ಚಂದ್ರ

ಶ್ರವಣ–ಕಿವಿ
ಶಾರ್ವರಿ–ರಾತ್ರಿ
ಶಾಸ್ತ–ಆಳುವವನು
ಶ್ರಾವಿ, ಶ್ರಾವೆ–ಮಣ್ಣಿನ ಮುಚ್ಚಳ
ಶಿಖಿ, ಶಿಖೆ–ಜುಟ್ಟು
ಶಿಖಿ–ನವಿಲು
ಶ್ರೀನೇಯ–ಲಕ್ಷ್ಮಿಯನ್ನು ಪ್ರೇರಿಸುವವನು, ವಿಷ್ಣು
ಶ್ರುತಿ, ಶ್ರೋತ್ರ–ಕಿವಿ
ಶ್ಯೇನ > ಸೇನ?–ಗಿಡುಗ
ಶ್ರೋಣಿ–ನಿತಂಬ
ಶೌಂಡ–ಶ್ರೇಷ್ಠ, ಶಕ್ತಿಯುಳ್ಳ
ಸಂದಟಿಸಿದ–ದಟ್ಟವಾಗಿದ್ದ
ಸಂಸೃತಿ–ಸಂಸಾರ
ಸಟಾಂಕ–ಕುದುರೆ
ಸಡಿ–ದೂಷಣೆ
ಸನ್ನಗದ್ಗದ–ಬಹಳ ಗದ್ಗದ (ಸ್ವರ)
ಸನ್ನಿಕರ್ಷಣ–ಸಾಮೀಪ್ಯ
ಸಮರ್ಹಣ–ಪೂಜೆ
ಸರ್ವರೋಗಹ–ಎಲ್ಲ ರೋಗಗಳನ್ನು ನಿವಾರಿಸುವವನು
ಸವ್ಯ–ಎಡಗಡೆ
ಸ್ಕಂದ–ಷಣ್ಮುಖ
ಸ್ಕಂಧ–ಹೆಗಲು
ಸ್ತವಿಸು–ಸ್ತುತಿಸು
ಸ್ಪೃಷ್ಟ–ಮುಟ್ಟಿದ
ಸ್ಪೃಹ, ಸ್ಪೃಹೆ–ಆಸೆ
ಸ್ಯಂದನ–ರಥ
ಸ್ವರ್ಧುನಿ, ಸುರನದಿ–ಗಂಗೆ
ಸಾಯಂತಿನಿ < ಸಾಯಂತನ–ಸಂಜೆ
ಸಾಯಕ–ಬಾಣ
ಸಾರಸ–ಕೊಕ್ಕರೆ
ಸಾಸಿರಫಣ–ಆದಿಶೇಷ

Rarest Archiver

ಸ್ನಾತ–ಸ್ನಾನಮಾಡಿದ
ಸ್ವಾಪ–ನಿದ್ರೆ
ಸಿಂಗ–ಮಗು
ಸ್ನಿಗ್ಧ–ಮನೋಹರವಾದ
ಸೀಗುರಿ–ಚಾಮರ
ಸೀಮಂತ–ಬೈತಲೆ
ಸೀಮಂತಿನಿ–ಹೆಂಗಸು
ಸೀರ–ನೇಗಿಲು
ಸುಧೆನಿಭ–ಅಮೃತಸಮಾನ
ಸುಪ್ಪಾಣಿ–ಶ್ರೇಷ್ಠವಾದ
ಸುಮಹತಿ–ನಾರದನ ವೀಣೆ
ಸುಯಿಲಡಿ ಇಡು–ಬಿಸುಸುಯ್ಯುತ್ತ ಹೆಜ್ಜೆಯನ್ನಿಡು
ಸುರಭಿ–ಕಾಮಧೇನು
ಸೂದನ–ನಾಶಮಾಡುವವ
ಸೂನು–ಮಗ
ಸೂಸಕ–ಬೈತಲೆ ಆಭರಣ
ಸ್ರಜಾಹತ–ಮಾಲೆಯಿಂದ ಹೊಡೆಯಲ್ಪಟ್ಟ
ಸ್ರಷ್ಟಾರ–ಸೃಷ್ಟಿಸುವವನು
ಸ್ವೇದ–ಬೆವರು
ಸೋಮರ್ಝಡಿ–ಜೋಲ್ಮುಡಿ
ಸೋಸಿಲಿ–ಸೌಶೀಲ್ಯದಿಂದ
ಸ್ತೋಭ–ಅವಹೇಳನೆ
ಸೌರಂಭ–ಸಂಭ್ರಮ
ಹಂಗಡ–ಹಗ್ಗ
ಹದರಿ, ಪಾದರಿ–ಪಾಟಲವೃಕ್ಷ
ಹರ್ಮ್ಯ–ಉಪ್ಪರಿಗೆಯ ಮನೆ, ಅರಮನೆ
ಹರವಿ–ಅಗಲಬಾಯಿಯ ಮಣ್ಣಿನ ಪಾತ್ರೆ
ಹರಿ–ಪರ್ವತ, ಕುದುರೆ
ಹರಿಚರ–ಕಲ್ಕಿ
ಹರಿಮಣಿ–ಪಚ್ಚೆ
ಹವಣು–ಪ್ರಮಾಣ

ಹವ್ಯಾನ್ನ–ನೈವೇದ್ಯದ ಅನ್ನ
ಹವಿರ್ದಾನಿ–ಯಜ್ಞಕ್ಕೆ ಬೇಕಾಗುವ ಹಾಲು, ತುಪ್ಪ ಇತ್ಯಾದಿಗಳನ್ನು ಕೊಡುವವಳು, ಹಸು
ಹಸ್ತಿಪ–ಮಾವುತ
ಹಿಳ್ಳಿಸು–ಹಿಗ್ಗಿಸು
ಹುತಾಶನ–ಅಗ್ನಿ
ಹೂಸಿ–ಪೂಸಿ
ಹೃಷ್ಟಿಯು–ಆನಂದ
ಹೆಡಕು–ಕತ್ತಿನ ಹಿಂಭಾಗ
ಹೈಮಂತದ–ಹೇಮಂತ ಋತುವಿನ
ಹೈಯಂಗವೀನ–ಹೊಸಬೆಣ್ಣೆ
ಹೊಂತಕಾರಿ–ಪರಾಕ್ರಮಿ
ಹೊರೆ–ರಕ್ಷಿಸು

ಅಂಬುಜ, ಅಂಭೋಜ, ಅಂಭೋರುಹ, ಅಬ್ಜ, ಅರವಿಂದ, ಕಂಜ, ತೋಯಜ, ನಳಿನ, ಪಂಕಜ, ಪದ್ಮ, ಪುಷ್ಕರ, ಬಿಸಜ, ವನಜ, ಸರೋರುಹ –ತಾವರೆ

ಅಂಬುಜಸಖ, ಅಹಸ್ಕರ, ಇನ, ಚಂಡ, ನೇಸರ್, ವ್ಯೋಮಕ್ರಾಂತ–ಸೂರ್ಯ

ಉಡುಪ, ತಣ್ಗದಿರ, ತಾರಾಪತಿ, ದುಗ್ಧಾಬ್ಧಿಯ ಜಾತ, ನಕ್ಷತ್ರಕುಲಪ, ನಿಶಾಕರಭಾ, ಭಾಪತಿ, ರಾಜ, ವಿಧು, ಶಶಾಂಕ, ಶೀತಾಂಶು, ಶಾರ್ವರೀಶ, ಸುಕಲಾನಿಧಿ, ಸೋಮ, ಹರಿಣಾಂಕ–ಚಂದ್ರ

ನಾಕಪ, ಶಕ್ರ, ಶತಯಾಗ, ಸಹಸ್ರಾಕ್ಷ, ಸುತ್ರಾಮ–ಇಂದ್ರ

ಅಧೋಕ್ಷಜ, ಊರುಶ್ರವ, ಕಂಸಾರಿ, ದಾಶಾರ್ಹ, ವಾರ್ಷ್ಣ್ಯ, ವೃಷಭ, ಶೌರಿ–ಕೃಷ್ಣ

Rarest Archiver

ಅಜ, ಅಬ್ಜಜ, ನಳಿನಭವ, ವಿಖನಸ, ವಿಧಿ,
ವೇದೋದರ, ಸತ್ಯೇಶ, ಹಂಸವಾಹನ—ಬ್ರಹ್ಮ

ಅಂಗಜ, ಇನಿಗೋಲ, ಐದಂಬ, ಕಂದರ್ಪ,
ಕಬ್ಬುಬಿಲ್ಲ, ದರ್ಪಕ, ಪೂಗಣೆಯ, ಪೂಗೋಲ,
ಬಾಣಪಂಚಕ, ಮದನ, ಮನಜ, ಮಾರ,
ಮೃಡನಹಿತ, ರತಿಪತಿ, ಸೀಬಿಲ್ಲ,ಸ್ಮರ—ಮನ್ಮಥ

ಕಂದುಗೊರಳ, ತ್ರಿನಯನ, ಪನ್ನಗಭೂಷಣ,
ಪಿನಾಕಿ, ಭವ, ಶರ್ವ—ಶಿವ

ನಾಗೇಶನವತಾರ, ರೌಹಿಣೇಯ, ಶುಕ್ಲಕೇಶ,
ಸಂಕರ್ಷಣ, ಸಾಸಿರಫಣನವತಾರ, ಸೀರಪಾಣಿ
—ಬಲರಾಮ

ಗಾಂದಿನೇಯ, ದಾನಪತಿ, ದಾನೇಶ್ವರ, ಶ್ವಫಲ್ಕಿ
—ಅಕ್ರೂರ

ಅಂತಕ, ಜವ, ದಂಡಪಾಣಿ—ಯಮ

ಅವನಿ, ಕ್ಷೋಣಿ, ಧಾರುಣಿ, ಮಹಿ, ಮೇದಿನಿ
—ಭೂಮಿ

ಅಜಗರ, ಅಹಿ, ಉರಗ, ದಂದಶೂಕ, ಭುಜಗ,
ವ್ಯಾಳ—ಹಾವು

ಅಬ್ಧಿ, ಅರ್ಣವ, ವನಧಿ, ವಾರ್ಧಿ, ವಾರಿಧಿ,
ಸಿಂಧು-ಸಮುದ್ರ

ಅಂಬುದ, ಅಬ್ದ, ಅಭ್ರ, ಘನ, ನೀರದ,
ಮೇಘ-ಮೋಡ

ಅನೀಕ, ಔಘ, ಕದಂಬ, ಚಮು, ಜಂಗುಳಿ,
ತತಿ, ನಿಕರ, ನಿಕುರುಂಬ, ನಿಚಯ, ಪ್ರತತಿ,
ವ್ಯಾಳ, ಮೋಹರ, ಯೂಥ, ವ್ರಾತ,
ಸಂದೋಹ, ಸ್ತೋಮ-ಸಮೂಹ

Rarest Archiver

ಅನುಬಂಧ ೩

೧. ರಾಗಗಳ ಶಬ್ದಸೂಚಿ

೧ ಆನಂದ ಭೈರವಿ
ಕೀ. ೨೦

೨ ಕನ್ನಡ ಕಾಂಬೋಧಿ
ಕೀ. ೩, ೫೧, ೫೩

೩ ಕನ್ನಡಗೌಳ
ಕೀ. ೧೪, ೨೬, ೩೦, ೩೨

೪ ಕಲ್ಯಾಣಿ
ಕೀ. ೫೮

೫ ಕೇದಾರ
ಕೀ. ೪೨

೬ ಕೇದಾರಗೌಳ
ಕೀ. ೩೯, ೪೩, ೪೪

೭ ಗಾಂಧಾರಿ
ಕೀ. ೭

೮ ಘಂಟಾರವ
ಕೀ. ೨೧, ೩೬

೯ ಜಂಜೂಟಿ
ಕೀ. ೫೦

೧೦ ತೆಲುಗು ಕಾಂಬೋಧಿ
ಕೀ. ೬, ೧೧, ೨೫

೧೧ ತೋಡಿ
ಕೀ. ೩೭, ೫೫

೧೨ ದೇಶಾಕ್ಷಿ
ಕೀ. ೧೯

೧೩ ದೇಸ್
ಕೀ. ೪೯

೧೪ ನಾಟಿ
ಕೀ. ೧, ೨

೧೫ ಪಂತುವರಾಳಿ
ಕೀ. ೧೭, ೬೨

೧೬ ಪಹಡಿ
ಕೀ. ೬೧

೧೭ ಬೇಗಡಾ
ಕೀ. ೩೯

೧೮ ಭೈರವಿ
ಕೀ. ೧೪, ೨೯

೧೯ ಮಧ್ಯಮಾವತಿ
ಕೀ. ೬೦

೨೦ ಮಾಳವ ಶ್ರೀ
ಕೀ. ೬೭

೨೧ ಮುಖಾರಿ
ಕೀ. ೨೭, ೬೪

೨೨ ಮ್ಲೇಚ್ಛಬೌಳಿ
ಕೀ. ೧೨, ೪೭

೨೩ ಮೋಹನ ಕಲ್ಯಾಣಿ
ಕೀ. ೮, ೧೩, ೧೮, ೩೧, ೪೬

೨೪ ರಾಮಕ್ರಿಯಾ
ಕೀ. ೩೩, ೩೪

೨೫ ರೇಗುಪ್ತಿ
ಕೀ. ೧೫, ೨೨, ೨೩, ೨೪

೨೬ ವಸಂತ
ಕೀ. ೫೬

Rarest Archiver

೨. ತಾಳಗಳ ಶಬ್ದಸೂಚಿ

Rarest Archiver

ಅನುಬಂಧ ೪

ಕೀರ್ತನೆಗಳ ಅಕಾರಾದಿ ಸೂಚಿ

Rarest Archiver

Rarest Archiver

Rarest Archiver

ಸಹಾಯಕ ಸಾಹಿತ್ಯ

೧ ದಾಸವರ್ಯ ಶ್ರೀ ಪ್ರಸನ್ನವೆಂಕಟರ ಭಾಗವತ (ಮು. ೫೨) (೧೯೨೮) : ಸಂ. ಕವಿಭೂಷಣ ಬೆಟಗೇರಿ ಕೃಷ್ಣರಾಯರು ಮತ್ತು ಕೌಜಲಗಿ ಬಂಡೇರಾಯರು.

೨ ದಾಸ ಸಾಹಿತ್ಯದಲ್ಲಿ ಸೃಷ್ಟಿ ಪ್ರಕರಣ (೧೯೮೪) : ಎ. ಬಾದರಾಯಣ ಮೂರ್ತಿ.

೩ ಪ್ರಸನ್ನವೆಂಕಟದಾಸರ ಹಾಡುಗಳು (೧೯೭೬) : ಸಂ. ಕಾವ್ಯಪ್ರೇಮಿ.

೪ ಪುರಾಣನಾಮಚೂಡಾಮಣಿ (೧೯೪೯) : ಬೆನೆಗಲ್ ರಾಮರಾವ್, ಪಾನ್ಯಂ ಸುಂದರಶಾಸ್ತ್ರೀ.

೫ ರಾಮಾಯಣ : ವಾಲ್ಮೀಕಿ

೬ ವಚನಭಾರತ (೧೯೫೦) : ಎ. ಆರ್. ಕೃಷ್ಣಶಾಸ್ತ್ರೀ.

೭ ಶ್ರೀ ಕರ್ನಾಟಕ ಭಕ್ತವಿಜಯ (ಭಾಗ ೨) (೧೯೩೭) : ಬೇಲೂರು ಕೇಶವದಾಸರು.

೮ ಶ್ರೀ ಜಗನ್ನಾಥದಾಸರು (೧೯೮೬) : ಲೇ. ಟಿ. ಕೆ. ವೇಣುಗೋಪಾಲದಾಸರು.

೯ ಶ್ರೀ ಪ್ರಸನ್ನವೆಂಕಟದಾಸರು ಮತ್ತು ಅವರ ಕೃತಿಗಳು (೧೯೫೬) : ಡಾ. ಎ. ಟಿ. ಪಾಟೀಲ.

೧೦ ಶ್ರೀಮದ್ಭಾಗವತ (ಹತ್ತನೆಯ ಸ್ಕಂಧ ಪೂರ್ವಾರ್ಧ) ಕನ್ನಡ ಅನುವಾದ ಸಹಿತ (೧೯೮೨) : ಅನುವಾದಕರು, ಮಹಾವಿದ್ವಾನ್ ನುಗ್ಗೇಹಳ್ಳಿ ವೆಂಕಟನಾಥಾಚಾರ್ಯರು ಮತ್ತು ಪಂಡಿತ ರತ್ನಂ ಕೊತ್ತಮಂಗಲಂ ವರದಾಚಾರ್ಯರು.

೧೧ ಶ್ರೀ ಮದ್ಭಾಗವತವು (೧-೧೦ ಸ್ಕಂಧಗಳು) : ದೇವಶಿಖಾಮಣಿ ಅಳಸಿಂಗರಾಚಾರ್ಯ.

೧೨ ಶ್ರೀವತ್ಸ ನಿಘಂಟು (೧೯೭೧) : ಸಂ. ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ.

೧೩ ಶ್ರೀ ವಾದಿರಾಜರ ಕೃತಿಗಳು (೧೯೮೦) : ಸಂ. ಟಿ. ಎನ್. ನಾಗರತ್ನ.

೧೪ ಹರಪನಹಳ್ಳಿ ಭೀಮವ್ವನ ಹಾಡುಗಳು (೧೯೮೪) : ಸಂ. ಟಿ. ಎನ್. ನಾಗರತ್ನ.


Rarest Archiver


ಒಪ್ಪೋಲೆ

ತಪ್ಪು	ಒಪ್ಪು	ಕೀರ್ತನೆಯ ಸಂಖ್ಯೆ	ನುಡಿಸಂಖ್ಯೆ
ಮೊಳಗಿದವಂಬರಲಿ	ಮೊಳಗಿದವಂಬರದಲಿ	೫	೨
ಚರಿಪರು	ಸಂಚರಿಪರು	೧೩	೧
ಪರಂಜೀವ	ಪರಜೀವ	೨೧	೭
ರಾಮಕೃಷ್ಣ	ರಾಮಕೃಷ್ಣರು	೨೨	೧
ಕೂಡಿದ	ಕೂಡಿಹ	೨೩	೯
ಗ್ರಹಮೇಧಿ	ಗೃಹಮೇಧಿ	೨೬	೩
ಬರುತಿಪ	ಬರುತಿಹ ವನದಿ	೨೭	೭
ಹರೆದಾಸರೆನುತಿಹರು	ಹರಿದಾಸರೆನುತಿಹರು	೩೭	೨
ಮುಖ್ಮಿವು	ಮುಖ್ಯಿವು	೩೮	೧೦
ತನ್ನ ಕೃತಿ	ತನ್ನಾಕೃತಿ	೩೯	ಪ.
ರಜತೃಣಾತ್ಮ	ರಜತೃಣಾಶ್ಮ	೪೦	೧೧
ಸೌಂದರ್ಯಸಾರಬಲೇರು	ಸೌಂದರ್ಯಸಾರಟಲೇರ(?)	೪೨	೨
ಸುಮ್ಮ್ಯಗ	ಸುಮ್ಮೃಗ	೪೪	೯
ಚುಂಚುಬಿ	[ಚುಚುಂಬಿ]	೪೫	೬
ಕಾಮನೋತ್ಸವದಿ	ತಾ ಮನೋತ್ಸವದಿ	೪೮	೨
ಘನಗಂಜಿ	[ಘನಗಳಂಜಿ]	೪೯	೧೮
ಶಿಷ್ಟಲೆಲ್ಲರು	ಶಿಷ್ಟರೆಲ್ಲರು	೫೦	೧
ಪಾತಕ	ಪಾತಕ ಬುದ್ಧಿಯ	೫೧	೧
ಬಿಟ್ಟನು	ಬಿಟ್ಟ(ದ್ದ?)ನು	೫೨	೭
ಕಾಂತಿ	[ಕಾಶಿ]	೫೩	೫
ಹಂಸನಟ್ಟಿದರೆ	ಕಂಸನಟ್ಟಿದರೆ	೫೫	೯
ಅನಡುಹ (ದ್ಟ?)	ಅನಡುಹ (ಡ್ವ?)	೫೬	೨೮
ಸುರರ ತನ್ನಿಚ್ಛೆಯಲಿ	ಸುರರಾತನಿಚ್ಛೆಯಲಿ	೫೭	೪
ಸೂಚಪವು	ಸೂಚಿಪವು	೫೮	೧೦
ದಿ(ಕ್ಕು?)ಗಳ	ದಿಕ್ಷುಗಳ	೫೮	೧೬
ಪ್ರಸನ್ನ	ಪ್ರಪನ್ನ	೫೮	
ಮುಕಂದ	ಮುಕುಂದ	೫೯	

Rarest Archiver

Rarest Archiver





ಕನ್ನಡ ಅಧ್ಯಯನ ಸಂಸ್ಥೆ

ಹರಿದಾಸ ಸಾಹಿತ್ಯ ಮಾಲೆ

೧-೨. ಶ್ರೀಪಾದರಾಜರ ಕೃತಿಗಳು (ಪಂಡಿತ, ಜನಪ್ರಿಯ ಆವೃತ್ತಿಗಳು) : ಸಂ. ಡಾ. ಜಿ. ವರದರಾಜರಾವ್

೩. ಶ್ರೀ ಮಹಿಪತಿರಾಯರ ಕೃತಿಗಳು : ಸಂ. ಡಾ. ಜಿ. ವರದರಾಜರಾವ್

೪-೫. ಶ್ರೀ ಗೋಪಾಲದಾಸರ ಕೃತಿಗಳು (ಪಂಡಿತ, ಜನಪ್ರಿಯ ಆವೃತ್ತಿಗಳು) : ಸಂ. ಡಾ. ಟಿ. ಎನ್. ನಾಗರತ್ನ

೬. ಹರಿದಾಸ ಸಾಹಿತ್ಯ ಸಮೀಕ್ಷೆ : ಸಂ. ಡಾ. ಜಿ. ವರದರಾಜರಾವ್

೭-೮. ಶ್ರೀ ವಾದಿರಾಜರ ಕೃತಿಗಳು (ಪಂಡಿತ, ಜನಪ್ರಿಯ ಆವೃತ್ತಿಗಳು) : ಸಂ. ಡಾ. ಟಿ. ಎನ್. ನಾಗರತ್ನ

೯. ಹರಪನಹಳ್ಳಿ ಭೀಮವ್ವನ ಹಾಡುಗಳು : ಸಂ. ಡಾ. ಟಿ. ಎನ್. ನಾಗರತ್ನ

೧೦-೧೧. ಶ್ರೀ ಜಗನ್ನಾಥದಾಸರ ಕೃತಿಗಳು (ಪಂಡಿತ, ಜನಪ್ರಿಯ ಆವೃತ್ತಿಗಳು): ಸಂ. ಡಾ ಟಿ. ಎನ್. ನಾಗರತ್ನ

೧೨-೧೩. ಶ್ರೀ ಪ್ರಸನ್ನವೆಂಕಟದಾಸರ ಕೃತಿಗಳು (ಪಂಡಿತ, ಜನಪ್ರಿಯ ಆವೃತ್ತಿಗಳು) : ಸಂ. ಟಿ. ಕೆ. ಇಂದುಬಾಯಿ

೧೪. ಶ್ರೀ ಪ್ರಸನ್ನವೆಂಕಟದಾಸರ ಭಾಗವತ : ಸಂ. ಟಿ. ಕೆ. ಇಂದುಬಾಯಿ

೧೫-೧೬. ಶ್ರೀ ವಾದಿರಾಜರ ದೀರ್ಘಕೃತಿಗಳು (ಪಂಡಿತ, ಜನಪ್ರಿಯ ಆವೃತ್ತಿಗಳು) : ಸಂ. ಡಾ. ಟಿ. ಎನ್. ನಾಗರತ್ನ

೧೭-೧೮. ಹೆಳವನಕಟ್ಟೆ ಗಿರಿಯಮ್ಮನ ಹಾಡುಗಳು (ಪಂಡಿತ, ಜನಪ್ರಿಯ ಆವೃತ್ತಿಗಳು): ಸಂ. ಟಿ. ಕೆ. ಇಂದುಬಾಯಿ

೧೯. ಶ್ರೀ ರಾಮದಾಸರ ಕೃತಿಗಳು : ಸಂ. ಡಾ. ಟಿ. ಎನ್. ನಾಗರತ್ನ

೨೦. ಹರಿದಾಸ ಸಾಹಿತ್ಯ ಸಾರ : ಡಾ. ಜಿ. ವರದರಾಜರಾವ್

ರಕ್ಷಾಪುಟ ಮುದ್ರಣ : ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು